# ಅಮರ ಪ್ರೇಮದ ಮಧು



ಗ್ರಂಥ ಸ್ವಾಮ್ಯ ವಿಭಾಗ
894.814 3
ರಾಜ್ಯ ಕೇಂದ್ರ ಗ್ರಂಥಾಲಯ
RAD ಬೆಂಗಳೂರು N99

# ಅಮರ ಪ್ರೇಮದ ಮಧು

(ಸಾಮಾಜಿಕ ಕಾದಂಬರಿ)

ಹೆಚ್.ಜಿ. ರಾಧಾದೇವಿ

ಹೇಮಂತ ಸಾಹಿತ್ಯ
972-ಸಿ, 4ನೇ 'ಇ' ವಿಭಾಗ,
ರಾಜಾಜಿನಗರ, ಬೆಂಗಳೂರು-560 010

META ENTERED

*Amara Premada Madhu*- A Social Novel, by H.G. RADHADEVI
Published by Hemantha Sahitya, 972-C 4th 'E' Block, Rajajinagar, Bangalore-560 010

ಪ್ರಥಮ ಮುದ್ರಣ : 1999

ಹಕ್ಕುಗಳು : ಲೇಖಕಿಯದು

ಬೆಂಗಳೂರು - 1.

ಅಕ್ಷರ ವಿನ್ಯಾಸ : ಶ್ರೀ ಸದ್ಗುರು ಎಂಟರ್‌ಪ್ರೈಸಸ್, ರಾಮಾನುಜ ರಸ್ತೆ, ಮೈಸೂರು - 570 004
ಮುದ್ರಣ : ಶ್ರೀ ಸದ್ಗುರು ಪ್ರಿಂಟರ್ಸ್, ರಾಮಾನುಜ ರಸ್ತೆ, ಮೈಸೂರು -570 004 ☎ 442655

# ಅರ್ಪಣೆ

ಶ್ರೀ ಲಕ್ಷ್ಮೀ ಪ್ರದವಾದ ಅಪಾರ ಐಶ್ವರ್ಯವುಳ್ಳವನು

ಶ್ರೀಲಕ್ಷ್ಮೀ... ಶ್ರೀ ಲಕ್ಷ್ಮೀವಾನ್ ಎಂಬ ಹೆಸರುಳ್ಳವನು

ಅನಂತಾನಂತ ಶ್ರೀ ಲಕ್ಷ್ಮೀತ್ವವುಳ್ಳವನು

ಸರ್ವಾಂಗದಲ್ಲಿ ಶ್ರೀಲಕ್ಷ್ಮೀದೇವಿ ಸಾನಿಧ್ಯವುಳ್ಳ

ಶ್ರೀ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿಗೆ

ಈ ಕೃತಿ ಅರ್ಪಿಸುವೆನು -

**ರಾಧಾಧೇವಿ ಸುದರ್ಶನ್**

# ಮುನ್ನುಡಿ

"*ಅಮರ ಪ್ರೇಮದ ಮಧು*" ಕಾದಂಬರಿಯಲ್ಲಿ ಯುವತಿ ಯೋರ್ವಳ ನಿಸ್ವಾರ್ಥ ಪ್ರೇಮದ ಬಗ್ಗೆ ವಿವರಿಸಿದ್ದೇನೆ, ವಿವಾಹಿತ ಶ್ರೀಮಂತನೋರ್ವನ ಬಾಳಿನಲ್ಲಿ ಅನಿವಾರ್ಯವಾಗಿ ಪ್ರವೇಶಿಸಿದ ಯುವತಿ ಅವನ ಶ್ರೀಮಂತಿಕೆ, ಪ್ರಣಯ ಪ್ರೇಮ ಯಾವುದೂ ಪಡೆಯದೇ... ಜೀವನದುದ್ದಾ ಏಕಾಂಗಿಯಾಗಿ ನಿಲ್ಲುತ್ತಾಳೆ, ಆದರೆ ಆ ಕುಟುಂಬಕ್ಕೆ ನೂರು ಬಗೆ ಉಪಕಾರ ಮಾಡಿ, ಅವನ ಪಾಲಿನ ಅಮರ ಪ್ರೇಮದ ಮಧುವಾಗುತ್ತಾಳೆ, ಈ ಕಾದಂಬರಿ ನನ್ನ ಎಲ್ಲಾ ಅಭಿಮಾನಿಗಳ ಮೆಚ್ಚುಗೆಗೆ ಪಾತ್ರ ಆಗುವುದೆಂದು ತಿಳಿದಿದ್ದೇನೆ.

ಇಂತಿ ವಂದನೆಗಳು

***ಹೆಚ್.ಜಿ. ರಾಧಾದೇವಿ***

# ಅಮರ ಪ್ರೇಮದ ಮಧು

ಮಧುಮತಿ ರಿಕ್ಷಾದಿಂದ ಇಳಿದು, ಆ ಭವ್ಯ ಬಂಗಲೆಯ ಮುಂದೆ ನಿಂತಾಗ ಅವಳ ಮುಖ ಉದ್ವೇಗದಿಂದ ಕೆಂಪಾಗಿತ್ತು, ರಿಕ್ಷಾ ಬಾಡಿಗೆ ತೆತ್ತು ಮುಂದೆ ಬಂದಾಗ ಗೇಟಿನ ಬಳಿ ಘೂರ್ಖಾ ಅವಳನ್ನು ತಡೆದ, 'ಕಾರ್ಡ್ ಕೊಡಿ, ಸಾಹೇಬರು ಯಾರನ್ನೂ ಬಿಡಬೇಡ ಅಂದಿದ್ದಾರೆ' ಎಂದ. ಮಧುಮತಿ ಏನು ಉತ್ತರ ಕೊಡುತ್ತಿದ್ದಳೋ.... ಅಷ್ಟರಲ್ಲಿ ಮುಂದೆ ಬಂದವನು ಶ್ವೇತವಸ್ತ್ರಧಾರಿಯಾದ ಒಬ್ಬ ಅರವತ್ತರ ವೃದ್ಧ.

'ಏನಂತೇ.... ಲಖಿನ್‌ಸಿಂಗ್.... ಯಾರು ?' ಎಂದ.

'ಸಾಹೇಬರನ್ನ ನೋಡಲಿಕ್ಕೆ ಯಾರೋ ಬಂದಿದ್ದಾರೆ ಸಾಬ್, ಆದರೆ ಚೀಟಿ ತಂದಿಲ್ಲ' ಎಂದ ಆ ಘೂರ್ಖಿ.

'ಗೇಟ್ ತೆಗಿ, ಒಳಗೆ ಬರಲಿ' ಎಂದ ಆತ. ಅವಳು ಒಳಗೆ ಬಂದಾಗ 'ಯಾರಮ್ಮ ನೀನು ? ಸಾಹೇಬರಿಂದ ಏನಾಗಬೇಕಿತ್ತು?' ಎಂದ.

'ಅವರ ಫಾಕ್ಟರಿಯ ಸ್ಟೆನೋಗ್ರಾಫರ್ ವಾಸಂತಿರಾವ್ ಅವರ ಮಗಳು. ನಮ್ಮ ತಾಯಿ ಆರು ತಿಂಗಳು ರಜಾ ಹಾಕಿದ್ದಕ್ಕೆ ಕೆಲಸದಿಂದ ತೆಗೆದುಹಾಕಿದ್ದಾರೆ. ನ್ಯಾಯ ಕೇಳೋದಿಕ್ಕೆ ಬಂದಿದ್ದೀನಿ ' ಕೋಪ ಉದ್ವೇಗದಿಂದ ಕೆಂಪೇರಿದ ಆ ಸುಂದರ ವದನ ಕಪ್ಪಗೆ ಥಳಥಳಿಸುತ್ತಿದ್ದ ಆ ಅಗಲವಾದ ಕಂಗಳು ಆ ವೃದ್ಧ ಶಾಂತವಾಗಿ ಅವಳನ್ನೊಮ್ಮೆ ನೋಡಿ-

'ಸಾಹೇಬರು ಅಲ್ಲಿ ತೋಟದಲ್ಲಿ ಇದ್ದಾರೆ, ಬನ್ನೀ .... ಏನು ಮಾತಾಡ್ತೀರೋ ಮಾತಾಡಿ' ಎಂದು ಕಾಂಪೌಂಡಿನ ಎಡಭಾಗದಲ್ಲಿದ್ದ ಆ ತೋಟದತ್ತ ಕರೆದೊಯ್ದ.

ವಿಶಾಲವಾದ ಆ ತೋಟದ ಒಂದು ಭಾಗಕ್ಕೆ ಕೊಂಡಮಾವಿನ ಮರಗಳ ಸಾಲು. ಅದಕ್ಕೆ ಚಪ್ಪರವಾಗಿ ಹಬ್ಬಿಸಿದ ಮಲ್ಲಿಗೆಯ ಬಳ್ಳಿಗಳು, ಅರಳಿದ ದುಂಡು ಮಲ್ಲಿಗೆ ಹೂಗಳು. ಹಸಿರೆಲೆಯ ಮಧ್ಯೆ ಮೊಸರು ಚೆಲ್ಲಿದಂತಿತ್ತು. ದಟ್ಟವಾಗಿ ಹರಡಿದ ಮಲ್ಲಿಗೆ ಪರಿಮಳ, ಹಸಿರು ರತ್ನಗಂಬಳಿಯಂತೆ ಮೃದುವಾಗಿ ಕತ್ತರಿಸಿದ ಹಸಿರು ಹುಲ್ಲಿನ ಮೃದು ಹಾಸಿನ ಮೇಲೆ ಶುಭ್ರ ಬಿಳಿ ವೈರ್‌ನೆಟ್ ಕುರ್ಚಿಯ ಮೇಲೆ ಕೂತು ಪೇಪರ್ ಓದುತ್ತಿದ್ದ ಆ ತರುಣ... ಯಾರೋ ಬಂದರೆಂದು, ಪೇಪರ್ ಸರಿಸಿ ನೋಡಿದ, ' ಯಾರು ಮಾಮಾ ?' ಎಂದ.

'ರಾಜಣ್ಣಾ... ಇವರ ತಾಯಿ ನಿಮ್ಮ ಫಾಕ್ಟರೀಲಿ ಕೆಲಸ ಮಾಡ್ತಿದ್ದರಂತೆ. ಇಪ್ಪತ್ತೆರಡು ವರ್ಷ ಕೆಲಸ ಮಾಡ್ತಿದ್ದ ಅವರನ್ನ ಒಮ್ಮೆಲೇ ಏಕೆ ತೆಗೆದು ಹಾಕಿದಿರಿ ಅಂತ ನ್ಯಾಯ ಕೇಳ್ಲಿಕ್ಕೆ ಬಂದಿದ್ದಾರೆ' ಎಂದ. ರಾಜಸಿಂಹ ಬಂದಿದ್ದ ಅವಳ ಮುಖ ನೋಡಿದ, 'ಕೂತ್ಕೊಳ್ಳಿ... ಏನು ವಿಷಯ ?' ಎಂದ.

'ನಿಮ್ಮ ಜಯಶ್ರೀ ಇಂಡಸ್ಟ್ರೀಸ್‌ನಲ್ಲಿ ಕೆಲಸ ಮಾಡೋ ವಾಸಂತಿರಾವ್ ಅವರ ಮಗಳು ನಾನು. ಕಳೆದ ತಿಂಗಳು ನಮ್ಮ ತಾಯಿ ಹೃದಯಾಘಾತಕ್ಕೆ ತುತ್ತಾಗಿ ಆಸ್ಪತ್ರೆ ಸೇರಿದರು. ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ ಬಂದಿದ್ದಾರೆ, ವೈದ್ಯರು ಆರು ತಿಂಗಳು ಬೆಡ್‌ರೆಸ್ಟ್ ಬೇಕೂಂದಿದ್ದಾರೆ, ಡಾಕ್ಟರ್ ಸರ್ಟಿಫಿಕೇಟ್‌ದೊಂದಿಗೆ ಲೀವ್‌ಲೆಟರ್ ಸಬ್‌ಮಿಟ್ ಮಾಡಿದ್ದೀವಿ. ಆದರೆ ಅವರನ್ನ ಕೆಲಸದಿಂದ ತೆಗೆದು ಹಾಕಿದ ಆರ್ಡರ್ ನಿನ್ನೆ ಕಳಿಸಿದ್ದೀರಿ. ಇಪ್ಪತ್ತೆರಡು ವರ್ಷದಿಂದ ದುಡಿದ ಮಹಿಳೆಗೆ ಆರು ತಿಂಗಳು ವಿತೌಟ್ ಪೇಲೀವ್ ಹಾಕೋ ಅವಕಾಶ ಇಲ್ಲವಾ ?'

ಕೆಂಪೇರಿದ ಮಾಟವಾದ ಆ ದುಂಡುಗೆನ್ನೆಗಳು ; ಉದ್ವೇಗದಲ್ಲಿ ಮತ್ತಷ್ಟು ಕಾಂತಿಯುತವಾಗಿ ಥಳಥಳಿಸಿದ ಕೆನ್ನೇ.... ಕಣ್ಣುಗಳು. ಬಣ್ಣ ಹಚ್ಚಿದಂತಿದ್ದ ಆ ಎಳೆಸಾದ ಕೆಂದುಟಿ, ಮುತ್ತಿನ ಸಾಲು ಪೋಣಿಸಿದಂತಿದ್ದ ಹಲ್ಲುಗಳ ಸಾಲು, ಉದ್ವೇಗದಿಂದ ಏರಿಳಿಯುತ್ತ ಇದ್ದ ಎದೆ, ಮಾಟವಾದ ಆ ಮೈಕಟ್ಟು, ಏರ್ ಹೋಸ್ಟೆಸ್ ಆಗಲು ಲಾಯಕ್ಕಾದ ಐದಡಿ ಆರಿಂಚಿನ ಎತ್ತರ ನಿಲುವಿನ ಚೆಲುವೆ.

'ಈ ವಿಷಯದಲ್ಲಿ ನಾನು ಅಸಹಾಯಕ ಮಿಸ್....' ಎಂದು ತಡವರಿಸಿ ಅವನು 'ನಿನ್ನೇ ನಿಮ್ಮ ತಂದೇನೋ.... ಯಾರೋ ಬಂದು ಗದ್ದಲ ಮಾಡಿದರು. ಅವರಿಗೆ ಫೈಲ್ಸ್ ಎಲ್ಲಾ ತೋರಿಸಿದ್ದೀನಿ, ಕಳೆದ ಒಂದು ವರ್ಷದಿಂದ ಮಿಸೆಸ್ ವಾಸಂತಿರಾವ್ ಸಿಕ್ಕಾಪಟ್ಟೆ ರಜಾ ಹಾಕ್ತಿದ್ದರು. ಕೆಲಸದಲ್ಲಿಯೂ ಏಕಾಗ್ರತೆ ಇರ್‍ತಿರಲಿಲ್ಲ, ಆರೇಳು ಬಾರಿ ವಾರ್ನಿಂಗ್ ನೋಟೀಸ್ ತಗೊಂಡಿದ್ದರು. ಈಗ ಅವರ ಆರೋಗ್ಯ ಚೆನ್ನಾಗಿಲ್ಲ. ನಮ್ಮದು ಧರ್ಮಾರ್ಥ ಸಂಸ್ಥೆ ಅಲ್ಲ. ಲಕ್ಷಾಂತರ ರೂ.ಗಳ ವಹಿವಾಟಿನ ಈ ಸಂಸ್ಥೇಲಿ ಆರು ತಿಂಗಳುದ್ದ ರಜಾ ಯಾರಿಗೂ ಕೊಡಲ್ಲ. ನಾವೇ ಅವರನ್ನ ಕೆಲಸದಿಂದ ತೆಗೆದು ಹಾಕೋದಿಕ್ಕೆ ಕಾರಣವೂ ಇದೆ. ಅವರ ಅನಾರೋಗ್ಯ ; ಮೈಮರೆವಿನಿಂದ ಸಿದ್ಧಪಡಿಸಿದ ಡ್ರಾಫ್ಟ್ ಒಂದರಿಂದ ನಮಗೆ ನಾಲ್ಕು ಲಕ್ಷ ರೂ. ನಷ್ಟ ಆಗಿ, ನಾಲ್ಕು ತಿಂಗಳು ಆ ಸಂಸ್ಥೆ ಜೊತೆ ಹೋರಾಡಬೇಕಾಯ್ತು' ಎಂದ. ಅವಳು ಉದ್ವೇಗದಿಂದ

'ಸಾರ್... ನಿನ್ನೆ ನಮ್ಮ ತಂದೆ ಎಲ್ಲಾ ಹೇಳಿದರು. ಆದರೆ ಈ ಸಮಸ್ಯೆ ಮಾನವೀಯತೆಯಿಂದ ನೋಡಿ. ನಮ್ಮ ಕುಟುಂಬಕ್ಕೆ ಒಂದು ಉದ್ಯೋಗದ ಅವಶ್ಯಕತೆ ಇದೆ. ಅನಾರೋಗ್ಯದಲ್ಲಿರೋ ತಾಯಿ, ವರದಕ್ಷಿಣೆ ಸಮಸ್ಯೆಗೆ ತುತ್ತಾಗಿ ತವರು ಮನೆ ಸೇರಿದ ಅಕ್ಕ, ಕಾಲೇಜು ಓದ್ತಾ ಇರೋ ತಂಗಿ ಹಾಗೂ ತಮ್ಮಂದಿರು, ಪ್ರೈವೇಟ್ ಕಂಪನಿ ಸೇಲ್ಸ್‌ಮನ್ ಆಗಿ ದುಡೀತಿರೋ ತಂದೆ ತರೋ ಸಾವಿರ ರೂ. ಸಂಬಳ ಈ ಕುಟುಂಬಕ್ಕೆ ಸಾಲಲ್ಲ. ನನ್ನ ತಾಯಿ ಉದ್ಯೋಗ ನನಗೆ ಕೊಡಿ' ಎಂದು ಹೇಳಿ ತನ್ನ ವ್ಯಾನಿಟಿ ಬ್ಯಾಗಿಂದ ಕೆಲವು ಸರ್ಟಿಫಿಕೇಟ್ ಆತನಿಗೆ ನೀಡಿ 'ನೋಡಿ,

ನಾನು ಬಿಎಸ್ಸಿ ಫಸ್ಟ್ ಕ್ಲಾಸ್, ಅರವತ್ತೆಂಟು ಪರ್ಸೆಂಟ್ ಇದೆ. ಜೂನಿಯರ್, ಸೀನಿಯರ್ ಟೈಪ್‌ರೈಟಿಂಗ್, ಶಾರ್ಟ್‌ಹ್ಯಾಂಡ್ ಸಹ ಮಾಡಿಕೊಂಡಿದ್ದೀನಿ' ಎಂದಳು.

ಯಾಂತ್ರಿಕವಾಗಿ ಕೈನೀಡಿ ಹಸ್ತಪ್ರತಿ ಪಡೆದು ಕಣ್ಣಾಡಿಸಿದ. ಮಧುಮತಿ ಎಂದು ಅವಳ ಹೆಸರು ಎಂಬುದು ಅರಿವಾಯಿತು. ಮಾಲಿಕ ಎಂದು ಹೊರ ಜಗತ್ತಿಗೆ ತಾನು ಗುರುತಿಸಲ್ಪಟ್ಟರೂ ಒಂದು ಹುಡುಗಿಗೆ ಕೆಲಸ ಕೊಡುವ ಸ್ವಾತಂತ್ರ್ಯ ತನಗಿದೆಯೆ ?

ಅದರಲ್ಲೂ ಇಂಥಾ ಮುದ್ದಾದ ಚೆಲುವೆಯಾದ ಹುಡುಗಿಗೆ ಕೆಲಸ ಕೊಡಬೇಕೆಂದು ತಾನು ಒತ್ತಾಯಿಸಿದರೆ ತನಗೆ, ಜಯಶ್ರೀ ಮಧ್ಯೆ ದೊಡ್ಡರಣರಂಗವೇ ನಡೆದು ಹೋಗುತ್ತದೆ.

'ನಿಮಗೆ ಬೇರೆ ಎಲ್ಲಾದರೂ ಉದ್ಯೋಗ ಸಿಗಲಿ ಅಂತ ಹಾರೈಸ್ತೀನಿ, ನಮ್ಮ ಸಂಸ್ಥೇಲಿ ಈಗ ಆ ಉದ್ಯೋಗ ಫಿಲ್‌ಅಪ್ ಆಗಿದೆ. ಎಂ.ಕಾಮ್. ರ್‍ಯಾಂಕ್ ಸ್ಟೂಡೆಂಟ್ ಆತ' ಎನ್ನುತ್ತ ಆ ಸರ್ಟಿಫಿಕೇಟ್ ಅವಳಿಗೆ ಹಿಂದಿರುಗಿಸಿದ.

ಮಧುಮತಿಯ ಕಂಗಳು ರೋಷದಿಂದ ಧಗಧಗಿಸಿತು.

'ಶುಭಾಶಯ ಹಾರೈಸ್ಲಿಕ್ಕೆ ನೀವೇ ಆಗಬೇಕಾ ? ನೀವು ಶ್ರೀಮಂತರೆಲ್ಲಾ ಹಾಗೆ ತೀರ ಕಟುಕರು. ಬಡವರ ನೋವು ನಿಮಗೆ ಅರ್ಥವಾಗಲ್ಲ' ಅವಳು ಮಾತು ಮುಗಿಸುವಷ್ಟರಲ್ಲಿ ಅವನು 'ಹಾ'ಎಂದು ಚೀರಿ ಹಣೆ ಹಿಡಿದುಕೊಂಡ ; ದೂರದಲ್ಲಿ ಕ್ಯಾಟರ್ ಪಿಲ್ಲರಿನಿಂದ ಪುಟ್ಟ ಹುಡುಗನೊಬ್ಬ ಗುರಿ ಇಟ್ಟ ಕಲ್ಲು ರಾಜಸಿಂಹನ ಹಣೆಗೆ ತಗುಲಿತು. ಶ್ವೇತವಸ್ತ್ರದ ವೃದ್ಧ ಆ ಪುಟ್ಟ ಹುಡುಗನನ್ನೆಳೆದುಕೊಂಡು ಬಂದ. 'ರಾಜಣ್ಣಾ, ಇವನ ಪುಂಡಾಟಿಕೆ ಮಿತಿ ಮೀರಿದೆ, ಅವನಿಗೆ ನಾಲ್ಕು ಬಿಗಿ. ಇದು ಎರಡನೆಯ ಸಲ ಅವನು ಹೀಗೆ ಮಾಡಿರೋದು' ಮಧುಮತಿ ಚಡಪಡಿಸಿ ಎದ್ದಳು.

ಅವನ ಹಣೆಯಿಂದ ಸುರಿಯುತ್ತಿರುವ ರಕ್ತಕ್ಕೆ ತನ್ನ ಕರವಸ್ತ್ರ ಒತ್ತಿ ಹಿಡಿದಳು.

'ಈ ಹುಡುಗನ ವಿಷಯ ಇರಲಿ, ಫಸ್ಟ್ ಏಡ್ ಬಾಕ್ಸ್ ಇದೆಯೆ ? ಪಾಪ ಅವರು ನೋವಿನಿಂದ ಚಡಪಡಿಸುತ್ತಿದ್ದಾರೆ.'

'ಚೂಪಾದ ಕಲ್ಲು ಬಿದ್ದಾಗ ಬೆಂಕಿ ಸುಟ್ಟಾಗೆ ಆಗತ್ತಮ್ಮ, ಹೆಸರಿಗೆ ಮಕ್ಕಳ ಆಟಿಕೆವಸ್ತು. ಇಂಥಾ ಪಾಪಿಷ್ಟ ಸಾಮಾನು ಏಕೆ ಕಂಡು ಹಿಡೀತಾರೋ.... ಗೋವಿಂದ ಔಷಧಿ, ಬ್ಯಾಂಡೇಜು ತಗೊಂಬಾ' ಎಂದು ಆ ವೃದ್ಧರು ಕೂಗಿದಾಗ 'ತಂದೆ ಬುದ್ಧಿ, ಎಂದು ಆ ಸೇವಕ ಓಡಿ ಹೋದ, 'ನೋಡು ಪಪ್ಪನಿಗೆ ಹಣೇಲಿ ರಕ್ತ ಸುರೀತಿದೆ. ಹೋದ ತಿಂಗಳ ಗಾಯಾ ಇನ್ನು ವಾಸಿ ಆಗಿದೆ, ತಿರುಗಾ ಮಾಡಿದ್ದಿ. ನನಗು ಅವತ್ತು

ಹೊಡದಿದ್ದಿ, ಈ ಸಲ ನಿನ್ನ ಬಿಡಲ್ಲ, ಕಟ್ಟಿ ಹಾಕ್ತೀನಿ' ಎಂದರು. 'ಬಿಡು ತಾತಾ... ನೀನು ಮರಕ್ಕೆ ಕಟ್ಟಿ ಹಾಕ್ಲಿಕ್ಕೆ ಹೋದರೆ ನಿನ್ನ ಕೈ ಕಚ್ತೀನಿ' ಎಂದ, ಆ ಪುಟ್ಟ ಹುಡುಗ ನೋಡಲು ತುಂಬಾ ಮುದ್ದಾಗಿದ್ದ. ಬೆಲೆ ಬಾಳುವ ಉಡುಪು, ಆದರೆ ಮುಖದಲ್ಲಿ ಪುಂಡತನ ತುಂಬಿತ್ತು. ಪುಂಡಾಟಿಕೆ ಸಮಸಮವಾಗಿ ಮಾತಿನಲ್ಲಿ ಉದ್ಧಟತನವಿತ್ತು.

'ನೋಡು. ಪಪ್ಪಂಗೆ ಕಣ್ಣಿಗೆ ಏಟು ಬಿದ್ದಿದ್ರೆ ಏನಾಗ್ತಿತ್ತು ?' ಆತ ಆತಂಕದಿಂದ ಗದರಿದರು.

'ಏನಾಗ್ತಿತ್ತು? ಪಪ್ಪಾ ಕುರುಡರಾಗ್ತಿದ್ದರು, ಮಮ್ಮಿ ಡೈವೋರ್ಸ್ ಮಾಡ್ತಿದ್ದರು' ಎಂದು ಹೇಳಿ ಆ ಹುಡುಗ ಆ ವೃದ್ಧರ ಹಿಡಿತದಿಂದ ಬಿಡಿಸಿಕೊಂಡು ದೂರ ಓಡಿದ.

'ರಾಡು... ಇವನ ಹಾವಳಿ ಮಿತಿಮೀರ್‍ತಾ ಇದೆಯಪ್ಪ, ಜಯಾ ಅವನನ್ನ ಅತಿಮುದ್ದು ಮಾಡಿದ್ದಾಳೆ, ತಡಿ ಅವನಿಗೆ ಮಾಡ್ತೀನಿ' ಆ ವೃದ್ಧರು ಅಲ್ಲಿಂದ ಹೊರಡುವ ಹೊತ್ತಿಗೆ ಗೋವಿಂದ ಔಷಧದ ಪೆಟ್ಟಿಗೆ ತಂದ. ಆಗ ಕರ್ಚೀಫ್ ತೆಗೆದಳವಳು, ರಕ್ತ ಒಸರುವುದು ನಿಂತಿತ್ತು. ಟಿಂಚರ್ ಅಯೋಡಿನ್‌ನಲ್ಲಿ ಹತ್ತಿ ಹಚ್ಚಿ, ನಂತರ ಬ್ಯಾಂಡೇಜ್ ಏಡ್ ಹಾಕಿದಳು.

'ಥ್ಯಾಂಕ್ಸ್... ನೀವಿಷ್ಟು ಶ್ರಮ ಏಕೆ ತಗೊಂಡ್ರೋ ಗೊತ್ತಾಗ್ಲಿಲ್ಲ' ಎಂದ.

ಅವಳು ವಿಚಲಿತಳಾಗಿ,

'ನಿಮ್ಮಿಂದಾ ಕೆಲಸ ಗಿಟ್ಟಿಸ್ಲಿಕ್ಕಂತೂ ಅಲ್ಲ, ಎಲ್ಲಾ ಕಡೆ ನೋ ವೆಕೆನ್ಸಿ ಉದ್ಗಾರ ಕೇಳಿ ನನ್ನ ಕಿವಿ ಪಾವನವಾಗಿದೆ. ನಿಮ್ಮ ಇಂಡಸ್ಟ್ರೀಲೂ ಉದ್ಯೋಗ ಖಾಲಿ ಇಲ್ಲ ಅಂತ ಗೊತ್ತು, ತಾಯೀನ್ನ ಬಿಡಿಸಿದ್ದರಲ್ಲಿ ಕಾರಣ ನಿಮ್ಮ ಕಡೆಯಿಂದ ಸಕಾರಣ ವಾಗಿಯು ಇರಬಹುದು, ಆದರೆ ಮಾನವೀಯತೆ ದೃಷ್ಟಿಯಿಂದ ಅಷ್ಟು ದೊಡ್ಡ ಸಂಸ್ಥೇಲಿ ಏನಾದರೂ ಉದ್ಯೋಗ ಕೊಡಬಹುದು, ನಮ್ಮ ಸಂಸಾರದ ಕಥೆ ಕೇಳಿದ ಮೇಲಾದರೂ ಮನ ಕರಗಬಹುದು ಅಂತಿದ್ದೆ. ಉದ್ಯೋಗ ಕೊಡದಿದ್ದ ಮೇಲೆ ನಿಮ್ಮ ಮುಲಾಜೇನು? ಚೆನ್ನಾಗಿ ಬೈದುಬಿಟ್ಟು ಹೋಗೋಣಾಂತಿದ್ದೆ, ಆದರೆ ನೀವು ಪೆಟ್ಟು ತಿಂದು ಚಡಪಡಿಸೋದು ನೋಡ್ಲಿಕ್ಕಾಗಿಲ್ಲ. ಮಾನವೀಯತೆ ದೃಷ್ಟಿಯಿಂದ ಮಾತ್ರ ಸಹಾಯ ಮಾಡಿದೆ' ಎಂದಳು. ನಂತರ 'ಬರ್‍ತೀನಿ, ಗುಡ್ ಬೈ' ಎಂದು ಹೊರಡಲು ಉದ್ಯುಕ್ತಳಾದಳು. 'ನಿಲ್ಲಿ ಮಿಸ್ ಮಧುಮತಿ, ಅಕಸ್ಮಾತ್ ಬೇರೆ ಊರಲ್ಲಿ ಉದ್ಯೋಗ ಸಿಕ್ಕರೆ ಒಪ್ಕೋತೀರಾ ?' ಎಂದ.

'ಈ ಬೆಲೆ ಏರಿಕೆ ಕಾಲದಲ್ಲಿ ತಂದೆ ತಾಯಿಗಳಿಗೆ ಭಾರವಾಗಿ ಬದುಕೋಕಿಂತ ಎಲ್ಲಿ ಉದ್ಯೋಗ ಸಿಕ್ಕರೂ ಹೋಗಲಿಕ್ಕೆ ಸಿದ್ಧಳಾಗಿದ್ದೀನಿ' ಎಂದಳು. ಅವನು ಯೋಚಿಸುತ್ತ

'ಈ ಭಾನುವಾರ ಕುಮಾರಸ್ವಾಮಿ ಬಡಾವಣೆಯಲಿರೋ ಗಣಪತಿ ದೇವಸ್ಥಾನಕ್ಕೆ ಬನ್ನಿ, ನೂರಾ ಎಂಟು ಬಲಮುರಿ ಗಣಪತಿ ವಿಗ್ರಹ ಸ್ಥಾಪನೆ ಆಗಿರೋ ಆ ದೇವಸ್ಥಾನ ಗೊತ್ತು ತಾನೆ ?' ಎಂದ. ಅವಳು ವಿನಯವಾಗಿ 'ಗೊತ್ತು ಸಾರ್ .... ಒಂದು ಸಲ ಗೆಳತಿಯರ ಜೊತೆ ಹೋಗಿದ್ದೀನಿ' ಎಂದಳು.

'ಭಾನುವಾರ ಅಲ್ಲಿ ಬನ್ನಿ, ನಿಮ್ಮನ್ನ ಮೈಸೂರಿಗೆ ಕರೆದುಕೊಂಡು ಹೋಗ್ತೀನಿ, ಅಲ್ಲಿ ನಿಮಗೊಂದು ಉದ್ಯೋಗ ಕೊಡ್ತಿಸ್ತೀನಿ. ಈಗಲೇ ಎಲ್ಲಿ ಯಾವುದು ಅಂತ ಕೇಳಬೇಡಿ' ಎಂದ.

'ಆಗ್ಲಿ ಸಾರ್... ಬರ್ತೀನಿ' ಎಂದು ಹೇಳಿ ಹೊರಟುಬಿಟ್ಟಳು. ರಾಜಸಿಂಹ ಹೊರಡುತ್ತಿದ್ದ ಅವಳನ್ನೆ ದಿಟ್ಟಿಸಿದ. ಬಳುಕುವ ಸೊಂಟ, ಸೊಂಟದಿಂದ ಕೆಳಗೆ ತೂಗಾಡಿದ ಜಡೆ, ಒಟ್ಟಿನಲ್ಲಿ ಹಿಂದೆ...ಮುಂದೆ.... ಯಾವ ಭಂಗಿ..... ಯಾವ ವಿನ್ಯಾಸದಲ್ಲಿ ನಿಂತರೂ ಅವಳು ಅತ್ಯಂತ ಚೆಲುವೆ ಎನಿಸಿತು. ಅವಳಿಗೆ ಕೆಲಸ ಕೊಡಿಸುವ ಹೊಣೆ ತಾನೇಕೆ ಹೊತ್ತುಕೊಂಡೆ ಎನಿಸಿತು. ಕೋಣೆಯಲ್ಲಿ ಬಂದು ಮಲಗಿದ. ಮನಸ್ಸು ವಿಚಲಿತವಾಗಿತ್ತು. ಹಣೆ ಚುರುಗುಟ್ಟುತ್ತಿತ್ತು. ಈ ಹುಡುಗಿಯ ಸೌಂದರ್ಯಕ್ಕೆ ತಾನು ಮರುಳಾಗಿರುವೆನೆ ? ಸೌಂದರ್ಯ ತನಗೆ ಅಪರಿಚಿತವಲ್ಲ. ಜಯಶ್ರೀ ಅಪರಿಮಿತ ಚೆಲುವೆ, ತಮ್ಮದು ಪ್ರೇಮವಿವಾಹ. ಹತ್ತು ವರ್ಷದ ದೀರ್ಘ ದಾಂಪತ್ಯ ಜೀವನ ನಡೆಸಿ, ಎರಡು ಮಕ್ಕಳ ತಾಯಿ ಆದರೂ, ಜಯಶ್ರೀ ಇಂದಿಗೂ ತಾಯಿ ಆದರೂ, ಜಯಶ್ರೀ ಹಾಲುಗಲ್ಲದ ಪ್ರತಿಮೆ. ಅವಳಿಗೆ ಮೂವತ್ತೆರಡು ಎಂದು ಯಾರು ಹೇಳಬಹುದು ? ತನಗಿಂತ ಎರಡೇ ವರ್ಷ ಚಿಕ್ಕವಳು. ತನ್ನ ಸೌಂದರ್ಯ ಕಾಪಾಡಿಕೊಳ್ಳುವುದರಲ್ಲಿ ಅವಳು ಸಾಕಷ್ಟು ಮುತುವರ್ಜಿಯೂ ವಹಿಸುತ್ತಿದ್ದಳು. ಸ್ಟಾರ್ ಹೋಟಲ್ ಒಂದರ ಜಿಮ್‌ಖಾನ ಕ್ಲಬ್ ಸದಸ್ಯೆ ಆಗಿ ಈಜು... ಏರೋಬಿಕ್ ಸೈಕಲ್ ಇತ್ಯಾದಿ ಬಗೆ ಬಗೆ ಸಾಧನೆಯೂ ಮಾಡುತ್ತಿದ್ದಳು. ತಿಂಗಳಿಗೆರಡು ಬಾರಿ ಬ್ಯೂಟಿ ಪಾರ್ಲರಿಗೂ ತಪ್ಪದೇ ಹೋಗುತ್ತಿದ್ದಳು.

ಹೊಳೆಯುವ ಹೊಂಬಣ್ಣ, ರಂಗು ಬಳಿದ ಆ ಕೆಂದುಟಿಗಳು, ಒಪ್ಪವಾಗಿ ಭುಜದವರೆಗೆ ಕತ್ತರಿಸಿದ ಕೂದಲು, ಮಹತ್ವಾಕಾಂಕ್ಷೆ ತುಂಬಿದ ಆ ಮೀನ ನೇತ್ರಗಳು, ಸ್ಲೀವ್‌ಲೆಸ್ ಬ್ಲೌಸಿನಲ್ಲಿ ನೀಳವಾಗಿ ಗೋದಿನಾಗರದಂತೆ ಫಳಫಳ ಹೊಳೆವ ಹೊಂಬಣ್ಣದ ಆ ತೋಳುಗಳು... ಹೊಕ್ಕಳು, ಆ ತೋಳುಗಳು.... ಹೊಕ್ಕಳು ಕೆಳಗುಟ್ಟ ಆ ಸೀರೆಯ ವಿನ್ಯಾಸದಲ್ಲಿ ಸಣ್ಣ ಸೊಂಟದ ವಿನ್ಯಾಸ ಎದ್ದು ಕಾಣುತ್ತಿತ್ತು.

ಜಯಶ್ರೀಯನ್ನು ನೆನೆದಾಗ ಮೊದಲಿನಂತೆ ಮನಸು ಪುಳಕಿತವಾಗುವುದಿಲ್ಲ,

ಗಂಟಲಿನ ಬಿಸಿತುಪ್ಪ ಎನಿಸಿದ್ದು ಉಂಟು. ಆದರೆ ಹತ್ತು ವರ್ಷದ ಹಿಂದೆ ಇದೇ ಜಯಶ್ರೀಯನ್ನು ಕಂಡಾಗ, ಅವಳ ಸ್ನೇಹ ಬೆಳೆಸಿದಾಗ, ಅವಳು ತನ್ನನ್ನು ಒಲಿದಿದ್ದಾಳೆ ಎಂದು ತಿಳಿದಾಗ ತನ್ನ ಸಮಾನ ಅದೃಷ್ಟವಂತರಾರು ಎಂದು ಬೀಗಿದ್ದ, ಬಿ.ಕಾಂ ಮುಗಿಸಿ ಸಿ.ಎ. ಮಾಡುತ್ತಿದ್ದ ದಿನಗಳು ಅವು. ಜಯಶ್ರೀ ಎಂ.ಕಾಂ. ಮಾಡುತ್ತಿದ್ದಳು. ತನಗೆ ತಿಳಿಯದ ಕೆಲವು ವಿಷಯ ಹೇಳಿಸಿಕೊಳ್ಳಲು ಅವನ ಬಳಿ ಬರುತ್ತಿದ್ದಳು. 'ಅಕೌಂಟೆನ್ಸಿ ಬಗ್ಗೆ ಎಷ್ಟು ಚೆನ್ನಾಗಿ ಹೇಳಿಕೊಡ್ತೀರಿ, ನಮ್ಮ ಲೆಕ್ಚರರ್ ಹೇಳಿ ಕೊಟ್ಟಾಗ ನನಗೆ ಅರ್ಥವೇ ಆಗಲ್ಲ' ಎನ್ನುತ್ತಿದ್ದಳು.

ಒಮ್ಮೆ ಗುರುದಕ್ಷಿಣೆ ಎಂದು ಒಂದು ಕವರ್ ಕೊಡಲು ಬಂದಳು. 'ಸಾರಿ, ಟ್ಯೂಷನ್ ಹೇಳಿ ಗಳಿಕೆ ಮಾಡಿ ಓದಬೇಕಾದ ಪರಿಸ್ಥಿತೀಲಿ ನಮ್ಮಮ್ಮ ನನ್ನನ್ನಿಟ್ಟಿಲ್ಲ. ಗೆಳತಿ ಅನ್ನೋ ಆತ್ಮೀಯತೆಗೆ ನಾನು ನನ್ನ ಓದಿನ ಕೆಲವು ಸಮಯ ತ್ಯಾಗ ಮಾಡಿ, ನಿಮಗಾಗಿ ವಿನಿಯೋಗಿಸ್ತಿದ್ದೀನಿ' ಎಂದಿದ್ದ.

ಇದಾದ ಒಂದು ವಾರದ ಮೇಲೆ 'ರಾಜ್ ನಮ್ಮನೆಗೆ ಬನ್ನಿ. ನಮ್ಮ ತಂದೆ ನಿಮ್ಮನ್ನ ಕಂಡು ಮಾತಾಡಬೇಕೂಂತಿದ್ದಾರೆ' ಎಂದಳು. ಸುಮಾರಾಗಿ ಕಾರಣ ಊಹಿಸಿದ ಅವನು, ಪರಿಚಯವಾದ ಎರಡು ವರ್ಷದ ನಂತರ ಅವಳ ಜೊತೆ ಅವರ ಮನೆಗೆ ಬಂದಿದ್ದ. 'ಪದ್ಮಾನಿವಾಸ' ಭವ್ಯ ಬಂಗಲೆ. ಅವರ ತಂದೆ ಒಬ್ಬ ಉದ್ಯಮಿ ಎಂದವನಿಗೆ ಗೊತ್ತಿತ್ತು. ರೇಷ್ಮೆ ಥಾನ್, ಪಾಲಿಸ್ಟಾರ್, ರೆಯಾನ್ ಮುಂತಾದ ಜವಳಿ ಉತ್ಪಾದಕರು, ಸಿದ್ಧ ಉಡುಪಿನ ತಯಾರಿಕ ಕಾರ್ಖಾನೆಯು ಇತ್ತು. ಹೊರ ದೇಶದ ರಫ್ತು ವ್ಯಾಪಾರವೂ ಇತ್ತು.

ಅವರು ಆತ್ಮೀಯತೆಯಿಂದಲೇ ಸ್ವಾಗತಿಸಿದರು. 'ಜಯಶ್ರೀ ನಿನ್ನ ಬಗ್ಗೆ ತುಂಬಾ ಹೇಳ್ತಿರ್ತಾಳೆ, ನನ್ನ ಈ ವ್ಯಾಪಾರದ ಉದ್ದಿಮೆಗಳ ಕೆಲಸಗಳಲ್ಲಿ ಉಸಿರಾಡ್ಲಿಕ್ಕೆ ಪುರುಸತ್ತಿರಲಿಲ್ಲ. ನಮ್ಮ ಕುಟುಂಬ ಅಂದರೆ ನಾನು, ನನ್ನ ಹೆಂಡ್ತಿ, ನನ್ನ ಅಣ್ಣಾ..... ಅವರ ಒಬ್ಬಳೇ ಮಗ, ಜಯಶ್ರೀ ನನ್ನ ಒಬ್ಬಳೇ ಮಗಳು, ವಿದೇಶಿ ವ್ಯವಹಾರ ಜವಳಿ ಖಾತೆ ವಿಭಾಗ ಅವರಿಗೆ ಸೇರಿದ್ದು. ಅದರಲ್ಲೂ ನಮ್ಮ ಶೇರಿದೆ, ಸಿದ್ಧ ಉಡುಪಿನ ಕಾರ್ಖಾನೆ ನಮಗೆ ಸೇರಿದ್ದು. ಇಲ್ಲಿನ ವಿದೇಶಿ ರಫ್ತು ವ್ಯಾಪಾರ ಕೆಲಸಗಳೂ ನಮ್ಮಣ್ಣನ ಮಗ ಒಮ್ಮೊಮ್ಮೆ ನೋಡ್ಕೋತಾನೆ, ನನ್ನ ಮಗಳಿಗೆ ನನ್ನ ಉದ್ದಿಮೆ ಬಗ್ಗೆ ತುಂಬಾ ಆಸಕ್ತಿ ಇದೆ. ಇನ್ನೂ ಚೆನ್ನಾಗಿ ಬೆಳಿಸ್ತೀನಿ ಅಂತಾಳೆ. ಅವಳಿಗೆ ಸಮರ್ಥವಾದ ಒಬ್ಬ ಒಳ್ಳೆ ಜೊತೆಗಾರ ಬೇಕು. ನಾನು ಕೆಲವು ವರಗಳು ನೋಡಿದೆ, ಅವಳಿಗೆ ಇಷ್ಟವಾಗಲಿಲ್ಲ, ಅವಳು ಮೆಚ್ಚಿರೋದು ನಿನ್ನನ್ನ, ನಿನ್ನ ಅಭಿಪ್ರಾಯ ಏನು ?' ಎಂದರು.

ಜಯಶ್ರೀಯನ್ನ ನಾನು ತುಂಬಾ ಇಷ್ಟಪಡ್ತೀನಿ, ಆದರೆ ನಿಮ್ಮ ಶ್ರೀಮಂತಿಕೆ

ನೋಡಿ ಮದುವೆ ಪ್ರಸ್ತಾಪ ಎತ್ತುವ ಧೈರ್ಯವಿರಲಿಲ್ಲ. ನಾನು ಭೂಮಿ ಮೇಲಿನ ಭ್ರಮರ, ಅವಳು ಆಕಾಶದಲ್ಲರಳಿದ ಕುಸುಮ ಎಂದ. ನಕ್ಕು 'ಆದರೆ ಪ್ರೀತಿ ಎಂಬುವ ಏಣಿ ನಿಮ್ಮಿಬ್ಬರ ನಡುವೆ ಸೇತುವೆಯಾಗಿ ನಿಂತಿದೆ. ಭೂಮಿಯ ಭ್ರಮರ ಬಂದು, ಗಗನ ಕುಸುಮದ ಬಳಿ ಮಧುಪಾನ ಮಾಡಬಹುದು' ಎಂದ ಅವರು

'ಬೇರೆ ಸಮಯ ಆಗಿದ್ದರೆ ಎಲ್ಲಾ ಶ್ರೀಮಂತ ತಂದೆಯರಂತೇ ನಾನು ಈ ಮದುವೆ ವಿರೋಧಿಸುತ್ತಿದ್ದೆ ಅನಿಸುತ್ತೆ. ಆದರೆ ಈಗ ನನಗೆ ಆರೋಗ್ಯ ಚೆನ್ನಾಗಿಲ್ಲ, ಎರಡು ತಿಂಗಳ ಹಿಂದೆ ಹಾರ್ಟ್ ಅಟ್ಯಾಕ್ ಆಗಿ ವಿದೇಶದಲ್ಲಿ ಚಿಕಿತ್ಸೆ ತಗೊಂಡು ಚೇತರಿಸಿಕೊಂಡೆ. ನಿಮ್ಮ ಉದ್ಯಮದ ವಿಷಯ ಜಾಸ್ತಿ ಹಚ್ಕೋಬಾರದು ಅಂತ ಹೇಳಿದ್ದಾರೆ. ನಾನು ಕಟ್ಟಿದ ಸಾಮ್ರಾಜ್ಯ ಇದೆ, ಒಳ್ಳೆ ಸಮರ್ಥಶಾಲಿಯಾದ ಒಬ್ಬ ಯುವಕನಿಗೊಪ್ಪಿಸಿ ನಿಶ್ಚಿಂತನಾಗಿರಬೇಕೆಂದು ಕೊಂಡಿದ್ದೀನಿ' ಎಂದರು. ಅವನು ಮೌನವಾಗಿದ್ದ. ಹೃದಯ ಆನಂದದಿಂದ ತುಂಬಿತ್ತು.

'ನಿಮ್ಮ ತಂದೆ ತಾಯಿ ವಿಷಯ ಏನು ?'

'ತಂದೆ ಇಲ್ಲ ಸಾರ್.... ನನಗೆ, ತಾಯಿ ಒಬ್ಬಳೆ. ಎಂಟನೆಯ ವಯಸ್ಸಿಗೆ ತಂದೇನ ಕಳೆದುಕೊಂಡೆ. ತಂದೆ ಒಂದು ಸಣ್ಣ ಲೇಡಿಸ್ ಕಾರ್ನರ್ ನಡೆಸ್ತಿದ್ದರು. ಹಿಂಭಾಗಕ್ಕೆ ಮನೆ, ಮುಂಭಾಗಕ್ಕೆ ಅಂಗಡಿ. ನನ್ನ ತಾಯಿ ವನಜಮ್ಮ ಧೀರೆ' ಸಾಹಸಿ. ಮೈಸೂರಲ್ಲೇ ಇಬ್ಬರು ಅಣ್ಣಂದಿರು, ಒಬ್ಬ ತಮ್ಮ ಇದ್ದರೂ ಯಾರ ಮನೆಗೂ ಹೋಗಲಿಲ್ಲ.

'ನನ್ನ ದೊಡ್ಡ ಸೋದರ ಮಾವಂದಿರಿಬ್ಬರಲ್ಲಿ ಒಬ್ಬರು ಬ್ಯಾಂಕ್ ಮ್ಯಾನೇಜರ್, ಒಬ್ಬರು ಕಾಲೇಜು ಲೆಕ್ಚರರ್ ಆಗಿದ್ದರೆ, ಕಡೇ ಮಾವನಿಗೆ ಓದು ಹತ್ತಲಿಲ್ಲ. ಅಪ್ಪ ಬದುಕಿದ್ದಾಗಿನಿಂದ ಅಂಗಡೀಲೆ ಕೆಲಸ ಮಾಡ್ತಿದ್ದರು. ಅಮ್ಮನ ತಮ್ಮ ಅವರು. ಅವರ ಸಹಾಯದಿಂದ ಅಮ್ಮ ಅಂಗಡಿ ಮುಂದುವರೆಸಿದಳು. ತಿಂಗಳಿಗೆ ಐದು ಸಾವಿರದವರಿಗೆ ವ್ಯಾಪಾರ ಇದೆ. ಅಮ್ಮನೇ ಅಂಗಡಿ ಮೇಲೆ ಕೂತು ವ್ಯಾಪಾರ ಮಾಡ್ತಾಳೆ. ನಮ್ಮ ಸೋದರಮಾವ ಮಾಲು ತರೋದು ಇತ್ಯಾದಿ ಕೆಲಸ ನೋಡ್ಕೋತಾರೆ. ಅವರಿಗೂ ತಿಂಗಳಿಗೆ ಎರಡು ಸಾವಿರದವರೆಗೆ ಸಹಾಯ ಮಾಡ್ತಾಳೆ' ಎಂದ.

'ಈ ಮದುವೆ ಆದರೆ ನಿಮ್ಮ ತಾಯಿ ಅಂಗಡಿ ನಡೆಸಿ ಪಾಡುಪಡೋಷ್ಟಿಲ್ಲ, ನಮ್ಮಲ್ಲೇ ಬಂದಿರಬಹುದು' ಎಂದರು.

'ಜಯಶ್ರೀನ್ನ ಒಮ್ಮೆ ಮೈಸೂರಿಗೆ ಕರೆದುಕೊಂಡು ಹೋಗಿ ಅಮ್ಮನಿಗೆ ತೋರಿಸಿ ಬರ್ತೀನಿ' ಎಂದ.

'ಆಗಿ ..... ಈ ಭಾನುವಾರ ಕರೆದುಕೊಂಡು ಹೋಗು' ಎಂದರು. ಆದರೆ ಆ

ಭಾನುವಾರ ಅವನ ರೂಮಿಗೆ ಬಂದ ಜಯಶ್ರೀ, 'ಸಾರಿ, ನಿಮ್ಮ ಜೊತೆ ಮೈಸೂರಿಗೆ ಕಳಿಸ್ಲಿಕ್ಕೆ ಅಮ್ಮ ಒಪ್ಪಲಿಲ್ಲ' ಎಂದಳು. ಅವನು ಕೊಂಚ ಕೋಪದಿಂದ -

'ಹೀಗಂದ್ರೆ ಹೇಗೆ ಜಯಶ್ರೀ....? ನಿಮ್ಮ ತಂದೆಯ ಕರೆ ಮನ್ನಿಸಿ ನಾನು ಬಂದೆ. ಆದರೆ ನಮ್ಮಮ್ಮನಿಗೆ ನಾನು ನಿನ್ನೆ ಟ್ರಂಕಾಲ್ ಮಾಡಿದ್ದೀನಿ, ಶನಿವಾರ ಕರ್‍ಕೊಂಡು ಬರ್ತೀನೀಂತ' ಎಂದ.

ಜಯಶ್ರೀ ಸುಂದರವಾಗಿ ನಗೆಚೆಲ್ಲಿ-

'ಏನು ಮಾಡಲಿ, ನಮ್ಮ ಮಮ್ಮಿ ಒಪ್ಪಲಿಲ್ಲ. ಮದುವೆಗೆ ಮುಂಚೆ ಇದೆಲ್ಲ ಬೇಡಾಂತ ಹೇಳಿದರು. ಊರಿಂದ ಊರಿಗೆ ಆ ಹುಡುಗನ ಜೊತೆ ಹೋದರೆ ಮರ್ಯಾದೆ ಅಲ್ಲ' ಎಂದರು.

'ನಿಜವಾಗಲು ಇಷ್ಟೊಂದು ಮಧ್ಯಮ ವರ್ಗದ ಮರ್ಯಾದೆ, ಸಂಪ್ರದಾಯ ಪಾಲಿಸ್ತೀರಾ? ಅವಿವಾಹಿತ ಯುವಕನಾದ ನನ್ನ ಕೋಣೆಗೆ ವಾರಕ್ಕೆ ಎರಡು ಬಾರಿ ನೀನು ಟ್ಯೂಷನ್ನಿಗೆ ಹೇಗೆ ಬರ್‍ತಾ ಇದ್ದೆ....?' ಎಂದ.

'ಮೊದಲನೆಯದಾಗಿ ನೀವು ಕಾಡಿನಲ್ಲಿ ರೂಮ್ ಮಾಡಿಲ್ಲ. ನನ್ನ ಗೆಳತಿ ಲಲಿತಾಂಗಿ ಮನೆ ಮಹಡಿಯ ಮೇಲೆ ಇದ್ದೀರಿ. ನನ್ನ ಜೊತೆ ನೆಪ ಮಾತ್ರಕ್ಕೆ ಲಲಿತಾಂಗಿ ಇರ್‍ತಿದ್ದಳು. ಬಾಲ್ಕನೀಲಿ ಹುಲಿ ಹಾಗೆ ಡ್ರೈವರ್ ಇರ್‍ತಿದ್ದ. ಇದೆಲ್ಲಾ ರಕ್ಷಣೆ ಏರ್ಪಡಿಸಿಯೇ ನಮ್ಮ ತಂದೆ ತಾಯಿ ನಿಮ್ಮ ರೂಮಿಗೆ ನನ್ನ ಕಳಿಸ್ತಿದ್ದರು' ಎಂದಳು. ಕೋಪದಿಂದ ಹುಬ್ಬು ಗಂಟಿಕ್ಕಿದ ಅವನು.

'ಹಾಗಾದರೆ ನಾನೊಂದು ಅಪಾಯಕಾರಿ ಪ್ರಾಣಿ ಅಂತಲೇ ಭಾವಿಸಿದ್ದೆಯಾ?' ಎಂದ.

ಅವಳು ನಕ್ಕು-

'ನೀವು ಎಷ್ಟೇ ಸಭ್ಯರಿರಬಹುದು, ಆದರೆ ಸನ್ನಿವೇಶ ವಾತಾವರಣ ಹೇಗೆ ಬರತ್ತೋ ? ನಮ್ಮ ಆತ್ಮರಕ್ಷಣೆ ನಮಗಿರಬೇಕಲ್ಲ' ಎಂದಳು.

'ನಾನು ನಿಮ್ಮ ತಾಯಿನ್ನ ಕೇಳ್ತೀನಿ. ನನ್ನ ಜೊತೆಗೆ ಅವರು ವಿವಾಹ ಗೊತ್ತು ಮಾಡಿರೋದು, ಬೆಳಿಗ್ಗೆ ಕರೆದುಕೊಂಡು ಹೋಗಿ ಸಂಜೆ ಕರೆತಂದುಬಿಡ್ತೀನಿ' ಎಂದ.

'ಮಮ್ಮೀನ್ನ ಕೇಳಿ... ಮಮ್ಮಿ ಏನಂತಾರೊ ?' ಎಂದು ರಾಗ ಎಳೆದಳು.

'ಬಾ... ನಾನು ಕೇಳ್ತೀನಿ' ಎಂದು ಅವಳ ಕಾರಿನಲ್ಲೇ ಅವಳ ಮನೆಗೆ ಬಂದ.

ಹಿಂದಿನ ವಾರ ಬಂದಾಗ, ಮಹಡಿಯ ಮೇಲಿನ ಹಜಾರದಲ್ಲಿ ಅವಳ ತಂದೆಯನ್ನು ಭೇಟಿ ಮಾಡಿದ್ದ. ಈ ದಿನ ಕೆಳಗಿನ ವಿಶಾಲ ಹಜಾರದಲ್ಲಿ ಅವಳ ತಾಯಿಯನ್ನು ಭೇಟಿ ಮಾಡಿದ. ತಾಯಿಯ ಉದ್ರೇಕಕಾರಿ ಗಂಡಸರ ಕ್ರಾಪಿನಂತೇ... ದಿಗ್ವಿಜಯ ಬಾಬ್‌ಕಟ್ ಶೈಲಿಯಲ್ಲಿ ಕತ್ತರಿಸಿದ ಕೂದಲು... ಕುತ್ತಿಗೆಯ

ಮೇಲ್ಭಾಗಕ್ಕೆ ಬೋಳು ಬೋಳು ಎನಿಸುತ್ತಿತ್ತು. ಆಕೆ ಹಾಫ್ ಸ್ಕರ್ಟ್ ಹಾಕಿ, ಅರೆ ತೋಳಿನ ಬಿಳಿ ಶರ್ಟ್ ಹಾಕಿದ್ದರು. ಕಿವಿಯಲ್ಲಿ ತೂಗಾಡುತ್ತಿದ್ದ ದೊಡ್ಡ ಬಳೆ ಆಕಾರದ ರಿಂಗ್‌ಗಳು, ಕತ್ತಿನಲ್ಲಿ ಒಂದೆಳೆ ಸರದ ಜೊತೆ ತೂಗಾಡುತ್ತಿದ್ದ ಗೋಪುರಾಕಾರದ ಪದಕ.

ಒಂದು ಕೈಗೆ ವಾಚ್ ಹಾಕಿ, ಒಂದು ಕೈ ಬೋಳು ಬಿಟ್ಟಿದ್ದರು. ಇಂಥಾ ಅಲಂಕಾರದಲ್ಲಿಯೂ ಆಕೆ ಅತ್ಯಂತ ಚೆನ್ನಾಗಿ ಕಾಣುತ್ತಿದ್ದರು. ಮುಖದ ಕೋಮಲತೆ, ಹೆಣ್ತನದ ಮಾಧುರ್ಯ ಹೊರಸೂಸುವ ಆ ಕೋಮಲವಾದ ತುಂಬುಗೆನ್ನೆಗಳು ಪುಟ್ಟ ಬಾಯಿ... ಕೆಂದುಟಿ... ಕಪ್ಪಾದ ಆ ಪ್ರಖರ ಕಂಗಳು ಹೇಮಮಾಲಿನಿಯ ಸುಂದರ ನೇತ್ರಗಳನ್ನು ನೆನಪಿಸುವ ಹಾಗೆ ಇತ್ತು.

'ಮಮ್ಮಿ ಇವರೇ ರಾಜಸಿಂಹ, ಮದುವೆ ಆದಮೇಲೆ ನಿನ್ನ ಪಾಲಿನ ಗ್ರಾಮ ಸಿಂಹ' ಎಂದರು. ಪುಣ್ಯಕ್ಕೆ ಅವನಿಗೆ ಆ ಗ್ರಾಮಸಿಂಹ ಎಂಬ ಪದದ ಅರ್ಥ ಗೊತ್ತಿರಲಿಲ್ಲ. ಆರಂಭದಿಂದಲೂ ಅವನ ತಾಯಿ ವನಜಮ್ಮ ಕಾನ್ವೆಂಟ್ ಶಿಕ್ಷಣ ಕೊಡಿಸಿ, ಪೂರ್ತಿ ಇಂಗ್ಲೀಷ್‌ನಲ್ಲಿ ಪರಿಣತನನ್ನಾಗಿ ಮಾಡಿಬಿಟ್ಟಿದ್ದಳು. ಕನ್ನಡ ಚೆನ್ನಾಗಿ ಮಾತಾಡುತ್ತಿದ್ದ. ಆದರೆ ವಿಶೇಷ ವ್ಯಂಗ್ಯ ಪ್ರಯೋಗಗಳು ಗೊತ್ತಿರಲಿಲ್ಲ.

'ಮೈಸೂರಿಗೆ ಹೋಗ್ತಿಲ್ಲ ಅಂತ ಕೋಪ ಮಾಡಿಕೊಂಡಿದ್ದಾರೆ, ಮಮ್ಮಿ' ಎಂದಳು.

'ನಮ್ಮ ತಾಯಿಗೆ ಫೋನ್ ಮಾಡಿದ್ದೆ. ನಾಳೆ ನಮ್ಮ ನೆಂಟರಿಷ್ಟರೆಲ್ಲಾ ನಮ್ಮನೇಲಿ ಸೇರಿರ್ತಾರೆ. ನಾವು ಹೋಗದೆ ಇದ್ದರೆ ಅವರಿಗೆಲ್ಲಾ ಉತ್ಸಾಹ ಭಂಗ ವಾಗುತ್ತೆ' ಎಂದ.

'ಈ ಮಧ್ಯಮ ವರ್ಗದವಧುಪರೀಕ್ಷೆಯ ಪದ್ಧತಿ ನಾನು ಇಷ್ಟಪಡಲ್ಲಪ್ಪ. ನಮ್ಮ ಹುಡುಗಿ ಅಂತಿಂಥೋರಿಗೆ ಸಿಗೋಳಲ್ಲ, ಮತ್ಸ್ಯಯಂತ್ರ ಭೇದಿಸಿ ಪಡಿಬೇಕಾದ ಹುಡುಗಿ. ನಿನ್ನ ಕೂಡಿಸಿ ಇಪ್ಪತ್ತೆಂಟು ಪ್ರಶ್ನೆಗಳು ಕೇಳಿ ಪರೀಕ್ಷೆ ಮಾಡಿದರೆ ಸ್ವಾಭಿಮಾನಿಯಾದ ನೀನು ಸುಮ್ಮನೆ... ಇರ್ತೀಯಾ ? ಅವಳು ಒಪ್ಪಿದ್ದಾಳೆ. ನಾವು ಮಗಳ ಮಾತಿಗೆ ಬೆಲೆಕೊಟ್ಟು, ವಿವಾಹ ಮಾಡ್ತಿದ್ದೀವಿ. ಮದುವೆ ಆಗ್ತಾ ಇರೋದು ನೀನು. ನೀನು ಒಪ್ಪಿದರೆ ಸಾಕು, ಆ ನೂರಾರು ಜನ ನೆಂಟರಿಷ್ಟರು ಇವಳನ್ನ ಹಸಿದ ಕಂಗಳಿಂದ ನೋಡಬೇಕಾಗಿಲ್ಲ. ಮಧ್ಯಮ ವರ್ಗದ ವಾತಾವರಣವೂ ಅವಳಿಗೆ ಪರಿಚಯವಿಲ್ಲ, ಲಕ್ಷುರಿಯಾಗಿ ರಾಜಕುಮಾರಿ ಹಾಗೆ ಬೆಳೆಸಿದ್ದೀವಿ. ಮದುವೆ ಆದಮೇಲೆ ನಿಮ್ಮ ತಾಯಿ... ನೀನು ಈ ಮನೆಗೆ ಬರಬೇಕು. ನಿಮ್ಮ ತಾಯಿಗೆ ಈ ಮನೇಲಿ ವಿಶಾಲ ಹಜಾರ, ನಾಲ್ಕು ರೂಮಿನ ಕೋಣೆ ಕೊಡ್ತೀವಿ. ಒಂದು ಫುಲ್ ಸೂಟ್ ತನ್ನ ನೆಂಟರಿಷ್ಟರನ್ನು ಸ್ವಾಗತಿಸಿ, ಆಕೆ ಬೇಕಾದ

ಉಪಚಾರ ಮಾಡಲಿ. ನಾಲ್ಕು ಜನ ಅಡಿಗೆಯವರಿದ್ದಾರೆ, ದಿನಕ್ಕೆ ಜನ ನೂರಾರು ಜನರ ಊಟ ಆಗತ್ತೆ. ಈ ಮನೆ ಬಗ್ಗೆ ಹೇಳು. ಹುಡುಗಿ ಅಪ್ಸರೆ ಹಾಗಿದ್ದಾಳೆ ಅಂತ ಹೇಳು. ನಿನಗೆ ಇಷ್ಟ ಇದೆ ಅನ್ನೋದು ಹೇಳು. ನಿಮ್ಮ ತಾಯಿ ಏಕೆ ಒಪ್ಪಲ್ಲ, ಮಗನ ಹಿತ ಬಯಸೋ ತಾಯಿ ಆದರೆ ಒಪ್ಪೇ ಒಪ್ತಾರೆ. ಹ್ಞಾ! ನನಗೆ ಟೈಮ್ ಆಯ್ತು. ನಾಳೆ ಸಿಂಗಾಪುರಕ್ಕೆ ಹೋಗಬೇಕು. ಈಗ ಆಫೀಸ್ ಚೇಂಬರಲ್ಲಿ ಮೀಟಿಂಗಿಗೆ ನಮ್ಮ ಕಂಪನಿ ಆಫೀಸರ್ಸ್ ಬಂದಿರ್ತಾರೆ, ಫೈನಾನ್ಷಿಯಲ್ ಮ್ಯಾನೇಜರ್ ನಾನು ಹೋಗಲೇಬೇಕು. ಸಿಂಗಾಪುರ್‌ನಿಂದಲೇ ನಿನ್ನ ಮದುವೆ ಶುಭಾಶಯ ಕಳಿಸ್ತೀನಿ' ಎಂದು ಹೇಳಿ ಹೊರಟುಹೋದಳು. ಆಕೆ ಅವನ ಉತ್ತರಕ್ಕೂ ಕಾಯಲಿಲ್ಲ.

ಅವನಿಗೆ ನಿರಾಶೆ, ಅಪಮಾನ, ಸ್ವಾಭಿಮಾನ ಭಂಗ ಆಗಿತ್ತು, 'ನಿಮ್ಮನೆ ಪದ್ಧತಿಗಳು ಎಷ್ಟು ವಿಚಿತ್ರ ಮಿಸ್ ಜಯಶ್ರೀ?' ಎಂದ.

'ನಮ್ಮದೇ ಬೇರೆ ಲೋಕ.... ನಿಮ್ಮದೇ ಬೇರೆ ಲೋಕ ಅನಿಸತ್ತೆ ರಾಜ್.... ಒಂದ್ವೇಳೆ ತೀರ ಇಬ್ಬರಿಗೂ ಸರಿ ಬರದೇ ಇದ್ದರೆ ಡೈವೋರ್ಸ್ ಮಾಡಿಕೊಂಡು ಬಿಡೋಣ. ಆದರೆ ನಿಮ್ಮ ಸುಂದರ ರೂಪ ನೋಡಿದರೆ ನಿಮ್ಮನ್ನ ವಿವಾಹ ಆಗಲೇಬೇಕು ಅನ್ನೋ ಕ್ರೇಜ್ ನನಗೆ' ಸ್ಪಷ್ಟವಾದ ಅವಳ ಈ ಉದ್ಗಾರ ಕೇಳಿ ಕೊಂಚ ದಿಗ್ಭ್ರಾಂತನಾದ,

'ಹೊಂದ್ಕೋತೀನಿ, ಒಬ್ಬರನ್ನೊಬ್ಬರು ಅನುಸರಿಸಿಕೊಂಡು ಎಂದೆಂದಿಗೂ ಸುಖವಾಗಿರೋಣಾ..... ಆಕಾಶವೇ ನಮ್ಮ ಮೇಲೆ ಬಿದ್ದರೂ ನಾವು ಒಬ್ಬರನ್ನೊಬ್ಬರು ಅಗಲೋದು ಬೇಡಾ... ಇಂಥಾ ಉದ್ಗಾರಗಳು ನಿನ್ನಿಂದ ಬಯಸಿದ್ದೆ' ಎಂದ.

ಅವಳು ನಕ್ಕು-

'ಆಕಾಶ ಕಳಚಿ, ಭೂಮಿ ಬಾಯ್ಬಿಟ್ಟು, ಸಮುದ್ರ ಪ್ರವಾಹವಾಗಿ ನಮ್ಮ ಮೇಲೆ ಉಕ್ಕಿ ಬಂದರೂ ನಿಮ್ಮ ತೋಳಲ್ಲೇ ಸುಖ ಕಾಣ್ತೀನಿ ಅನ್ನೋ ಹಠ ನನಗಿಲ್ಲ. ಬದುಕು ಹೂವಿನ-ಹಾಸಿಗೆಯಾಗಿ, ನಾವು ಅದರಲ್ಲಿ ಒರಗಿ, ಸುಖದ ಸಿಹಿ ಜೇನಿನ ಬಟ್ಟಲು ತುಟಿಗಿಟ್ಟು ಬದುಕಿನ ಎಲ್ಲಾ ಐಷಾರಾಮ ನಿಧಾನವಾಗಿ ಸವಿಯಬೇಕು. ನೀವು ಸತ್ಯಭಾಮೆಯ ವ್ರತರಾಗಿ ನನ್ನನ್ನ ಅನುಸರಿಸಿ ಅಂತ ನಾನು ಬಂಧನ ಹಾಕಲಾರೆ. ನಿಮ್ಮ ವ್ಯಕ್ತಿ ಸ್ವಾತಂತ್ರ್ಯ ನಿಮಗಿರಲಿ, ನಿಮ್ಮ ನೆರಳಾಗಿ ಶ್ರೀರಾಮನ ಸೀತೆಯಾಗಿ ನಾನು ಇರಲಾರೆ. ನನ್ನದಾದ ಕೆಲವು ಸ್ವಾತಂತ್ರ್ಯ ನನಗೂ ಬೇಕು, ಇದರ ನಡುವೆಯೂ ನಾವು ಒಬ್ಬರನ್ನೊಬ್ಬರು ಪ್ರೀತಿಸಬಹುದು' ಎಂದಳು. ಅವನು ಬೇಸರದಿಂದ-

'ಬದುಕಿನ ಸ್ವಚ್ಛಂದ ನಾನು ಇಷ್ಟಪಡಲ್ಲ, ಗೃಹಿಣಿ ಪಟ್ಟಕ್ಕೆ ತನ್ನದೇ ಆದ ಬೆಲೆ ಇದೆ' ಎಂದ.

'ಮಧ್ಯಮ ವರ್ಗದ ಆ ಶುದ್ಧ ಹದಿನಾರಾಣೆ ಗೃಹಿಣಿ ಆಗಿ, ಕಾಸಿನಗಲ ಕುಂಕುಮ, ಮಲ್ಲಿಗೆ ಮುಡಿದ ತುರುಬಿನ ಗೃಹಿಣಿ ಆಗಲಾರೆ. ಅಮ್ಮನ್ನ ಈಗ ನೋಡಿದಿರಿ. ಈ ಐವತ್ತನೇ ವಯಸ್ಸಿನಲ್ಲಿಯೂ ಆಫೀಸಿಗೆ ಪ್ಯಾಂಟ್ ಶರ್ಟಲ್ಲಿ ಹೋಗ್ತಾಳೆ. ಗಂಡಸರ ಹಾಗೆ ಕ್ರಾಪ್. ಕುಂಕುಮ ಇಡಲ್ಲ, ಬಳೆ, ಹೂವು ಯಾವುದೂ ಇಲ್ಲ. ಮಾಂಗಲ್ಯ ದಾಸ್ಯದ ಸಂಕೇತ ಅಂತ ಒಮ್ಮೆ ಅಪ್ಪನ ಜೊತೆ ಜಗಳದಲ್ಲಿ, ಅಪ್ಪನ ಮೇಲೆ ಎಸೆದು ಬಿಟ್ಟಳು. ಅಪ್ಪನ ಉದ್ಯಮಕ್ಕೆ ಸಹಾಯಕ್ಕೆ ಮೊದಲು ಬರ್ತಿದ್ದಳು. ಅಮ್ಮನ ಸಲಹೆ ಅಪ್ಪ ಪಾಲಿಸ್ತಿರಲಿಲ್ಲ.

'ನಮ್ಮ ಚಿಕ್ಕಪ್ಪನ ಮಗನಿಗೆ ಅಮ್ಮ ಅಂದರೆ ಪ್ರಾಣ. ಅಮ್ಮನಿಗೆ ತನ್ನ ಡೆನಿಮ್ ಕ್ಲಾತ್ ಉದ್ಯೋಗ ವಹಿಸಿದ. ಅಲ್ಲಿ ಫೈನಾನ್ಷಿಯಲ್ ಮ್ಯಾನೇಜರ್, ಬಾಂಬೇಲೆ ಜಾಸ್ತಿ ಇರ್ತಾಳೆ. ಬೆಂಗಳೂರಿಗೂ ಬರ್ತಾಳೆ, ವರ್ಷಕ್ಕೆ ಎರಡು ಮೂರು ತಿಂಗಳು ವಿದೇಶಕ್ಕೂ ಹೋಗ್ತಾಳೆ, ಅಪ್ಪಾ ಆದರೂ ನಿರಾಶೆಗೆ ಜೀವನದಲ್ಲಿ ತಪ್ಪಿ ನಡೆದಿರಬಹುದು. ಅಪ್ಪನ ಬದುಕಲ್ಲಿ ನಾಲ್ಕಾರು ಹೆಣ್ಣುಗಳು ಹಾದು ಹೋಗಿವೆ. ಎಲ್ಲಾ ತಾತ್ಕಾಲಿಕ ಸಂಬಂಧ. ಆದರೆ ಅಮ್ಮ ಪುರುಷದ್ವೇಷಿ. ಅನೈತಿಕ ಸಂಬಂಧ ಅಂದ್ರೆ ಸಿಡಿದು ಬೀಳ್ತಾಳೆ. ಅಪ್ಪಾ ಪಾತಾಳ ಗರಡಿ ಹಾಕಿ, ಜನಾನ್ನ ಗೂಢಚಾರರ ಹಾಗೆ ಇಟ್ಟು ಶೋಧಿಸಿದ. ಐದು ವರ್ಷದುದ್ದ ಜಾಲಾಡಿದರೂ ಅಮ್ಮನ ಬದುಕಲ್ಲಿ ಒಂದು ಕಪ್ಪು ಚುಕ್ಕೆ ಇಲ್ಲ. ಅಪ್ಪನೇ ಶರಣಾಗಿ "ಚಂದ್ರಾ .... ನನ್ನನ್ನು ಕ್ಷಮಿಸು, ನೀನಿಲ್ಲದೇ ನಾನಿರಲಾರೆ" ಎಂದ.

'ನಿಮ್ಮ ಮೇಲೆ ನನಗೇನು ಕೋಪವಿಲ್ಲ, ನೀವು ಹಂಬಲಿಸಿದಾಗಲ್ಲಾ ಬರ್ತೀನಿ. ಬೆಂಗಳೂರಲ್ಲಿಯೂ ನಮ್ಮ ಕಂಪನಿ ಆಫೀಸ್ ಬ್ರಾಂಚ್ ಇದೆ. ಇನ್ಮೇಲೆ ಅಶೋಕನ ಬದಲು ನಾನೇ ಬಂದು ಹೋಗ್ತೀನಿ ಅಂದಳು. ಆರೇಳು ವರ್ಷದಿಂದ ಇದೇ ಪದ್ಧತಿ ನಡೆದಿದೆ. ತಿಂಗಳಲ್ಲಿ ಒಂದು ವಾರವಾದರೂ ಅಮ್ಮ ಬೆಂಗಳೂರಿಗೆ ಬರ್ತಾಳೆ. ಅಪ್ಪಾ ಕಾಲು ನೋವು ಅಂದರೆ ಕಾಲಿಗೆ ಅಯೋಡೆಕ್ಸ್ ಸಹ ಉಜ್ತಾಳೆ, ಆದರೆ ತನ್ನ ಉದ್ಯಮ ವಿಸ್ತರಿಸಬೇಕು, ಈ ಹಠ. ಈಗ ಅಮ್ಮನ ಆಸ್ತಿ ಹತ್ತು ಲಕ್ಷ ಇದೆ. ಅಪ್ಪನ ಆಸ್ತಿ ಅರವತ್ತು ಲಕ್ಷ ಇದೆ. ಅಪ್ಪಾ ಏನಾದರೂ ಪ್ರೀತಿಯಿಂದ ತೆಗೆದು ಕೊಟ್ಟರೆ ಮುಂದಿನ ಸಲ ಬರುವಾಗ ತಾನು ಅದೇ ಬೆಲೆಯ ಏನಾದರೂ ಒಂದು ಅಪರೂಪದ ವಸ್ತು,ಗಂಡಸರು ಉಪಯೋಗಿಸೋ ಅಂಥಾದ್ದು ಅಪ್ಪನಿಗೆ ಕಾಣಿಕೆ ಕೊಡ್ತಾಳೆ. ಅಪ್ಪ ಶಾಸ್ತ್ರೋಕ್ತವಾಗಿ ನಮ್ಮ ಮದುವೆ ಮಾಡಬೇಕೂಂತ ಇದ್ದಾರೆ. ಇರೋ ಒಬ್ಬ ಮಗಳು, ಕನ್ಯಾದಾನದ ಪುಣ್ಯ ಬರಲಿ ಅಂತ ಅಪ್ಪಾ..... ಆದರೆ

ಅಮ್ಮನಿಗೆ ಹೆಣ್ಣು ಅಂದರೆ ದಾನ ಕೊಡೋ ವಸ್ತು ಅಲ್ಲ, ರಿಜಿಸ್ಟರ್ಡ್ ಮ್ಯಾರೇಜ್ ಆಗ್ಲಿ, ಹೇಗಿದ್ದರೂ ಇಬ್ಬರೂ ಒಪ್ಪಿದ್ದಾರೆ ಅಂತ. ಆದರೆ ಅಪ್ಪ ಲೋಕಾರೂಢಿಗೆ ತಲೆಬಾಗ್ತಾರೆ. ಅಪ್ಪನ ತಂಗಿ, ಅವರ ಗಂಡ, ಅಂದರೆ ನಮ್ಮ ಸೋದರತ್ತೆ, ಸೋದರಮಾವ ಹಸೆಯ ಮೇಲೆ ಕೂತ್ಕೋತಾರೆ. ಬಹುಶಃ ನಮ್ಮ ಮದುವೆ ಟೈಮಿಗೇ ಅಮ್ಮ ಸಿಂಗಾಪುರದಲ್ಲಿರ್ತಾಳೆ ಅನಿಸತ್ತೆ' ಎಂದಳು.

'ಸರಿ. ಇಷ್ಟು ಸ್ವತಂತ್ರವಾದಿ ಆದೋರು ನೀನು ಮೈಸೂರಿಗೆ ಹೋಗೋದು ಏಕೆ ವಿರೋಧಿಸಿದರು ?' ಎಂದ.

ಹಿಂದಿನ ದಿನ ನಡೆದ ನಿಜವಾದ ಸಂಭಾಷಣೆ ಹೇಳಿಬಿಡಲೇ ಎಂದುಕೊಂಡಳು. ಊಹೂಂ ಈ ಮದುವೆಯೇ ನಿಂತು ಹೋದರೇ ಎನಿಸಿತು. ಜಾಣತನವಾಗಿ 'ಏನೋ ಅಮ್ಮ ಮೂಡಿ ಫೆಲೊ. ತನ್ನದಾದ ಕೆಲವು ಆಜ್ಞೆ ಮಾಡಿಬಿಡ್ತಾಳೆ. ಅಮ್ಮನ ಆಜ್ಞೆ ಪಾಲಿಸೋದರಲ್ಲಿಯೂ ಹಿತವಿದೆ ಅನಿಸುತ್ತೆ, ನಮ್ಮ ಕುಟುಂಬ ಏನೋ ತುಂಬಾ ಮಾಡರ್ನ್ ಇದ್ದೀವಿ. ಆದರೆ ನೂರಕ್ಕೆ ತೊಂಬತ್ತು ಪಾಲು ನನ್ನ ಗೆಳತಿಯರೆಲ್ಲ ಮಧ್ಯಮ ವರ್ಗದ ಕುಟುಂಬದವರು. ಮದುವೆ ಮುಂಚೆ ಊರೂರು ತಿರುಗ್ತಾರ ಲ್ಲಾಂತ ಅನ್ಕೋಬಾರದು. ಒಂದು ಕೆಲಸ ಮಾಡಿ, ನಿಮ್ಮ ತಾಯಿನ್ನೇ ಇಲ್ಲಿ ಕರ್ಕೊಂಬನ್ನಿ. ನಮ್ಮ ಮನೆ ಎಲ್ಲಾ ನೋಡಲಿ, ತನ್ನ ಮಗ ಪ್ರೀತಿಸಿರೋ ಹುಡುಗಿ ಎಂಥಾ ಕೋಟ್ಯಾಧೀಶರ ಮಗಳು ಎಂದು ಅವರಿಗೆ ಅರಿವಾಗಲಿ, ಹೇಗಿದ್ದರೂ ಮುಂದೆ ಅವರು ಬಾಳಬೇಕಾದ ಮನೆ, ಈ ಮನೆ ಹೇಗಿದೇಂತ ಒಂದು ನೋಡಲಿ' ಎಂದಳು.

ಅವನ ಮನಸ್ಸು ಗೊಂದಲ ಗೊಂಡಿತ್ತು. ತಾನು ಮನಸ್ಸಿನಲ್ಲೇ ಕನಸು ಕಟ್ಟಿ ಆಶಿಸಿದ ರೂಪವತಿ ಸಿಗುತ್ತಿದ್ದಾಳೆ. ತನ್ನದು ಈ ಸಲ ಸಿ.ಎ. ಮುಗಿಯುತ್ತದೆ. ಇವರ ಕಂಪನಿಯಲ್ಲೇ ಉದ್ಯೋಗ, ಮುಂದೆ ಈ ಎಲ್ಲಾ ಆಸ್ತಿಗೆ ವಾರಸುದಾರ. ಇಂಥಾ ಅವಕಾಶ ಬಿಡುವುದೇ ? ಎಂದು ಒಂದು ಮನಸು. ಆದರೆ ಇವಳು ಗಂಡನಿಗೆ ವಿಧೇಯಳಾದ ಹೆಂಡತಿಯೂ ಆಗಲಾರಳು. ತನ್ನ ತಾಯಿಗೆ ವಿಧೇಯಳಾದ ಸೊಸೆ ಆಗಲಾರಳು. ಚಿನ್ನದ ಸೂಜಿ ಎಂದು ಕಣ್ಣು ಚುಚ್ಚಿಕೊಳ್ಳಲಾದಿತೆ ? ಎನಿಸಿತು. ತನ್ನ ಮಾನಸಿಕ ಉಮ್ಮಳ ತಡೆಯಲಾರದೇ ತನ್ನ ಆಪ್ತ ಗೆಳೆಯ ಸೋಮನಾಥನ ಸಲಹೆ ಕೇಳಿದ.

'ಬಡ ಹುಡುಗಿ ಆದರೆ ತಾನೇ ವಿಧೇಯಳಾಗಿರ್ತಾಳೆ ಅಂತ ಗ್ಯಾರಂಟಿ ಏನು ? ನಮ್ಮ ದೊಡ್ಡಣ್ಣನಿಗೆ ಬಡವರ ಮನೆ ಹುಡುಗೀನೆ ತಂದದ್ದು. ವಧು ಪರೀಕ್ಷೆ ಸಮಯದಲ್ಲಿ ಸಾಧು ಅರಗಿಳಿ ಇದ್ದಾಗೆ ಇದ್ದಳು. ಇಲ್ಲಿ ಬಂದ ಒಂದು ವರುಷದಲ್ಲಿ ರಾಕ್ಷಸಿ ಹಾಗೆ ನಮ್ಮಮ್ಮನ ಜೊತೆ ಜಗಳ ಕಾದು ಈ ಜಾಯಿಂಟ್ ಫ್ಯಾಮಿಲಿ

ಯಾರಿಗೆ ಬೇಕು ? ಅಂತ ನಮ್ಮ ಅಣ್ಣನ ಜೊತೆ ಬೇರೆ ಹೋದಳು. ಅಲ್ಲಿ ಗಂಡನಿಗಾದರೂ ಆತ್ಮೀಯಳಾಗಿ ಇದ್ದಾಳೆಯೆ ? ಮಹಾ ಸಂಶಯದ ಸ್ವಭಾವ, ಎದುರು ಮನೆ ಹುಡುಗೀರನ್ನ ನೋಡಿದಿರಿ, ಪಕ್ಕದ ಮನೆ ಪದ್ಮಮ್ಮನ ಮುಖ ನೋಡಿ ನಕ್ಕಿದ್ಯಾಕೆ ? ಸೈಕಲ್ ತಗೊಂಡು ಹಿಂದಿನ ಬೀದಿ ಸುತ್ತು ಬಳಸಿ, ಏಕೆ ಹೋಗ್ತೀರಿ? ಆ ಮಾಲತಿ ಮನೆ ಹಾದು ಹೋಗದಿದ್ರೆ ನಿಮಗೆ ತಿಂದನ್ನ ಜೀರ್ಣ ಆಗಲ್ವ, ಆ ವೈಯಾರಿ ಕಾಂಪೌಂಡಲ್ಲಿ ನಿಂತಿರ್‍ತಾಳಲ್ಲ, ಬಿನ್ನಾಣವಾಗಿ ಸೆರಗು ಹಾರಿಸ್ತಾ.... ಹೀಗೆ ಗಂಡನ ಜೀವ ಹಿಂಡ್ತಾಳೆ.

'ಎರಡನೆ ಅಣ್ಣನ ಹೆಂಡತಿ ರೂಪವತಿ ಹಾಗೂ ಡಾಕ್ಟರ ಮಗಳು. ಅಣ್ಣ ಬ್ಯಾಂಕ್ ಆಫೀಸರ್ ಆದರೂ ನಮ್ಮ ಮಧ್ಯಮ ವರ್ಗದ ಕುಟುಂಬಕ್ಕೆ ಮೀರಿದ ಹುಡುಗಿ, ಅಂತಲೇ ಎಲ್ಲರಿಗೂ ಸಂಶಯವಿತ್ತು. ಆಶ್ಚರ್ಯ ಅಂದರೆ ಬೇರೆ ಮನೆ ಹೊಣೆಗಾರಿಕೆ ಅವಳಿಗೆ ಬೇಕಾಗಿಲ್ಲ. ಅಣ್ಣ ಸಂಬಳ ಬಂದರೆ ಮೂರು ಸಾವಿರ ಮನೆ ಖರ್ಚು ಅಂತ ತಾಯಿ ಕೈಗೆ ಹಾಕ್ತಾನೆ. ಅವಳಿಗೂ ಶಾಪಿಂಗ್ ಮಾಡಿಸಿ ಸೀರೆಬಟ್ಟೆ ಕೊಡಿಸ್ತಾನೆ. ಕೋಣೆಯಿಂದ ಹೊರಗೆ ಬಂದರೆ ಸ್ನಾನ, ಊಟ, ತಿಂಡಿಗೆ ಮಾತ್ರ. ಮಾತಾಡಿದರೆ ಮುತ್ತು ಉದುರುತ್ತೆ ಅನ್ನೋ ಹಾಗಿರ್‍ತಾಳೆ. ಮೊದಲಿನ ಅತ್ತಿಗೆಯ ಹಾಗೆ ಜಗಳ ರಣರಂಪ ಇಲ್ಲ. ಆದರೆ ಒಂದು ಕೆಲಸ ಮಾಡಲ್ಲ. ಒಂದು ಕಡ್ಡಿ ಆ ಕಡೇದೆತ್ತಿ ಈ ಕಡೆ ಇಡಲ್ಲ. ಮನಸ್ಸು ಬಂದಾಗ ತವರು ಮನೆಗೆ ಹೋಗಿ ತಿಂಗಳಾನುಗಟ್ಟಲೆ ಇದ್ದು ಬರ್‍ತಾಳೆ. "ಸೊಸೇರಿಂದ ಸುಖ ಪಡೋ ಹಣೆ ಬರಹ ನನಗಿಲ್ಲ" ಅಂತ ಅಮ್ಮ ಚಡಪಡಿಸ್ತಾಳೆ. ನಮ್ಮಪ್ಪಾ ಹಾಸ್ಯ ಮಾಡಿ ನೀನು ನಮ್ಮಮ್ಮನಿಗೆ ಎಷ್ಟು ವಿಧೇಯಳಾಗಿದ್ದಿ ? ಇಡೀ ಮನೆ ಯಜಮಾನಿಕೆ ನಿನ್ನ ಬಿಗಿಮುಷ್ಟೀಲಿ ಇಟ್ಟುಕೊಂಡಿದ್ದಿ. ನಿನ್ನ ಅಪ್ಪಣೆ ಇಲ್ಲದೇ ಅಮ್ಮನಿಗೆ ಹತ್ತು ರೂಪಾಯಿ ಕೊಡೋ ಸ್ವಾತಂತ್ರ್ಯ ಇತ್ತ ? ಒಂದು ಸಲ ಮದ್ರಾಸಿಂದ ಬರ್‍ತಾ "ಅಮ್ಮನಿಗೆ ಮಡಿ, ಪೂಜೆ, ಪುನಸ್ಕಾರದ ಹುಚ್ಚು ಅಂತ ಒಂದು ಕೊಳ್ಳೆಗಾಲದ ಸಿಲ್ಕ್ ಸೀರೆ ತಂದಿದ್ದೆ., ನೀನು ದೊಡ್ಡ ರಣರಂಪಾ ಮಾಡಿ, ಮಾತು ಬಿಟ್ಟಿದ್ದೆ. ಕಡೆಗೆ ಅಮ್ಮ ಸೀರೆ ಹರಿಸಿ, ಮಕ್ಕಳಿಗೆ ಲಂಗಾ ಪೋಲಕಾ ಹೊಲಿಸಿದಳು ! ಅಂತ ನೆನಪಿಸ್ತಾರೆ" ಎಂದ ಸೋಮನಾಥ್.

'ನಿನಗೆ ಇದೆಲ್ಲಾ ಏಕೆ ಹೇಳಿದೆ ಅಂದರೆ, ಮಧ್ಯಮ ವರ್ಗದ ಹುಡುಗಿ ಆದ ಮಾತ್ರಕ್ಕೆ ವಿಧೇಯತೆ ಪಡಿಅಚ್ಚು ಇರ್ತಾರೆ ಅಂತ ಭಾವಿಸಬೇಡ. ಈಗಿನ ಕಾಲದಲ್ಲಿ ಮಧ್ಯಮ ವರ್ಗದ ಹುಡುಗೀರು ಒಂದು ಬಿ.ಎ., ಬಿ.ಎಸ್‌ಸಿ ಮಾಡಿರ್‍ತಾರೆ. ಸಾವಿರ, ಸಾವಿರದ್ದೆನೂರಾದರೂ ಸಂಪಾದಿಸ್ತಿರ್‍ತಾರೆ. ಕೆಲವರಂತು ತಾವು ವಿಮೆನ್ಸ್ ಲಿಬ್ಬಿನ ತುಣುಕಗಳೊಂತ್ಲೇ ತಿಳಿದಿರ್‍ತಾರೆ, ನನ್ನ ಕೇಳಿದ್ರೆ ಅಪ್ಸರೆ ಅಂತ ಹುಡುಗಿ, ಕುಬೇರ

ನಂಥಾ ಮಾವಾ.... ತಾವಾಗಿ ಒಲಿದು ಬಂದಿದ್ದಾಳೆ, ಅವರ ಅಪ್ಪಾ... ಅಮ್ಮಾನು ಮದುವೆ ವಿರೋಧಿಸಿಲ್ಲ, ನಿನ್ನ ಸಮಾನ ಮದುವೆ ವಿರೋಧಿಸಿಲ್ಲ, ನಿನ್ನ ಸಮಾನ ಯಾರು ?' ಎಂದ. ಅವನ ಮನಕ್ಕೆ ಒಂದು ಸ್ಪಷ್ಟ ಕಲ್ಪನೆ ಬಂತು.

ಶನಿವಾರ ಒಬ್ಬನೇ ಊರಿಗೆ ಹೋದ. ಊರು ಜನ ಸೋದರಮಾವಂದಿರೂ ಸೇರಿದ್ದರು.

'ಹುಡುಗಿ ಬರಲಿಲ್ವಾ, ರಾಜು ?' ಎಂದಳು ತಾಯಿ.

'ಇಲ್ಲಮ್ಮ, ಏನೋ ಮೆನ್ಸಸ್‌ಡೇಟ್ ಅಂತೆ' ಎಂದ.

'ಮೈಸೂರುಪಾಕ್ ಅಡಿಗೆ ಮಾಡಿಸಿ ಕಾದಿದ್ದಳಲ್ಲಯ್ಯ ನಿನ್ನ ತಾಯೀ...' ಒಬ್ಬ ಸೋದರಮಾವ ಅಪಹಾಸ್ಯ ಮಾಡುವಂತೇ ಹೇಳಿದ.

'ಒಂದು ಮಾತು ರಾಜು, ಮದುವೆಗೆ ಮೊದಲೇ ಆ ಹುಡುಗಿಗೆ, ಅವರಪ್ಪನಿಗೆ ಹೇಳಿಬಿಡು, ಹುಡುಗಿ ಇಲ್ಲಿ ನಿಮ್ಮಮ್ಮನಿಗೆ ಸೊಸೆಯಾಗಿ ಬಂದಿರಬೇಕು. ಅವರು ನಿನ್ನನ್ನ ಅಳಿಯನಾಗಿ ಹಾರಿಸಿಕೊಂಡು ಹೋಗಬಾರದು. ನಿಮ್ಮಮ್ಮ ಪಡಬಾರದ ಕಷ್ಟಪಟ್ಟು, ನಿನ್ನನ್ನ ಒಬ್ಬ ಮನುಷ್ಯನಾಗಿ ರೂಪಿಸಿದಳು. ಆ ಲಾಭ ಬೇರೆಯವರು ಅಪಹರಿಸಬಾರದು. ಸುಂದರ, ವಿದ್ಯಾವಂತ ತರುಣ ಪುಕ್ಕಟೆ ಅಳಿಯನಾಗಿ ಸಿಕ್ಕ ಅಂತ ಆ ಶ್ರೀಮಂತ ಭ್ರಮಿಸಿದ್ರೆ, ಸರಿಯಾಗಿ ಅವನಿಗೆ ಬುದ್ಧಿ ಕಲಿಸು' ಎಂದ ಒಬ್ಬ ಸೋದರಮಾವ.

'ಅವನೇನು ದಡ್ಡನೇ..? ಅವರ ಮನೆ ಅಳಿಯನಾಗಿ ಹೋಗಿ ಎಂಜಲು ಲೋಟ ತೊಳೆಯಲಿಕ್ಕೆ. ತಾಯಿ ಅಂದರೆ ಪಂಚಪ್ರಾಣ ಇಟ್ಟಿದ್ದಾನೆ. ಸೊಸೆಯೇ ಇಲ್ಲಿ ಬರ್‍ತಾಳೆ' ಎಂದ ಇನ್ನೊಬ್ಬ ಮಾವ. ಅವನ ಮುಖ ಕಂಗೆಟ್ಟಿತ್ತು. ರಾತ್ರಿ ಮೈಸೂರು ಪಾಕು, ಹಾಲು ಕೀರು, ಕಲಸನ್ನ, ಅಂಬೊಡೆಯ ಔತಣದೂಟ ಉಂಡು ಅವರೆಲ್ಲಾ ಹೊರಟುಬಿಟ್ಟರು.

'ಸೊಸೆಯನ್ನಂತು ತೋರಿಸಲಿಲ್ಲಮ್ಮ, ಬರೀ ಸಿಹಿ ಊಟ ಹಾಕಿಸಿದಿ ' ಎಂದರು.

ವನಜಮ್ಮ ನಕ್ಕು ' ತೋರಿಸ್ತೀನಿ, ಊರಿಗೆ ಬಂದೋಳು ನೀರಿಗೆ ಬರದೇ ಇರ್‍ತಾಳೆಯೆ !' ಎಂದಳು.

'ನನಗೇನೋ ಅವರು ನಿನ್ನ ಮಗನ್ನೇ ಅಪಹರಿಸುತ್ತಾರೆ ಅನಿಸುತ್ತೆ. ನಿನಗಿರೋದು ಒಬ್ಬ ಮಗ, ಸ್ವಲ್ಪ ವಿಚಾರಿಸಿ ಕೊಡಮ್ಮ' ಎಂದ ದೊಡ್ಡಣ್ಣ.

'ಆಗ್ಲಿ. ನನಗೆ ಇಲ್ಲದ ಚಿಂತೆ ನಿನಗ್ಯಾಕಣ್ಣಾ ?' ಎಂದು ನಗುನಗುತ್ತಲೇ ಬೀಳ್ಕೊಟ್ಟಳು.

ಮುಂದುಗಡೆ ಅಂಗಡಿ, ಅಂಗಡಿಗೆ ಹೊಂದಿಕೊಂಡ ಹಾಗೆ ಪಕ್ಕಕ್ಕೆ ಒಂದು ಮನೆ, ಒಂದು ವಿಶಾಲವಾದ ಹಾಲು, ಅದರ ಪಕ್ಕದ ರೂಮ್, ಅಂಗಡಿ ಸಾಮಾನು

ತುಂಬಿದ ಗೋಡೌನ್ ಆಗಿತ್ತು. ಒಂದು ಅಡಿಗೆ ಮನೆ, ಬಚ್ಚಲ ಮನೆ, ಶೌಚಗೃಹ, ಆ ಮನೆಯಲ್ಲಿ ವನಜಮ್ಮನ ತಮ್ಮ ಶ್ರೀನಿವಾಸರಾವ್ ಇದ್ದರು.

ವನಜಮ್ಮನೇ ಬಾಡಿಗೆ ಇಲ್ಲದೇ ಆ ಮನೆಯನ್ನು ಕೊಟ್ಟು, ಸಾವಿರ ರೂ. ಸಂಬಳವನ್ನು ಕೊಡುತ್ತಿದ್ದಳು. ಆತನ ಮೂರು ಹೆಣ್ಣು ಮಕ್ಕಳ ಮದುವೆ ಸಮಯದಲ್ಲಿ ಸಹಾಯ ಮಾಡುವುದಾಗಿ ಹೇಳಿದ್ದಳು, ಅದರಂತೇ ಇಬ್ಬರು ಹೆಣ್ಣು ಮಕ್ಕಳ ವಿವಾಹ ಸಮಯದಲ್ಲಿ ಇಪ್ಪತ್ತು ಸಾವಿರ ರೂ.ಗಳ ಸಹಾಯ ಮಾಡಿದ್ದಳು.

ಶ್ರೀನಿವಾಸರಾಯ, ಅವನ ಪತ್ನಿ ಪದ್ಮಾವತಿಯ ಪಾಲಿಗೆ ವನಜಮ್ಮ ಸಾಕ್ಷಾತ್ ದೇವತೆ ಆಗಿದ್ದಳು.

' ಅತ್ತಿಗೆ ನೀವಿಲ್ಲದೇ ಇದ್ದರೆ ನಮ್ಮಗತೀ.... ಏನಾಗಬೇಕಾಗಿತ್ತು? ನಿರುದ್ಯೋಗಿಯಾಗಿ, ಅಲ್ಲಲ್ಲಿ ಪುಡಿ ಕೆಲಸ ಮಾಡ್ತತೊಳಲಾಡ್ತಿದ್ದ ನಮಗೆ ಒಂದು ಆಶ್ರಯ ನೀಡಿದಿರಿ. ಹೆಣ್ಣು ಮಕ್ಕಳ ಚಿಂತೆ ಬಗೆಹರಿಸಿದಿರಿ ' ಎನ್ನುತ್ತಿದ್ದಳು ಪದ್ಮಾವತಿ.

' ಇರ್ಲಿಬಿಡಮ್ಮ, ನನಗು ಅಂಗಡಿ ಕೆಲಸಕ್ಕೆ ಒಬ್ಬ ಸಹಾಯಕರು ಬೇಕಾಗಿತ್ತು. ಶೀನು ಬಾಂಬೆ, ಮದ್ರಾಸ್‌ಗೆ ಹೋಗಿ ಮಾಲು ತರೋದ್ರಿಂದಾ ಹಿಡಿದು ಎಲ್ಲಾ.... ಮಾಡ್ತಾನೆ. ನನ್ನ ಕೈಲಾದಷ್ಟು ನಾನು ಸಹಾಯ ಮಾಡಬೇಕಾದ್ದು ನನ್ನ ಧರ್ಮ. ನಾನೂ ಬಡವಳೆ, ಮಗನ ಓದಿನ ಚಿಂತೆ ಇದೆ. ಅವನು ಎಂ.ಬಿ.ಎ. ಮಾಡಿದರೇ ಒಂದು ಲಕ್ಷದವರೆಗೆ ದುಡ್ಡು ಹೊಂದಿಸಬೇಕು. ಅಂಗಡಿ ಹಾಗೂ ಮನೆ ಕಟ್ಟಡ ಹಳೆಯದಾಗಿದೆ. ಅದಕ್ಕೇ ದುಡ್ಡು ಹೊಂದಿಸಬೇಕು' ಎಂದು ಹೇಳುತ್ತಿದ್ದರು.

ಅಂಗಡಿ ಹಿಂಭಾಗದ ಪುಟ್ಟ ಮನೆಯಲ್ಲಿ ವನಜಮ್ಮ ವಾಸವಾಗಿದ್ದರು. ಒಂದು ಪುಟ್ಟ ಹಜಾರದಲ್ಲೊಂದು, ಕೋಣೆಯಲ್ಲೊಂದು ಡಬ್ಬಲ್ ಕಾಟ್, ಆ ವಿಶಾಲ ಮಂಚದಿಂದೀಚೆಗೆ ಹಜಾರದಲ್ಲಿ, ನಾಲ್ಕು ಕುರ್ಚಿ ಒಂದು ಡೈನಿಂಗ್ ಟೇಬಲ್.

ಕೋಣೆಯಲ್ಲಿ ಒಂದು ಬದಿಗೆ ಡಬ್ಬಲ್ ಕಾಟ್, ಇನ್ನೊಂದು ಬದಿಗೆ ಗೋಡೆಯಲ್ಲೇ ಅಳವಡಿಸಿದ ವಾರ್ಡ್‌ರೋಬ್ ಹಾಗೂ ಬೀರುಗಳು, ಇನ್ನೊಂದು ಭಾಗಕ್ಕೆ ಆಲ್ಮೇರ.

ಆ ಮಧ್ಯಮ ವರ್ಗದ ಜೀವನದಲ್ಲಿಯೂ ವನಜಮ್ಮ ಸುಖಜೀವಿ. ಶ್ರೀನಿವಾಸನ ಮೊದಲ ಮಗಳು ವಿವಾಹವಾಗುವವರೆಗೆ ಇಲ್ಲೇ ಇದ್ದಳು.

ಬೆಳಿಗ್ಗೆ ಎದ್ದು ಗುಡಿಸಿ, ಸಾರಿಸಿ, ಕಾಫಿ ಮಾಡಿ, ಆಕೆಯನ್ನೆಬ್ಬಿಸುವಳು, ಏಳೂವರೆಗೆದ್ದ ವನಜಮ್ಮ ಕಾಫಿ ಕುಡಿದು, ಸ್ನಾನ ಮಾಡಿ, ಒಂದು ಬಣ್ಣದ ಶಹಪುರು ಸೀರೆಯುಟ್ಟು, ತುರುಬು ಕಟ್ಟಿ ಮೈತುಂಬಾ ಸೆರಗು ಹೊದ್ದು, ಅಂಗಡಿಗೆ ಹೋಗಿ ಗಲ್ಲ ಪೆಟ್ಟಿಗೆ ಮೇಲೆ ಕೂಡುವಳು.

ಶ್ರೀನಿವಾಸರಾಯನು ಬಂದು ವ್ಯಾಪಾರಕ್ಕೆ ಸಹಾಯ ಮಾಡುವನು. ಒಂಬತ್ತಕ್ಕೆ ಪದ್ಮಾವತಿ ಉಪ್ಪಿಟ್ಟೋ.... ಇಡ್ಲಿಯೋ ತರುವಳು. ಅಂಗಡಿಯ ಹಿಂಭಾಗದ ಗೋಡೌನ್‌ಗೆ ಹೋದರೇ.... ಅದರ ಪಕ್ಕದ ಗೋಡೆಗೆ ಅಳವಡಿಸಿದ್ದ ಬಾಗಿಲು. ಅದನ್ನು ತೆರೆದರೇ ಶ್ರೀನಿವಾಸರಾಯನ ಮನೆಯ ಹಜಾರ, ವನಜಮ್ಮ ತಿಂಡಿ ತಿಂದು ಅಲ್ಲೇ ಸಿಂಕಿನಲ್ಲಿ ಕೈ ತೊಳೆದು, ತಟ್ಟೆ ಬಟ್ಟಲು ಹಾಕಿದರೆ, ಪದ್ಮಾವತಿ ಒಳಬಾಗಿಲು ತೆಗೆದು, ತಟ್ಟೆ ಬಟ್ಟಲು ತೆಗೆದುಕೊಂಡು ಹೋಗಿ ತೊಳೆಯುವಳು,

ಒಂದು ಗಂಟೆಯವರೆಗೆ ಅಂಗಡಿಯಲ್ಲಿದ್ದು ನಂತರ ಬಾಗಿಲು ಹಾಕಿ, ಮನೆಗೆ ಬರುವಳು, ಮನೆಯಲ್ಲಿ ಪದ್ಮಾವತಿ ಮಗಳು ಅಡಿಗೆ ಮಾಡಿರುತ್ತಿದ್ದಳು.

ಉಂಡು ನಾಲ್ಕರವರೆಗೆ ಮಲಗಿದ್ದು, ನಂತರ ಎದ್ದು, ಮುಖ ತೊಳೆದು, ಕಾಫಿ ಕುಡಿದು, ಸೀರೆ ಬದಲಿಸಿ ಅಂಗಡಿಗೆ ಹೋಗುವಳು. ಒಂಬತ್ತರವರೆಗೆ ಅಂಗಡಿಯಲ್ಲೇ ಇರುವಳು. ಮನೆಯ ಸಮಸ್ತ ಕೆಲಸ ಈ ಹುಡುಗಿಯದೆ. ಇಬ್ಬರದೇ ಕೆಲಸ. ಪುಟ್ಟಮನೆ ಆದ್ದರಿಂದ ಆ ಹುಡುಗಿಗೂ ಕೆಲಸ ಅಂಥಾ ಕಷ್ಟವಿರಲಿಲ್ಲ.

ಎರಡು ಹೊತ್ತು ಬಿಸಿ ಅಡುಗೆ ಆಗಬೇಕು ವನಜಮ್ಮನಿಗೆ. ಬೆಳಗಿನ ಅಡಿಗೆಗೆ ಅನ್ನ ಹುಳಿ, ಪಲ್ಯ, ಉಳಿದರೆ ಹೋಗಿ ನಿಮ್ಮಮ್ಮನಿಗೆ ಕೊಟ್ಟುಬಿಡು ಎನ್ನುವಳು.

ಸುರಿಯುವ ನೀರಿನಲ್ಲಿ ಇಬ್ಬರ ಬಟ್ಟೆ ಒಗೆದು, ಪಾತ್ರೆ ತೊಳೆದು, ಮನೆ ಗುಡಿಸಿ, ಸಾರಿಸಿ ಶುಚಿಯಾಗಿ ಇಟ್ಟಿರುತ್ತಿದ್ದಳು ಪದ್ಮಾವತಿ. ತಮ್ಮ ಮನೆ ಬಡ ಊಟಕ್ಕಿಂತ ಇಲ್ಲಿನ ಹಾಲು, ಮೊಸರು, ತುಪ್ಪ, ತರಕಾರಿಯ ಊಟ ಚೆಂದವೆಂದು ಅವಳಿಗೂ ಹಿಗ್ಗು. ಒಳ್ಳೆ ಸೀರೆಬಟ್ಟೆ ತೆಗೆಸಿಕೊಟ್ಟು ಕೈ ಖರ್ಚಿಗೆ ಮುವ್ವತ್ತು ರೂ. ಕೊಡುವಳು, ಆ ಹುಡುಗಿಗೆ ಗಂಡು ಗೊತ್ತಾದರೆ ಇಪ್ಪತ್ತುಸಾವಿರ ರೂ. ವಿವಾಹಕ್ಕೆ ಕೊಡುವೆನೆಂದು ಹೇಳಿದ್ದಳು.

ಮೊದಲನೆ ಹುಡುಗಿ ವಿವಾಹವಾಗಿ ಹೋದಮೇಲೆ ಎರಡನೆಯ ಹುಡುಗಿ ವಿವಾಹವಾಗುವವರೆಗೆ ಎಂದು ದುಡಿಯಲು ಬಂದಳು. ಅವಳು ವಿವಾಹವಾಗಿ ಹೋದಮೇಲೆ ಮೂರನೆ ಹುಡುಗಿ ಸುಜಾತ ಈಗ ಕೆಲಸಗಾತಿ ಆಗಿದ್ದಳು.

ನೆಂಟರೆಲ್ಲಾ ಹೋದಮೇಲೆ ಆ ಪುಟ್ಟ ಮನೆಯಲ್ಲಿ ತಾಯಿ ಮಗ ಇಬ್ಬರೇ ಉಳಿದರು.

'ಏನು ವಿಷಯ ರಾಜು ? ಆ ಹುಡುಗಿ ಏಕೆ ಬರಲಿಲ್ಲ...?'

ತಾಯಿ ಮುಂದೆ ಯಾವುದೂ ಮುಚ್ಚಿಟ್ಟು ಅಭ್ಯಾಸವಿಲ್ಲ ರಾಜಸಿಂಹನಿಗೆ. ಅವರ ಮನೆ ಕಥೆಯೆಲ್ಲಾ ಹೇಳಿದ. ಅವಳ ತಾಯಿ ವಿಷಯ ಕೇಳೇ ಆಶ್ಚರ್ಯ ಆಯಿತು. 'ಡೈವೋರ್ಸ್ ಒಂದು ತಗೊಂಡಿಲ್ಲ ಗಂಡನಿಂದ. ಆದರೆ ತುಂಬಾ ಸ್ವತಂತ್ರವಾದಿ, ಯಾವಾಗಲೂ ಬಾಂಬೇಲಿರಾಳೆ. ಗಂಡನ ಹಿತಾಹಿತ ಗಮನಿಸೋ ಹೆಂಗಸಲ್ಲ.

ಅಂಥಾ ಹೆಂಗಸಿನ ಮಗಳೂ ಅಂದಮೇಲೆ ಇವಳ ವಿಚಿತ್ರಗಳೇನೇನಿರುತ್ತೋ?' ಎಂದ. ವನಜಮ್ಮ ವಿಚಾರ ಪರವಶರಾಗಿ-

'ಏಕೆ, ಎರಡು ವರ್ಷದಿಂದ ಒಡನಾಟ ಇದೇ ಅಂತಿ. ಅವಳ ಗುಣ ಸ್ವಭಾವ ಗೊತ್ತಿಲ್ವಾ ?' ಎಂದರು.

'ನೋಡಮ್ಮ, ಮೂರು ವರುಷ ಬಿ.ಕಾಂ. ಜೊತೆಗೆ ಸಿ.ಎ. ಫೌಂಡೇಷನ್ ಕೋರ್ಸ್ ಮುಗಿಸುವಾಗ ನನ್ನ ಗುರಿ ಎಲ್ಲಾ ಓದಿನ ಮೇಲಿತ್ತು. ಆಗ ಇವಳು ಗೆಳತಿಯ ಮನೆ ಅಂತ ನಾವಿದ್ದ ಮಾಲೀಕರ ಮನೆಗೆ ಬರೋಳು. ನಮ್ಮದೇ ಕಾಲೇಜಿನ ಹುಡುಗಿ, ಕ್ಲಾಸ್‌ಮೇಟ್ ಬೇರೆ. ಆದರೆ ಅವಳಿಗೆ ಸಿ.ಎ. ಫೌಂಡೇಷನ್ ಕೋರ್ಸ್ ಇರಲಿಲ್ಲ. ಬರೀ ಬಿ.ಕಾಂ., ತಿಳಿಯದ್ದು ಹೇಳಿಕೊಡಿ ಅಂತ ತಿಂಗಳಿಗೊಮ್ಮೆ ಬರೋಳು. ತುಂಬಾ ಬ್ರಿಲಿಯಂಟ್. ನನಗೂ ರಿವಿಷನ್ ಆದ ಹಾಗೆ ಆಗತ್ತೆ ಅಂತ ಎಲ್ಲಾ ಎಕ್ಸ್‌ಪ್ಲೈನ್ ಮಾಡ್ತಿದ್ದೆ. ಮುಂದೆ ನಾನು ಬಿ.ಕಾಂನಲ್ಲಿ ಫಸ್ಟ್ ರ್‍ಯಾಂಕ್ ಬಂದೆ. ಸಿ.ಎ. ಫೈನಲ್ ಮುಗಿಸೋ ಈ ಎರಡು ವರ್ಷದುದ್ದ ಅವರಪ್ಪನ ಕೆಲವು ಫಾಕ್ಟರಿಗಳು ಆರಿಸಿಕೊಂಡಿದ್ದೆ. ಆತ ಬೇರೆ ಬೇರೆ ಕೆಲವು ಫಾಕ್ಟರಿಗಳಿಗೆ ಶೇರ್ ಪಾರ್ಟನರ್ ಇದ್ದಾರೆ. ಇವಳು ಎಂ.ಕಾಂಗೆ ಓದು ಮುಂದುವರಿಸಿದಳು. ವಾರಕ್ಕೊಮ್ಮೆ ಬರತೊಡಗಿದಳು. ವಾರದುದ್ದ ಓದಿ, ಅಂಕಿ ಸಂಖ್ಯೆ ಗುದ್ದಾಟದಲ್ಲಿ ತಲೆ ಕೆಡಿಸಿಕೊಂಡ ನನಗೆ, ಅವಳ ಬರುವಿಕೆ ಏನೋ ಒಂದು ಥರ ರಿಲ್ಯಾಕ್ಸ್ ಅನಿಸ್ತಾ ಇತ್ತು.

ಅತ್ಯಂತ ಶ್ರೀಮಂತರ ಈ ಚೆಲುವಿನ ಹುಡುಗಿ ನನ್ನನ್ನೇ ಹುಡುಕಿ ಬರ್‍ತಾಳಲ್ಲ ಅಂತ ಏನೋ ಒಂದು ಬಗೆ ಸಂತೋಷವಿತ್ತು. ತುಂಬ ಶ್ರೀಮಂತ ತಂದೆ ತಾಯಿಗಳ ಏಕಮಾತ್ರ ಪುತ್ರಿ. ಅತ್ಯಂತ ಚೆಲುವೆ, ಸಿಕ್ಕಾಪಟ್ಟೆ ಬ್ರಿಲಿಯಂಟ್, ಅಷ್ಟೇ ನನಗವಳ ಬಗ್ಗೆ ಗೊತ್ತಿದಿದ್ದು. ಒಂದೊಂದ್ಸಲ ನಾನೇ "ನೀವು ಶ್ರೀಮಂತರಾಗಿ ಓದು, ವಿದ್ಯೆಗೆ ಏಕೆ ಇಷ್ಟೊಂದು ಕಷ್ಟ ಪಡ್ತೀರಿ?" ನಾವಂತು ಮಧ್ಯಮ ವರ್ಗದವರು, ಓದೇ ನಮಗೆ ಸರ್ವಸ್ವ' ಎಂದೆ. ಅವಳು ಒಪ್ಪದೇ

'ಹಾಗಲ್ಲ ರಾಜ್... ಅಪ್ಪನ ಶ್ರೀಮಂತಿಕೆ ಅನುಭವಿಸ್ತಾ ಸೋಫಾ ಮೇಲೆ ಕೂತು ವಿಡಿಯೋ ನೋಡ್ತಾ, ಕೇಸರಿಬಾತ್ ತಿನ್ನುತ್ತಾ ಕಾಲ ಕಳೆಯಲಾರೆ. ನನಗೆ ಕ್ರಿಯಾತ್ಮಕ ಬದುಕುಬೇಕು, ಅಪ್ಪ ಕಟ್ಟಿದ ಸಾಮ್ರಾಜ್ಯಕ್ಕೆ ಒಬ್ಬ ಸಾಮ್ರಾಜ್ಞೆ ಆಗಿ, ಉದ್ದಿಮೆಗಳನ್ನು ಈಗಿನದಕ್ಕಿಂತ ಅಭಿವೃದ್ಧಿಪಡಿಸ್ತೀನಿ' ಅಂತಿದ್ದಳು. ಆಗಾಗ-

'ರಾಜ್... ನೀವು ಸಿ.ಎ. ಮುಗಿಸ್ತಲೇ ನಮ್ಮ ಜಯಶ್ರೀ ಟೆಕ್ಸ್‌ಟೈಲ್ ಕಂಪನಿಗೆ ಆಡಿಟರ್ ಆಗಿ ಬರಬೇಕು, ತಿಂಗಳಿಗೆ ಇಪ್ಪತ್ತೈದು ಸಾವಿರ ರೂ. ಸಂಬಳ. ಬಂಗಲೆಯ, ಕಾರು ಎಲ್ಲಾ ಕೊಡ್ತಾರೆ' ಅಂತಿದ್ದಳು. 'ನಾನು ಪ್ರಾಡೆಕ್ಟ್ ವಿಭಾಗ

ನೋಡ್ಕೋತೇನೆ, ಅದೇ ಕಂಪನೀಲಿ ನೀವಿದ್ರೇ ನನಗೆ ದುಡಿಯಲಿಕ್ಕೆ ಉಲ್ಲಾಸ ಇರತ್ತೆ' ಅಂತಿದ್ದಳು.

'ನಿಮ್ಮ ತಂದೆ ನನ್ನ ನೋಡಿಲ್ಲವಲ್ಲ' ಎಂದೆ.

'ಆದರೆ ನಿಮ್ಮ ಬಗ್ಗೆ ಕೇಳಿದ್ದಾರೆ, ನೀವು ಸಿ.ಎ. ಸ್ಟೂಡೆಂಟಾಗಿ ಪ್ರಾಜೆಕ್ಟ್ ವರ್ಕ್‌ಗೆ ನಮ್ಮ ಕಂಪನಿಗೆ ಬಂದಿದ್ದಿರಲ್ಲ, ಆಗಲೇ ನಮ್ಮ ಕಂಪನಿ ಅಧಿಕಾರಿಗಳು ನಿಮ್ಮ ಬಗ್ಗೆ, ನಮ್ಮ ತಂದೆಯವರಿಗೆ ವರದಿ ಒಪ್ಪಿಸಿದ್ದಾರೆ. ನಾನಂತೂ ಒಂದು ಹತ್ತು ಸಲವಾದರೂ ನಿಮ್ಮ ಬಗ್ಗೆ ಪಪ್ಪಾ ಹತ್ತಿರ ಮಾತಾಡಿದ್ದೀನಿ' ಅಂತಿದ್ದಳು.

ಫೈನಲ್ ಪರೀಕ್ಷೆ ಮುಗಿಸಿ ಬಂದಮೇಲೆ ಸೋಮನಾಥನ ಮದುವೆ ಸಲುವಾಗಿ ಉಳಿಯಬೇಕಾಯಿತು. ಆಗ ದಿನವೂ ಭೇಟಿ ಆಗ್ತಿದ್ದಳು.

ಒಂದು ದಿನ –

'ರಾಜ್.... ನಿಮ್ಮ ಗೆಳೆಯರ ವಿವಾಹ ಆಯಿತು. ನಿಮ್ಮ ಮದುವೆ ಯಾವಾಗ ?' ಎಂದಳು.

'ಒಂದು ಹುಡುಗಿ ಸಿಗಬೇಕಲ್ಲ. ಮನಸ್ಸಿಗೆ ಒಪ್ಪಿಗೆ ಆಗೋ ಹುಡುಗಿ ಸಿಕ್ಕರೆ ಮದುವೆ' ಎಂದೆ.

'ಇದುವರೆಗೆ ನಿಮ್ಮ ಕಣ್ಣಿಗೆ ಬಿದ್ದ ಯಾವ ಹುಡುಗಿಯೂ ನಿಮಗೆ ಒಪ್ಪಿಗೆ ಆಗಿಲ್ಲವೆ ?' ಎಂದಳು.

'ಊಹುಂ' ಎಂದೆ. ಅವಳು ಕೋಪದಿಂದ– 'ರಾಜ್... ನೀವು ಎಂಥಾ ಕಟುಕರು. ನಾನು ಯಾವುದರಲ್ಲಿ ಕಡಿಮೆ ಆಗಿದ್ದೀನಿ. ನಿಮ್ಮ ಬಾಳ ಗೆಳತಿ ಆಗಲಿಕ್ಕೆ ತಕ್ಕವಳಲ್ಲವಾ ?' ಎಂದಳು. ಅವಳ ಕಂಗಳಲ್ಲಿ ಹೊಳೆದ ಮುತ್ತಿನ ಹನಿಗಳಂಥಾ ಕಂಬನಿ ಕಂಡು ಕರಗಿದೆ.

'ಜಯಶ್ರೀ... ನಾನೆಲ್ಲಿ ? ನೀವೆಲ್ಲಿ.... ನೀವು ಆಕಾಶದಲ್ಲಿ ಅರಳಿದ ಕಮಲ. ನಾನು ಭೂಮಿಯ ಭ್ರಮರ' ಎಂದೆ.

'ನಾನು ನಿಮ್ಮನ್ನು ಪ್ರೀತಿಸ್ತೇನೆ. ತಂದೆಯವರಿಗು ನಾನು ನನ್ನ ಮನಸ್ಸು ತೆರೆದು ಹೇಳಿದ್ದೀನಿ. ಈಗ ನಮ್ಮ ಪಪ್ಪಾಗೂ ಆರೋಗ್ಯ ಚೆನ್ನಾಗಿಲ್ಲ. ಎರಡು ತಿಂಗಳಲ್ಲಿ ವಿವಾಹ ಮುಗಿಸಿ ಅಮೆರಿಕಾಗೆ ಹೋಗ್ತಾರೆ. ಅಲ್ಲಿ ಯಾವುದೋ ನರ್ಸಿಂಗ್ ಹೋಂನಲ್ಲಿ ಒಂದು ವರ್ಷ ವಿಶ್ರಾಂತಿ ತಗೋತಾರೆ' ಎಂದಳು.

ಮಾರನೆಯ ದಿನ ಅವರಪ್ಪನ್ನ ಭೇಟಿಯಾಗಿದ್ದೆ. "ಅವಳು ಎಂ.ಕಾಂ ಮುಗಿಸಿದ್ದಾಳೆ. ನೀನು ಸಿ.ಎ. ಮುಗಿಸಿದ್ದಿ. ಇಬ್ಬರೂ ತುಂಬ ಬ್ರಿಲಿಯಂಟ್ಸ್ ಇದ್ದೀರಿ. ಕಂಪನಿ ನಿಮಗೊಪ್ಪಿಸಿ, ನಾನು ಅಮೆರಿಕಾಗೆ ಹೋಗ್ತೀನಿ" ಅಂತ ಮಾತಿನ ಕೊನೇಲಿ ಹೇಳಿದರು. ಅವರು ನಮ್ಮಿಬ್ಬರ ಮದುವೆಗೆ ಒಪ್ಪಿಗೆ ನೀಡಿದರು.

'ಮಾರನೆಯ ವಾರ ಅವರಮ್ಮನ ಭೇಟಿ ಆದಾಗಲೇ ಈ ಥರ ಗೊಂದಲ ಪ್ರಾರಂಭ ಆಗಿದ್ದು' ಎಂದು ದೀರ್ಘ ವಿವರಣೆ ನೀಡಿದ.

ವನಜಮ್ಮ ನಿಶ್ಚಲ ಸ್ವರದಲ್ಲಿ –

'ನೀನು ಆ ಹುಡುಗೀನ್ನ ನಿಜವಾಗಿ ಪ್ರೀತಿಸಿದ್ದರೆ ಮದುವೆ ಆಗು. ನನ್ನದೇನು ಅಭ್ಯಂತರವಿಲ್ಲ' ಎಂದರು.

'ಆದರೆ ಆ ಹುಡುಗಿ ನಿನಗೆ ವಿಧೇಯಳಾದ ಸೊಸೆ ಆಗಲ್ಲಮ್ಮ' ಎಂದ.

'ನನಗೆ ವಿಧೇಯಳಾಗಿ ತಗ್ಗಿಬಗ್ಗಿ ನಡಿಯೋ ಸೊಸೆ ಅಂದರೆ ಶೀನು ಮಗಳನ್ನು ಆಗಬೇಕು. ಎಸ್ಸೆಲ್ಸಿ ಫೇಲಾಗಿರೋ ಆ ಕಡು ಕುರೂಪಿ ಹುಡುಗೀನ ನೀನು ವಿವಾಹ ಆಗ್ತೀಯಾ... ?' ಎಂದರು ವನಜಮ್ಮ.

'ಶೀನು ಮಾಮನ ಮಗಳಾ.... ದೇವರೇ ಗತಿ....? ಅಂಥಾ ಸೊಸೆ ಬರಲೀಂತ ನೀನು ನನಗೆ ವಿದ್ಯಾಭ್ಯಾಸ ಮಾಡಿಸಿದೆಯಾ ? ಇಷ್ಟು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಓದಿಸಿದ್ಯಾಕೆ ?' ಎಂದ.

'ಮಗನ ಓದಿನ ಆಸೆಗೆ ಪ್ರೋತ್ಸಾಹಿಸಿ, ನೆರವು ಕೊಡಬೇಕಾದ್ದು ನನ್ನ ಧರ್ಮ. ನೀನು ಮೊದಲೆಲ್ಲಾ ಎಂ.ಬಿ.ಎ. ಮಾಡ್ಕೋಬೇಕೂಂತ ಆಸೆಯಿದೆ, ಎರಡು ಲಕ್ಷದವರೆಗೆ ಖರ್ಚು ಬರತ್ತೆ ಅಂತಿದ್ದೆ. ಅದಕ್ಕೆ ಸಹ ನಾನು ಸಿದ್ಧಳಾಗಿದ್ದೆ. ಆದರೆ ಸಿ.ಎ. ಮಾಡ್ತೀನಿ ಅಂತ ಶುರು ಮಾಡಿದಿ' ಎಂದಳು.

'ಸಿ.ಎ. ಮುಗಿಸಿದ್ದಾಯ್ತು. ಅವರ ಕಂಪನೀಲಿ.... ಜೂನ್‌ನಿಂದ ಆಡಿಟರ್ ಆಗಿ ಸೇರ್ತೀನಿ. ಮದುವೆ ವಿಷಯದಲ್ಲಿ ನನ್ನ ಮನಸ್ಸು ಡೋಲಾಯಮಾನವಾಗಿದೆ. ಅವಳನ್ನ ವಿವಾಹ ಆಗಲು ನಿರಾಕರಿಸಿದರೆ ಬಹುಶಃ ಆ ಕಂಪನಿಯ ಕೆಲಸ ನನಗೆ ಸಿಗಲಾರದು ಅನಿಸುತ್ತೆ.'

'ಕೆಲಸ ಏನು ? ನೀನು ಬುದ್ಧಿವಂತ ಇರೋದ್ರಿಂದ ಯಾರಾದರೂ ಕರೆದು ಕೊಡ್ತಾರೆ ? ಆದರೆ ಆ ಹುಡುಗೀನ್ನ ಗಟ್ಟಿ ಮನಸ್ಸಿನಿಂದ ನಿರಾಕರಿಸಿ, ನಿಶ್ಚಿಂತವಾಗಿ ನೀನು ಇರಬಲ್ಲೆಯಾ ? ಯಾವ ಕಾರಣಕ್ಕಾಗಿ ನೀನು ಅವಳನ್ನ ನಿರಾಕರಿಸ್ತಿದ್ದಿ?'

'ಅವಳನ್ನ ವಿವಾಹ ಆದರೆ ನಾನು ಅವರ ಮನೆ ಅಳಿಯ ಆಗಬೇಕಷ್ಟೆ. ಅವಳು ಇಲ್ಲಿ ಮನೆ ಸೊಸೆಯಾಗಿ ಬರಲಾರಳು.'

'ಹುಚ್ಚಪ್ಪಾ... ನಾಳೆ ನಿನಗೆ ಪಟ್ನದಲ್ಲಿಯೋ ಬಾಂಬೆ, ಮದ್ರಾಸ್, ಎಲ್ಲಾದರೂ ಕೆಲಸ ಸಿಕ್ಕಿತೂ ಅಂತಿಟ್ಕೊ. ನನ್ನ ಹತ್ತಿರ ನೀನು ಕೂತಿರ್ತೀಯೊ ? ಅಥವಾ ವಿವಾಹಿತ ಪತ್ನಿಯನ್ನ ಇಲ್ಲಿ ನನ್ನ ಸೇವೆಗೆ ಬಿಟ್ಟು ಹೋಗ್ತೀಯೋ ?' ಎಂದರು ತಾಯಿ.

'ಹಾಗಲ್ಲ, ನಿನ್ನನ್ನು ನನ್ನ ಮನೆಗೆ ಕರೆದುಕೊಂಡು ಹೋಗಬಲ್ಲೆ. ಪ್ರೀತಿಯಿಂದ ನೋಡ್ಕೋತೀನಿ.'

'ಆದರೆ ಆ ಸೊಸೆ ಅತ್ತೆ ಪಾದಸೇವೆ ಮಾಡ್ತಾಳೆ ಅಂತ ಏನು ಗ್ಯಾರಂಟಿ ? ಈವಾಗ ನಮ್ಮ ಅಣ್ಣನ ಮಕ್ಕಳೇ ಬಿ.ಎ, ಬಿ.ಎಸ್‌ಸಿ. ಓದ್ಕೋವು ಇವೆ. ಒಳಮನಸ್ಸಿನಲ್ಲಿ ಅವರಿಗೆಲ್ಲಾ ನಿನ್ನ ಮೇಲೆ ಆಸೇನೂ ಇದೆ. ಆದರೆ ಅವುಗಳ ಗರ್ವ, ಧಿಮಾಕು ನೋಡಿದರೆ ಮೈ ಉರಿಯುತ್ತೆ. ತಾವು ಅರಮನೆ ರಾಜಕುಮಾರಿಯರು ಅಂತಲೆ ತಿಳಿದುಕೊಂಡಿವೆ. ಈಗ ನಿನಗೆ ಇಂಥಾ ಆಗರ್ಭ ಶ್ರೀಮಂತರ ಹುಡುಗಿ ಗೊತ್ತಾಗಿದೆ ಅಂದಾಗ ಸಹ ಸೀನಣ್ಣನ ಮುಂದೆ "ಅಯ್ಯೋ! ಆ ಹುಡುಗಿ ಇಲ್ಲಿ ಬಂದು ಈ ಅಂಗಡಿ, ಮನೆ, ವನಜತ್ತೆ ಚಂದಾ ನೋಡ್ತಾಳ್ಯೇ ಸದ್ಯ ! ಈ ಹುಡುಗ ಬೇಡಾ ಅಂತಾಳೆ" ಎಂದು ನಕ್ಕರಂತೆ.

'ರಾಜು ಏನೋ ನೋಡೋಕೆ ಚೆನ್ನಾಗಿದ್ದಾನೆ. ಸಿ ಎ. ಓದಿದ್ದಾನೆ. ಒಳ್ಳೆ ಕೆಲಸವು ಸಿಗಬಹುದು. ಆಗರೆ ವನಜತ್ತೆ ಅಂತ ಜೀವನದಲ್ಲಿ ಸುಖ ಏನಿರತ್ತೆ ?' ಅಂತ ನಮ್ಮ ದೊಡ್ಡಣ್ಣನ ಮಗಳು ಸುಧಾ ಅಂದಳಂತೆ.

'ಇದೆಲ್ಲಾ ಕೇಳಿ ನಾನು ನಗಲಿಲ್ಲ. ರಾಜು' ಮೊದಲಿಂದ ಜನಗಳ ಒಳಬುದ್ಧಿ, ಕುಯುಕ್ತಿ ಎಲ್ಲಾ ಗೊತ್ತು ನಂಗೆ. ಅಣ್ಣಾ ಹೋದವರ್ಷವೆ ಸೂಕ್ಷ್ಮವಾಗಿ ಪ್ರಸ್ತಾಪಿಸಿದ್ದ. ನಾನು ಒಪ್ಪದೇ – ಬಳಗದಲ್ಲಿ ನಂಗೆ ಇಷ್ಟವಿಲ್ಲಪ್ಪಾ ಅಂದಿದ್ದೆ. ಈಗ ನಿನಗೆ ಆಗರ್ಭ ಶ್ರೀಮಂತ ಮನೆತನದ ಏಕಮಾತ್ರ ಪುತ್ರಿ ಸಿಗ್ತಿದ್ದಾಳೇಂತ... ಬೇಕಂತಲೇ ವರ್ಣಿಸಿ, ಸಿಹಿ ಊಟ ಇಟ್ಕೊಂಡೆ. ಯಾವುದೋ ಸಣ್ಣ ಕಾರಣಕ್ಕೆ ಆ ಹುಡುಗೀನ್ನ ನೀನು ಬಿಡಬೇಡ. ನನಗೆ ವಿಧೇಯಳಾದ ಸೊಸೆ ಅಂತ ನಾನು ಸ್ವಾರ್ಥಕ್ಕೆ ಹಳ್ಳಿ ಹುಂಬಳನ್ನು ಕಟ್ಟಲ್ಲ. ಒಗ್ಗಿದರೆ ಆ ಮನೇಲಿ ಇರ್ತೀನಿ, ಇಲ್ಲದಿದ್ದರೆ ನನ್ನ ಅಂಗಡಿ ನನಗೆ ಇದ್ದೇ ಇದೆ' ಎಂದು ವನಜಮ್ಮ ಮಗನಿಗೆ ಬುದ್ಧಿ ಹೇಳಿದರು.

ರಾಜಸಿಂಹ ಒಂದೇ ಮನಸ್ಸಿನಿಂದ ಮದುವೆಗೆ ಒಪ್ಪಿದ. ಮುಂದಿನ ಮೂರೇ ತಿಂಗಳಲ್ಲಿ ಜಯಶ್ರೀ ರಾಜಸಿಂಹರ ಮದುವೆ ವೈಭವವಾಗಿ ನಡೆಯಿತು. ಗಂಡಿನ ಕಡೆ ತಂದೆ ತಾಯಿಗಳಾಗಿ ಶ್ರೀನಿವಾಸರಾಯ, ಪದ್ಮಾವತಿ ಹಸೆಮಣೆ ಮೇಲೆ ಕುತಿದ್ದರು. ವನಜಮ್ಮನ ಅಣ್ಣಂದಿರು, ಅವರ ಹೆಂಡತಿ, ಮಕ್ಕಳ ಪರಿವಾರಸಮೇತ ಬಂದಿದ್ದರು.

ಜಯಶ್ರೀ ತಂದೆ ವೆಂಕಟೇಶ್ ತಾವೇ ಖುದ್ದಾಗಿ ನಿಂತು ಗಂಡಿನ ಕಡೆ ಬಂದ ಎಲ್ಲರನ್ನು ಅದ್ಧೂರಿಯಾಗಿ ಉಪಚರಿಸಿ, ಪ್ರತಿಯೊಬ್ಬರಿಗೂ ರೇಷ್ಮೆ ಸೀರೆ, ಉಲ್ಲನ್ ಸೂಟ್ ಉಡುಗೊರೆ ನೀಡಿದರು.

ಹೆಣ್ಣಿನ ಕಡೆಯವರ ಐಶ್ವರ್ಯ ನೋಡಿ ವನಜಮ್ಮನ ಅಣ್ಣಂದಿರು ದಂಗಾದರು. ಬಾಯ್ತುಂಬಾ ರಾಜಸಿಂಹನನ್ನು ಅಭಿನಂದಿಸಿ 'ಒಳ್ಳೆ ಅದೃಷ್ಟವಂತನಪ್ಪಾ. ಅಪ್ಸರೆಯಂಥಾ ಹೆಂಡತಿ, ಕುಬೇರನಂಥಾ ಮಾವ, ಎಂಥಾ ಶ್ರೀಮಂತರು. ಅಷ್ಟೇ

ಸಜ್ಜನರು' ಎಂದರು.

ವೆಂಕಟೇಶ್ ಅವರ ತಂಗಿ ಲಲಿತಮ್ಮ, ಆಕೆಯ ಪತಿ ಮೋಹನರಾವ್ ಹೆಣ್ಣಿನ ಕಡೆಯ ತಂದೆ ತಾಯಿಗಳಾಗಿ ಹಸೆಮಣೆ ಮೇಲೆ ಕೂತಿದ್ದರು. ಹುಡುಗಿ ತಾಯಿ ಬರಲಿಲ್ಲ ಎಂಬ ಕೊರತೆಯೇ ಎಲ್ಲೂ ಏಳಲಿಲ್ಲ.

ಜಯಶ್ರೀ ಹೆಚ್ಚುಗಾರಿಕೆ ಎಂಬಂತೇ ವಿವರಿಸುತ್ತ – 'ಮಮ್ಮಿಗೆ ಅಮೆರಿಕಾ ದೇಶದ ಒಂದು ಮಹಿಳಾ ಉದ್ಯಮಿಗಳ ಕಾನ್ಫರೆನ್ಸಿಗೆ ಹೋಗಬೇಕಾಯಿತು. ಪಪ್ಪಾ ಇನ್ನೆರಡು ತಿಂಗಳಲ್ಲಿ ಹೃದಯದ ಒಂದು ಶಸ್ತ್ರ ಚಿಕಿತ್ಸೆಗೆ ಅಮೆರಿಕಾಗೆ ಹೋಗಬೇಕು. ಹೀಗಾಗಿ ಮದುವೆ ಮಮ್ಮಿಯ ಅನುಪಸ್ಥಿತೀಲೇ ನಡೀಬೇಕಾಯ್ತು' ಎಂದು ವಿವರಿಸಿದಳು.

ವಿಶಾಲ ಹಜಾರದಲ್ಲಿದ್ದ ಒಂದು ರೂಮ್ ತೋರಿಸಿ ವೆಂಕಟೇಶ್ ಅವರು ವನಜಮ್ಮನಿಗೆ ಹೇಳಿದರು, 'ಇಲ್ಲೇ ನೀವು ಇದ್ಬಿಡಿ ತಾಯಿ, ನಾನು ಅಮೆರಿಕಾಗೆ ಹೋಗ್ತಿದ್ದೀನಿ. ಜಯಶ್ರೀಗೆ ಚಿಕ್ಕಂದಿನಿಂದ ನಮ್ಮಣ್ಣಾ ಹಾಗೂ ನನ್ನ ತಂಗಿ ಸ್ವಂತ ಮಗಳ ಹಾಗೆ ಕಾಪಾಡ್ತಿದ್ದಾರೆ. ಮನೆಗೊಬ್ಬ ಹಿರಿಯರಾಗಿ ನೀವು ಇಲ್ಲೇ ನೆಲಸಿದರೆ ಸಂತೋಷ' ಎಂದರು.

ವನಜಮ್ಮ ತಮ್ಮನಿಗೆ ಅಂಗಡಿ ಒಪ್ಪಿಸಿ, ಇಲ್ಲಿ ಬಂದು ನೆಲಸಿದರು. ಆದರೆ ಲಲಿತಮ್ಮನಿಗೆ, ವನಜಮ್ಮನಿಗೆ ಸರಿಹೋಗಲಿಲ್ಲ. ಲಲಿತಮ್ಮನಿಗೆ ಅದೇ ಊರಿನಲ್ಲಿ ಸ್ವಂತ ಮನೆ ಇತ್ತು. ಗಂಡ ಮೋಹನ್‌ರಾವ್ ಏನೋ ಜಯಶ್ರೀ ಟೆಕ್ಸ್‌ಟೈಲ್ಸ್‌ನಲ್ಲಿ ದುಡಿಯುತ್ತಿದ್ದರು.

ಮೊದಲಿಂದ ಅವರೆಲ್ಲಾ ಇಲ್ಲೇ ಇದ್ದರು. ಮೊದಲ ಮಗನ್ನ ಡಾಕ್ಟರ್ ಓದಿಸಿ, ಅಣ್ಣನ ಮಗಳೇ ಸೊಸೆಯಾಗಿ ಬರುವಳೆಂದು ಕನಸು ಕಂಡಿದ್ದರು. ಆದರೆ ಜಯಶ್ರೀ-ಅವರು ಹೈಟ್ ಇಲ್ಲ. ನೋಡ್ಲಿಕ್ಕೆ ಚೆನ್ನಾಗಿಲ್ಲ ಎಂದಳು. ಅವನು ಒಬ್ಬ ಡಾಕ್ಟರ್‌ರ ಮಗಳನ್ನೇ ವಿವಾಹವಾಗಿ ಬೆಂಗಳೂರಲ್ಲೆ ದೂರವಾಗಿ ಸಂಸಾರ ಹೂಡಿದ್ದ. ಆ ಸೊಸೆಗೆ ಈ ಅತ್ತೆ ಲಲಿತಮ್ಮನ ಕಂಡ್ರೆ ಆಗುತ್ತಿರಲಿಲ್ಲ.

ಎರಡನೆಯ ಮಗ ನೋಡಲು ಚೆನ್ನಾಗಿದ್ದ. ಅವನಿಗೂ, ಜಯಶ್ರೀಗೂ ಕುದುರತ್ತೆ ಎಂದುಕೊಂಡಿದ್ದರು. ಆದರೆ ಅವಳು ಎರಡು ವರ್ಷದಿಂದ ವಾರಕ್ಕೊಮ್ಮೆ ಪಾಠದ ನೆಪದಲ್ಲಿ ರಾಜಸಿಂಹನ ಕೋಣೆಗೆ ಹೋಗುವುದು, ಡೈನಿಂಗ್ ಟೇಬಲ್ ಮುಂದೆ ಕುಳಿತಾಗ – ಅವನ ರೂಪ ಹಾಗೂ ಬುದ್ಧಿವಂತಿಕೆಯನ್ನು ಹೊಗಳುವುದು ಎಲ್ಲಾ ನೋಡಿ, ಅವನು ಸೂಕ್ಷ್ಮ ತಿಳಿದುಕೊಂಡು ಅತ್ತಿಗೆಯ ಚಿಕ್ಕಮ್ಮನ ಮಗಳನ್ನೇ ವಿವಾಹವಾಗಿ, ಅಣ್ಣನ ಮೆಡಿಕಲ್ ಕ್ಲಿನಿಕ್ಕಲ್ಲೇ ಕೆಲಸ ಮಾಡುತ್ತಿದ್ದ.

ಅವನೂ ಬೇರೆ ಮನೆ ಮಾಡಿಕೊಂಡು ಹೊರಟುಹೋದ. 'ನೀನು ಸ್ವಲ್ಪ

ನಿಧಾನಿಸಿದ್ರೆ ಜಯಶ್ರೀನ್ನೇ... ನಾನು ಮದುವೆ ಮಾಡಿಸ್ತಿದ್ದೆ' ಎಂದರು ಲಲಿತಮ್ಮ.

ಚಿಕ್ಕಮಗ ಕೋಪದಿಂದ-'ನೀನು, ಪಪ್ಪಾ ಈ ಮನೆ ಊಳಿಗದೋರಾಗಿರೋದು ಸಾಕು, ನಮಗೇನು ಸ್ವಾಭಿಮಾನ ಇಲ್ಲವಾ? ಅಣ್ಣನ ಹಾಗೆ ಸ್ವಾಭಿಮಾನ ಆಗಿರ್ಲಿಕ್ಕೆ ಇಷ್ಟ ನನಗೆ. ನನ್ನ ಹೆಂಡತಿ ಆಗೋ ಹುಡುಗಿ, ಪಾಠದ ನೆಪದಲ್ಲಿ ಯಾವ್ನೋನೋ ಅವಿವಾಹಿತ ತರುಣನ ರೂಮಿಗೆ ಹೋಗಿ ಬರೋದು, ಅವನ ರೂಪ, ಬುದ್ಧಿವಂತಿಕೆ ಹೊಗಳಿ ಕೊಂಡಾಡೋದು ನನಗೆ ಇಷ್ಟವಿಲ್ಲ' ಎಂದಿದ್ದ.

ಲಲಿತಮ್ಮ ಅಣ್ಣನ ಮನೆಯಲ್ಲಿ ಊಳಿಗದವಳಾಗಿರಲಿಲ್ಲ. ಸಕಲಕಾರ್ಯ ನಿರ್ವಾಹಕಿಯಾಗಿದ್ದರು. ಮನೆಯಲ್ಲಿದ್ದ ನಾಲ್ಕು ಜನ ಅಡಿಗೆಯವರು, ಆಳುಕಾಳು ಗಳು, ತೋಟದ ಮಾಲಿ, ಡ್ರೈವರುಗಳು ಎಲ್ಲರ ಮೇಲೆ ಆಕೆಯ ಪಾರುಪತ್ಯ, ಮನೆಯ ಹಣಕಾಸಿನ ನಿರ್ವಹಣೆ ಆಕೆಯ ಪತಿಯದು. ಆಳುಕಾಳುಗಳು, ತೋಟದ ಮಾಲಿ ಎಲ್ಲರಿಗೆ ಹೆಸರಿಗೆ ಆತ ಸಂಬಳ ಹಂಚುವುದು. ಲಲಿತಮ್ಮ ಆ ಸಮಯದಲ್ಲಿ ಎದುರಿಗೆ ನಿಂತು ಅವರಿಗೆ ಐವತ್ತು ರೂ. ಕಡಿಮೆ ಕೊಡಿ, ಇವನಿಗೆ ನಲವತ್ತು ರೂ. ಕಡಿಮೆ ಕೊಡಿ. ಅವನು ನಾಲ್ಕು ದಿನ ಚಕ್ಕರ್ ಹಾಕಿದ್ದ, ಇವನು ಎಂಟು ದಿನ ಚಕ್ಕರ್ ಹಾಕಿದ್ದ' ಎಂದು ಗಟ್ಟಿ ಧ್ವನಿಯಲ್ಲಿ ಒದರಾಡುತ್ತಿದ್ದರು.

ರಾಯರು ಪರೋಕ್ಷವಾಗಿ ತಂಗಿಯನ್ನು ಆ ಮನೆಯ ಯಜಮಾನಿಯೆಂದೇ ನಡೆಸಿಕೊಂಡಿದ್ದರು. ಅಮೇರಿಕಾಕ್ಕೆ ತಾವು ಹೋಗುವಾಗಲೂ ' ಬಿಗಿತ್ತೀನ್ನ ಚೆನ್ನಾಗಿ ನೋಡ್ಕೋಮ್ಮ. ಅವರ ಮನಸ್ಸು ಪ್ರಸನ್ನವಾಗಿಟ್ಟಿರು. ಆ ಹುಡುಗ ತಾಯೀನ್ನ ತುಂಬಾ ಪ್ರೀತಿಸ್ತಾನೆ' ಎಂದಿದ್ದರು.

ಲಲಿತಮ್ಮನಿಗೆ, ವನಜಮ್ಮನ್ನ ನೋಡಿದರೆ ಮೈ ಉರಿಯುತ್ತಿತ್ತು. ಇಂದಲ್ಲಾ ನಾಳೆ ಅಣ್ಣನ ಸಮಸ್ತ ಆಸ್ತಿ ತಮ್ಮದಾಗುತ್ತದೆ ಎಂಬ ಆಸೆ ಇಂಗಿ ಹೋಯಿತು. ತಾನು ಇಬ್ಬರು ಗಂಡು ಮಕ್ಕಳನ್ನು ಹೆತ್ತೂ ಪ್ರಯೋಜನವಿಲ್ಲ. ಈ ಮಹಾತಾಯಿ ಒಬ್ಬ ಚೆಲುವ ಚೆನ್ನಿಗನ ತಾಯಿ ಆಗಿ ಛಾನ್ಸ್ ಹೊಡೆದಳು. ಆಕೆ ಯಜಮಾನಿ, ತಾನು ಒಬ್ಬ ಊಳಿಗದಾಳು ಎನಿಸಿ ಮೈ ಉರಿಯುತ್ತಿತ್ತು,

ಫ್ಯಾಕ್ಟರಿಯಿಂದ ಬಂದೊಡನೆ ತಾಯಿಯ ಕೋಣೆಗೆ ಹೋಗಿ ಅರ್ಧಗಂಟೆ ಮಾತಾಡಿದರೆ ತೃಪ್ತಿ ರಾಜಸಿಂಹನಿಗೆ. ಊಟಕ್ಕೆ ಕೂತಾಗಲು ತಾಯಿಗೆ ಉಪಚರಿಸಿ, ಆತ್ಮೀಯವಾಗಿ ಮಾತಾಡುತ್ತಿದ್ದ.

ಒಂದು ದಿನ ಜಯಶ್ರೀ ತನ್ನ ಕೋಣೆಗೆ ಬಂದ ಅವನಿಗೆ - 'ನಾನು ಒಂದು ಗಂಟೆಯಿಂದ ಒಂಟಿಯಾಗಿ ಕಾದು ಬೇಸತ್ತು ಹೋಗಿದ್ದೀನಿ, ನಿಮ್ಮಮ್ಮನ ಹತ್ತಿರ ಕೂತಾಗ ಹೊಸದಾಗಿ ಮದುವೆ ಆದೋನು, ಕೈಹಿಡಿದ ಹೆಂಡತಿ ಕಾಯ್ತಾ ಇರ್ತಾಳೆ ಅನಿಸಲ್ವಾ... ನಿಮಗೆ ?' ಎಂದಳು.

'ಆದರೆ ಅಮ್ಮನಿಗೆ ಮೈಲಿ ಹುಷಾರಿಲ್ಲ' ಜಯಾ... ಬೆಳಗ್ಗಿಂದ ನಿಮ್ಮತ್ತೆ ಗಂಜಿ ಕೂಡ ಕಳಿಸಿಲ್ಲ. ನಾನು ಹೋಗಿ ನಿಮ್ಮ ಅಡಿಗೆಯಾಕೆ ಜೀವುಬಾಯಿಗೆ ಹೇಳಿ ಮಾಡಿಸಿದೆ. ಮನೇಲಿ ಇಷ್ಟು ಜನ ಆಳುಕಾಳುಗಳು ಇದ್ದಾರೆ, ಒಬ್ಬರಾದರೂ ಅಮ್ಮನ ಯೋಗಕ್ಷೇಮ ನೋಡದಿದ್ದರೆ ಹೇಗೆ? ಅಮ್ಮ ನೀರಿನಿಂದ ತೆಗೆದ ಮೀನಿನ ಹಾಗಿದ್ದಾಳೆ, "ಇಲ್ಲಿ ಒಗ್ಗಲ್ಲ, ಮೈಸೂರಿಗೆ ನಾನು ಹೋಗ್ತೀನಪ್ಪಾ, ಲಲಿತಮ್ಮ ಒಂಥರ ಶೀತಲ ಸಮರ ಮಾಡ್ತಾಳೆ' ಅಂತಿದ್ದಳು. ನೀನು ನಿಮ್ಮತ್ತೆಗೆ ಬುದ್ಧಿ ಹೇಳು" ಎಂದ. ನನ್ನ ತಾಯಿ ಬಗ್ಗೆ ಹಾಗೆಲ್ಲಾ ಮಾತಾಡಬೇಡಾ ಜಯಾ ? ನಾನು ಅಮ್ಮನ್ನ ದೇವತೆ ಅಂತ ತಿಳಿದಿದ್ದೇನೆ, ಎಂದ. ಜಯಶ್ರೀ ವ್ಯಂಗ್ಯವಾಗಿ – 'ನಿಮ್ಮಮ್ಮ ನಿಮ್ಮ ಪಾಲಿನ ದೇವತೆ, ನಮ್ಮತ್ತೆ ನನ್ನ ಪಾಲಿನ ದೇವತೆ, ನಮ್ಮ ನಮ್ಮ ದೇವತೆಗಳನ್ನ ನಾವೇ ಪರ್ಸನಲ್ಲಾಗಿ ಆರಾಧಿಸಿಕೊಂಡಿರೋಣಾ, ಆದರೆ ನಿಮ್ಮ ತಾಯಿ ಪಾದಕ್ಕೆ ಶರಣಾಗು ಅಂತ ನೀವು ಕೇಳಬೇಡಿ, ನಮ್ಮತ್ತೆಯ ಪಾದಕ್ಕೆ ಶರಣಾಗಿ ಅಂತ ನಾನು ಹೇಳಲ್ಲ' ಎಂದಳು. ಒಮ್ಮೆ ಮೈಸೂರಿಗೆ ಕರೆದಾಗಲು ಸ್ಪಷ್ಟವಾಗಿ ವಿರೋಧಿಸಿ, 'ಆ ಅತ್ತೆಮನೆವಾಸ, ನಿಮ್ಮ ತಾಯಿನ್ನ ಬಲವಂತವಾಗಿ ಒಲಿಸಿಕೊಳ್ಳೋದು ಎರಡು ನನಗೆ ಸಾಧ್ಯವಿಲ್ಲ. ನಾನು ಪ್ರೀತಿಸೋದು ನಿಮ್ಮನ್ನ ಮಾತ್ರ' ಎಂದಳು.

ರಾಜಸಿಂಹ ವಾರವಾರ ಹೋಗಿ ಬರುತ್ತಿದ್ದ. ತನ್ನ ಹತ್ತು ಸಾವಿರ ಸಂಬಳ ತಾಯಿಗೆ ಕೊಡುತ್ತಾ ಇದ್ದ. ಮೂರು ವರ್ಷ ಮಾತ್ರ ಇದೆಲ್ಲಾ ನಡೆಯಿತು. ಆ ಮೂರು ವರ್ಷದಲ್ಲಿ ಅಂಗಡಿಗೆ ಮೂರು ಲಕ್ಷದವರಿಗೆ ಬಂಡವಾಳ ಬಿದ್ದು.... ಕಟ್ಟಡ ವಿಶಾಲ ಮಾಡಿ ಹಿಂದೆ ಗೋಡೌನ್ ಸಹ ಕಟ್ಟಿಸಿದರು.

ಅಂಗಡಿಯಿಂದ ತಿಂಗಳಿಗೆ ಹತ್ತು ಸಾವಿರದವರೆಗೆ ನಿವ್ವಳ ಲಾಭ ಬರುತ್ತಿತ್ತು. ವಿವಾಹವಾದ ಎರಡು ವರ್ಷಕ್ಕೆ ಗಂಡು ಮಗುವಿನ ತಾಯಿಯಾದ ಜಯಶ್ರೀ ಅವನ ಸಂಬಳವನ್ನು ಉಪಾಯವಾಗಿ ಉಡುಗೊರೆ ರೂಪದಲ್ಲಿ ಸೆಳೆಯಲಾರಂಭಿಸಿದಳು. ತನ್ನ ಬರ್ತ್‌ಡೇ ಹಾಗು ವಿವಾಹ ಆನಿವರ್ಸರಿಯಲ್ಲಿ ಐವತ್ತು ಸಾವಿರ ರೂಗಳ ವಜ್ರದ ಹಾರ, ಒಂದು ಲಕ್ಷ ರೂ ಬೆಲೆ ಬಾಳುವ ಮುತ್ತಿನ ನಕ್ಲೆಸ್ ಖರೀದಿಸಿ ಅವನು ವರ್ಷದುದ್ದ ಅದರ ಸಾಲ ತೀರಿಸುವಂತೆ ಮಾಡಿದಳು.

'ನಿನಗೆ ತಂದೆ ಮನೆಯಿಂದ ಏನು ಕಡಿಮೆಯಿದೆ ಜಯಶ್ರೀ ? ಏಕೆ ಹೀಗೆ ಮಾಡ್ತಿ ? ಬಂದ ಸಂಬಳದಲ್ಲಿ ಮೂರುಕಾಸು ನನಗೆ ಸ್ವಾತಂತ್ರವಿಲ್ಲವಾ ?' ಎಂದ. ಜಯಶ್ರೀ ಅಬ್ಬರಿಸಿ -'ಹೆಂಡತಿ ಹುಟ್ಟು ಹಬ್ಬ ಮಾದುವೆ ಆ್ಯನಿವರ್ಸರಿ, ಬಸುರಿ, ಬಾಣಂತಿ... ಆದಾಗಲು ಒಂದು ಪ್ರೆಸೆಂಟ್ ಕೊಡದೇ ಬಂದದ್ದೆಲ್ಲಾ ಆ ಮುದುಕಿಗೆ ಸುರಿದಿರಿ, ಇನ್ನು ನಿಮ್ಮನ್ನ ಖಂಡಿತ ಕ್ಷಮಿಸಲ್ಲ, ಹೆಂಡತಿ ಎಷ್ಟೇ ಶ್ರೀಮಂತಳಾದರೂ

ಗಂಡಾ ಪ್ರೀತಿಯಿಂದ ಏನಾದರೂ ಕೊಡಲೀಂತ ಆಸೆ ಇರತ್ತೆ' ಎಂದು ನೂರು ಉದಾಹರಣೆ ಹೇಳಿ ವಾದ ಮಾಡಿದಳು. ಇದೇ ಕಾರಣಕ್ಕೆ ಮನೆಯಲ್ಲಿ ಜಗಳ ರಣರಂಪಾ ಆದಾಗ, ಜಯಶ್ರೀಯ ಕಾಟ ತಡೆಯಲಾರದೇ.... ತಾಯಿಗೆ ದುಡ್ಡು ಕೊಡುವುದು ನಿಲ್ಲಿಸಿದ.

'ಒಂದು ಪೈಸೆ ಸ್ವತಂತ್ರವಿಲ್ಲ, ಅವಳು ಕೊಟ್ಟ ಕಾರು, ಡ್ರೈವರ್, ಪೆಟ್ರೋಲ್ ಕಂಪನಿಯ ಖರ್ಚಲ್ಲಿ ಹಾಕಿಸ್ತಾಳೆ. ಮನೇಲಿ ಊಟತಿಂಡಿ ಸೊಗಸಾಗಿರುತ್ತೆ, ಆಫೀಸಲ್ಲಿ ಹತ್ತು ಸಲ ಕಾಳಾಬಿನ್ನಿಗೆ ಕಾಫಿ ಕಳಿಸ್ತೀನಿ, ಪ್ರತಿ ಹಬ್ಬಕ್ಕು ತನ್ನ ಸಂಬಳದಲ್ಲಿ ನಿಮಗೆ ಸಾವಿರಾರು ರೂಗಳ ಸೂಟಿಂಗ್ಸ್ ತೆಗೀತಿನಿ, ನೀವು ನನಗೆ ಮಕ್ಕಳಿಗೆ ಉಡುಗೊರೆ ಕೊಡಿ ಅಂತ ತಾನೇ ಲಕ್ಷಾಂತರ ರೂಗಳ ಒಡವೆ ಖರೀದಿಸುತ್ತಾಳೆ, ಅದನ್ನ ಇಡೀ ವರ್ಷದುದ್ದ ತೀರಿಸೋದೆ ಆಯ್ತು' ಎಂದ.

'ಇರ್ಲಿ ಬಿಡಪ್ಪಾ, ಮೂರು ವರ್ಷದಿಂದ ನನಗೆ ಕೊಟ್ಟೆ, ಅಂಗಡಿ ಒಡಾಯಿಸಿದೆ, ತಿಂಗಳಿಗೆ ಹತ್ತುಸಾವಿರ ನಿವ್ವಳ ಲಾಭಾ ಬರತ್ತೆ, ನೀನು.... ಆಗಾಗ ಬಂದು ಸೇಲ್ಸ್‌ಟ್ಯಾಕ್ಸ್, ಇನ್‌ಕಮ್‌ಟ್ಯಾಕ್ಸ್ ಬಗ್ಗೆ ಕಾಗದ ಪತ್ರ ತಯಾರಿಸಿ ಸಹಾಯಮಾಡ್ತಿ, ಘೂರ್ಖನ ರಕ್ಷಣೆ ಇದೆ. ಮುರುಳಿ ಅಂತ ಒಳ್ಳೆ ಅಕೌಂಟೆಂಟ್ ಗೊತ್ತು ಮಾಡಿ ಕೊಟ್ಟಿದ್ದಿ' ಎಂದರು.

ಹತ್ತು ವರುಷಗಳುರಳಿತು. ರಾಜಸಿಂಹ ಎರಡು ಮಕ್ಕಳ ತಂದೆ ಆಗಿದ್ದ. ಎಂಟು ವರ್ಷದ ಚಿಂಟು, ಆರು ವರ್ಷದ ಚಿನ್ನಿ ಮುದ್ದಾದ ಮಕ್ಕಳು.

ಈ ಹತ್ತು ವರ್ಷದಲ್ಲಿ ವನಜಮ್ಮ ಅಂಗಡಿ ಆದಾಯದಿಂದ ಅಂಗಡಿ ಹಿಂಭಾಗದ ಅರವತ್ತು ಇಂಟು ನಲವತ್ತರ ತಮ್ಮ ಸೈಟಲ್ಲಿ ಎರಡು ಮನೆ ಕಟ್ಟಿಸಿ ಒಂದನ್ನು ತಮ್ಮನಿಗೆ ಅವನ ಹೆಂಡತಿ ಮಕ್ಕಳ ಸಮೇತ ವಾಸ ಮಾಡಲು ಕೊಟ್ಟು ಇನ್ನೊಂದರಲ್ಲಿ ತಾವಿದ್ದು ಮೇಲಿನ ದೊಡ್ಡಮನೆ ಲಾಯರಿಗೆ ಬಾಡಿಗೆ ಕೊಟ್ಟಿದ್ದರು. ಜಯಶ್ರೀ ತಂದೆ ಕಂಪನಿಯ ಐಶ್ವರ್ಯವು ಒಂದಕ್ಕೆ ಹತ್ತರಷ್ಟು ಬೆಳೆದಿತ್ತು. ಯಾವಾಗಲೂ ಗಂಡನೊಡನ ಹಣಕ್ಕೆ ತಗಾದೆ, ತಂದೆ ತಾಯಿಗಳ ಜಗಳ, ವಿರಸ ಪುಟ್ಟ ಚಿಂಟುವಿನ ಮೇಲು ಪ್ರಭಾವ ಬೀರಿತ್ತು. ಲಲಿತಮ್ಮನ ದುರ್ಬೋಧನೆಯ ಸೇರಿ ವಯಸ್ಸಿಗೆ ಮೀರಿದ ಮಾತಾಡುತ್ತಿದ್ದ, ಒಮ್ಮೆ ತಂದೆತಾಯಿಗೆ ವಾದ ನಡೆಯುವಾಗ–'ಈ ಆಸ್ತಿ, ಕಂಪನಿ ಎಲ್ಲಾ ಮಮ್ಮಿದ್ದೂ, ಮಮ್ಮಿ ಹೇಳ್ದಾಗೆ ಕೇಳು ಪಪ್ಪಾ...' ಎಂದು ಕ್ಯಾಟರ್‌ಪಿಲ್ಲರಿನಿಂದ ಹೊಡೆದ. ಮೋಹನರಾಯರು ಕೋಪದಿಂದ ಓಡಿಬಂದರು.

ಈ ಪೋರಾ ಮಾಡಿದ ಕೆಲಸ ನೋಡು, ಬೇಕಂತ ಗುರಿ ಇಟ್ಟು ಹೊಡಿದಿದ್ದಾನೆ. ಅವರಿಗೆ ಕಣ್ಣಿಗೆ ತಗುಲಿದ್ರೆ ಏನಾಗ್ತಿತ್ತು ?' ಎಂದರು.

'ಅವನಿಗೆ ಹೊಡೀಬೇಡಿ ಮಾಮಾ... ಅವನೇನು ಬೇಕಂತ ಮಾಡಿದನಾ ? ಗೋವಿಂದನ್ನ ಕೂಗಿ ಬ್ಯಾಂಡೇಜ್ ಹಾಕು ಅನ್ನಿ' ಎಂದು ಉಡಾಫೆಯಾಗಿ ಹೇಳಿ-

'ಏ ರ್‍ಯಾಸ್ಕಲ್... ಇನ್ನೊಂದ್ಸಲ ಕ್ಯಾಟರ್‌ಪಿಲ್ಲರ್ ಮುಟ್ಟಿದರೆ ನಿನಗೆ ಕಪಾಳಕ್ಕೆ ಹಾಕ್ತೀನಿ' ಎಂದಳು.

'ಹೊಡೀ ಮಮ್ಮಿ, ನೋಡೋಣ' ಎಂದ.

'ಬ್ಲಡೀ ಫೂಲ್... ಆ ಸುಂದರವಾದ ಕಣ್ಣುಗಳನ್ನ ನೋಡಿದ್ರೆ ಹೊಡೀಲಿಕ್ಕೆ ಮನಸ್ಸು ಬರಲ್ಲ, ನಿಮ್ಮ ಪಪ್ಪನ ಕಣ್ಣೇ ಕಿತ್ತಿಟ್ಟ ಹಾಗೆ ಇದೆ. ಆ ಕಣ್ಣುಗಳನ್ನ ನೋಡೇ ನಾನು ಪ್ರೀತಿಸಿದ್ದು, ಇಲ್ಲಿದ್ರೆ ನಮ್ಮ ಪಪ್ಪಾ ನನಗೆ ಎಂಥೆಂಥ ವರ ಹುಡುಕಿದ್ದರು' ಎಂದು ಗಂಡನಿಗೆ ಕೇಳಿಸುವಂತೆ ಮಗನ ತಲೆ ಸವರುತ್ತ ಹೇಳಿದಳು.

ಗೋವಿಂದನೊಡನೆ ಬ್ಯಾಂಡೇಜ್ ಹಾಗೂ ಪ್ರಥಮ ಚಿಕಿತ್ಸೆ ಪೆಟ್ಟಿಗೆ ತಂದ ಮಾವ ಬೇಸರದಿಂದ,

'ಎಲ್ಲಾ ಟೈಮಿನಲ್ಲಿಯೂ ಮುದ್ದು ಒಳ್ಳೇದಲ್ಲಮ್ಮ, ಅವನು ಮಹಾ ಪುಂಡನಾಗ್ತಾನೆ. ಹೀಗೆಲ್ಲಾ ಮಾಡಿದಾಗ ನಾಲ್ಕು ಬಿಗಿಬೇಕು, ಅವರ ಕಣ್ಣಿಗೆ ಬಿದ್ದಿದ್ದರೆ... ಗತಿಯೇನು ?' ಎಂದರು. ಅವಳು ನಗುತ್ತ– 'ಅವರು ಕುರುಡರಾಗ್ತಿದ್ದರು. ನಾನು ಡೈವೋರ್ಸ್ ಮಾಡ್ತಿದ್ದೆ. ಆ ಸುಂದರ ಕಣ್ಣುಗಳಿಗೆ ಮರುಳಾಗೆ ಇಷ್ಟು ವಿರಸವಾದರೂ ಅನುಭವಿಸ್ತಿರೋದು. ಅವರಿಗೂ ನನ್ನ ದೌರ್ಬಲ್ಯ ಗೊತ್ತು. ಆಟ ಆಡಿಸ್ತಾರೆ. ಈಗಲು ಮದುವೆ ಆಗಿ ಹತ್ತು ವರ್ಷ ಆದರೂ, ನನ್ನ ಕೆಲವರು ಎಷ್ಟು ಆರಾಧಿಸ್ತಾರೆ ಎಂದರೇ ನಾನು ನಡೆದ ನೆಲ ಚುಂಬಿಸಲು ಸಹ ಸಿದ್ಧರಿದ್ದಾರೆ. ಈ ಮನುಷ್ಯ ನೋಡಿದರೆ ನನ್ನ ಯಕಃಶ್ಚಿತ್ ಅಂತ ತಿಳಿದಿದ್ದಾರೆ' ಎಂದು ಸಿಕ್ಕಾಪಟ್ಟೆ ಒದರಾಡಿದಳು.

ಅನಂತರ ಸಿಡುಗುಟ್ಟುತ್ತ ಕಾಲಪ್ಪಳಿಸಿ ಒಳನಡೆದಳು. ಬ್ಯಾಂಡೇಜ್ ಹಚ್ಚಿದ ಮೇಲೂ ಚುರುಗುಡುತ್ತಿದ್ದ ಗಾಯ, ಮನಸ್ಸು ನೋವಿನಿಂದ ಹಿಂಡಿ ಹಿಪ್ಪೆಯಾಗಿತ್ತು.

ತನ್ನ ಕೋಣೆಗೆ ಬಂದು ಮಲಗಿದ. ಪುಟ್ಟ ಮಗಳು ಶಮಂತ ಎಷ್ಟೋ ಹೊತ್ತಿನ ನಂತರ ಬಂದಳು.

'ಪಪ್ಪಾ, ಎರಕೊಂಡು ಕೂದಲಿಗೆ ಸಾಮ್ರಾಣಿ ಹೊಗೆ ಹಾಕಿಕೊಂಡಿದ್ದೀನಿ, ಕೂದಲು ವಾಸನೆ ನೋಡು' ಎಂದಳು. ಆರು ವರ್ಷದ ಹುಡುಗಿಯಾದರು ಬಾಬ್ ಮಾಡಿಸಿರಲಿಲ್ಲ. ಬೆನ್ನ ತುಂಬಾ ಹರಡಿದ ದಟ್ಟ ಕೂದಲು. ಎತ್ತಿಕೊಂಡು ಕೂದಲು ಮೂಸಿದ.

'ಹಣೆಯಮೇಲೆ ಗಾಯ ಏನು ಪಪ್ಪಾ ...?'

'ಚಿಂಟು ಹೊಡೆದನಮ್ಮ...' ಎಂದ.

'ಆ ಚಿಂಟೂಗೆ ಕೋಲು ತಗೊಂಡು ಹೊಡೀಬೇಕು. ಮೊನ್ನೆ ಮಮ್ಮಿಗೂ ಹೇಳಿದೆ. ತಾತಂಗೆ ಮಾಡಿದಾಗಲೇ ಹೊಡಿ ಅಮ್ಮ ಎಂದು' ತನ್ನ ಪುಟ್ಟ ಕೈಗಳಿಂದ ತಂದೆಯ ಕೆನ್ನೆ ಸವರಿದಳು. ಚಿಗುರುವಂಥಾ ಆ ಎಳೆಯ ಹಸ್ತದ ಸ್ಪರ್ಶದಿಂದ ಅವನು ವಿಚಲಿತನಾದ.

ಮಗಳನ್ನು ಅಪ್ಪಿಕೊಂಡ. ಅವನಿಗೆ ಹಾಯೆನಿಸಿತು. 'ನಿನ್ನ ಕಿವೀಲಿ ಸಣ್ಣ ದನೀಲಿ ಹೇಳಲಾ ಪಪ್ಪಾ....' ಇದು ತಂದೆಗೆ ಬಹು ಪ್ರಿಯಾವಾದ ಕಾರ್ಯವೆಂದು ಅವಳಿಗೆ ಗೊತ್ತು. 'ಹೇಳು ಚಿನ್ನೀ....' ಎಂದ.

'ದೊಡ್ಡ ಬೆಕ್ಕು ಬಂದು ಹಾಲು ಕುಡಿಯಿತು.

ಪಾತ್ರೆಯಲ್ಲಿ ತುಂಬಿದ ಹಾಲು ಕುಡಿಯಿತು.

ಚಿಕ್ಕ ಬೆಕ್ಕು ಕಿಟಕಿಯಿಂದ ಹಾರಿ ಬಂದಿತು.

ದೊಡ್ಡ ಬೆಕ್ಕ ನೋಡಿ ಹೆದರಿ ಓಡಿತು.'

ಎಂದು ರಾಗವಾಗಿ ಹಾಡಿದಳು. ಕೋಮಲ ಸ್ವರ. ಮಗಳು ಎಂದರೇ ಪಂಚಪ್ರಾಣ ಅವನಿಗೆ.

'ಪಪ್ಪಾ ಚಾಕ್ಲೇಟ್ ತಿನ್ನಿಸಲಾ ?' ಎಂದಳು.

'ತಿನ್ನಿಸಮ್ಮ...' ಎಂದ. ಸ್ವಲ್ಪ ಸ್ವಲ್ಪ ಆ ಚಾಕ್ಲೇಟ್ ಬಾರ್ ಕಚ್ಚಿ, ಅವನಿಗೆ ತಿನ್ನಿಸತೊಡಗಿದಳು.

'ಏ ತುಂಟೀ, ಮನೆಯೆಲ್ಲಾ ಹುಡುಕಿದೆ, ಇಲ್ಲಿದ್ದೀಯಾ ? ಟ್ಯೂಷನ್ ಮಾಸ್ಟರ್ ಬಂದಿದ್ದಾರೆ, ಹೋಗು' ಎಂದು ಒಳಗಡೆ ಬಂದ ಜಯಶ್ರೀ ಗದರಿದಳು, ಪುಟ್ಟಿ ಚಿನ್ನಿ ಕೋಪದಿಂದ,

'ಚಿಂಟೂಗೆ ಕೋಲು ತಗೊಂಡು ಹೊಡೀ, ಮಮ್ಮಿ. ಅವನು ಮೊನ್ನೆ ತಾತನ ಹಣೆಗೆ ಕ್ಯಾಟರ್‌ಪಿಲ್ಲರಿಂದ ಹೊಡೆದಿದ್ದಾನೆ. ನಾನು ಪಪ್ಪಂಗೆ ಚಾಕ್ಲೇಟ್ ತಿನ್ನಿಸಿದೆ. ಕಿವೀಲಿ ಹಾಡು ಹೇಳಿದೆ' ಎಂದಳು. 'ಹೂಂ ಪಪ್ಪನ್ನ ಉದ್ಧಾರ ಮಾಡೋಳು ನೀನೇ. ಹೋಗು ಮಾಸ್ತರ್ ಕಾದಿದ್ದಾರೆ' ಎಂದು ಮಗಳನ್ನು ಗದರಿಸಿ, ಹೊರ ಗೋಡಿಸಿದಳು.

'ರಾಜ್... ನನಗೆ ಏಕೋ ಈ ವಿರಸ ಸಾಕಾಗಿದೆ. ನಾನು ಮೂರು ತಿಂಗಳು ಅಮೆರಿಕಾಗೆ ಹೋಗ್ತೀನಿ. ಈ ಸಲ ಕೆಲವು ಫ್ಯಾಕ್ಟ್ರಿ ಯಂತ್ರಗಳು ಖರೀದಿಸೋದಿದೆ. ನಮ್ಮ ದೊಡ್ಡಪ್ಪನ ಮಗ ಈಗ ಅಲ್ಲೇ ಇದ್ದಾನೆ. ಅಪ್ಪಾನು ಇದ್ದಾರೆ ' ಎಂದು ಹೇಳಿದಳು. ಅವನು ಸುಮ್ಮನಿದ್ದ.

'ಆರು ತಿಂಗಳಿಂದ ಒಟ್ಟಿಗಿದ್ದೀವಿ, ಆದರೆ... ಇಬ್ಬರಲ್ಲಿಯೂ ವಿರಸ ಶುರು ವಾಗಿದೆ. ನಿಮ್ಮ ಉತ್ಕಟ ಪ್ರೀತಿ ಹಂಬಲಿಸಿ ಬರ್ತೀನಿ. ನೀವು ನನ್ನ ನೆಗ್ಲೆಕ್ಟ್

ಮಾಡಿದರೆ ಸಹಿಸಲಾರೆ. ನಾನು ಸಾಮಾನ್ಯರಿಗೆ ಸಿಗೋ ಹೆಣ್ಣಲ್ಲ. ನೀವು ಎಷ್ಟು ಜನ್ಮದ ಪುಣ್ಯ ಮಾಡಿದ್ದಿರೋ ಅದಕ್ಕೆ ನಿಮಗೆ ಸಿಕ್ಕಿದ್ದೀನಿ' ಎಂದಳು. ಅವನು ಸುಮ್ಮನಿದ್ದ.

'ನಾನು ಕೋಟ್ಯಾಧೀಶಳು, ನಿಮ್ಮನ್ನ ಕೇಳಿ ಒಂದು ಪ್ರಸೆಂಟ್ ಪಡೀಬೇಕಾ ? ನಿನ್ನೆ ಹನ್ನೆರಡು ಗಂಟೆಯವರಿಗೆ ಆ ಮಗಳನ್ನ ಆಡಿಸ್ತಾ ಇಲ್ಲೇ ಕಾಲ ಕಳೆದಿರಿ. ನಾನು ಅಲ್ಲಿ ವಿರಹಿಣಿ ಹಾಗೆ ಕಾಲ ಕಳೆದೆ. ಈಗ ನಾವು ನವದಂಪತಿಗಳಲ್ಲ. ಮಕ್ಕಳ ತಂದೆ-ತಾಯಿಗಳೂಂತ ವೇದಾಂತ ಹೇಳಿದಿರಿ' ಎಂದು ಏನೇನೋ ದೂರಿದಳು.

'ಒಂದೊಂದ್ಸಲ ನಿನ್ನ ಯಾವ ಭಾವನೆಗಳಿಗೂ ನಾನು ಸ್ಪಂದಿಸಲಿಕ್ಕೆ ಆಗಲ್ಲ ಜಯಾ. ನಿನಗೆ ಮನಸ್ಸಿನ ತುಂಬಾ ಸುಪೀರಿಯಾರಿಟಿ ಕ್ಲಾಂಪ್ಲೆಕ್ಸ್ ತುಂಬಿದೆ. ನೀನು ರೂಪದಲ್ಲಿ ಅಪ್ಸರೆ, ಕೋಟ್ಯಾಧೀಶೆ. ನಿನ್ನ ಸರಿಸಮಾನ ಯಾರಿಲ್ಲ ಅಂತ ಯಾವೋನೋ ಒಬ್ಬ ಕೋಟ್ಯಾಧೀಶನ್ನೇ ವಿವಾಹವಾಗಿ ಅವನು ಕುಡುಕನೋ... ಪರಸ್ತ್ರೀ ಲಂಪಟನೋ ಆಗಿದ್ದರೆ ನಿನ್ನ ಅಹಂಕಾರಕ್ಕೆ ತಕ್ಕ ಶಾಸ್ತಿ ಆಗ್ತಿತ್ತು. ನಾನು ಸಾತ್ವಿಕ. ನನಗಾವ ದುರಭ್ಯಾಸ ಇಲ್ಲ. ನಿನ್ನ ಶ್ರೀಮಂತಿಕೆ ನಾನೇನು ಅನುಭವಿಸ್ತಿದ್ದೀನಿ ? ಒಂದು ವೇಳೆ ನಿನ್ನಂಥಾ ಶ್ರೀಮಂತೆಯನ್ನ ನಾನು ವಿವಾಹವಾಗ್ದಿದ್ರು, ನನ್ನ ಬುದ್ಧಿ ಬಲದಿಂದ ಒಳ್ಳೇ ಕೆಲಸ ಗಳಿಸ್ತಿದ್ದೆ. ಕಾರು ಬಂಗ್ಲೆ ಎಲ್ಲಾ ನನಗೆ ಸಿಗ್ತಿತ್ತು. ನಿನ್ನ ಅಪರಿಮಿತ ಶ್ರೀಮಂತಿಕೆ ಬ್ಯಾಂಕಿನ ಬ್ಯಾಲೆನ್ಸ್‌ಗಳಾಗಿ, ಚಿನ್ನದ ಗಟ್ಟಿಗಳಾಗಿ ಲಾಕರ್‌ಗಳಲ್ಲಿ ಕೂಡಿದೆಯೇ ಹೊರತು ನಾನೇನು ಅದನ್ನ ತಿಂತಿಲ್ಲ. ಪ್ರೀತಿ ಅನ್ನೋ ಶಬ್ದಕ್ಕೆ ಅರ್ಥವೇನು, ಜಯಾ ? ಗಂಡ ತನ್ನ ಸುಪೀರಿಯಾರಿಟಿ ಕಾಂಪ್ಲೆಕ್ಸಿಗೆ ನಮಸ್ಕಾರ ಹಾಕ್ತಿರಲೀಂತ ಬಯಸಿದ ಹೆಂಗಸಿಗೆ ಯಾವತ್ತೂ ಶಾಂತಿ ಸಿಗಲ್ಲ. ಇವತ್ತು ನನ್ನ ಸೌಂದರ್ಯಕ್ಕೆ ಬೆಲೆ ಇದೆ. ನಾನು ನಡೆದ ನೆಲ ಚುಂಬಿಸಲಿಕ್ಕೆ ಸಹ ಕೆಲವರು ಸಿದ್ಧರಿದಾರೆ ಅಂತ ಈ ನಡುವೆ ಉದ್ಗಾರ ತೆಗೀತಿ. ಒಬ್ಬ ಒಳ್ಳೇ ಮನೆತನಸ್ಥ ಗೃಹಿಣಿ ಬಾಯಲ್ಲಿ ಈ ಮಾತು ಬರಬಾರದು' ಎಂದ.

'ನಾನು ಆಡೋದೆಲ್ಲಾ ನಿಮಗೆ ತಪ್ಪಾಗಿ ತೋರತ್ತೆ, ನಾನು ಮಾಡೋದೆಲ್ಲಾ ನಿಮಗೆ ತಪ್ಪಾಗಿ ತೋರುತ್ತೆ ಇದಕ್ಕೆಲ್ಲಾ ಒಂದೇ ಮದ್ದು. ನಾನು ಮನೆಬಿಟ್ಟು ಹೊರಟು ಬಿಡಬೇಕು. ಮೂರು ತಿಂಗಳು ನಾನು ಇಲ್ಲದಿದ್ರೆ ನನ್ನ ಬೆಲೆ ಏನೂ ಅಂತ ನಿಮಗೆ ಗೊತ್ತಾಗತ್ತೆ' ಎಂದಳು.

'ನಿನ್ನ ಬೆಲೆ ಬಹಳ ದುಬಾರಿ ಜಯಾ.... ಆ ಬೆಲೇ ತೂಗಲಾರದೇ ಈ ಬಡಪಾಯಿ ಚಡಪಡಿಸುತ್ತಿದ್ದಾನೆ' ಎಂದ. 'ಮೊದಲು ಹದಿನೈದು ದಿನ ಬಾಂಬೆಗೆ ಹೋಗ್ತೀನಿ, ಅಲ್ಲಿಂದ ಬಂದು ಒಂದು ವಾರ ಇದ್ದು, ನಂತರ ಅಮೆರಿಕಾ' ಎಂದಳು.

ಅವನು ಸುಮ್ಮನಿದ್ದ.

ವಿಮಾನ ಪ್ರಯಾಣ... ಸ್ಟಾರ್ ಹೋಟಲ್ ವಾಸ. ಆ ಪಾರ್ಟಿ, ಕೂಟಗಳು ಎಲ್ಲಾ ಅವಳಿಗೆ ಇಷ್ಟ. ಆ ಐಷಾರಾಮದ ಅನುಭೋಗವೂ ಬಿಡಲಾರಳು. ಹದಿನೈದು, ಇಪ್ಪತ್ತು ದಿನಗಳು ಅವನಿಂದ ದೂರವಿದ್ದ.... ನಂತರ ತಾನೇ ಹಂಬಲಿಸಿ ಫೋನ್ ಮಾಡುವಳು.

ಈ ನಡುವೆ ಅವನು ಜಡವಾಗಿರುತ್ತಿದ್ದ. ಮೊದಲಿನ ಹಂಬಲವಿರಲಿಲ್ಲ, ಮುದ್ದು ಮಗಳೊಡನೆ ಆಡುವುದರಲ್ಲಿ ಅವನಿಗೆ ಮನಃಶಾಂತಿ ಸಿಗುತ್ತಿತ್ತು. ಆಗಾಗ ಮಗಳೊಡನೆ ಮೈಸೂರಿಗೂ ಹೋಗುತ್ತಿದ್ದ. ಅವಳು ಮುಂಬಯಿಗೆ ಹೋಗುವ ಹಿಂದಿನ ದಿನ ವಾಸಂತಿರಾವ್ ಅವರ ಪತಿ ಎಂದು ಹೇಳಿಕೊಂಡು ಒಬ್ಬಾತ ಬಂದಿದ್ದ. ಪ್ರಾಜೆಕ್ಟ್ ವಿಭಾಗದ ಆಫೀಸ್ ಸೆಕ್ಷನ್ನಿನವರ ವಿಷಯ ಅವನಿಗೆ ಗೊತ್ತಿರಲಿಲ್ಲ. ಲಿಜೀಗೆ ಹೇಳಿ ಕಳಿಸಿದ. ಲಿಜೀ ಬಂದು ವಾಸಂತಿ ರಾವ್ ಮೇಲೆ ನೂರು ಬಗೆ ದೂರು ಹೇಳಿ ಕೆಲವು ವಾರ್ನಿಂಗ್ ನೋಟೀಸ್, ಮೆಮೋ ತೋರಿಸಿ, ತಾವು ಅವಳನ್ನು ಕೆಲಸದಿಂದ ತೆಗೆದು ಹಾಕಿರುವುದನ್ನು ಸಮರ್ಥಿಸಿದಳು. ಅವನು ಮಾಲಿಕ ಎಂದು ತಿಳಿದು, ಹೊರಗಿನವರು ಏನು ಸಹಾಯ ಬಯಸಿ ಬಂದರೂ.... ಅಂಥವರಿಗೆ ಸಹಾಯ ಮಾಡಲು ತನಗೆ ನೂರು ಕಾಸಿನ ಸ್ವಾತಂತ್ರ್ಯವಿಲ್ಲವೆಂದು ಮೊಟ್ಟ ಮೊದಲು ಬಾರಿ ಅವನಿಗೆ ಅರಿವಾಯಿತು. ವಾಸಂತಿರಾವ್ ಅವರ ಪತಿ ಶಾಮರಾವ್ ಕಲ್ಲು ಕರಗುವ ರೀತಿಯಲ್ಲಿ ತನ್ನ ಸಂಸಾರ ತಾಪ ತ್ರಯ ಹೇಳಿಕೊಂಡ 'ಆರು ತಿಂಗಳ ವಿತೌಟ್ ಪೇ ಲೀವ್ ಕೊಡಿ. ಇನ್ನು ಆರು ವರ್ಷ ಸರ್ವಿಸಿದೆ' ಎಂದು ಬೇಡಿದ. ಅವನ ಪರವಾಗಿ ಜಯಶ್ರೀಯ ಬಳಿ ಮಾತಾಡಿದಾಗ ' ನೀವು ಆ ವಿಷಯ ತಲೆಗೆ ಹಚ್ಚಿಕೊಳ್ಳಬೇಡಿ. ಕಂಪನಿ ಮಾಲಿಕಳು ನಾನು, ಶೈನಿ ಲಿಜೀ, ಸೋಹಿಂದ್ರ ಲಾಲ್ ಅಂಥ ಹಿರಿಯ ಅಧಿಕಾರಿಗಳಿಗೆ ಯಾರನ್ನ ಕೆಲಸದಲ್ಲಿಟ್ಕೋಬೇಕು. ಯಾರನ್ನ ಹೊರಗೆ ಹಾಕಬೇಕು ಗೊತ್ತಿರತ್ತೆ. ನೀವು ಒಬ್ಬ ಆಡಿಟರ್ ನಿಮ್ಮ ಕೆಲಸ ಸರಿಯಾಗಿ ನಿರ್ವಹಿಸಿ, ನಿಮ್ಮ ಅಸಿಸ್ಟೆಂಟ್‌ಗಳಿಂದ ಸರಿಯಾಗಿ ಕೆಲಸ ತೆಗೀರಿ. ನಮ್ಮ ವಿಭಾಗದ ತಂಟೆಗೆ ಬರಬೇಡಿ' ಎಂದಳು.

ನಂತರ ವ್ಯಂಗ್ಯವಾಗಿ 'ವಾಸಂತಿರಾವ್ ಅನ್ನೋ ಸುಂದರವಾದ ಹೆಸರು ಕೇಳಿ ಮರುಳಾಗಿ ಒಬ್ಬ ಸುಂದರವಾದ ತರುಣೀನ ಕಲ್ಪಿಸಿಕೊಂಡು ನೀವು ಶಿಫಾರಸ್ ಮಾಡಲಿಕ್ಕೆ ಬರ್‍ತಿದ್ದೀರೇನೊ ? ಆದರೆ ಆಕೆ ಐವತ್ತೆರಡರ ಮುದುಕಿ' ಎಂದು ಕಟಕಿ ಆಡಿದಳು.

'ಪ್ರೈವೇಟ್ ಕೆಲಸದಿಂದ ರಿಟೈರ್ಡ್ ಆಗಿರೋ ಆಕೆಯ ಪತಿಗೆ ಈಗ ಐವತ್ತೆಂಟರ ವಯಸ್ಸು. ಆತನಿಗೆ ಪೆನ್‌ಷನ್ ಇಲ್ಲ, ಐವತ್ತು ಸಾವಿರ ರೂ. ಕೈಲಿದೆ. ಉಳಿದದ್ದೆಲ್ಲಾ

ಮೊದಲೇ ಸಾಲಾ ಸೋಲಕ್ಕೆ ಹೋಗಿದೆ. ಇಂಥಾ ದುಃಸ್ಥಿತೀಲಿರೋ ಸಂಸ್ಥಾರಕ್ಕೆ ಸಹಾಯ ಏಕೆ ಮಾಡಬಾರದು ? ಮಾನವೀಯತೆ ದೃಷ್ಟಿಯಿಂದ, ಕೇಳಿದೆ' ಎಂದನ.

'ಹೆಂಡತಿಯ ಮೇಲೆ ಮಾನವೀಯತೆ ತೋರಿಸಿ ಸಾಕು. ಮಗಳ ಮೇಲೆ ಅಪರಿಮಿತ ಪ್ರೀತಿ ಇದೆ. ಹೆತ್ತ ತಾಯಿ ಮೇಲೆ ಅಪರಿಮಿತ ಪ್ರೀತಿ ಇದೆ. ಕೈ ಹಿಡಿದ ಹೆಂಡ್ತೀ ಮಾತ್ರ ಬೇಕಿಲ್ಲ ನಿಮಗೆ. ಕುರೂಪಿ ಅವಿದ್ಯಾವಂತೆಯಾದ ಒಬ್ಬ ಹುಡುಗಿ ಸಿಕ್ಕಿದ್ದರೆ ಎಷ್ಟು ನೆಗ್ಲೆಕ್ಟ್ ಮಾಡ್ತಾ ಇದ್ದಿರೋ ? ಅಪರಿಮಿತ ಚೆಲುವೆ, ಕೋಟ್ಯಾಧೀಶ ದೊಡ್ಡ ಕಂಪನಿ ನಿರ್ವಹಿಸ್ತಿರೋ ವಿದ್ಯಾವಂತೆ ಹೆಂಡ್ತಿ ಸಿಕ್ಕಿದರೆ ನಾನು..... ನಡೆದ ನೆಲಕ್ಕೆ ಹೂ ಹಾಕಿ ಆರಾಧಿಸೋರು' ಎಂದಳು.

'ಅಂತೂ ನಿನ್ನ ಮನಸ್ಸಿಗೆ ಈ ನಡುವೆ ನನ್ನ ಪ್ರೀತಿ ತೃಪ್ತಿ ಆಗ್ತಿಲ್ಲ, ಬೇರೆ ಯಾರದೋ ಆರಾಧನೆ, ಪ್ರೀತಿ ಪ್ರೇಮಕ್ಕೆ ಹಂಬಲಿಸ್ತಿದ್ದಿ. ಬಾಂಬೆ, ಮದ್ರಾಸ್ ಅಂತ ಅದಕ್ಕೆ ಸುತ್ತಾಡ್ತ ಅನ್ವೇಷಣೆ ಮಾಡ್ತಿ' ಎಂದ.

'ನನ್ನ ದೌರ್ಬಲ್ಯ ಗೊತ್ತಿದೆ ನಿಮಗೆ. ನಿಮ್ಮನ್ನ ಬಿಟ್ಟು ಬೇರೆ ಯಾರನ್ನೂ ನಾನು ಇಷ್ಟಪಡಲ್ಲ. ನನ್ನ ಆರಾಧಿಸಿ ನೂರು ಜನ ಬರ್ತಾರೆ. ಆದರೆ ಯಾರನ್ನ ನೋಡಿದರೂ ನನಗೆ ಇಷ್ಟವಾಗಲ್ಲ. ನಿಜ ಹೇಳೋದಾದರೆ ಪಾತಿವ್ರತ್ಯ ಇತ್ಯಾದಿ ಭಾವನೆಗಳಿಗೆ ನಾನು ಜಾಸ್ತಿ ಬೆಲೆ ಕೊಡಲ್ಲ. ಆದರೂ ಹೊರಗಿನ ಗಂಡಸರಿಗೆ ನಾನು ಸಲಿಗೆ ಕೊಟ್ಟಿಲ್ಲ. ಒಬ್ಬ ಉದ್ಯಮಿ, ಕೋಟ್ಯಾಧೀಶಳು ಅನ್ನೋ ಭಯ ಇರೋದ್ರಿಂದ ಯಾರೂ ನನ್ನ ಹತ್ತಿರ ಔಚಿತ್ಯ ಮೀರಿ ವರ್ತಿಸಲ್ಲ' ಎಂದಳು.

'ನೀನು ಬಯಸೋ ಪ್ರೀತಿ ಎಂಥಾದ್ದೋ ನನಗೆ ಗೊತ್ತಿಲ್ಲ. ನಾನು ಸೋತಿದ್ದೀನಿ. ನನ್ನ ಮಕ್ಕಳ ತಾಯಿ, ಈ ಮನೆ ಗೃಹಿಣಿ, ನನ್ನ ಪತ್ನಿ, ಇಷ್ಟು ಮಾತ್ರ ತಿಳಿಯಬಲ್ಲೆ' ಎಂದ. ಅವಳು ಅಸಮಾಧಾನದಿಂದ–

'ತನ್ನ ಗಂಡನ ಪತ್ನಿಯಾಗಿ, ತಮ್ಮ ಮಕ್ಕಳ ತಾಯಿ ಆಗಿರೋ ಸಾಮಾನ್ಯ ಗೃಹಿಣಿಯರು ಸಾವಿರಾರು ಜನ ಇದ್ದಾರೆ. ನಾನು ಆ ಸಾಲಿಗೆ ಸೇರಿದೋಳಲ್ಲ, ನನ್ನ ವ್ಯಕ್ತಿತ್ವ ಹೈಲೆವಲ್. ನನ್ನಿಂದ ಸಾವಿರಾರು ಕುಟುಂಬಗಳು ಅನ್ನ ಕಾಣ್ತಿವೆ' ಎಂದಳು.

ಅವಳ ಅಪರಿಮಿತ ಅಹಂಕಾರ, ಸುಪೀರಿಯಾರಿಟಿ ಕಾಂಪ್ಲೆಕ್ಸ್, ಗಂಡ ತನ್ನನ್ನು ಹುಚ್ಚನಂತೇ ಆರಾಧಿಸಲೀ ಎಂಬ ಮನೋಭಾವ, ಅತೃಪ್ತಿ, ಇದೆಲ್ಲದರಿಂದ ಅವನು ಬೇಸತ್ತು ಹೋಗಿದ್ದ. ಅವನಿಗೆ ಆ ಮನೆಯಲ್ಲಿ ಶಾಂತಿ ಸಿಗುತ್ತಿದ್ದದ್ದು ಆ ಪುಟ್ಟ ಮಗುವಿನಿಂದ.

ಪಪ್ಪಾ... ಪಪ್ಪಾ ಎಂದು ಓಡಿ ಬಂದು ತಂದೆಯ ತೊಡೆಯೇರಿ ಏನೇನೋ ಮುದ್ದು ಮುದ್ದಾಗಿ ಮಾತಾಡುವ ಎಳೆಯ ಸ್ವರಕ್ಕೆ ಅವನು ಮರುಳಾಗುತ್ತಿದ್ದ, ತನ್ನ ಮನದ ಬೇಗುದಿ ಮರೆಯಲು ಆ ಮಗುವಿನ ಸ್ನೇಹ ಪರಮ ಸಂಜೀವಿನಿ

ಔಷಧಿಯಾಗಿತ್ತು.

ಹೆಂಡತಿಯ ಅಹಂಕಾರದ ಮಾತಿಗೆ ಒಮ್ಮೊಮ್ಮೆ ಉದಾಸೀನವಾಗಿದ್ದು ಬಿಡುತ್ತಿದ್ದ. ಗಂಡ ತನ್ನ ಮಗಳನ್ನು ಪ್ರೀತಿಸುತ್ತಾನೆ... ಎಂಬುದು ಅವಳಿಗೆ ಅಸಹನೀಯ ವಿಷಯವಾಗಿತ್ತು. ಈ ಬಾರಿ ಹೋಗುವಾಗ ಮಗಳನ್ನು ಕರೆದುಕೊಂಡು ಹೋಗಿದ್ದಳು, 'ನಿನ್ನ ಕೆಲಸಗಳ ಮಧ್ಯೆ ಮಗುವ್ಯಾಕೆ ?' ಎಂದ.

'ಅವಳು ನಿಮ್ಮ ಮಗಳು ಮಾತ್ರವಲ್ಲ, ನನ್ನ ಮಗಳು ಹೌದು !' ಎಂದಿದ್ದಳು, ಒರಟಾಗಿ. ಈ ದಿನ ಗಾಯಗೊಂಡ ತನ್ನ ಹಣೆ ಸವರಿ ಆ ಮಗು ಎಷ್ಟು ಮುದ್ದು ಮಾಡುತ್ತಿತ್ತೋ... ಎನಿಸಿತು. ಆದರೆ ಜಗಳವಾಡುತ್ತಿದ್ದ ಆ ಸುಂದರ ಹುಡುಗಿ ತಕ್ಷಣ ಆತಂಕದಿಂದ ತನ್ನ ಸ್ಪಂದಿಸಿ, ತನ್ನ ಕರ್ಚೀಫ್ ಒತ್ತಿ ಹಿಡಿದದ್ದು, ಯಾವ ಬಗೆಯ ಲಜ್ಜೆ, ಬಿನ್ನಾಣ ತೋರದೆ ಹಣೆಯ ಗಾಯ ತೊಳೆದು ಬ್ಯಾಂಡೇಜ್ ಹಾಕಿದ್ದು ಅವನಿಗೆ ಆತಂಕ ಎನಿಸಿತು. ಎಷ್ಟು ಸುಂದರ ಹುಡುಗಿ. ಗ್ರಾಜುಯೇಟ್ ಇದ್ದಾಳೆ. ಶಾರ್ಟ್‌ಹ್ಯಾಂಡ್, ಟೈಪ್‌ರೈಟಿಂಗ್ ಎಲ್ಲಾ ಕಲಿತಿದ್ದಾಳೆ. ತಾಯಿ ಪರವಾಗಿ ಅವಳಿಗೆ ಕೆಲಸ ಕೊಡಬಹುದು. ಆದರೆ ತನ್ನ ಕಂಪನಿಯಲ್ಲಿ ತನಗೇನು ಸ್ವಾತಂತ್ರ್ಯವಿದೆ.

ಅಂಥಾ ಸುಂದರ ಹುಡುಗಿಗೆ ತಾನು ಶಿಫಾರಸ್ ಮಾಡಿ ಕೆಲಸ ಕೊಡಿಸಲು ಹೋದರೆ ಜಯಶ್ರೀ ಉಗ್ರಕಾಳಿಯಾಗುವಳು. ಮಗಳು ಚಿನ್ನಿಯನ್ನು ತಾನು ಪ್ರೀತಿಸಿದರೆ ಅವಳಿಗೆ ಅಸಹನೆ. 'ಚಿಂಟುನ್ಯಾಕೆ ಪ್ರೀತಿಯಿಂದ ಹೀಗೆ ಆಡಿಸಬಾರದು, ಅವನೂ ನಿಮ್ಮ ಮಗನೇ...' ಎಂದಳು.

'ಚಿಂಟೂಗೆ ಅಮ್ಮನೇ ಬೇಕಲ್ಲ' ಎಂದು ನಕ್ಕ.

'ನಾನು ಮತ್ತೆ, ನಿನ್ನ ಹತ್ತಿರ ಬಂದರೆ ಏನು ಸಿಗತ್ತೆ ? ಮಮ್ಮೀನ ಪ್ಲೀಸ್ ಮಾಡಿದರೆ ಆಸ್ತಿ ಕೋಟ್ಯಾಂತರ ರೂಪಾಯಿ ಸಿಗತ್ತೆ' ಎಂದ ಚಿಂಟು.

ಮಗನ ಮಾತು ಕೇಳಿ ದಿಗ್ಭ್ರಾಂತ ನಾದ ; 'ಎಳೇ ಮಗುವಿನ ಮನದಲಿ ಇಂಥಾ ಭಾವನೆ ಬಿತ್ತೋರು ಯಾರು ಜಯಾ ?' ಕೋಪದಿಂದ ಕೇಳಿದ.

ಜಯಶ್ರೀಯು ಮಗನ ಕ್ರಾಪ್ ಮುದ್ದಿನಿಂದ ಕೆದರಾಡಿ - 'ತುಂಟಾ, ಯಾರೋ ನಿನಗಿದೆಲ್ಲಾ ಹೇಳಿದ್ದು ?' ಎಂದಳು.

'ಅಜ್ಜೀನೆ ಹೇಳಿದರು. ಪಪ್ಪಾ ಬಡವರಂತೆ. ನೀನು ಪ್ರೀತಿಸಿ ಮದುವೆ ಆಗಿದ್ದಿಯಂತೆ. ಕಂಪನಿ, ಫ್ಯಾಕ್ಟರಿ ಎಲ್ಲಾ ನಿನ್ನ ಹೆಸರಿನಲಿದೆಯಂತೆ ' ಎಂದ.

'ನಿಮ್ಮ ಪಪ್ಪನಿಗೂ ತಿಂಗಳಿಗೆ ಇಪ್ಪತ್ತೈದು ಸಾವಿರ ರೂ. ಸಂಬಳ ಬರತ್ತೊ?' ಎಂದಳು, ನಗುತ್ತ.

ಮಗನ ಮಾತು ಹೆಮ್ಮೆಯಾಗಿ ಸ್ವೀಕರಿಸಿದಳೇ ವಿನಾ ತನ್ನ ಪತಿಗೆ ಇದರಿಂದ

ನೋವಾಯಿತೆಂದು ತಿಳಿಯಲಿಲ್ಲ. ಲಲಿತಮ್ಮನ ಕೀಳು ಗುಣ, ಸ್ವಭಾವ ಗೊತ್ತಿತ್ತು ಅವನಿಗೆ. ಹೆಂಡತಿಯ ಈ ಅಹಂಕಾರ, ಮಗನ ಉದ್ಧಟತನ, ಲಲಿತಮ್ಮನ ಕೀಳುತನ ಎಲ್ಲದರಿಂದ ಬೇಸತ್ತ ಅವನಿಗೆ ಶಾಂತಿ ಸಿಗುತ್ತಿದ್ದದ್ದು ಆ ಪುಟ್ಟ ಮಗುವಿನಿಂದ. ಒಂದು ವಾರದಿಂದ ಆ ಮಗು ಇಲ್ಲದ್ದು ಭಣ ಭಣಾ ಎನ್ನಿಸಿತ್ತು. ಆ ದಿನವೆಲ್ಲಾ ಹೇಗೋ ಕಳೆದು, ಮಾರನೆಯ ದಿನ ಪತ್ನಿ ಬಂದೊಡನೇ ಕೇಳಿದ, 'ಎಲ್ಲಿ ಚಿನ್ನಿ ?' ಎಂದ.

'ಮುಂಬೈನ ಬೋರ್ಡಿಂಗ್ ಸ್ಕೂಲಿಗೆ ಸೇರ್ಸಿದ್ದೀನಿ' ಎಂದಳು.

'ಜಯಾ ?' ಎಂದು ಕೋಪದಿಂದ ಚೀರಿದ ರಾಜಸಿಂಹ.

'ಆಕಾಶ ಕಿತ್ತು ಬೀಳೋಹಾಗೆ ಅರಚಬೇಡಿ. ಚಿಂಟು ತುಂಬಾ ದುಷ್ಟ. ಅವಳಿಗೆ ಹೊಡೆದು, ಬಡಿದು ಮಾಡೋನಂತೆ, ಅತ್ತೆ ಹೇಳ್ತಾನೆ ಇದ್ದರು. ಅಲ್ಲಿ ವರ್ಷಕ್ಕೆ ನಲವತ್ತು ಸಾವಿರ ರೂಪಾಯಿ ಫೀಸ್. ಫಸ್ಟ್‌ಕ್ಲಾಸ್ ಊಟಾತಿಂಡಿ, ವೈದ್ಯಕೀಯ ವ್ಯವಸ್ಥೆ ಎಲ್ಲಾ ಇದೆ. ಅವಳಿಗೊಬ್ಬ ಪಾಲಕಿ ಇರ್ತಾರೆ, ಶಾಲೆಯಲ್ಲಿ ಹನ್ನೆರಡು ಜನ ವಿದ್ಯಾರ್ಥಿನಿಯರು. ಇಂಗ್ಲೀಷ್. ಫ್ರೆಂಚ್, ಹಿಂದಿ ಮೂರು ಭಾಷೆ ಕಲಿಸ್ತಾರೆ. ನನ್ನ ಮಗಳು ಒಬ್ಬ ಇಂದಿರಾಗಾಂಧಿ ಆಗಬೇಕೂಂತ ನನ್ನ ಆಸೆ. ಇಲ್ಲಿ ನಮ್ಮಿಬ್ಬರಿಗೂ ಅವಳನ್ನ ನೋಡಿಕೊಳ್ಳಿಕ್ಕೆ ಪುರುಸೊತ್ತಿಲ್ಲ. ಶಾಲೆ ತಪ್ಪಿಸ್ತಿದ್ದಳು. ಮಾರ್ಕ್ಸ್‌ಕಾರ್ಡನಲ್ಲಿ ಹನ್ನೆರಡನೆಯ ರ್‍ಯಾಂಕ್' ಎಂದಳು.

'ಆರು ವರ್ಷದ ಮಗು ಅದು. ಫಸ್ಟ್ ಸ್ಟ್ಯಾಂಡರ್ಡ್' ಎಂದ. ಅವನ ದನಿಯಲ್ಲಿ ವ್ಯಥೆ ತುಂಬಿತ್ತು.

'ಗಿಡವಾದಾಗ ಬಗ್ಗದೇ ಇದ್ದದ್ದು, ಮರವಾದಾಗ ಬಗ್ಗಲ್ಲ ಕಣ್ರೀ. ನಮ್ಮ ಅತಿ ಮುದ್ದು ಮಕ್ಕಳನ್ನ ಹಾಳು ಮಾಡಬಾರದು' ಎಂದು ನೀತಿ ಹೇಳಿದಳು.

'ಅಷ್ಟು ನೀತಿ ಹೇಳೋಳು, ನಿನ್ನ ಚಿಂಟುನ್ಯಾಕೆ ಅಲ್ಲಿ ಸೇರಿಸಬಾರದು. ನಿಜವಾಗಿ ತುಂಟ, ಉದ್ಧಟಾ ಇರೋನು ಅವನು' ಎಂದ. ಅವಳು ನಿರಾಶವಾಗಿ-

'ಸದ್ಯಕ್ಕೆ ಫಸ್ಟರ್‌ರ್‍ಯಾಂಕ್ ಇದ್ದಾನೆ, ಅವನು ಫಸ್ಟ್‌ರ್‍ಯಾಂಕ್ ತಪ್ಪಿಸಿಕೊಂಡು ದಡ್ಡನಾದರೆ ಅವನನ್ನು ಎಲ್ಲಾದರೂ ಒಳ್ಳೇ ಬೋರ್ಡಿಂಗ್ ಶಾಲೆಗೆ ಹಾಕ್ತೀನಿ' ಎಂದಳು.

ಆ ರಾತ್ರಿ ಅವನು ತುಂಬಾ ನೀರಸವಾಗಿದ್ದ. ಅವನ ಮನಸ್ಸು ಶೂನ್ಯವಾಗಿತ್ತು. ತನ್ನ ಕಂದಾ... ತನ್ನ ಮಗು ಅದು. ಹೋಗಿ ಕರೆತರಬೇಕು ಏನಿಸುತ್ತಿತ್ತು. ಆದರೆ ಈ ಸಂಸಾರದಲ್ಲಿ ತಮ್ಮ ಮಾತಿಗೆ ಬೆಲೆ ಏನಿದೆ ? ಎಲ್ಲಾ ಅವಳದೆ ಸಾಮ್ರಾಜ್ಯ. ಅವಳದೇ ತೀರ್ಪು... ಅವಳದೇ ನಿರ್ಧಾರ.

ಬೆಂಕಿಯಲ್ಲಿ ಬಿದ್ದ ಹುಳದಂತೆ ಅವನು ಚಡಪಡಿಸುವ ರೀತಿ ಅವನ ಹಣೆಯ

ಮೇಲೆ ಕೈಯಿಟ್ಟು ಅವಳು ಹೇಳಿದಳು. 'ಪ್ರೀತಿ ಅಂದರೆ ಏನೂಂತ ಆಗಾಗ ನೀವು ಕೇಳ್ತಿರಲ್ಲ. ಆಗಾಗ ಹೇಗೆ ಪ್ರೀತಿಸಬೇಕೂಂತೀರಲ್ಲ. ನನಗಾಗಿ ಎಂದಾದರೂ ಹೀಗೆ ಹಂಬಲಿಸ್ತಿದ್ದಿರಾ ? ನಾನು ನಿಮಗಾಗಿ ಚಡಪಡಿಸ್ತಾ... ಶೂನ್ಯ ಹೃದಯದಿಂದ ಕಾಯ್ತೀನಿ. ಇಲ್ಲಿ ಮಗಳ ಜೊತೆ ಆಡ್ತ ಆರಾಮವಾಗಿರ್ತೀರಿ. ನಾನೇ ಮುದುಕಿ ಆಗಿದ್ದೀನಾ ? ಕುರೂಪಿನಾ ? ಅವಿದ್ಯಾವಂತಳಾ ? ಬಡವಳಾ...? ನನ್ನ ಕಂಡ್ರೆ ಹೇಗೆ ತಿರಸ್ಕಾರ ಮಾಡ್ತೀರಿ ? ಆ ಮಗು ದೂರ ಹೋದ ಮೇಲಾದರೂ ಮಗುವಿನ ತಾಯಿ ನಿಮಗೆ ಬೇಗಾಕುತ್ತಾಳೇನೊ ?' ಎಂದಳು. ಅವನು ನಿಟ್ಟುಸಿರಿಟ್ಟು 'ನಿನ್ನ ಹೇಗೆ ಪ್ರೀತಿಸಬೇಕೂ ಒಂದು ಟೈಂಟೇಬಲ್ ಹಾಕಿಕೊಡು. ಕೆಲವು ನಿನಗೆ ಬೇಕಾದ ಡೈಲಾಗ್ಸ್ ಹಾಕಿಕೊಡು, ಅದನ್ನೇ ಜಪ ಮಾಡ್ತ ಕೂತಿರ್ತೀನಿ' ಎಂದ.

'ಪ್ರೀತಿ ಹೇಳಿಕೊಟ್ರೆ ಬರಲ್ಲ. ಹೃದಯದಿಂದ, ಮನಸ್ಸಿನಿಂದ ಬರಬೇಕು. ನೋಡಿ ಬಾಂಬೆಯಿಂದ ಎಂಟು ಲಕ್ಷ ರೂ. ಕೊಟ್ಟು ಈ ವಜ್ರದ ಹಾರ ತಂದಿದ್ದೀನಿ. ನೀವು ಇದನ್ನ ನನಗೇ ಪ್ರಸೆಂಟ್ ಮಾಡಬೇಕು' ಎಂದಳು.

'ಈ ಕಳ್ಳಾಟ ಏಕೆ ? ನಮ್ಮ ತಾಯಿಗೆ ಎಲ್ಲಿ ಹಣ ಕೊಡ್ತಿನೋಂತ ಭದ್ರ ಮಾಡ್ತಿ. ತಿಂಗಳಿಗೆ ಹತ್ತು ಸಾವಿರ ನೆಕ್ಲೆಸಿಗೆ ಕಟ್ತೀನಿ. ಹದಿನೈದು ಸಾವಿರ ನನ್ನ ಸ್ವತಂತ್ರ' ಎಂದ. 'ಊಟ ತಿಂಡಿ, ವಸತಿ ಎಲ್ಲಾ ಇಲ್ಲಿದೆ. ಓಡಾಡ್ಲಿಕ್ಕೆ ಕಾರು ಇದೆ. ಡ್ರೈವರ್ ಕಂಪನಿಯಿಂದ, ಮನೆ, ಮನೆಯಿಂದ ಕಂಪನಿಗೆ ಕರಕೊಂಡ್ಬರ್ತಾನೆ. ಅಪ್ಸರೆಯಂಥ ಹೆಂಡ್ತಿ ನಾನಿದ್ದೀನಿ. ನಿಮಗೆ ದುಡ್ಡು ಏಕೆ ? ಕೈಲಿ ದುಡ್ಡಿದ್ರೆ ಬೇರೆ ಹುಡುಗಿಯರ ಮೇಲೆ ಮನಸ್ಸು ಹರಿಯುತ್ತೆ, ಮನೆ ಹೆಂಡತಿಯಲ್ಲಿ ಹಲವು ದುರ್ಗುಣ ಎದ್ದು ಕಾಣತ್ತೆ' ಎಂದಳು.

'ಏಕೋ ನನಗೆ ಹೆಂಗಸರೂಂದ್ರೆ ಜುಗುಪ್ಸೆ ಹುಟ್ಟಿದೆ. ಕೈಯಲ್ಲಿ ದುಡ್ಡಿದೆ ಅಂತ ಬರೋ ಹೆಂಗಸರನ್ನ ನಾನು ಖಂಡಿತ ಪ್ರೀತಿಸಲ್ಲ.'

'ಹಾಗಿದ್ರೆ ಇನ್ನ ಹತ್ತು ವರ್ಷ ನಿಮಗೆ ದುಡ್ಡು ಕಾಸಿನ ಸ್ವತಂತ್ರ ಕೊಡಲ್ಲ. ನಲವತ್ತಾರಾದ ಮೇಲೆ ನೀವು ಮುದುಕರೂಂತ ನಾನು ಡೈವೋರ್ಸ್ ಮಾಡ್ತೀನಿ. ಆಗ ಯಾವುದಾದರೂ ಹುಡುಗಿಯ ಹಿಂದೆ ಹೋಗಿ' ಎಂದಳು.

'ಅಂತು ನನ್ನ ಕೈಯಲ್ಲಿ ದುಡ್ಡಿದ್ರೆ ಹುಡುಗಿಯ ಹಿಂದೆ ಹೋಗ್ತೀನಿ ಅಂತ ನಿನ್ನ ಭಯ. ಅದಕ್ಕೆ ಒಡವೆಯ ನಾಟಕ ಆಡ್ತಿ. ನಾನೇನೋ ಅಮ್ಮನ ಮೇಲಿನ ಜಲಸಿಗೆ ಹಾಗೆ ಆಡ್ತಿ ಅಂದ್ಕೊಂಡೆ' ಎಂದ.

'ಒಟ್ಟಿನಲ್ಲಿ ಈ ನೆಕ್ಲೆಸ್ ನಿಮ್ಮ ಕಡೇದು' ಎಂದಳು.

'ಸರಿ... ಒಪ್ಪಿದ್ದೇನೆ' ಎಂದ. ಮೂರು ದಿನ ಅವಳು ಊರಲ್ಲಿದ್ದಳು. ನಂತರ ಮುಂಬೈಗೆ ಹೊರಟಳು. ಅಲ್ಲಿಂದ ಅವಳು ಅಮೆರಿಕಾಗೆ ಹೋಗಿ ಬರುವುದು

ಮೂರು ತಿಂಗಳಾಗುತ್ತಿತ್ತು.

'ನಿಮ್ಮ ಮಗಳ ಬಗ್ಗೆ ಚಿಂತೆ ಮಾಡಬೇಡಿ. ನಮ್ಮಮ್ಮ ಬಾಂಬೇಲಿ ಇರೋದಲ್ಲವಾ? ಅಣ್ಣನ ಕಂಪನೀಲಿ ಈಗ ಆನರರಿ ವರ್ಕರ್. ವಾರವಾರ ಹೋಗಿ ಮಾತಾಡಿಸಿ ಬರ್‍ತಾಳೆ' ಎಂದಳು.

'ತಾಯಿ ಹಾಗೆ ನನ್ನ ಬದುಕು ಶಾಪದ್ದೇನೊ? ಎಷ್ಟು ಪ್ರೀತಿಸಿ ವಿವಾಹವಾದರೆ ? ಇಬ್ಬರದು ತುಂಬ ಶ್ರೀಮಂತ ಮನೆತನವಾದರೆ ಪ್ರೈಡ್ ಅಂಡ್ ಪ್ರೀಜುಡಿಸ್ ಆಗತ್ತೆ ಅಂತ... ಶ್ರೀಮಂತಿಕೇಲಿ ನನಗಿಂತ ಕಮ್ಮಿ ಇರೋರನ್ನ ಆರಿಸಿದೆ. ಆದರೆ ನಿಮ್ಮ ಅಹಂಕಾರ, ನಿರಾಸಕ್ತಿ ನೋಡಿದರೆ ನಮ್ಮ ತಂದೆ, ನಮ್ಮ ತಾಯಿಗೆ ಹೀಗೆ ಮಾಡ್ತಿದ್ದದ್ದು ನೆನಪಾಗುತ್ತೆ. ಅಮ್ಮನಿಗೆ ತವರುಮನೆ ಕಡೆಯಿಂದ ಬಂದ ಹತ್ತುಲಕ್ಷ ಆಸ್ತಿ ಇತ್ತು. ಅಪ್ಪನಿಂದ ದೂರಾಗಿ, ಬಾಂಬೇಲಿ ನಮ್ಮ ದೊಡ್ಡಪ್ಪನ ಕಂಪನೀಲಿ ಪಾಲುದಾರಳಾಗಿದ ಸೇರಿದಳು. ಅಮ್ಮ ಪೂರ್ತಿ ದೂರಾದ ಮೇಲೆ ಅಪ್ಪನಿಗೆ ಎಂಥಾ ವಸ್ತೂನ್ನ ಕಳೆದುಕೊಂಡೆ ಅಂತ ಅರಿವಾಯ್ತು. ರೂಪದಲ್ಲಿ, ಶ್ರೀಮಂತಿಕೆಯಲ್ಲಿ, ಬುದ್ಧಿವಂತಿಕೆಯಲ್ಲಿ, ವಿದ್ಯೆಯಲ್ಲಿ ಅಮ್ಮನಿಗೆ ಸರಿಸಾಟಿಯಾದ ಹೆಣ್ಣು ಯಾರೂ ಇರಲಿಲ್ಲ. ಆಮೇಲೆ ಅಮ್ಮನಿಗಾಗಿ ಹಂಬಲಿಸಿ ನಿರಾಶನಾಗಿ ಡ್ರಂಕರ್ಡ್ ಆದರು. ಫಿಲಂ ಆಕ್ಟರ್ ಗುರುದತ್ ಕಥೆ ಗೊತ್ತ ನಿಮಗೆ ? ಗೀತಾದತ್ ಎಂಥಾ ಚೆಲುವೆ? ಎಂಥಾ ಕಂಠಾ ? ಅಂಥಾ ಚೆಲುವೆಯರಿಗೆ ತಮ್ಮ ಗಂಡ ತಮ್ಮನ್ನ ನೆಗ್ಲೆಕ್ಟ್ ಮಾಡಿದರೆ ಸಹಿಸ್ಲಿಕ್ಕಾಗತ್ತಾ? ಏಕಪತ್ನಿವ್ರತಸ್ಥನಾಗಿ, ತನ್ನ ಗಂಡ ತನ್ನ ಚೆಲುವನ್ನು ಆರಾಧಿಸಲಿ ಅಂತ ಆಸೆ ಇರತ್ತೆ. ಗಂಡನ ದ್ವಿಮುಖ ನೀತಿ ಸಹಿಸ್ತಾ ಅಂಥ ಪ್ರತಿಭಾವಂತೆಯರು, ಸಾಮಾನ್ಯ ಗೃಹಿಣಿಯ ಹಾಗೆ ಬಾಳಲಾರಳು' ಎಂದು ಭಾಷಣ ಬಿಗಿದಳು.

'ನೀನು ರೂಪವತಿ, ವಿದ್ಯಾವಂತೆ, ಪ್ರತಿಭಾಶಾಲಿ, ಆದರೆ ನಿನ್ನ ಅತೃಪ್ತಿ, ಆರಾಧನೆ ಸಾಲದೂಂತ ಈ ಬಗೆಯ ದಾಹಕ್ಕೆ ನಾನು ಬಲಿಪಶು ಆಗ್ತಿದ್ದೀನಿ. ಪ್ರತಿರಾತ್ರಿ ನಾನು ವಂದಿಮಾಗದರ ಹಾಗೆ ನಿನ್ನ ಗುಣ ರೂಪ ಬಣ್ಣಿಸಿ, ಕವನ ಹಾಡಲೇನು ?' ಎಂದ.

'ಏಕೆ ಹಾಡಬಾರದು? ಅದಕ್ಕಿಂತ ಬೇರೆ ಕೆಲಸ ಏನಿದೆ ನಿಮಗೆ ? ಬೇರೆ ಗೃಹಸ್ಥರ ಹಾಗೆ ಸಂಸಾರದ ಚಿಂತೆ ಇದೆಯಾ ? ಅಕ್ಕಿ ಬೇಳೆ ತರಬೇಕಾ? ಹಣದ ಕೊರತೆ, ಬಡತನದ ಚಿಂತೇನಾ? ಆಫೀಸಲ್ಲಿ ಮೇಲಧಿಕಾರಿ ಒತ್ತಡಾನಾ ? ನನ್ನಂಥಾ ಹೆಂಡ್ತಿ ಕೈ ಹಿಡಿದದ್ದರಿಂದ ಬದುಕು ಹೂವಿನ ಹಾಸಿಗೆ ಆಗಿದೆ ಕ್ಯಾಡಿ ಲಾಕ್ ಕಾರಿನಲ್ಲಿ ಕೂತು ಆಫೀಸಿಗೆ ಹೋಗಿ ಹವಾನಿಯಂತ್ರಿತ ಕೋಣೇಲಿ ಕೂತು, ಮಾಲಿಕರ ಅಳಿಯ ಅಂತ ಎಲ್ಲರಿಂದ ಗೌರವ ಪಡೆದು, ಸ್ವತಂತ್ರವಾಗಿ ಒಂದಿಷ್ಟು ಕೆಲಸ ಮಾಡಿ ಇಪ್ಪತ್ತೈದು ಸಾವಿರ ರೂ. ಎಣಿಸ್ತಿದ್ದೀರಿ' ಎಂದಳು.

ಸ್ವಾಭಿಮಾನಿಯಾದ ಅವನಿಗೆ ಮಡದಿಯ ಈ ಬಗೆಯ ಸತತ ದೂಷಣೆ, ಘರ್ಷಣೆ, ಬೇಸರ ಹಾಗೂ ಜುಗುಪ್ಸೆಯೊಡನೆ ಮನಸ್ಸು ಘಾಸಿಗೊಳಿಸುತ್ತಿದ್ದವು. ನನಗಿಂತ ನೀವು ಎಲ್ಲಾ ವಿಧದಲ್ಲಿ ಕಡಿಮೆ, ನಾನು ನಿಮ್ಮನ್ನು ವಿವಾಹವಾದದ್ದೇ ಒಂದು ಮಹಾಭಾಗ್ಯ ಎಂದು ಆರಾಧಿಸಿಕೊಂಡಿರಿ ಎಂಬ ಅವಳ ಹಂಗಣೆಯಿಂದ ದೂರಾಗಿ ಎಲ್ಲಾದರೂ ಹೊರಟು ಹೋಗಬೇಕೆನಿಸುತ್ತಿತ್ತು. ಆತ್ಮೀಯತೆಯೇ ಇಲ್ಲದ ಈ ದಾಂಪತ್ಯ ಜೀವನಕ್ಕೆ ಅರ್ಥವೇನು?

ಇವರಪ್ಪನಂತೆ ನಾನು ಪರಸ್ತ್ರೀ ವ್ಯಾಮೋಹಿ ಅಲ್ಲ. ಪರಸ್ತ್ರೀ ಹಿಂದೆ ಸುತ್ತುತ್ತ ಪತ್ನಿಯ ಮನಕ್ಕೆ ಬೇಸರ ಹಿಡಿಸಿದ್ದೇನೆಯೆ? ಒಂದು ಕ್ಷಣ ಮನಃಶ್ಯಾಂತಿ ಇಲ್ಲದೆ ವರ್ತಿಸುವ ಅವಳ ರೀತಿ ಅವನ ಬದುಕಿಗೆ ಶಾಪವಾಗಿತ್ತು. ಏನು ಕಡಿಮೆ ಆಗಿದೆ ತಮಗೆ ? ಬಂಗಲೆ... ಬಂಗಲೆಯಲ್ಲಿ ನಾಲ್ಕು ಕಾರು, ತಮ್ಮ ಕೈ ಕೆಳಗಿನ ಅಧಿಕಾರಿ ಗಳಿಗೂ ಕಂಪನಿ ಕಡೆಯಿಂದ ಕಾರು ಕೊಟ್ಟಿದ್ದೇವೆ. ಕಂಪನಿಯ ಒಡತಿಯಾದ ಅವಳನ್ನು ತಾನು ವಿವಾಹವಾಗಬಾರದಿತ್ತು. ತನ್ನ ಮನ ಅರಿತ ಒಂದು ಮುದ್ದಾದ ಹುಡುಗಿ ತನ್ನ ಪತ್ನಿ ಆಗಿ, ತನ್ನ ಬದುಕನ್ನು ಹಿತಗೊಳಿಸಿದ್ದರೆ ಅವಳನ್ನು ರಾಣಿ ಹಾಗೆ ಇಡುವ ಸೌಲಭ್ಯ ತನಗಿತ್ತು.

ಈ ಅತಿ ಸೌಂದರ್ಯದ ಪತ್ನಿ ತನ್ನ ಪಾಲಿಗೆ ಅಹಿತವಾಗಿದ್ದಾಳೆ. ಅವಳ ಅತಿ ಶ್ರೀಮಂತಿಕೆ ತನ್ನ ಬದುಕನ್ನು ಶಾಪವಾಗಿ ಕಾಡುತ್ತಿದೆ. ತನ್ನ ಕೈಯಲ್ಲಿ ಹಣ ಉಳಿದರೆ ಪರಸ್ತ್ರೀಯ ಕಡೆ ನೋಡುತ್ತೇನೇನೋ ಎಂದು ಹೆದರಿ ಒಡವೆಗಳ ರೂಪದಲ್ಲಿ ಎಲ್ಲಾ ಸೆಳೆದುಕೊಳ್ಳುತ್ತಾಳೆ.

ಅದು ಪ್ರೀತಿಯ ಮೋಡಿ ಎಂದು ಭಾವಿಸಿದ್ದೆ ತಾನು, ಆದರೆ ಅದು ಪ್ರೀತಿಯ ನಾಟಕ.

'ನಾನು ಲಕ್ಷ ಲಕ್ಷ ಸಂಪಾದಿಸಿದರೂ, ನಾವು ಕೊಟ್ಟು ಉಡುಗೊರೆಗಳು ನನಗೆ ಅಮೂಲ್ಯ. ಪ್ರತಿವರ್ಷ ಬಾಂಬೆಗೆ ಹೋದಾಗ ಅಮ್ಮನಿಗೆ ಎಲ್ಲಾ ತೋರಿಸ್ತೀನಿ. ನೀನು ಪುಣ್ಯ ಮಾಡಿದ್ದಿ. ಒಳ್ಳೇ ಪ್ರೀತಿಸುವ ಗಂಡ ಸಿಕ್ಕಿದ್ದಾನೆ ಅಂತಾರೆ' ಎಂದು ಆಗೆಲ್ಲಾ ಮರುಳು ಮಾಡುತ್ತಿದ್ದಳು.

'ನಿನ್ನನ್ನು ಪ್ರೀತಿಸದೆ ನಾನು ಯಾರನ್ನು ಪ್ರೀತಿಸಬೇಕು?' ಎಂದ ಒಮ್ಮೆ ಆತ್ಮೀಯತೆಯಿಂದ.

'ಹಾಗಲ್ಲ. ಒಂದು ರೂಪಾಯಿ ಪಾಕೆಟ್ ಮನಿಗೆ ಸಹ ಉಳಿಸದೇ ಎಲ್ಲಾ ಹಣ ಕಂಪನಿ ಲಾಸಕ್ಕೆ ಕಟ್ಟೀರಲ್ಲ. ನಿಜವಾಗಿ ಅದು ತ್ಯಾಗ. ಕಾಂಜಿಪಿಂಜಿ ಒಡವೆ ನಾನು ಎಡಗೈಲಿಯೂ ಮುಟ್ಟಲ್ಲ. ನನ್ನ ಒಂದೊಂದು ಒಡವೆ ನಿಮ್ಮ ಎರಡು ವರ್ಷದ ಸಂಬಳ ನುಂಗಿ ಹಾಕತ್ತೆ' ಎನ್ನುತ್ತಿದ್ದಳು.

'ಇರಲಿ ಬಿಡು. ನನಗೆ ನನ್ನದಾದ ಖರ್ಚು ಏನಿದೆ? ವಾರ ವಾರ ಫ್ಯಾಮಿಲಿ ಡಾಕ್ಟರ್ ಬರ್‍ತಾರೆ. ಕೆಮ್ಮಿದರೆ, ಅಕಳಿಸಿದರೆ ಡಾಕ್ಟರ್ ಚೆಕಪ್ ಕಂಪನಿಗೆ ಹೋಗಿ ಬರ್‍ಲಿಕ್ಕೆ ಕಾರು, ಅಲ್ಲಿ ತಿಂಡಿ ತೀರ್ಥ, ಕಾಫಿ ಸರಬರಾಜು, ನನ್ನದಾದ ಸಂಸಾರದ ಹೊರೆ ಏನಿದೆ ?'

ಎಂದು ವರ್ಷಗಳು ಉರುಳಿದ ಮೇಲೆ ಅವನಿಗೆ ಇದು ಚಿನ್ನದ ಮೇಲೆ ಅವನಿಗೆ ಇದು ಚಿನ್ನದ ಪಂಜರ ಎನಿಸತೊಡಗಿತ್ತು. ತನ್ನ ಅಂದ ಚೆಂದ ನೋಡಿ ಅವಳು ಸಾಕಿದ ಗಂಡು ಹಕ್ಕಿ ತಾನು ಎನಿಸಿತ್ತು. ಆಗಲೇ ಅವರಲ್ಲಿ ಚಕಮಕಿ ಪ್ರಾರಂಭ ಆದದ್ದು. ಕೂದಲಿಗೆ ಹೇರ್ ಡೈ ಹಾಕಿ, ಹೊಟ್ಟೆ ಬರ್‍ತಿದೆ, ವ್ಯಾಯಾಮ ಮಾಡೋಣ ಎಂದು ಅವಳ ಚಿತ್ರ ವಿಚಿತ್ರ ಸಲಹೆಗಳು.

'ಒಂದು ಏಜ್ ಕಳೆದ ಮೇಲೂ ಯೌವ್ವನ ಉಳಿಸಿಕೊಳ್ಳಲೇಬೇಕು ಅನ್ನೋ ಹಠ ಏಕೆ ? ಈಗ ನಾನು ಎರಡು ಮಕ್ಕಳ ತಂದೆ. ನವಯುವಕ ಅಂತ ಲೋಕದೆದುರು ಪೋಸ್ ಕೊಡಬೇಕೇನು?' ಎಂದ.

'ಮಧ್ಯಮ ವರ್ಗದವರ ವೈರಾಗ್ಯದ ಆ ಮಾತು ನಾನು ಒಪ್ಪಲ್ಲ. ನೀವು ವಿವಾಹ ಆಗಿರೋದು ಕೋಟ್ಯಾಧೀಶಳಾದ ನನ್ನನ್ನ. ನಿಮ್ಮ ರೂಪ ನೋಡೆ ನಾನು ಮೋಹಿಸಿದ್ದು. ಆ ರೂಪಾ ನೀವು ಎಂದೆಂದೂ ಉಳಿಸಿಕೊಳ್ಳಬೇಕು. ನಾನು ಹೇಳಿದ್ಹಂಗೆ ನೀವು ಕೇಳಬೇಕು' ಎಂದಳು. ಅವನು ಬೇಸರದಿಂದ–

'ನೀನು ಸಾಕಿದ ಒಂದು ಪ್ರಾಣಿ ಅಂತ ನನ್ನ ಮೇಲೆ ಅಧಿಕಾರ ಚಲಾಯಿಸಬೇಡ. ನನಗೆ ಅವರಲೆಲ್ಲಾ ಆಸಕ್ತಿ ಇಲ್ಲ' ಎಂದುಬಿಟ್ಟ. ಅವಳು ಹಠದಿಂದ. ತನ್ನ ಕಂಪನಿ ಪಾರ್ಟಿಯ ಯಾವುದೋ ಫೋಟೋ ತೋರಿಸಿ- 'ನೋಡಿ ಇವರು ಮುಂಬೈನ ದೊಡ್ಡ ಉದ್ಯಮಿ. ವರ್ಷಕ್ಕೆ ಇಪ್ಪತ್ತು ಲಕ್ಷ ನಮ್ಮ ಕಂಪನಿ ಉತ್ಪನ್ನಗಳನ್ನ ಖರೀದಿಸ್ತಾರೆ. ಸಾರಂಗಪಾಣಿ ಅಂತ ಇವರ ಹೆಸರು. ಇವರಿಗೆ ಎಷ್ಟು ವರ್ಷ ಇರಬಹುದು ಹೇಳಿ ?' ಎಂದಳು.

'ಗೊತ್ತಿಲ್ಲ' ಎಂದ ನಿರಾಸಕ್ತಿಯಿಂದ. ಅವಳು ಹಠದಿಂದ 'ಎಲ್ಲದರಲ್ಲೂ ನಿರಾಸಕ್ತಿ ನಿಮಗೆ ಈ ನಡುವೆ, ನೋಡಿ ಅವರಿಗೆ ಅರವತ್ತು ವರ್ಷ. [illegible] ಹೋಗಿ ಮುಖದ ಸುಕ್ಕುಗಳಿಗೆ ಸಹ ಚಿಕಿತ್ಸೆ ತಗೋತಾರೆ. ಫಿಗರ್ [illegible] ಮೈನ್‌ಟೇನ್ ಮಾಡಿದ್ದಾರೆ. ನೋಡಿದರೆ ಮೂವತ್ತೈದರ ಮೇಲೆ [illegible]' ಎಂದು ಏನೇನೋ ಹೇಳಿದಳು.

'ಸರಿ, ಅಷ್ಟೆಲ್ಲಾ ಜಾಗರೂಕತೆಯಿಂದ ಅತ್ತ ರೂಪ [illegible] ಅವರಿಗೆ ಅರುವತ್ತಾಗಿದೆ ಅಂತ ನಿಮಗೆಲ್ಲರಿಗೆ ಗೊತ್ತಾಗಿದೆಯಲ್ಲ, [illegible] ಉಳಿದಿದ್ದೇನು ?' ಎಂದ.

ಅವಳು ಕೋಪದಿಂದ 'ನಿಮ್ಮದೆಲ್ಲಾ ಇಂಥಾ ವಿತಂಡವಾದವೆ, ಅರುವತ್ತಾದರೂ ಹೇಗಿದ್ದೀರಿ? ಅಂತ ಎಲ್ಲರೂ ಅವರನ್ನ ಹೇಗೆ ಅಪ್ರಿಷಿಯೇಟ್ ಮಾಡ್ತಾರೆ ಗೊತ್ತ?' ಎಂದು ಅದರ ಬಗ್ಗೆ ವರ್ಣಿಸಿದಳು.

ಅವನು ಉದಾಸೀನನಾಗಿ ಸುಮ್ಮನಿದ್ದ. ದಿನದಿನಕ್ಕೆ ಇಬ್ಬರಲ್ಲಿ ವಿರಸ ಹೆಚ್ಚುತ್ತಲೇ ಇದೆ. ಅವಳ ಅಧಿಕಾರದ ಸ್ವಭಾವ ತನ್ನ ಮೇಲೆ ಹಕ್ಕು ಚಲಾಯಿಸುವುದು ತನಗೆ ಅಸಹನೀಯವಾಗಿದೆ. ಆ ದಿನ ರಜವಿತ್ತು. ಹಣೆಯ ಚುರುಚುರು ಗಾಯದ ಉರಿ. ಜೊತೆಗೆ ಗಾಯದ ಉರಿ. ಜೊತೆಗೆ ಮನಸ್ಸಿನ ಬೇಗುದಿ.

ಎದ್ದು ಡೈನಿಂಗ್ ಹಾಲಿಗೆ ಬಂದು ಒಂಟಿಯಾಗಿ ಊಟದ ಶಾಸ್ತ್ರ ಮಾಡಿದ. ನಂತರ ಹೊರಗೆ ಬಂದ.

ಕಾರು ಡ್ರೈವರ್‌ಗಳು ಕಟ್ಟೆಮೇಲೆ ಕೂತು ಹರಟೆ ಹೊಡೆಯುತ್ತಿದ್ದರು.

'ಸಲೀಮ್ ಕಾರು ತಗೊ, ಮೈಸೂರಿಗೆ ಹೋಗ್ಬೇಕು' ಎಂದಾಗ ಸಲೀಮ್ ಡಿಬಂದ.

ಕಾರು ಮೈಸೂರು ತಲುಪಿತು. ಮನೆಯ ಮುಂದೆ ಈಗ ಕಾರು ಬಿಡಲು ಗವಿತ್ತು. ಆರಂಭದ ಎರಡು ವರ್ಷ ತಾನು ತಾಯಿಗೆ ನಾಲ್ಕಾರು ಲಕ್ಷ ಸಹಾಯ ತಿದ್ದ. ಆದರೆ ಈಗ ಎಂಟು ವರ್ಷದಿಂದ ಏನೂ ಸಹಾಯ ಮಾಡಿಲ್ಲ. ಆದರೆ ಮುಂದುವರಿದಿದ್ದಾಳೆ.

ಪಾರದಲ್ಲಿ ಚೆನ್ನಾಗಿ ಲಾಭ ಬಂದು ಈ ಎಂಟು ವರ್ಷದಲ್ಲಿ ಮಹಡಿಯ ಮನೆ ಆಗಿದೆ.

ಮುಂದೆ ಅವನು ಯಾವುದೂ ಮುಚ್ಚಿಟ್ಟುಕೊಳ್ಳುತ್ತಿರಲಿಲ್ಲ. 'ಈ

ಮ್ಮ. ನಿನಗಂತು ಏನೂ ಕೊಡುವ

ು ಕಾಸಿನ ಸ್ವಾತಂತ್ರ್ಯವಿಲ್ಲ' ಎಂದ.

ವ್ಯಾಪಾರ ವಹಿವಾಟು ಜೋರಾದರೆ

ಎಸ, ಅವನ ಇಬ್ಬರು ಅಳಿಯಂದಿರು

' ಎಂದಿದ್ದರಾಕೆ.

ತಣಿಸಿ ಅವಳನ್ನ ಪ್ರೀತಿಯಿಂದ

ಾಡಬೇಡ' ಎಂದು ಮಗನಿಗೆ ಬುದ್ಧಿ

ಪ್ರೀತಿ... ಅವಳ ಪ್ರೀತಿಯ ದಾಹಕ್ಕೆ

ದ ಹೊಸತರಲ್ಲಿ ಹತ್ತು ವರ್ಷದ

ಗೆ ನನ್ನ ಮೇಲೆ ಮೊದಲಿದ್ದ ಪ್ರೀತಿ

ಆಕ್ಷೇಪಿಸ್ತಾಳೆ' ಎಂದು ಹಲವಾರು

ಘಟನೆ ಹೇಳಿದ್ದ.

'ಇರ್ಲಿಬಿಡು, ಈ ಬಂಗಾರದ ಬೊಂಬೆ ಇದ್ಯಲ್ಲ... ಇದನ್ನ ನೋಡಿಕೊಂಡು ಎಲ್ಲಾ ಮರೆತುಬಿಡು' ಎಂದರು.

'ಸ್ವಲ್ಪ ನನಗೆ ಮನಃಶಾಂತಿ ಇರೋದು ಈ ಕಂದನಿಂದ...' ಎಂದಿದ್ದ. ಆದರೆ ಈ ಬಾರಿ ಮಗ ಒಂಟಿಯಾಗಿ ಬಂದಾಗ ಆಕೆಗೆ ಆಶ್ಚರ್ಯವಾಯಿತು.

'ಚಿನ್ನಿ ಎಲ್ಲಿ, ರಾಜು...?' ಎಂದರು.

ಅವನು ನಿಟ್ಟುಸಿರಿಟ್ಟು 'ಚಿನ್ನೀನ ಬಾಂಬೆಯ ಒಂದು ಬೋರ್ಡಿಂಗ್ ಸ್ಕೂಲಿಗೆ ಸೇರಿಸಿಬಿಟ್ಲಮ್ಮ' ಎಂದ.

ಆಕೆ ದಿಗ್ಭ್ರಾಂತರಾಗಿ 'ಅಷ್ಟು ಪುಟ್ಟ ಮಗೂನ್ನ ಈಗಲೇ ಬೋರ್ಡಿಂಗ್ ಶಾಲೆಗೆ ಬಿಡೋಂಥಾದ್ದೇನಾಗಿತ್ತಮ್ಮ..?' ಎಂದರು.

'ನಿನ್ನ ಸೊಸೆಗೆ ಯಾರು ಬುದ್ಧಿ ಹೇಳಬೇಕಮ್ಮ? ಗಂಟಲೊಳಗಿನ ಬಿಸಿತುಪ್ಪ ವಾಗಿ ಕಾಡ್ತ ಇದ್ದಾಳೆ' ಎಂದ.

'ಸಾಬ್, ಆ ಮಗು ಬಾಂಬೇ ಸೇರಬೇಕಾದರೆ ನಾನೇ ಕಾರಣ. ನನ್ನ ಕ್ಷಮಿಸಿ' ಹಿಂದಿನಿಂದ ಬಂದ ಸಲೀಮ್ ಅವರಿಬ್ಬರಿಗೆ ನಮಸ್ಕರಿಸಿ ಅಲ್ಲೇ ಕುಳಿತ.

'ಏನು ವಿಷಯ ಸಲೀಮ್?' ವನಜಮ್ಮ ಅಚ್ಚರಿಯಿಂದ ಕೇಳಿದರು. ಆಕೆ ಪ್ರತಿಸಲ ತಮ್ಮ ಮನೆಯ ರುಚಿಯಾದ ಅಡಿಗೆ ಕೈಯಾರೆ ಅವನಿಗೆ ಉಪಚರಿಸಿ ಬಡಿಸುವರು.

'ಹೋಟಲಿಗೆ ಹೋಗ್ತೀನಿ ತಾಯಿ' ಎಂದರೂ ಕೇಳುತ್ತಿರಲಿಲ್ಲ.

'ಮಗನಿಗಾಗಿ, ಮೊಮ್ಮಗಳಿಗಾಗಿ ರುಚಿರುಚಿಯಾದ ಅಡಿಗೆ ಮಾಡ್ಸಿರ್ತೀನಿ. ಅವರ ಜೊತೆ ಬಂದ ನೀನು ಮಗನ ಹಾಗೆ' ಎಂದು ಉಪಚರಿಸಿ ಬಡಿಸುವರು. ಆ ಮನೆಯಲ್ಲಿ ಆಳುಕಾಳು ಎಂಬ ಭೇದವಿತ್ತು. ಆ ಮನೆಯಲ್ಲಿ ತಾಯ್ತನದ ಪ್ರೀತಿವಾತ್ಸಲ್ಯ ಸಿಕ್ಕುತ್ತಿತ್ತು ಅವನಿಗೆ.

'ಸಾಬ್, ಅಮ್ಮಾವರ ಒಂದು ಗುಟ್ಟು ಹೇಳ್ತ ಇದ್ದೀನಿ. ನನ್ನ ಮಾಫ್ ಮಾಡಿ. ಅಮ್ಮಾವರಿಗೆ ನಿಮ್ಮ ಮೇಲೆ ತುಂಬಾ ಅನುಮಾನ. ಪ್ರತಿಸಲ ಮೈಸೂರಿಗೆ ಹೋಗಿ ಬಂದಾಗಲೂ ತುಂಬಾ ಚೆಕ್ ಮಾಡಿ ಕೇಳ್ತಿದ್ದರು. ಅಲ್ಲಿ ಯಾರ್‍ಯಾರಿರ್‍ತಾರೆ? ಅಂಗಡಿಗೆ ಸೇಲ್ಸ್ ಗರ್ಲ್ಸ್ ಇದ್ದಾರಾ? ಹೀಗೆಲ್ಲಾ ಕೇಳೋರು. ಅಂಗಡೀಲಿ ಹೆಣ್ಣು ಮಕ್ಕಳಿಲ್ಲಮ್ಮ, ಅಮ್ಮಾವರ ತಮ್ಮಂದಿರು, ಅವರ ಇಬ್ಬರು ಅಳಿಯಂದಿರು ಅಂತ ಹೇಳ್ತಿದ್ದೆ. ಮಗು ಅಮ್ಮಾವರನ್ನ ತುಂಬಾ ಹೊಂದಿಕೊಂಡಿದೆ. ಅಂಗಡೀನ್ನ ತುಂಬಾ ಹೊಂದಿಕೊಂಡಿದೆ. "ಅಜ್ಜಿ, ದೊಡ್ಡೋಳಾದ ಮೇಲೆ ನಾನೇ ಬಂದು ಈ ಅಂಗಡಿ ನೋಡ್ಕೋತೀನಿ ಅಂತಿರತ್ತೆ" ಅಂದೆ. 'ಆ ದರಿದ್ರ ಅಂಗಡಿ, ಆ ಅಜ್ಜೀ ಎರಡರಿಂದ

ಈ ಮಗೂನ್ನ ದೂರಾ ಮಾಡ್ಬೇಕು. ಇಲ್ಲದಿದ್ದರೆ ಚಿನ್ನಿ ನಮ್ಮ ಕೈಗೆ ಸಿಗಲ್ಲ. ಮೈಸೂರಿಗೆ ಹೋಗಬೇಡಾ ಅಂದರೆ ಕೇಳಲ್ಲ. ಅವರಪ್ಪನಿಂದ ತಾನೇ ಮೈಸೂರು ಎಂದು ಹಂಬಲಿಸುತ್ತೆ, ಇವರು ಮರೆತರೂ ಬಿಡಲ್ಲ, "ಪಪ್ಪಾ... ಮೈಸೂರಿಗೆ ಹೋಗಬೇಕು, ಅಜ್ಜೀನ್ನ ನೋಡಬೇಕು, ಅಜ್ಜಿ ಅಂಗಡೀಲಿ ದೊಡ್ಡ ದೊಡ್ಡ ಗಾಜಿನ ಸೀಸೇಲಿ ಪೆಪ್ಪರ್‌ಮೆಂಟ್, ಚಾಕ್ಲೇಟ್, ಜೆಮ್ಸ್ ಪ್ಯಾಕೆಟ್, ಪೆಪ್ಸಿ ಎಲ್ಲಾ ಹಾಕಿಟ್ಟಿರ್ತಾಳೆ. ಆ ಅಂಗಡಿ ಅಂದರೆ ನನಗಾಸೆ" ಅಂತ ಬಡಬಡಿಸ್ತಿರ್ತಾಳೆ ಅಂತ ಏನೇನೋ ಅಂದಿದ್ದರು' ಎಂದ. ತಾಯಿ ಮಗ ಇಬ್ಬರು ನಿಟ್ಟುಸಿರಿಟ್ಟರು.

ಕಡೆಗೆ ವನಜಮ್ಮನೆ ಮಗನನ್ನು ಸಂತೈಸಿ- 'ಇರ್ಲಿಬಿಡು. ಅವಳು ಮಗುವಿನ ತಾಯಿ' ಅವಳಿಗೆ ಹೇಗೆ ಬೇಕೊ ಹಾಗೆ ಮಗೂನ್ನ ಬೆಳೆಸಲಿ' ಎಂದರು. ಮಗನ ಹಣೆಯ ಗಾಯದ ಬಗ್ಗೆ ವಿಚಾರಿಸಿಕೊಂಡು ಆಗಿತ್ತು.

ಆ ರಾತ್ರಿ ಊಟ ಮಾಡಿ ತಾಯಿ ಮಗ ಮಲಗಿದಾಗ 'ಅಮ್ಮ... ನಿನ್ನ ಅಂಗಡೀಲಿ ಒಂದು ಕೆಲಸ ಖಾಲಿ ಇದೆಯಾ ?' ಎಂದ. ವನಜಮ್ಮ ಅಚ್ಚರಿಯಿಂದ 'ಯಾರಿಗಪ್ಪಾ?' ಎಂದು ಕೇಳಿದರು.

ಮಧುಮತಿ ವಿಷಯ ತಿಳಿಸಿದ ಅವನು 'ಅವರಮ್ಮನಿಗೆ ನಮ್ಮ ಕಂಪನಿಯಿಂದ ಅನ್ಯಾಯ ಆಗಿದೆ, ಆದರೆ ಅಲ್ಲಿ ನನಗೇನೂ ಸ್ವಾತಂತ್ರ್ಯವಿಲ್ಲ. ಅಲ್ಲಿ ನಾನೇನು ಅವರಿಗೆ ನ್ಯಾಯ ಸಾಧಿಸಿಕೊಡಲಾರೆ. ಆದರೆ ಆ ಹುಡುಗೀನ್ನ ನೋಡಿದರೆ ಏಕೋ ಸಹಾಯ ಮಾಡಬೇಕೆನಿಸಿತಮ್ಮ' ಎಂದ.

ತನ್ನ ಗಾಯಕ್ಕೆ ಅವಳು ಉಪಚರಿಸಿದ ರೀತಿ ತಿಳಿಸಿದ, 'ಆ ಮನೆಯಲ್ಲಿ ಪ್ರೀತಿ ಪ್ರೇಮ ಕಂಡೇ ಇರಲಿಲ್ಲ. ಮೊದಲ ಸಲ ಚಿಂಟು ಹೊಡೆದಾಗ ಇವಳು ಎದುರಿಗೇ ಇದ್ದಳಮ್ಮ. ನಾನು ನೋವಿನಿಂದ ನರಳಿದಾಗಲು ಅವಳಿಗೆ ಲಕ್ಷ್ಯವಿಲ್ಲ. "ಏನು ಬುಲೆಟ್ ಹಾರಿದೆಯಾ ? ಮಗು ಆಟದಲ್ಲಿ ಗೊತ್ತಿಲ್ದೇ ಹೊಡೆದ. ಗೋವಿಂದ ಬ್ಯಾಂಡೇಜ್ ಹಾಕ್ತೇನೆ" ಎಂದು ಗದರಿಸಿ ಹೋದಳು. ನನ್ನ ನೋವು, ಸಂಕಟ, ಬೇಗುದಿ ಯಾವುದೂ ಅವಳ ಮನಸ್ಸು ವಿಚಲಿತಗೊಳಿಸಲ್ಲ' ಎಂದ.

'ಆ ಹುಡುಗಿ ಏನು ಓದಿದ್ದಾಳೆ ?'

'ಆ ಹುಡುಗೀನ್ನ ಕರೆದುಕೊಂಡು ಬರ್ತೀನಿ. ನೀನು ನೋಡಿ ಮಾತನಾಡಮ್ಮ' ಎಂದ ರಾಜಸಿಂಹ.

'ನಿನ್ನ ಜೊತೆ ಒಂದು ಹುಡುಗಿ ಕಾರಿನಲ್ಲಿ ಬಂದಳು ಅಂದರೆ ನಿನ್ನ ಹೆಂಡತಿ ರಾಕ್ಷಸಿ, ಸುಮ್ಮನಿರ್ತಾಳೇನಪ್ಪಾ' ಅವನು ಉದಾಸೀನದಿಂದ-

'ಏನು ಮಾಡ್ತಾಳೆ? ಡೈವೋರ್ಸ್ ಕೊಡ್ತಾಳಾ? ಕೊಟ್ಟರೆ ಕೊಡಲಿ, ಇಲ್ಲಿ ಬಂದು ನಾನೇ ಅಂಗಡಿ ನೋಡಿಕೊಳ್ತೀನಿ. ಮುಪ್ಪಿನಲ್ಲಿ ನಿನ್ನ ಹತ್ತಿರ ಇದ್ದ ಹಾಗಿರತ್ತೆ.'

'ಬೇಡಪ್ಪಾ, ನಿನ್ನ ಮನಶ್ಯಾಂತಿ ಹಾಳಾಗೋದು ಬೇಡಾ. ನಾನು ಸಲೀಮ್‌ಗೆ ಹೇಳಿರ್‍ತೀನಿ. ವಿಷಯ ಅವಳವರೆಗೆ ಹೋಗೋದು ಬೇಡ' ಎಂದರು ವನಜಮ್ಮ. ಸಲೀಮ್ ತಾಯಿಗೆ ತೀರ ವಿಧೇಯನಾಗಿ ಇನ್ನೊಬ್ಬ ಮಗನಂತೆ ಇದ್ದ. ಆ ಮನೆಯ ಬಗ್ಗೆ, ತನ್ನ ಒಡತಿಯ ಬಗ್ಗೆ ಅವನಿಗೆ ಅಶಾಂತಿ ಇತ್ತು. ಅವನ ತಂದೆ ಇಪ್ಪತ್ತು ವರ್ಷ ಡ್ರೈವರ್ ಆಗಿ ಸೇವೆ ಸಲ್ಲಿಸಿದ್ದ. ಒಂದು ಆಕ್ಸಿಡೆಂಟಲ್ಲಿ ಕಾಲು ಮುರಿದಿತ್ತು. ಒಂದು ಹತ್ತು ಸಾವಿರ ಪರಿಹಾರ ಕೊಟ್ಟಂತೆ ಮಾಡಿ, ನಿರ್ದಾಕ್ಷಿಣ್ಯವಾಗಿ ಕೆಲಸದಿಂದ ತೆಗೆದು ಹಾಕಿದ್ದರು. ಆಗಿನ್ನು ಸಲೀಮ್ ಹದಿನಾರರ ಹುಡುಗ. ಆ ನಾಲ್ಕಾರು ವರ್ಷ ಆ ಕುಟುಂಬ ಬಹಳ ಕಷ್ಟ ನಷ್ಟಗಳನ್ನು ಅನುಭವಿಸಿತು, ಅನಂತರ ಅದೇ ಕುಟುಂಬದಲ್ಲಿ ಇಪ್ಪತ್ತು ವರ್ಷದ ಸಲೀಮನಿಗೆ ಡ್ರೈವರ್ ಹುದ್ದೆ ಸಿಕ್ಕಿತು. ಆಮೇಲೆ ಸಂಸಾರದ ಪರಿಸ್ಥಿತಿ ಸುಧಾರಿಸಿದರೂ, ಸಲೀಮನ ಮನದಲ್ಲಿ ಒಂದು ಬಗೆ ಕಹಿ ಉಳಿದು ಹೋಯಿತು. ತಮ್ಮ ಕೈಕಾಲು ಗಟ್ಟಿಯಾಗಿದ್ದು, ದುಡಿಮೆ ಇದ್ದರೆ ಮಾತ್ರ ಈ ಮನೆಯಲ್ಲಿ ಸ್ಥಾನ ಎಂಬುದು ಅವನಿಗೆ ತಿಳಿದಿತ್ತು. ಅನ್ನದಾತರು ಎಂಬ ಯಾವ ಬಗೆಯ ಆತ್ಮೀಯ ಭಾವನೆ ಅವನಿಗಿರಲಿಲ್ಲ. ಆದರೆ ವನಜಮ್ಮನ ವಾತ್ಸಲ್ಯ ಅವನಿಗೆ ತುಂಬಾ ಆಪ್ಯಾಯಮಾನವಾಗಿತ್ತು. ಜಾತಿಭೇದ ಮರೆತು ಆಕೆ ತಾನೇ ಕೈಯಾರೆ ಬಡಿಸಿ, ಉಪಚರಿಸುವಾಗ ತೀರಿಕೊಂಡ ತನ್ನ ತಾಯಿ ನೆನಪಾಗುತ್ತಿತ್ತು.

ಮಗ ಕೋಣೆಯಲ್ಲಿ ನಿದ್ರಿಸುವಾಗ ಕಾರಿನ ಬಳಿ ಬಂದ ವನಜಮ್ಮ-ಅಲ್ಲೇ ಕಟ್ಟೆಯ ಮೇಲೆ ಕೂತು ಸಲೀಮ್‌ನೊಡನೆ ಮಾತಾಡಿ ವಿಷಯ ತಿಳಿಸಿದರು.

'ಅಮ್ಮಾವರಿಗೆ ಸಾಹೇಬರು ಅಂದ್ರೆ ತಮ್ಮ ಪಾಲಿನ ಒಂದು ಆಸ್ತಿ ಎಂಬ ಭಾವನೆ. ಅವರು ತಂಗೀ ಸಮಾನ ಅಂತ ಇನ್ನೊಂದು ಹುಡುಗಿ ಕೂಡ ಆತ್ಮೀಯ ವಾಗಿದ್ದರೂ ಸಹಿಸಲ್ಲ. ನನ್ನ ಬಾಯಿಂದ ಅಂತು, ಈ ವಿಷಯ... ಅವರಿಗೆ ಮುಟ್ಟಲ್ಲ. ಸಾಹೇಬರ ಮೇಲೆ ವಿಶೇಷ ಗೂಢಚಾರಿಕೆಗೆ ಅಂತಲೇ ನನಗೆ ತಿಂಗಳಿಗೆ ಸಾವಿರ ರೂಪಾಯಿ ಕೊಡ್ತಾರೆ. ತಾವು ತಿಂಗಳುಗಟ್ಟಲೇ... ಸಾಹೇಬರಿಂದ ದೂರ ಇದ್ದರೂ, ಸಾಹೇಬರು ತಮಗಾಗಿ ಚಡಪಡಿಸ್ತಿರಬೇಕು. ಇದು ಅಮ್ಮಾವರ ಮನೀಷ' ಎಂದ ಸಲೀಂ. ವನಜಮ್ಮ ಚಿಂತೆಯಿಂದ-

'ನನ್ನ ಮೇಲಂತು ಎಳ್ಳು ಕಾಳಿನಷ್ಟು ಭಕ್ತಿಯಿಲ್ಲ. ಆದರೆ ಮಗನ ರೂಪ, ಬುದ್ಧಿವಂತಿಕೆಗೆ, ಅಂಥಾ ಶ್ರೀಮಂತ ಸುಂದರಿ, ತಾನಾಗಿ ಒಲಿದು ಮರುಳಾದಳೂಂತ ಸಂತೋಷಿಸಿ, ಅವನ ಬಾಳಾದರೂ ಸುಖವಾಗಿರಲೀಂತ ನಾನೇ ಅವರಿಂದ ದೂರಾದೆ. ಅವರಿಬ್ಬರ ಬದುಕು ಹಾಲು ಜೇನಿನ ಹಾಗೆ... ಹೊಂದಿಕೊಂಡಿರಲೀಂತ ನನಗೆ ಮೂರು ಕಾಸು ಕಳಿಸಬೇಡಪ್ಪ ಅಂದೆ. ಮೊದಲು ಎರಡು ವರುಷ ಬಂದ ಸಂಬಳ ನನಗೆ ಕಳಿಸುತ್ತಿದ್ದ. ಆ ಕೋಟ್ಯಾಧೀಶಳಿಗೆ ಈ ಇಪ್ಪತ್ತೈದು ಸಾವಿರ ಯಾವ ಲೆಕ್ಕಾ

ಅಂತಿದ್ದೆ. ಆದರೆ ಅವಳಿಗೆ ಅವನಿಂದ ಎಲ್ಲಾ ಹೀರೋ ಚಪಲ! ಆ ಮಹಾಪಾಪಿಗೆ ಇವನು ಗುಲಾಮನ ಹಾಗೆ ಬಿದ್ದಿರಬೇಕೂಂತ ಚಪಲ. ಆದರೆ ಸ್ವಾಭಿಮಾನಿಯಾದ ವಿದ್ಯಾವಂತನಾದ ಅವನು ಹೇಗೆ ಸಹಿಸ್ತಾನೆ ಹೇಳು?' ಎಂದಳು.

ಸಲೀಮ್ ತಲೆತಗ್ಗಿಸಿ 'ಇದು ದೊಡ್ಡೋರ ಸಮಾಚಾರ. ನಾನು ಏನು ಮಾತಾಡಲಿ ಅಮ್ಮ. ಆದರೆ ಆ ಮನೆ ಜನಗಳಿಗೆ ಹಣದ ಮದ ಜಾಸ್ತಿ. ಆತ್ಮೀಯತೆ, ಪ್ರೀತಿ, ಪ್ರೇಮ ಇದೆಲ್ಲಾ ಗೊತ್ತೇ ಇಲ್ಲ. ಹಣಾ ಒಂದೇ ಅವರ ಪಾಲಿನ ದೇವರು. ತಾನು ಶ್ರೀಮಂತೆ, ಗಂಡ ತನ್ನ ಪಾದದಾಸನಾಗಿರಬೇಕು, ತನ್ನ ರೂಪಾ ಆರಾಧಿಸ್ತಾ ಭಕ್ತನಂತೇ ಬಾಳಬೇಕೂನ್ನೋ ಅಮ್ಮಾವರಿಗೆ, ಸಾಹೇಬರಿಗೂ ಮನಸ್ಸು, ಹೃದಯ ಇದೆ. ಅವರ ಮನಸ್ಸಿಗೆ ತಾವು ಆಪ್ಯಾಯಮಾನವಾಗಿ ನಡೆದುಕೊಳ್ಳಬೇಕೂಂತ ಗೊತ್ತಿಲ್ಲ. ಕಂಪನಿಗೆ ನ್ಯಾಯವಾಗಿ ನಮ್ಮ ಸಾಹೇಬರೇ ಈಗ ಮಾಲೀಕರು. ಅಮ್ಮಾವರ ಸರೀಸರೀ ಅಧಿಕಾರ ಅವರಿಗಿದೆ. ಆದರೆ ಅಮ್ಮಾವರು ಕಂಪನಿಯ ಯಾವ ಮೀಟಿಂಗಿಗೂ ಅಯ್ಯಾವರನ್ನು ಕರೆಯಲ್ಲ. ಆ ಶೈನಿ ಮೇಡಂ ರಂಗನಾಥ ರಾವ್ ಹೀಗೆ ಕೆಲವು ಹಳೇ ಅಧಿಕಾರಿಗಳಿಗೆ ಕೊಡೋ ಆದ್ಯತೆ ಸಾಹೇಬರಿಗಿಲ್ಲ. ಬರಿ ಆಡಿಟರ್ ಅಷ್ಟೆ. ಮನೇಲೂ ಆ ಸೋದರತ್ತೆ ಅನ್ನೋ ಮುದುಕಮ್ಮಂದೇ ಪಾರುಪತ್ಯ. ಇಂಥಾ ಮನೇಲಿ ಅವರಿಗೆ ತನ್ನತನ ಆತ್ಮೀಯತೆ ಏನು ಕಾಣುತ್ತೆ?'

'ಸಾಹೇಬರಿಗೆ ಒಂದು ಚೂರು ಕೆಮ್ಮು ನೆಗಡಿ ಆದರೆ ಗೋವಿಂದ ಡಾಕ್ಟರನ್ನ ಕರಿಸ್ತಾನೆ, ಗೋವಿಂದಾನೆ ಔಷಧಿ ಕುಡಿಸಬೇಕು' ಎಂದ.

ವನಜಮ್ಮ ನಿಟ್ಟುಸಿರಿಟ್ಟು- 'ಈಗ ಆ ಸಂಬಂಧದಿಂದ ಅವನು ಬಿಡಿಸಿ ಕೊಳ್ಳೋ ಹಾಗೆ ಇಲ್ಲಪ್ಪ. ಹಗ್ಗ ಕೊಟ್ಟು ಕೈ ಕಟ್ಟಿಸಿಕೊಂಡ ಹಾಗಾಗಿದೆ, ಏನೋ ಈ ಒಂದು ಹುಡುಗಿ ಮೇಲೆ ಆತ್ಮೀಯತೆ ಹುಟ್ಟಿದೆ, ಇಲ್ಲಿ ನನ್ನ ಬಳಿ ಕೆಲಸ ಕೇಳಿದ್ದಾನೆ, ಅವನ ನೊಂದ ಮನಸ್ಸಿಗೆ ತಂಪು ಸಿಗೋದಾದರೇ, ನಾನು ನೀತಿ ನಿಯಮ... ಯಾವುದನ್ನು ನೋಡೋಳಲ್ಲ. ಏನೇ ಆಗಲಿ ಆ ಹುಡುಗಿ ವಿಷಯ ಗುಟ್ಟಾಗಿಡು' ಎಂದರು.

'ಆಗಲಮ್ಮ...' ಎಂದ ಸಲೀಮ್. ಮಾರನೆಯ ದಿನ ಸಂಜೆಯೇ ಬೆಂಗಳೂರಿಗೆ ಬಂದ ಅವನು.

ರಾತ್ರಿಯೇ ಜಯಶ್ರೀಯ ಟ್ರಂಕಾಲ್ ಬಂತು.

'ಏನು ವಿಶೇಷ ? ನಾನು ಮೈಸೂರಿಗೆ ಹೋಗಿದ್ದೆ' ಎಂದ.

'ವಾರ ವಾರ ಮೈಸೂರು ಯಾತ್ರೆ ಪ್ರಾರಂಭ ಆಯ್ತಾ ? ಏನು ವಿಶೇಷ?' ಎಂದಳು.

'ಬದುಕೇ ತುಂಬಾ ಬೇಸರವಾಗಿದೆ ಜಯಾ ? ಮನೆ ನನ್ನ ಪಾಲಿಗೆ ಸ್ಕೀಟ್

ಹೋಮ್ ಆಗಲಿಲ್ಲ. ನಿನ್ನ ಅಗಲಿಕೆ ನಾನು ಸಹಿಸ್ತೀನಿ. ನೀನು ದೊಡ್ಡ ಉದ್ಯಮಿ. ಆದರೆ ಚಿನ್ನೀನ ಕರ್ನ್ಕೊಂಡ್ಹೋಗಿ ಬಾಂಬೆಯ ಹಾಸ್ಟೆಲ್‌ಗೆ ಸೇರಿಸಿದೆ. ನನ್ನ ಯಾವ ಅಪರಾಧಕ್ಕೆ ಈ ಶಿಕ್ಷೆ ?' ಎಂದಾಗ, ಜಯಶ್ರೀ ಮೃದುವಾಗಿ–

'ರಾಜ್ ! ತಪ್ಪು ತಿಳೀಬೇಡಿ, ನಿಮಗೆ ತಿಳೀದೇ ನೀವು ಒಂದು ದೊಡ್ಡ ತಪ್ಪು ಮಾಡ್ತಿದ್ದೀರಿ. ಅದು ಮಹಾಪರಾಧ. ಅದು ಯಾವುದು ಗೊತ್ತ ?' ರಾಜಸಿಂಹ ನೀರಸವಾಗಿ ಕೇಳುತ್ತಿದ್ದ. ಅವನಿಂದ ಉತ್ತರ ಬಾರದ್ದು ಕಂಡು ಮತ್ತೆ ತಾನೇ ಮಾತು ಮುಂದುವರಿಸಿದಳು ಜಯಶ್ರೀ–

'ಮಕ್ಕಳು ಇಬ್ಬರು ಇದ್ದಾಗ ಒಂದು ಮಗೂನ್ನ ತಂದೆ ಜಾಸ್ತಿ ಪ್ರೀತಿಸಿ, ಇನ್ನೊಂದು ಮಗೂನ್ನ ನೆಗ್ಲೆಕ್ಟ್ ಮಾಡಿದರೆ ಆ ಇನ್ನೊಂದು ಮಗು ಮನಸ್ಥಿತಿ ಏನಾಗತ್ತೇ ಗೊತ್ತೇನು ?'

'ಆದರೆ ಆ ನಿನ್ನ ಮಗ ಪರಮ ಉದ್ಧಟ, ಅಹಂಕಾರಿ. ನನ್ನ ಬಳಿ ಬಂದಾಗಲು ಆ ಅಡ್ಡಿಯಿಂದ ಪ್ರೇರಿತನಾಗಿ... ಯಾವ ತರಹ ಮಾತಾಡ್ತಾನೆ ಗೊತ್ತ? ಒಮ್ಮೊಮ್ಮೆ ಮನೆಬಿಟ್ಟು ಹೊರಟುಬಿಡಬೇಕೆನಿಸುತ್ತೆ.'

'ನಲವತ್ತು ಲಕ್ಷ ರೂಗಳ ಬಂಗ್ಲೆ ಅದು. ಕೈಗೊಬ್ಬ ಆಳು, ಕಾಲಿಗೊಬ್ಬ ಆಳು, ನಿಮ್ಮ ಸಕಲ ಉಪಚಾರಕ್ಕೂ ನಾನು ಗೋವಿಂದನ್ನ ನೇಮಿಸಿದ್ದೀನಿ. ನಮ್ಮ ಅತ್ತೆ ಸಂಪರ್ಕ ನಿಮಗೆ ಬರದ ಹಾಗೇ ನೀವು ಡೈನಿಂಗ್ ಹಾಲಿಗೆ ಹೋದರೆ ರತ್ನಮ್ಮ ಮಾತ್ರ ಬಂದು ಬಡಿಸಲು ಏರ್ಪಾಟು ಮಾಡಿದ್ದೀನಿ. ನಮ್ಮ ಅತ್ತೆ ಧ್ವನಿ ಕಿವಿಗೆ ಬಿದ್ದರೂ ಕೆರಳ್ತೀರಿ. ಹೀಗಾಗಿ ಅವರು ಡೈನಿಂಗ್ ಹಾಲಿಗೆ ಬಂದಾಗ ನೀನು ಇರಲೇ ಬೇಡಾಂತ ಆಜ್ಞೆ ಮಾಡಿದ್ದೀನಿ.

'ಇನ್ನು ಮಗುವಿನ ಬಗ್ಗೆ, ನನ್ನ ಮಗ ಅನ್ನೋ ಶಬ್ದ ಉಪಯೋಗಿಸಬೇಡಿ. ಅವನನ್ನು... ನಾನು ನಿಮಗೇ ಹೆತ್ತಿರೋದು. ಅತ್ತೇ ಆ ಮಗುವಿನ ಮನಸ್ಸು ಹಾಳು ಮಾಡಿಲ್ಲ. ನೀವು ಆ ಚಿನ್ನೀನ ಮುದ್ದು ಮಾಡೋದ್ರಲ್ಲಿ ಅವನನ್ನ ನೆಗ್ಲೆಕ್ಟ್ ಮಾಡಿದ್ದೀರಿ. ಆ ಎಳೆ ಮನಸ್ಸು ಅಸೂಯೆಯಿಂಧ ಸಿಡಿದೆದ್ದಿದ್ದರೆ ಆಶ್ಚರ್ಯ ಏನು ? ನನ್ನಂಥಾ ದೊಡ್ಡೋಳಿಗೇ ಒಂದೊಂದ್ಸಲ ಕುದಿಯೋ ಹಾಗಾಗ್ತಿತ್ತು. ನಾನು ಇಲ್ಲಿ ಗಂಟೆಗಟ್ಟಲೆ ಬೆಡ್‌ರೂಮಿನಲ್ಲಿ ನಿಮಗಾಗಿ ಚಡಪಡಿಸಿ ಕಾಯ್ತಿದ್ದೆ. ನೀವು ಅಲ್ಲಿ ಮಗಳ ಜೊತೆ ಮುದ್ದು ಮುದ್ದಾಗಿ ಆಡ್ತ ಮೈಮರೆತು ಇರ್ತಿದ್ದಿರಿ' ಆಕ್ಷೇಪಿಸಿದಳು ಜಯಶ್ರೀ. ಅವನು ಸುಮ್ಮೆ ಇದ್ದ. ಮತ್ತೆ ಅವಳೇ ಮಾತಾಡಿ 'ಮಗಳಿಗಾಗಿ ಅಷ್ಟು ಚಡಪಡಿಸ್ತಿದ್ದೀರಿ. ಆದರೆ ನಾನು ಮೂರು ತಿಂಗಳು ನಿಮ್ಮಿಂದ ದೂರವಾಗ್ತಿದ್ದೀನಿ. ನನಗಾಗಿ ಚಡಪಡಿಸೋ ಹಾಗಾಗ್ತಿಲ್ವಾ ?' ಎಂದು ಪ್ರಶ್ನಿಸಿದಳು.

'ಇದರಲ್ಲಿ ಅಪರೂಪವೇನು, ಜಯಾ? ಮೊದಲಿಂದ ಅಗಲಿಕೆ ನನಗೆ ಅಭ್ಯಾಸ

ಮಾಡಿಸಿಬಿಟ್ಟಿದ್ದಿ. ಆರು ತಿಂಗಳು ಊರಲ್ಲಿದ್ರೆ, ಆರು ತಿಂಗಳು ಟೂರಲ್ಲಿರ್ತಿ. ಈಗೀಗ ನಿನ್ನ ಬಗ್ಗೆ ನನ್ನ ಮನಸ್ಸು ಜಯವಾಗಿದೆ, ಜಯಾ' ಎಂದ. ಅವಳು ಕಿಲಕಿಲ ನಕ್ಕು-

'ನಿಮ್ಮ ಮನಸ್ಸು ಜಡವಾದಾಗಲೇ ನಾನು ಬೇಸತ್ತು ನಿಮ್ಮಿಂದ ದೂರವಾಗೋದು. ಮೂರು ತಿಂಗಳ ಹೊತ್ತಿಗೆ ನಮ್ಮ ಮನಸ್ಸು ಹಂಬಲಿಸಿ, ಚೈತನ್ಯದಾಯಕವಾಗುತ್ತೆ. ಆಗ ಹನಿಮೂನ್ ಮಾಡಿಸ್ಲಿಕ್ಕೆ ಬರ್ತೀನಿ' ಎಂದಳು.

'ಸಂತೋಷ.' ಎಂದು ಚುಟುಕಾಗಿ ಉತ್ತರಿಸಿದ ರಾಜಸಿಂಹ.

'ಒಂದು ರಿಕ್ವೆಸ್ಟ್ ರಾಜ್, ಮಗನ್ನ ನೀವು ಹೊಂದಿಕೊಳ್ಳಿ. ನಿಮ್ಮ ಒಂಟಿತನ ನೀಗತ್ತೆ. ಆ ಅನಾಗರೀಕ ಅಜ್ಜಿಯ ಮೊಮ್ಮಗನಾಗಿ ಬೆಳಿಯೋದು ನನಗಿಷ್ಟವಿಲ್ಲ, ನಿಮ್ಮ ಮಗ ನಿಮ್ಮ ಹಾಗೆ ಬ್ರಿಲಿಯಂಟ್ ಆಗಬೇಕು. ಇಷ್ಟು ದೊಡ್ಡ ಆಸ್ತಿಪಾಸ್ತಿ ನಿಭಾಯಿಸಬೇಡವಾ? ನಮ್ಮಪ್ಪಾ ಎಲ್ಲಾ ಆಸ್ತಿ ಮಗನ ಹೆಸರಿಗೆ ವಿಲ್ ಮಾಡಿದ್ದಾರಂತೆ. ಅವನು ವಯಸ್ಸಿಗೆ ಬರೋವರೆಗೆ ನಾನು ಪೋಷಕಳು, ಅಮ್ಮ ಚಿನ್ನೀನ ತುಂಬಾ ಹೊಂದ್ಕೊಂಡಿದ್ದಾಳೆ. ತನ್ನ ಎಲ್ಲಾ ಆಸ್ತಿ ಚಿನ್ನೀಗೆ ವಿಲ್ ಮಾಡಿದ್ದಾಳಂತೆ. ಇಷ್ಟು ದೊಡ್ಡ ಶ್ರೀಮಂತರ ಮಗಳಾಗಿ ನನಗೇನು ಇಲ್ವಾ ಅಂದೆ, ಅಪ್ಪಾ ನಕ್ಕು-

"ನಿನಗೆ.... ನಿನ್ನ ಗಂಡನಿಗೆ ಒಳ್ಳೆ ಹುದ್ದೆ, ಒಳ್ಳೆ ಸಂಬಳ ಇದೆಯಲ್ಲ. ಅದೇ ನಿಮ್ಮ ಆಸ್ತಿ" ಎಂದರು

ಅವನು ಸುಮ್ಮನಿದ್ದ. ಅವಳದೇ ಇದೆಲ್ಲಾ ಕುತಂತ್ರವೆನಿಸಿತು, ಅವರಪ್ಪಾ ಮೊಮ್ಮಗನ ಹೆಸರಿಗೆ ಆಸ್ತಿ ಮಾಡಿದರೆಂದು ತನಗೇನು ದೊಡ್ಡ ನಿರಾಶೆಯಾಗಿಲ್ಲ, ತಾನೆಂದೂ ಈ ಆಸ್ತಿಪಾಸ್ತಿಗೆ ಆಶಿಸಿಲ್ಲ. ಆಸ್ತಿ ಆಸೆಗೆ ಅವಳನ್ನು ವಿವಾಹವಾಗಿಲ್ಲ.

'ಅಪ್ಪಾ... ಆಸ್ತಿ ತಮ್ಮ ಮೊಮ್ಮಗನ ಹೆಸರಿಗೆ ವಿಲ್ ಮಾಡಿಸಿದರೂಂತ ನಿಮಗೆ ಕೋಪ ಬಂತಾ ?' ಅವಳ ಆ ಧ್ವನಿಯಲ್ಲಿ ಕುತೂಹಲದ ಬದಲು ಕುಹಕವಿತ್ತು.

ಅವನು ಕೋಪದಿಂದ 'ನೋಡು ಜಯಾ... ನಿಮ್ಮ ಆಸ್ತಿ ಮೇಲೆ ನನಗೆಂದೂ ಆಸಕ್ತಿ ಇರಲಿಲ್ಲ. ನನ್ನ ಸ್ವಯಂ ಪ್ರತಿಭೆ ಮೇಲೆ ನನಗೆ ನಂಬಿಕೆ ಇದೆ. ಈ ಕ್ಷಣ ನಿಮ್ಮಪ್ಪಾ ನನ್ನ ಈ ಕಂಪನಿಯಿಂದ ಕಿತ್ತು ಹಾಕಿದರೂ ನನಗೆ ಭಯವಿಲ್ಲ. ಭಾರತದ ಯಾವುದೇ ಖ್ಯಾತ ಕಂಪನಿಯಲ್ಲಿ ನನಗಾಗಿ ಒಳ್ಳೇ ಹುದ್ದೆ ಗಿಟ್ಟಿಸಬಲ್ಲೆ' ಎಂದ.

'ಆದರೆ ನಮ್ಮಪ್ಪಾ ನಿಮ್ಮನ್ನ ಕಂಪನಿಯಿಂದ ತೆಗೆದು ಹಾಕಲ್ಲ. ಅಕಸ್ಮಾತ್ ನೀವೇ ಕಂಪನಿಯಿಂದ ಹೊರಬೀಳ್ತೀನೀಂತ ಪ್ರಯತ್ನಿಸಿದರೂ ಸುಳ್ಳುದಾಖಲೆ ಸೃಷ್ಟಿಸಿ ಕಂಪನಿಗೆ ಐವತ್ತು ಲಕ್ಷದವರೆಗೆ ವಂಚಿಸಿದ್ದಾರೇಂತ ಕೇಸ್ ಹಾಕ್ತಾರೆ. ಈ ಬಗೆ ಕ್ರಿಮಿನಲ್ ಕೇಸ್ ಹೊತ್ತೋರಿಗೆ ಬೇರೆ ಕಂಪನಿ ಕೆಲಸ ಕನಸಿನ ಮಾತು ಗೊತ್ತ' ಎಂದಳು ವ್ಯಂಗ್ಯವಾಗಿ. ಉಕ್ಕಿಬಂದ ಕೋಪ ತಡೆಹಿಡಿದು ಅವನು ಸುಮ್ಮನಿದ್ದ.

'ಜಯಶ್ರೀ ಸೀರೆ ಸೆರಗಿನ ಸನ್ನಿಧಿ, ಜಯಶ್ರೀ ಟೆಕ್ಸ್‌ಟೈಲ್ಸ್ ಪರಿಧಿ ಬಿಟ್ಟು ಬೇರೆ ಕಡೆ ಸ್ವತಂತ್ರ ಬಾಳುವ ಆಲೋಚನೆ ಮಾಡಿದರೂ ನಮ್ಮಪ್ಪಾ ಸಹಿಸಲ್ಲ. ಮಗಳ ಬದುಕಿಗೆ ಒಂದು ಚೂರು ಅನ್ಯಾಯವಾದರೂ ಸಿಡಿದೇಳ್ತಾರೆ.

'ಆ... ಏಕೆ ಮಾತಾಡ್ತಿಲ್ಲ ? ಎನಿ ಕಾಮೆಂಟ್ಸ್'

'ಜಯಾ, ನನ್ನ ತಾಳ್ಮೆಗೂ ಮಿತಿ ಇದೆ. ಐಯಾಮ್ ನಾಟ್ ಡ್ರಂಕರ್ಡ್. ಎಲ್ಲಾ ಕಹಿ ವಿರಸ, ನಿನ್ನ ವಾಗ್ಬಾಣ ಮರೆತು ಕುಡಿದು ನಿದ್ರಿಸೋಣಾ ಅನ್ನಿಕ್ಕೆ, ಇನ್ನು ಮೂರು ದಿನದ ನಿದ್ರ ಕೆಡಿಸೋಷ್ಟು ಕಹಿ ವಿರಸದ ವಾಗ್ಬಾಣ ಬಿಟ್ಟಿದ್ದಿ. ಇನ್ನಾದರೂ ಫೋನ್ ಡಿಸ್‌ಕನೆಕ್ಟ್ ಮಾಡು' ಎಂದ. ಜಯಶ್ರೀ ಅವನ ಮನದ ಬೇಗುದಿ ಗಮನಿಸದೆ ಅಪಹಾಸ್ಯದ ನಗೆ ಚೆಲ್ಲಿ, 'ನೀವು ಡ್ರಂಕರ್ಡ್ ಆದರೆ ನನ್ನದೇನು ಆಕ್ಷೇಪಣೆ ಇಲ್ಲ. ನಾನೂ ಈ ನಡುವೆ ಪಾರ್ಟಿ ಕೂಟದಲ್ಲಿ ಸ್ವಲ್ಪ ಡ್ರಿಂಕ್ ಮಾಡ್ತೀನಿ' ಎಂದಳು.

'ನೀನು ಬೇಕಾದ್ದು ಮಾಡ್ತಿ. ಒಬ್ಬ ಕೋಟ್ಯಾಧೀಶನ ಮಗಳು. ಆದರೆ ನನ್ನ ತಾಯಿ ನನಗೆ ಎಂಥಾ ಮನಸ್ಥಿತಿ ಅನ್ನಿಕ್ಕೆ ನಿಮಗೇನು ಬಂದಿದೆ... ಅಂಥಾ ದುಸ್ಥಿತಿ ! ಅರಮನೆಯಂಥಾ ಮನೆ, ಕ್ಯಾಡಿಲಾಕ್ ಕಾರಿನಲ್ಲಿ ಓಡಾಟ.. ಮೃಷ್ಟಾನ್ನ ಭೋಜನ, ಏರ್ ಕಂಡೀಷನ್ಡ್ ಆಫೀಸ್ ಹಾಗೂ ನಮ್ಮನೆ ಬೆಡ್‌ರೂಮಿನ ವೈಭವಕ್ಕೆ ಎರಡು ಲಕ್ಷ ಖರ್ಚು ಮಾಡಿದ್ದೀನಿ. ನಿಮ್ಮ ಇಪ್ಪತ್ತೈದು ಸಾವಿರ ಸಂಬಳದಲ್ಲಿ ಅಂಥಾ ಬೆಡ್‌ರೂಮ್ ಕಣ್ಣಿಂದಲೂ ಕಾಣ್ತಿರಲಿಲ್ಲ. ಅಪ್ಸರೆ ಅಂಥಾ ಹೆಂಡ್ತಿ, ಮುತ್ತಿನಂಥಾ ಮಕ್ಕಳು, ಏನು ಕಡಿಮೆ ಆಗಿದೆ ನಿಮಗೆ ?'

'ನಾನು ಮನುಷ್ಯನಾಗೋ ಬದಲು ಒಂದು ಮನುಷ್ಯಾಕಾರದ ಮನಸ್ಸು, ಅಭಿಮಾನ ಇಲ್ಲದ ಪ್ರಾಣಿ ಆಗಿದ್ರೆ ಇದೆಲ್ಲದರಿಂದ ಸುಖಿಸ್ತಿದ್ದೆ. ಬಾರಿ ಬಾರಿಗೆ ನನ್ನ ಅಭಿಮಾನಕ್ಕೆ ಬಲವಾದ ಗಾಯ ಮಾಡಿ, ಮನಸ್ಸಿಗೆ ಬೆಂಕಿ ಹಾಕ್ತಿ. ಮನಸ್ಸು ಸುಟ್ಟು ಸುಟ್ಟು ಕರಕಾಗಿ ಹೋಗಿದೆ' ಎಂದ ವಿಷಾದದಿಂದ. ಫೋನ್ ಡಿಸ್‌ಕನೆಕ್ಟ್ ಆಯಿತು. ಈ ರಾತ್ರಿ ಅವಳು ನಿದ್ರೆ ಮಾಡಿರಲಾರಳು. ಅವಳು ಪರಪುರುಷ ವ್ಯಾಮೋಹಿ ಆಗಿ ತನ್ನಿಂದ ದೂರವಾಗಿದ್ದರೂ ಎಷ್ಟೋ ಚೆನ್ನಾಗಿತ್ತು ಎಂದು ಒಮ್ಮೊಮ್ಮೆ ಅವನಿಗನಿಸುತ್ತಿತ್ತು.

ಆದರೆ ಅವನಿಂದ ದೂರವಿದ್ದಾಗಲೂ ಅಣ್ಣನ ಮನೆ, ತಾಯಿ ಮನೆ, ಶೈನಿ ಜೊತೆ ಮೀಟಿಂಗ್‌ಗಳು... ಕಂಪನಿಯ ಪಾರ್ಟಿ, ಕೂಟ ಬಿಟ್ಟರೆ ಬೇರೆ ಯಾವ ಪುರುಷರ ಜೊತೆ ಅವಳಿಗೆ ನಿಕಟ ಸಂಪರ್ಕವಿರಲಿಲ್ಲ. ಲಿಜಿ ಮೇಡಂ ಹಾಗೂ ಶೈನಿ ಅವನಿಗಾಪ್ತರು. ಈಗ ಅಮೆರಿಕಾಕ್ಕೆ ಹೋದಾಗಲು ತಂದೆಯ ಅಪಾರ್ಟ್‌ಮೆಂಟ್, ಕಂಪನಿ ಕೆಲಸಕ್ಕೆ ಶೈನಿಯ ಜೊತೆ ಸುತ್ತಾಟ ಎಂದವನಿಗೆ ತಿಳಿದಿತ್ತು. ತಮ್ಮಿಬ್ಬರ

ಈ ಮನಸೊಡೆದ ವಿರಸಕ್ಕೆ ಕಾರಣವೇನು ? ನಿಮಿಷ ನಿಮಿಷಕ್ಕೂ ತನ್ನನ್ನು ಆಕ್ಟೋಪಸ್ ಹಿಡಿತದಲ್ಲಿ ಬಿಗಿಯಬೇಕೆನ್ನುತ್ತಾಳೆ. ತನ್ನತನ, ತನ್ನ ಮನಸ್ಸು ಹೃದಯ ಎಲ್ಲಾ ಅವಳ ಆ ಆಕ್ಟೋಪಸ್ ಹಿಡಿತದಿಂದ ನಲುಗುತ್ತಿದೆಯೆ ? ಅದ್ದು... ಕಾಮದ ಹಿಡಿತವೋ... ಪ್ರೇಮದ ಹಿಡಿತವೋ... ಅವಳು ಬಯಸುವ ಆ ಉತ್ಕಟ ಕಾಮ, ಪ್ರೇಮ ಎರಡೂ ಈಗ ತನ್ನಿಂದ ಕೊಡಲಾಗುತ್ತಿಲ್ಲ. ಮನಸ್ಸು, ದೇಹ ಅವಳಿಗೆ ಗುಲಾಮನಾಗಲು ನಿರಾಕರಿಸುತಿತ್ತು.

ಅವಳ ಅಹಂ ಅನ್ನು ಅವನು ಉದಾಸೀನ ಮಾಡುತ್ತಿದ್ದ. ಹೀ ಗಾಗಿ ಅವಳು ರೊಚ್ಚಿಗೇಳುತ್ತಿದ್ದಳು. ದಾಂಪತ್ಯದಲ್ಲಿ ಸಹ ಅವನಿಗೆ ಆಸಕ್ತಿ ಕುಗ್ಗಿಹೋಗಿತ್ತು. ಈ ವಯಸ್ಸಿನಲ್ಲೂ ಅವಳು ಅತ್ಯಂತ ಸುಂದರಿ ನಿಜ. ಆದರೆ ಮನಸ್ಸು ಮುರಿದು ವಿರಸದಲ್ಲಿ ಹೃದಯ ಕಹಿಯಾಗಿದ್ದಾಗ ಬಲವಂತ ಮಾಘಸ್ನಾನ ಎನಿಸುತ್ತಿತ್ತು. ಒಮ್ಮೊಮ್ಮೆ ಹೇಳಿಯೆ ಬಿಡುತ್ತಿದ್ದ.

'ಮನಸ್ಸಿಗೆ ಉಲ್ಲಾಸ ಸಂಭ್ರಮ ಇದ್ದರೆ ದೇಹಕ್ಕೆ ಸುಖ ಬೇಕಾಗುತ್ತೆ. ಮನಸ್ಸಿಗೆ ಹೆಜ್ಜೆ ಹೆಜ್ಜೆಗೆ ಬರೆ ಹಾಕಿರ್‍ತಿ. ಈ ವಿರಸದ ಮಧ್ಯೆ ನನಗೆ ಈ ದೇಹ ಸಂಬಂಧ ಬೇಕಾಗಿಲ್ಲ. ನನ್ನ ಬೆಡ್‌ರೂಮ್‌ನಲ್ಲಿ ನಾನು ಮಲಗ್ತೀನಿ' ಎಂದ.

'ಆದರೆ ಅಷ್ಟು ಸ್ವಾತಂತ್ರ್ಯ ನಾನು ಕೊಡಬೇಕಲ್ಲ, ನಿಮಗೆ! ಗಂಡಸರಿಗೇನು ಒಬ್ಬ ಹೆಂಡತಿ ಅನುಭವಿಸಿ ಹಳಬಳಾದಳು ಅಂತ ಇನ್ನೊಬ್ಬ ಹೆಂಗಸಿನ ಹಿಂದೆ ಓಡ್ತೀರಿ. ಆದರೆ ನಮಗೆ ಹೆಂಗಸರಿಗೆ ಒಂದು ಧರ್ಮದ ಕಟ್ಟಿದೆ' ಎಂದು ಏನೇನೋ ಭಾಷಣ ಬಿಗಿಯುವಳು . ಒಂದೊಂದು ಸಲ ಅವನಿಗೆ ಅನಿಸುತ್ತಿತ್ತು. ಅವಳಿಗೆ ಬೇಕಾದ್ದು ತನ್ನಿಂದ ಆರಾಧನೆ ತಾನೆ ? ಹುಚ್ಚು ಪ್ರೇಮದ ಅಮಲಲ್ಲಿ ಅವಳನ್ನು ತೇಲಿಸಿಬಿಡೋಣಾ ಎಂದು ಮನ ಬಂದಂತೆ ಹೊಗಳಿ ಕೊಂಡಾಡುತ್ತಿದ್ದ. ಅವಳು ಹೆಮ್ಮೆಯಿಂದ ಬೀಗುತ್ತ ದೇವತೆ ಭಕ್ತನಿಂದ ಆರಾಧನೆ ಸ್ವೀಕರಿಸುವಂತೆ ಸ್ವೀಕರಿಸುತ್ತಿದ್ದಳು. ಆದರೆ ಆ ವನದಾದ ಸ್ವಂತಿಕೆ, ಸ್ವಂತ ಭಾವನೆ ಯಾವುದೂ ಇರಬಾರದು, ಅದವಳ ಅಭಿಪ್ರಾಯ. ಎಲ್ಲವನ್ನೂ ನೆನೆದು ಮನಸ್ಸಿಗೆ ಆಯಾಸವೆನಿಸಿತು. ಕಣ್ಣು ಮುಚ್ಚಿ ಮಲಗಿದ.

ಮಾರನೆಯ ದಿನ ಆಫೀಸಿನಲ್ಲಿ ಕೂತಾಗ ಎಂದಿನಂತೆ ಸರಾಗವಾಗಿ ಕೆಲಸ ಮಾಡಲಾಗಲಿಲ್ಲ. ಇಲ್ಲಿಂದ ಬೇಕೆಂದಾಗ ಕೆಲಸ ಸಹ ಬಿಡುವಂತಿಲ್ಲ. ತಂದೆ ಮಗಳು ಕುತಂತ್ರ ಮಾಡಿ ಯಾವುದಾದರೂ ಆಪಾದನೆ ಹೊರಿಸಿದರೂ... ಹೊರಿಸಿದರೆ, ತಾನು ಬಲೆಯಲ್ಲಿ ಬಿದ್ದ ಮಿಕ. ಬೆಕ್ಕಿನಿಂದ ಹಿಡಿಯಲ್ಪಟ್ಟ ಇಲಿ ಎನಿಸಿತು. ಆದರೆ ಜವಾಬ್ದಾರಿಯುತ ಲೆಕ್ಕಾಚಾರಗಳು, ಕೈಕೆಳಗಿನ ಸಿಬ್ಬಂದಿ ಅತ್ಯಂತ ಪರಿಣಿತರು.

ಕೆಲಸ ಮುಗಿಸಿ ಐದು ಗಂಟೆಗೆ ಮನೆಗೆ ಬಂದ. ಕಾಫಿ ಕುಡಿದು ಕುರ್ಚಿಯ

ಮೇಲೆ ಕುಳಿತು ಪೇಪರ್ ಓದುವಾಗ ಚಿಂಟು ಬಂದ.

'ಪಪ್ಪಾ... ನಿನ್ನ ತೊಡೆಮೇಲೆ ಕೂತ್ಕೊತೇನೆ' ಎಂದು ಒರಟಾಗಿ ತಂದೆ ತೊಡೆಯೇರಿದ.

'ಕೆಳಗಿಳಿಯೋ ಧಡಿಯಾ' ಎನ್ನುವ ಹಾಗಾಯಿತು.

ಎಂಟು ವರ್ಷದ ಕೊಂಟೆ ಕೋಣ ಬಂದು ತೊಡೆ ಏರಿ ಕುಳಿತನೇಕೆ? ಎನಿಸಿತು.

'ಪಪ್ಪಾ, ನಿನಗೆ ಮುತ್ತು ಕೊಡ್ತೀನಿ' ಎಂದು ತಂದೆಯ ಕೆನ್ನೆಗೆ ಮುತ್ತು ಕೊಟ್ಟ.

'ಏನಿವತ್ತು ಪಪ್ಪನ ಮೇಲೆ ಇಷ್ಟು ಪ್ರೀತಿ, ನಿನ್ನೆ ಕ್ಯಾಟರ್ ಪಿಲ್ಲರ್‌ನಲ್ಲಿ ಹೊಡೆದಿದ್ದೆ' ಎಂದ.

ಆ ವೇಳೆಗೆ ಫೋನ್ ರಿಂಗಾಯಿತು. 'ಓ ಮಮ್ಮಿ ಫೋನ್ ಮಾಡಿದ್ದಾಳೆ, ಹಲೊ! ನಾನು ಮಮ್ಮಿ... ನೀನು ಹೇಳಿದ ಹಾಗೆ ಪಪ್ಪನ ತೊಡೆಯ ಮೇಲೆ ಕೂತೇ ಮಾತಾಡ್ತಿದ್ದೀನಿ. ನಿಜವಾಗಲು ಮಮ್ಮಿ ಪಪ್ಪನಿಗೆ ಐದು ಮುತ್ತು ಕೊಟ್ಟಿದ್ದೀನಿ' ಎಂದವನು ಆ ಕಡೆ ಮಾತು ಕೇಳಿ-

'ಪಪ್ಪಾ... ನೀನೇ ಹೇಳು ಪಪ್ಪಾ... ನಾನು ನಿನ್ನ ತೊಡೆಮೇಲೆ ಕೂತಿಲ್ವಾ?' ಎಂದ.

'ನಿಜವೇನ್ರಿ? ಚಿಂಟು ನಿಮ್ಮ ತೊಡೆಮೇಲೆ ಕೂತಿದ್ದಾನಾ?' ಎಂದಳು ಜಯಶ್ರೀ.

'ಹೌದು ! ನನ್ನ ತೊಡೆ ಮೇಲೆ ಕೂತಿದ್ದಾನೆ' ಎಂದ. ಇಪ್ಪತ್ತು ಕೇಜಿ ಭಾರ ಹೊತ್ತು ಉಸಿರುಸಿರು ಬಿಡುವಂತಾಗಿದೆ ಎಂದುಕೊಂಡ. ಮತ್ತೆ ಚಿಂಟು ಗಟ್ಟಿಯಾಗಿ ಕೂಗಾಡುತ್ತಾ.

'ಪಪ್ಪಾ ತೊಡೆಮೇಲೆ ಕೂತಿದ್ದೇನೆ, ಮಮ್ಮಿ. ಪಪ್ಪಾಗೆ ಮುತ್ತು ಕೊಟ್ಟೆ, ಮಮ್ಮಿ. ಅಮೆರಿಕಾದಿಂದ ನನಗೆ ಕಾರು ತರ್ತಿ ತಾನೆ? ನೀನು ಹೇಳಿದ ಹಾಗೆ ದಿನಾ ಪಪ್ಪನ ತೊಡೆಮೇಲೆ ಕೂತು, ಪಪ್ಪನಿಗೆ ಮುತ್ತು ಕೊಡ್ತೀನಿ. ಪಪ್ಪನಿಗೆ ಚಾಕ್ಲೆಟ್ ತಿನ್ನಿಸ್ತೀನಿ, ಚಿನ್ನಿ ಹಾಗೆ ಪಪ್ಪನ ಕಿವೀಲಿ ಹಾಡು ಹೇಳ್ತೀನಿ' ಎಂದವನೇ-

'ತಗೊಳ್ಳಿ ಪಪ್ಪಾ... ಮಮ್ಮಿ ಮಾತಾಡುತ್ತಾಳೆ' ಎಂದ. ಯಾಂತ್ರಿಕವಾಗಿ ರಿಸೀವರ್ ಕಿವಿಗಿರಿಸಿಕೊಂಡ.

'ಪಾಪಾ ಚಿಂಟೂನ್ನ ಚೆನ್ನಾಗಿ ನೋಡಿಕೊಳ್ಳಿ. ನಾನು ಬೇರೆ ಮೂರು ತಿಂಗಳು ಇರಲ್ಲ. ಅದಕ್ಕೆ ಪ್ರೀತಿ, ಪ್ರೇಮ ವಾತ್ಸಲ್ಯ ಹುಡುಕಾಡೋ ಹಾಗಾಗುತ್ತೆ. ರಾತ್ರಿ ಹೊತ್ತು ಪಕ್ಕದಲ್ಲೇ ಮಲಗಿಸಿಕೊಳ್ಳಿ. ಒದೀತಾನೆ, ಆದರೆ ಹೊಟ್ಟೆ ಹತ್ರ ಒಂದು ದಿಂಬು ಅಡ್ಡ ಇಟ್ಕೊಳ್ಳಿ. ಚಿಂಟೂನ್ನ ಬಿಟ್ಟು ಮೈಸೂರಿಗೆ ಓಡಿ ಹೋಗ್ಬೇಡಿ. ಮೂವ್ವತ್ತಾರು ವರ್ಷದ ನಿಮಗೇ ತಾಯಿ ಹುಚ್ಚು ಇದ್ದರೆ ಎಂಟು ವರ್ಷದ ಮಗು ಅದು ತಾಯಿ ಪ್ರೀತಿಗೆ ಎಷ್ಟು ಹಂಬಲಿಸಬಹುದು?' ಎಂದು ಉಪದೇಶ

ಆರಂಭಿಸಿದಳು.

'ಮಗನ ಮೇಲೆ ಅಷ್ಟು ಪ್ರೀತಿ ಇದ್ದವಳು ಮೂರು ತಿಂಗಳು ಅಮೆರಿಕಾದಲ್ಲಿ ಏಕೆ ಕೂತಿರ್ತಿ? ಬೇಗ ಬಾ...' ಎಂದ.

'ಮಗನನ್ನ ನೋಡಿಕೊಳ್ಳೋದು ನನ್ನೊಬ್ಬಳದೇ ಹೊಣೆ ಅಲ್ಲ. ನಿಮ್ಮದೂ ಹೊಣೆ, ಅವನ ತುಂಟತನ ಕಡಿಮೆ ಆಗಬೇಕಾದ್ರೆ ನಿಮ್ಮಿಂದಲೇ ಆಗಬೇಕು. ತಂದೆ ಪ್ರೀತಿ ಸರಿಯಾಗಿ ಸಿಕ್ಕದೇ ಹಾಗಾಗಿದ್ದಾನೆ. ಪಂಚತಂತ್ರದಲ್ಲಿ ಆ ಉಡಾಳ ರಾಜಕುಮಾರರನ ಕಥೆ ಹೇಳಿ ಹೇಳಿ ಆ ವಿಷ್ಣುಶರ್ಮ ಅನ್ನೋಬ್ರಾಹ್ಮಣ ಪಳಗಿಸಿರಲಿಲ್ಲವಾ? ನೀವೂ ಹಾಗೆ ಪಳಗಿಸಬೇಕು. ಅವನಿಗೆ ಕಥೆ ಅಂದರೆ ತುಂಬಾ ಇಷ್ಟ. ದಿನಾರಾತ್ರಿ ಕಥೆ ಹೇಳಿ. ನಿಮ್ಮ ಹತ್ತಿರವೇ ಮಲಗಿಸಿಕೊಳ್ಳಿ. ಅವನು ನಮ್ಮತ್ತೆ ಹತ್ತಿರ ಮಲಗೋದು ಬೇಡ' ಎಂದಳು.

'ಸರಿ ಇನ್ನೇನು ಅಮ್ಮಾವರ ಆಜ್ಞೆ?' ಎಂದ.

'ನಾಳೆಯಿಂದ ಎಂಟು ದಿನ ಇಲ್ಲಿಂದ ಕಾಲ್ ಮಾಡಲ್ಲ' ಎಂದಳು.

'ತುಂಬಾ ಸಂತೋಷ ನನ್ನ ಕಿವಿಗಳಿಗೆ ರೆಸ್ಟ್ ಸಿಕ್ಕಿದಂತಾಯಿತು' ಎಂದ. ಅವಳು ಕೋಪದಿಂದ ಪೋನ್ ಕುಕ್ಕಿದಳು.

'ತೊಡೆಯಿಂದ ಇಳಿಯೋ ಧಡಿಯಾ... ತೊಡೆ ನೋಯ್ತಾ ಇದೆ' ಎಂದ.

ಚಿಂಟು ಹಟದಿಂದ :

'ಊಂ ನಾನು ಇಳಿಯಲ್ಲ. ನಿನ್ನ ಕಿವೀಲಿ ಎರಡು ಹಾಡು ಹೇಳ್ತೀನಿ. ನಿನಗೆ ಚಾಕ್ಲೇಟ್ ತಿನ್ನಿಸ್ತೀನಿ. ದಿನಾ ಇಷ್ಟು ಮಾಡಿದರೆ ಮಮ್ಮಿ ನಂಗೆ ಅಮೆರಿಕಾದಿಂದ ಒಂದು ಲಕ್ಷ ರೂಪಾಯಿ ಕೊಟ್ಟು ಆಟದ ಕಾರು ತಂದು ಕೊಡ್ತಾಳೆ, ಅದನ್ನ ನಾನೇ ಡ್ರೈವ್ ಮಾಡ್ತೀನಿ' ಎಂದ.

ಚಿಂಟು ಕೆಳಗಿಳಿದು, 'ಹಾಗಾದರೆ ಈಗ ವೀಡಿಯೋದಲ್ಲಿ ಕಾಮಿಕ್ಸ್ ನೋಡ್ಲಿಕ್ ಹೋಗ್ತೀನಿ. ಮಮ್ಮಿಗೆ ಕಾಗದ ಬರೀತಿ ತಾನೇ...?' ಎಂದ.

'ಬರೀತೀನಿ ಹೋಗು' ಎಂದಾಗ ಜೈಲಿಂದ ಬಿಡುಗಡೆ ಆದ ಖೈದಿಯಂತೆ ಆ ಹುಡುಗ ಓಡಿದ.

ಅವನಿಗೂ ತಾನು ಬೇಕಾಗಿಲ್ಲ. ತನಗೂ ಅವನು ಬೇಕಾಗಿಲ್ಲ. ಮಧ್ಯೆ ರಾತ್ರಿ ಚಿಂಟು ಬಂದು ಅವನ ಪಕ್ಕ ಮಲಗಿ. 'ಕಥೆ ಹೇಳು ಪಪ್ಪಾ...' ಎಂದ.

ಅವನಿಗೆ ಕಥೆ ಹೇಳುವಷ್ಟು ಏಕಾಗ್ರತೆ ಇರಲಿಲ್ಲ. 'ಇವತ್ತು ಕಥೆಯಿಲ್ಲ, ಮಲಗಿಕೊಂಡು ನಿದ್ರೆ ಮಾಡು. ಕ್ಯಾಸೆಟಲ್ಲಿ ಹಾಡು ಹಾಕ್ತೀನಿ. ಕೇಳ್ತ ನಿದ್ದೆ ಮಾಡು' ಎಂದ. ಚಿಂಟು ಹಠದಿಂದ–

'ಕಥೆ ಹೇಳದಿದ್ರೆ ಚಾಕ್ಲೆಟ್ ಅಗೆದು, ನಿನ್ನ ಮುಖದ ಮೇಲೆ ಉಗುಳ್ತೀನಿ.

ಮುಖ ಎಲ್ಲಾ ಅಂಟಂಟಾಗುತ್ತೆ. ನೀನು ಮುಖ ತೊಳೀಲಿಕ್ಕೆ ಹೋದಾಗ ಒಂದು ತಂಬಿಗೆ ನೀರು ತಂದು ಹಾಸಿಗೆ ಮೇಲೆ ಚೆಲ್ತೀನಿ. ಅಜ್ಜಿ ಕಥೆ ಹೇಳ್ತಿ ಇದ್ದಾಗ ಅಜ್ಜಿಗೆ ಹೀಗೇ ಮಾಡ್ತಿದ್ದೆ' ಎಂದ.

'ಅದಕ್ಕೆ ಆ ಅಜ್ಜಿ ತಲೆನೋವು ನನಗೆ ಗಂಟು ಹಾಕಿದ್ದಾಳೆ' ಎಂದುಕೊಂಡ. ಆ ಹುಡುಗ ತುಂಬಾ ದುಷ್ಟ ಎಂದು ಗೊತ್ತಿತ್ತು. ಹೀಗಾಗಿ ಮನಸ್ಸಿಲ್ಲದಿದ್ದರೂ ಒಂದು ಕಥೆ ಹೇಳಿದ. ಭೀಮ, ದುರ್ಯೋದನರ ಜಗಳದ ಪ್ರಸಂಗ. ಕೆಲವು ಹೇಳಿದಾಗ ಖುಷಿಯಿಂದ ಕೇಳಿದ, ಕೇಕೆ ಹಾಕಿದ.

'ನೀನು ಬೀಮ ಆಗ್ತೀಯೋ ? ದುರ್ಯೋಧನ ಆಗ್ತೀಯೋ ?' ಸದ್ಗುಣ, ನೀತಿ ಬೋಧೆ ಕಲಿಸಲೆತ್ನಿದ. ಚಿಂಟು ಉತ್ಸಾಹದಿಂದ ಹಾಸಿಗೆ ಮೇಲೆ ಎದ್ದು ಕುಳಿತು,' ನಾನು ಭೀಮ ಆಗ್ತೀನಿ. ನೀನು ದುರ್ಯೋಧನ ಆಗು. ನಾನು ನಿನ್ನ ಜೊತೆ ಫೈಟಿಂಗ್ ಮಾಡಿ, ನಿನ್ನ ಸೋಲಿಸಿ, ಜಜ್ಜಿ ಬಜ್ಜಿ ಮಾಡ್ತೀನಿ' ಎಂದ. ಅವನಿಗೆ ಫೈಟಿಂಗ್ ಮಾಡಬೇಕೆಂಬ ಆದಮ್ಯ ಆಸೆ ಕಂಗಳಲ್ಲಿ ಉಕ್ಕುತ್ತಿತ್ತು. ಏನು ಮಾಡಿದರೂ ಅವನನ್ನು ತಡೆಯುವ ಹಾಗಿಲ್ಲ. ಏಕಾದರೂ ಈ ಕುಸ್ತಿ ಕಾಳಗದ ಕಥೆ ಹೇಳಿದೆನೋ ಎಂದು ತನ್ನನ್ನು ತಾನೇ ಬೈದುಕೊಂಡ.

ಕಡೆಗೆ ಮಗನ ಹಠ ತಡೆಯಲಾರದೇ 'ನೀನು ಭೀಮ, ಈ ದಿಂಬು ದುರ್ಯೋಧನ... ಫೈಟಿಂಗ್ ಮಾಡು., ಯಾರು ಗೆದ್ದರು ಅಂತ ನಾನು ಅನೌನ್ಸ್ ಮಾಡ್ತೀನಿ' ಎಂದ. ಆ ದಿಂಬನ್ನೆ ಅಂಗೈಗಳಿಂದ ಹೊಡೆದ. ತಿರುಚಿದ, ನೆಲಕ್ಕೆ ಅಪ್ಪಳಿಸಿದ. ಅದರ ಮೇಲೆ ಬಿದ್ದು ಕುಣಿದಾಡಿದ. 'ನಾನೇ ಗೆದ್ದೆ ಅಲ್ವಾ ಪಪ್ಪಾ...'

'ನಾಳೆ ಕಾನ್ವೆಂಟ್‌ಗೆ ಹೋದಾಗ ಆ ಭಾಸ್ಕರ್‌ಗೆ ಗುದ್ದಿ ಗುದ್ದಿ ಹೊಡೆದು ಫೈಟಿಂಗ್ ಮಾಡ್ತೀನಿ' ಎಂದ.

'ಹಾಗೆಲ್ಲ ಮಾಡಿದರೆ ಮಮ್ಮಿ ಕಾರು ತಂದುಕೊಡಲ್ಲ. ನಿನ್ನ ಮಿಸ್ ಮಮ್ಮಿಗೆ ಕಾಗದ ಬರೀತಾರೆ. ನಿಮ್ಮ ಹುಡುಗ ತುಂಟ ಆಗಿದ್ದಾನೆ ಅಂದ' ಎಂದ.

'ಆ ಮಿಸ್‌ಗೂ ಚೆನ್ನಾಗಿ ಕಲ್ಲು ತಗೊಂಡು ಹೊಡೀತೀನಿ' ಎಂದ. ಈ ಹುಡುಗನಿಗೆ ಏಕಾದರೂ ಈ ಕಥೆ ಹೇಳಿದೆನೋ ಎಂದುಕೊಂಡ. 'ಪಪ್ಪಾ, ನೀನೆ ಒಂದು ಕಾರು ನನಗೆ ಕೊಡಿಸು' ಎಂದ. 'ಅಂಥಾ ಕಾರು ಅಮೆರಿಕಾದಲ್ಲೇ ಸಿಕ್ಕತ್ತಲ್ಲ' ಎಂದು ರಾಜಸಿಂಹ ನುಡಿದ.

'ಮತ್ತೆ ನೀನು ಏಕೆ ಅಮೆರಿಕಾಕ್ಕೆ ಹೋಗಲ್ಲ? ಏರೋಪ್ಲೇನ್‌ನಲ್ಲಿ ಹೋಗಲಿಕ್ಕೆ ತುಂಬಾ ದುಡ್ಡು ಬೇಕಂತೆ. ನಿನ್ನ ಹತ್ತಿರ ಹಣ ಇಲ್ಲವಂತೆ, ಹೌದಾ ?' ಎಂದ.

'ಯಾರು ಹೇಳಿದ್ದು? ನನ್ನ ಹತ್ತಿರ ಹಣ ಇಲ್ಲ ಅಂತ ?'

'ಅಜ್ಜಿ ಹೇಳಿದಳು, ಮಮ್ಮಿ ಕಂಪನೀಲಿ ಕೆಲಸ ಮಾಡ್ತೀಯಂತೆ. ಮಮ್ಮೀನೆ

ನಿಂಗೆ ಸಂಬಳ ಕೊಡ್ತಾಳಂತೆ. ಆ ಸಂಬಳ ಎಲ್ಲಾ ಮೈಸೂರಲ್ಲಿರೋ ಅಜ್ಜಿಗೆ ಕೊಡ್ತೀಯಂತೆ. ಅಜ್ಜಿ ತುಂಬಾ ಬಟವಳಂತೆ' ಎಂದ.

'ಬಾಯ್ಮುಚ್ಚಿಕೊಂಡು ಮಲಗೊ ಬದ್ಮಾಷ್' ಎಂದು ರೇಗುವ ಮನಸ್ಸಾಯಿತು. ಆದರೆ ಆ ಹುಡುಗ ರೇಗಾಟಕ್ಕೆ ಮತ್ತಷ್ಟು ಹಠಮಾರಿಯಾಗುತ್ತಾನೆ. ಹೀಗಾಗಿ ನಿದ್ರೆ ಬಂದವನಂತೆ ನಟಿಸಿದ.

'ಪಪ್ಪಾ... ಪಪ್ಪಾ... ಇವತ್ತು ಸಂಜೆ ಐದು ಗಂಟೆಗೆ ಮಮ್ಮಿ ನನಗೆ ಫೋನ್ ಮಾಡ್ತಾಳೆ. ನಿನ್ನ ತೊಡೆ ಮೇಲೆ ಕೂತುಕೊಂಡೇ ಫೋನ್ ರಿಸೀವ್ ಮಾಡ್ತೀನಿ. ಪ್ರತಿದಿನ ನಿನ್ನ ಪಕ್ಕದಲ್ಲೇ ಮಲಕ್ಕೋತಿದ್ದೀನಿ. ನಿನಗೆ ಚಾಕ್ಲೆಟ್ ತಿನ್ನಿಸ್ತಿದ್ದೀನಿ, ರಾತ್ರಿ ನೀನು ನನಗೆ ಕಥೆ ಹೇಳ್ತಿದ್ದಿ ಅಂತ ಹೇಳ್ತೀನಿ. ಒಳ್ಳೇ ಹುಡುಗಾ ಆಗಿದ್ದಾನೆ ಅಂತ ನೀನು ಹೇಳು. ಮಮ್ಮಿ ನಂಗೆ ಕಾರು ತಂದುಕೊಡ್ತಾಳೆ' ಎಂದ ಚಿಂಟು.

ಆ ದಿನ ಭಾನುವಾರ. ಮೈಸೂರಿಗೆ ಹೊರಡುವ ಸಿದ್ಧತೆ ಮಾಡಿಕೊಳ್ಳುತ್ತಿದ್ದ ರಾಜಸಿಂಹ.

'ಏನು ಒಳ್ಳೆ ಹುಡುಗ. ಒಂದು ದಿನ ಕಥೆ ಚೆನ್ನಾಗಿಲ್ಲಾಂತ ಹಾಸಿಗೆ ಮೇಲೆ ನೀರು ಚೆಲ್ಲಿದೆ. ಒಂದು ಟ್ಯೂಬ್‌ಲೈಟಿಗೆ ಗೋಲಿ ಎಸೆದೆ, ನನ್ನ ಮುಖದ ಮೇಲೆ ಸೇಬಿನ ಹಣ್ಣಿನ ರಸ ಉಗಿದಿದ್ದ' ಎಂದ.

'ಮತ್ತೆ ನೀನು ನನಗೆ ಕಾಗೆ ಕಥೆ, ಗುಬ್ಬಿ ಕಥೆಗಳನ್ನ ಏಕೆ ಹೇಳ್ತಿ? ನನಗೆ ಫೈಟಿಂಗ್ ಕಥೆಗಳು ಬೇಕು. ಸ್ಟಾರ್ ಟೀವೀಲಿ ಬರೋ ರೆಸ್ಲಿಂಗ್ ಅಂಡರ್ ಟೀಕರ್, ಮಾಚೊಮ್ಯಾನ್ ಅಂಥಾ ಕತೆಗಳು ಹೇಳು ಎಂದರೇ... ಯಾವು ಯಾವುದೋ ಕಾಗೆ ಗುಬ್ಬಿ ಕಥೆ ಹೇಳ್ತಿ. ಇವತ್ತು ಅಂಥಾ ಕಥೆ ಹೇಳಿದರೆ ಬ್ಯಾಟ್ ತಗೊಂದು ಹೊಡೀತೀನಿ' ಎಂದ ಮಗ. ರಾಜಸಿಂಹ ಅಣಕಿಸುತ್ತ,

'ಬ್ಯಾಟ್ ತಗೊಂಡು ಹೊಡಿ, ಕ್ಯಾಟರ್‌ಪಿಲ್ಲರ್ ತಗೊಂಡು ಹೂಡಿ. ನಿಮ್ಮ ಮಮ್ಮಿಗೆ ಅದೇ ಫೋನ್ ಮಾಡ್ತೀನಿ' ಎಂದ. ಹುಡುಗ ಭಯದಿಂದ-

'ನೀನು ಹಾಗೆಲ್ಲಾ ಹೇಳಬೇಡ. ನೀನು ಹಾಗೆಲ್ಲಾ ಹೇಳಿದರೆ ಮಮ್ಮಿ ನಂಗೆ ಕಾರು ತಂದ್ಕೊಡಲ್ಲ' ಎಂದ. ರಾಜಸಿಂಹ ಕ್ರಾಪ್ ಬಾಚಿಕೊಂಡು ಫುಲ್‌ಸೂಟ್ ಧರಿಸಿ ಸಣ್ಣ ಸೂಟ್‌ಕೇಸ್ ಹಿಡಿದು ಮುಂದೆ ಬಂದಾಗ ಬ್ಯಾಟ್ ಹಿಡಿದು ಅಡ್ಡ ಬಂದ ಚಿಂಟು–

'ಮೈಸೂರಿಗೆ ಹೋಗಕೂಡದು. ಸಂಜೆ ನಿನ್ನ ತೊಡೆಯ ಮೇಲೆ ಕೂತುಕೊಂಡು ಫೋನ್ ಮಾಡ್ತೀನಿ. ನಾನು ಒಳ್ಳೆ ಹುಡುಗ ಅಂತ ನೀನು ಫೋನ್ ಮಾಡಬೇಕು' ಎಂದ.

'ದಾರಿಬಿಡು ಬದ್ಮಾಷ್' ಎಂದ. ಐದು ದಿನದಿಂದ ಮಗನ ಕಾಟ ಅನುಭವಿಸಿ ಸಾಕಾಗಿತ್ತು. ಅತಿ ಪುಂಡನಾದ ಈ ಮಗನನ್ನು ತನಗೆ ಗಂಟುಹಾಕಿ, ತಾನು ಎಲ್ಲೋ ಅಮೆರಿಕಾದಲ್ಲಿ ಮಜಾ ಮಾಡುತ್ತಿದ್ದಾಳೆ; ಎನಿಸಿ ಹೆಂಡತಿಯ ಮೇಲೆ ಕೋಪವೂ ಬಂತು. 'ನನ್ನ ಬದ್ಮಾಷ್ ಅಂತೀಯಾ' ಎಂದು ತಂದೆಗೆ ಬ್ಯಾಟಿನಿಂದ ಕಾಲಿಗೆ ಹೊಡೆದ.

ಹುಡುಗ ಚಿಕ್ಕವನಾದರೆ ಏಟು ಚಿಕ್ಕದೇ...? ಕಾಲು ಚುರುಗುಟ್ಟಿದಾಗ ಕೋಪ ಉಕ್ಕಿಬಂತು. ಅದೇ ಬ್ಯಾಟ್ ಕಿತ್ತುಕೊಂಡು ಮುಖ ಮೂತಿ ನೋಡದೆ ದನಕ್ಕೆ ಬಡಿಯುವ ಹಾಗೆ ಬಡಿದ. ನಂತರ ಅಬ್ಬರಿಸೀ ಹೊರಳಾಡುತ್ತಿದ್ದ ಮಗನಿಗೆ ಮುದ್ದು ಮಾಡದೇ ಕೊಂಚ ದಿಗ್ಭ್ರಾಂತಿಯಿಂದ ನಿಂತಿದ್ದ ಇಬ್ಬರು ಆಳುಕಾಳುಗಳಿಗೆ-

'ಅವನಿಗೆ ಯಾರೂ ಮುದ್ದು ಮಾಡಿ ಸಂತೈಸಬೇಡಿ. ಇವತ್ತು ಊಟ ಹಾಕಬೇಡಾಂತ ಅವರಜ್ಜಿಗೆ ಹೇಳು' ಎಂದು ಹೇಳಿ ಸೂಟ್‌ಕೇಸ್ ಹಿಡಿದು ಹೊರಗೆ ಬಂದ. ಸಲೀಮ್ ಓಡಿ ಬಂದು ಕ್ಯಾಡಿಲಾಕ್ ಕಾರಿನ ಬಾಗಿಲು ತೆಗೆದ.

'ಕುಮಾರಪೇಟೆ ಬಡಾವಣೆಯ ಗಣಪತಿ ಗುಡಿ..' ಎಂದ. ಒಂದೆರಡು ಬಾರಿ ಅಲ್ಲಿಗೆ ಕರೆದೊಯ್ದಿದ್ದ ಸಲೀಮ್, ನೇರವಾಗಿ ಕರೆದೊಯ್ದ.

ಕಾರಿನಿಂದ ಇಳಿದು ದೇವಾಲಯದೊಳಗೆ ಬಂದು ದೇವರಿಗೆ ನಮಿಸಿ ಕೊಂಚ ಕಣ್ಣಾಡಿಸುತ್ತಿದ್ದಂತೆಯೇ ಮುಗುಳ್ನಗುತ್ತ ಬಂದು ನಮಸ್ಕಾರ ಎಂದಳು ಮಧುಮತಿ.

ಶುಭ್ರವಾದ ಮಂಜಿನಲ್ಲಿ ತೊಳೆದ ದುಂಡುಮಲ್ಲಿಗೆಯ ಹಾಗಿ ಅರಳಿ ನಳನಳಿಸುತ್ತಿದ್ದ ಅವಳನ್ನು ಕಂಡು ಮನಸ್ಸು ಮುದಗೊಂಡಿತು. ಶುಭ್ರ ಬಿಳುಪಿನ ಮಲ್ಲಿನ ಸೀರೆ, ಕುಪ್ಪಸ, ಉದ್ದಕ್ಕೆ ಹೆಣೆದ ಜಡೆ, ಕಿವಿಗಳಲ್ಲಿ ಒಂದೊಂದು ಮುತ್ತಿದ್ದ ರಿಂಗ್ಸ್, ಒಂದು ಕೈಗೆ ವಾಚ್, ಒಂದು ಕೈಗೆ ಬಿಳಿಯ ದಪ್ಪ ಪ್ಲಾಸ್ಟಿಕ್ ಬಳೆ, ಬರಿಗೊರಳು, ಆದರೂ ಎಂತಾ ಚೆಲುವು ! ಆ ತುಂಬುಗೆನ್ನೆಗಳು, ಪುಟ್ಟ ಬಾಯಿ, ಕೆಂದುಟಿ, ಶಾಂತ ಕೊಳಗಂತಿರುವ ಆ ಕಪ್ಪು ಕಂಗಳು, ದಂತದಲ್ಲಿ ಮಾಟವಾಗಿ ಕಡೆದ ಸುಂದರ ಪ್ರತಿಮೆ.

'ಅಂತೂ ಬಂದಿದ್ದೀರಾ ?' ಎಂದ ನಗುತ್ತ.

'ನಿಮ್ಮನ್ನೇ ನಂಬಿ ಬಂದಿದ್ದೀನಿ' ಎಂದಳು.

ಕಾರಿನ ಬಳಿ ಬಂದಾಗ ಹೇಳಿದ, 'ನನ್ನ ಜೊತೆ ಮೈಸೂರಿಗೆ ಬನ್ನಿ. ಮೈಸೂರಲ್ಲಿ ನನ್ನ ತಾಯಿ ನಡಿಸ್ತಿರೋ ಒಂದು ಡಿಪಾರ್ಟ್‌ಮೆಂಟಲ್ ಸ್ಟೋರಲ್ಲಿ ನಿಮಗೆ ಅಕೌಂಟೆಂಟ್ ಹುದ್ದೆ ಸಿಗಬಹುದು. ನಮ್ಮ ತಾಯಿ ಜೊತೆ ಮಾತಾಡಿದ್ದೀನಿ' ಎಂದ.

ಕಾರಲ್ಲಿ ಕೂಡಲು ಒಂದು ಕ್ಷಣ ಅನುಮಾನಿಸಿದಳು, 'ನಾನು ಬಸ್ಸಲ್ಲಿ

ಮೈಸೂರಿಗೆ ಬರ್ತೀನಿ. ನೀನು ಆ ಡಿಪಾರ್ಟ್‌ಮೆಂಟಲ್ ಸ್ಟೋರಿನ ವಿಳಾಸ ಕೊಡಿ, ಬಂದು ಭೇಟಿ ಮಾಡ್ತೀನಿ' ಎಂದಳು ಮಧುಮತಿ. ಅವನು ಗಂಭೀರವಾಗಿ 'ನನ್ನನ್ನು ನೋಡಿದರೆ ಅಷ್ಟು ಅಪನಂಬಿಕೆ ಮನುಷ್ಯ ಅನಿಸ್ತಿದೆಯ ನಿಮಗೆ? ಒಂದು ಹೆಣ್ಣನ್ನ ನಂಬಿಸಿ, ಎಲ್ಲೋ ಕಿಡ್ನಾಪ್ ಮಾಡಿಕೊಂಡು ಹೋಗೋ ಅಯೋಗ್ಯ ಅಲ್ಲ ನಾನು. ಒಂಟಿಯಾಗಿ ನೀವು ತೊಳಲಾಡ್ತ ಬಸ್ಸಿನಲ್ಲಿ ಮೈಸೂರಿಗೆ ಬಂದು, ರಿಕ್ಷಾ ಮೂಲಕ ವಿಳಾಸ ಹಿಡಿದು ಪರದಾಡ್ತ ಬರೋಕ್ಕಿಂತ ಹನ್ನೆರಡರ ಹೊತ್ತಿಗೆ ಊರು ಮುಟ್ಟಿ ಮನೆ ಮುಂದಿರ್ತೀವಿ' ಎಂದ.

ಅವಳು ಮರು ಮಾತನಾಡದೆ 'ಸರೀ ನಾನು ಬರ್ತೀನಿ' ಎಂದು ಮಾತ್ರ ನುಡಿದು ಹಿಂದಿನ ಸೀಟ್ ಬಳಿ ನಡೆದಳು. ಅವನೇ ಬಾಗಿಲು ತೆಗೆದ. ಅವಳು ಕೂತಮೇಲೆ ತಾನು ಬಾಗಿಲು ಹಾಕಿ, ಮುಂದಿನ ಸೀಟ್ ಬಳಿ ನಡೆದ.

ಸಲೀಮ್ ಓಡಿಬಂದು ಬಾಗಿಲು ತೆರೆದ. ಅವನು ಕೂತ ಮೇಲೆ ತಾನು ಈ ಬಾಗಿಲಿಂದ ಕೂತು ಬಾಗಿಲು ಹಾಕಿದ. ಕಾರು ಹೊರಟಿತು.

ನಾನಾ ಆಲೋಚನೆಗಳಲ್ಲಿ ಮುಳುಗಿದ್ದವಳು, ತಾನು ಒಬ್ಬ ಶ್ರೀಮಂತರನ್ನು ನಂಬಿ, ಹೀಗೆ ಅವನ ಕಾರಿನಲ್ಲಿ ಊರಿಂದೂರಿಗೆ ಹೋಗುತ್ತಿರುವುದು ಸರಿಯೆ? ಮೈಸೂರಿನ ದಾರಿ ಕಂಡು ಹಿಡಿವ ಚಾಣಾಕ್ಷತೆಯೂ ತನಗಿಲ್ಲ. ಈ ಕಾರು ಮೈಸೂರಿಗೆ ಹೋಗುತ್ತಿದೆಯೋ ಮದ್ರಾಸಿಗೆ ಹೋಗುತ್ತಿದೆಯೋ ? ಎಲ್ಲಾದರೂ ಕರೆದುಕೊಂಡು ಹೋಗಿ ಏನಾದರೂ ಮಾಡಿದರೆ ?

ಮಾನ ಹೋದಮೇಲೆ ಬದುಕಿರುವುದ್ಯಾಕೆ ? ಆತ್ಮಹತ್ಯೆ ಒಂದೇ ದಾರಿ. ಹೂ ತಮ್ಮ ಕುಟುಂಬದ ಮೂರು ಹೆಣ್ಣು ಮಕ್ಕಳ ಬಾಳು ಮೂರಾಬಟ್ಟೆಯಾಯಿತು– ಎಂದು ತಾಯಿ ಎದೆಯೊಡೆದು ತಕ್ಷಣ ಸಾಯುತ್ತಾಳೆ.

ಮಾಧವನಿಗೆ ರೂಪವಿಲ್ಲ, ಮಾಲಿನಿ ತನ್ನಂತೆ ರೂಪವತಿ. ಆದರೆ ವಿದ್ಯೆ ಹತ್ತಲಿಲ್ಲ. ಎಸ್ಸೆಲ್ಸಿ ಫೇಲಾಗಿ ಮನೆಯಲ್ಲಿ ಕೂತಳು. ಬಿ.ಎಸ್ಸಿ. ಫಸ್ಟ್‌ಕ್ಲಾಸ್ ಬಂದು, ಟೈಪ್‌ರೈಟಿಂಗ್ ಷಾರ್ಟ್‌ಹ್ಯಾಂಡ್ ಎಲ್ಲಾ ಪಾಸಾದ ತನ್ನ ಮೇಲೆ ತಾಯಿ ಬಹಳ ಭರವಸೆ ಇಟ್ಟಿದ್ದಾಳೆ.

'ಮಧು... ನಿನ್ನಿಂದಲೇ ಈ ಕುಟುಂಬ ಒಂದು ಗತಿ ಕಾಣ್ಬೇಕಮ್ಮ' ಎಂದು ಆಗಾಗ ಹಂಬಲಿಸುವ ತಾಯಿಯ ಚಿತ್ರ ಕಣ್ಣೆದುರು ಬಂತು.

ಸಂಸಾರದ ಪರಿಸ್ಥಿತಿ ತೀರ ವಿಷಮವಾಗಿದೆ. ತಾನು ಬೇರೇನು ದಾರಿ ಕಾಣದೆ ಈ ಅಪರಿಚಿತನಾದ ಶ್ರೀಮಂತ ವ್ಯಕ್ತಿಯನ್ನು ನಂಬಿ ಬರುತ್ತಿದ್ದೇನೆ. ಈತ ಧೂರ್ತನೋ, ಸಜ್ಜನನೋ ? ಮುಂದೆ ತನ್ನ ಬದುಕಲ್ಲಿ ಏನೇನು ಚಿತ್ರ ವಿಚಿತ್ರ ಘಟನೆಗಳು ನಡೆಯಲಿವೆಯೋ? ಈ ಬಗೆಯ ಆಲೋಚನಾ ಸಾಗರಲಿ ಮುಳುಗಿ

ಹೋಗಿದ್ದಳವಳು. ಸಮಯ ಸರಿದು ಗಂಟೆಗಳುರುಳಿದ್ದು ಸಹ ಅವಳಿಗೆ ತಿಳಿಯಲಿಲ್ಲ. ಕಾರು ಒಂದು ಬಂಗ್ಲೆ ಮುಂದೆ ನಿಂತಿತ್ತು. ಡ್ರೈವರ್ ಬಂದು ಬಾಗಿಲು ತೆಗೆದು 'ಮೇಡಂ ಇಳೀರಿ' ಎಂದಾಗ ತನ್ನ ಯೋಚನೆಗಳಿಂದ ಎಚ್ಚೆತ್ತು ಇಳಿದಳು.

'ರಾಜು ಬಂದ್ಯಾಪ್ಪಾ. ಆ ಹುಡುಗಿಯನ್ನು ಕರೆದುಕೊಂಡು ಬಂದ್ಯಾ? ಬಾಮ್ಮಾ ಒಳ್ಳೆ ಲಕ್ಷ್ಮೀದೇವಿ ಇದ್ದಾಗಿದ್ದಿ' ಎಂದು ವಾತ್ಸಲ್ಯದಿಂದ ತನ್ನನ್ನು ಸ್ವಾಗತಿಸಿದ ವೃದ್ಧೆಯನ್ನು ನೋಡಿದಳು. ಹಸಿರು ಬಣ್ಣದ ಸಣ್ಣ ಜರಿ ಅಂಚಿನ ಸ್ಪನ್ ಸಿಲ್ಕ್ ಸೀರೆ ಉಟ್ಟು, ಹಸಿರು ಬಣ್ಣದ ಸಣ್ಣ ಜರಿ ಉಟ್ಟು, ಹಸಿರು ಕುಪ್ಪಸ ತೊಟ್ಟ ಆ ವೃದ್ಧೆಯ ಕೊರಳಲ್ಲಿ ನಾಲ್ಕೆಳೆ ಅವಲಕ್ಕಿ ಸರ, ಕಿವಿಗಳಲ್ಲಿ ವಜ್ರದ ವಾಲೆ, ಕೈಗಳಲ್ಲಿ ಆರಾರು ಚಿನ್ನದ ಬಳೆಗಳಿದ್ದವು.

'ಇವರೇ ನಮ್ಮ ತಾಯಿ ವನಜಮ್ಮ...' ಎಂದು ಅವನು ಪರಿಚಯಿಸಿದಾಗ ಯಾಂತ್ರಿಕವಾಗಿ ಕೈ ಮುಗಿದಳು.

'ಅಮ್ಮ, ನಾನು ಹೇಳಿದ್ನಲ್ಲ, ಬಿ.ಎಸ್ಸಿ., ಓದಿ, ಟೈಪ್‌ರೈಟಿಂಗ್ ಷಾರ್ಟ್‌ಹ್ಯಾಂಡ್ ಎಲ್ಲಾ ಮಾಡ್ಕೊಂಡಿದ್ದಾರೆ. ಹೆಸರು...' ಎಂದು ತಡವರಿಸಿದ. ನಿಜಕ್ಕೂ ಒಂದು ವಾರದ ಹಿಂದೆ ಭೇಟಿಯಾದ ಅವಳ ಹೆಸರು ಅವನಿಗೆ ಮರೆತುಹೋಗಿತ್ತು. ಆಫೀಸಿನ ಲಕ್ಷಾಂತರ ರೂ.ಗಳ ಆ ಆಡಿಟ್ ಕೆಲಸ ಮುಗಿಸಿ ಬಂದಾಗ ಮನೆಯಲ್ಲಿ ಚಿಂಟುವಿನಂಥಾ ಪುಂಡನೊಡನೆ ಏಗಿ ಉದ್ವೇಗಗೊಂಡ, ಉದ್ರಿಕ್ತ ಮನಸ್ಸಿಗೆ ಶಾಂತಿಯೇ ಇರಲಿಲ್ಲ. ಈ ಅಶಾಂತಿಯಲ್ಲಿ ಆ ಸುಂದರ ಮುಖ ಅವನ ನೆನಪಿನಲ್ಲಿ ಉಳಿದಿದ್ದರೂ, ಅವಳ ಹೆಸರು ಮರೆತುಹೋಗಿತ್ತು.

'ನನ್ನ ಹೆಸರು ಮಧುಮತಿ' ಎಂದಳವಳು.

'ಬಾಮ್ಮ... ನೀನು ಬಂದದ್ದು ನನಗೂ ಅನುಕೂಲವಾಯ್ತು' ಎಂದು ಒಳಗೆ ಕರೆದೊಯ್ದರು.

'ಪದ್ಮಾ, ಕಾಫಿ ತಗೊಂಬಾ' ಎಂದು ಕೂಗಿ, ಬಂದ ನಾದಿನಿಗೆ 'ಕಾಫಿ ಕುಡಿದು ಹತ್ತು ನಿಮಿಷ ಸುಧಾರಿಸಿಕೊಳ್ಳಲಿ, ನೀನು ಹಪ್ಪಳ ಕರಿದುಬಿಡು' ಎಂದು ಹೇಳಿ 'ಕಾಫಿ ಕುಡಿದು, ಸುಧಾರಿಸಿಕೊಂಡು ಕಾಲು ತೊಳೆದುಕೊಂಡು ಬನ್ನಿ. ಆಮೇಲೆ ಊಟ ಮಾಡುವಿರಂತೆ' ಎಂದು ತಾಯಿ ಹೇಳಿದಾಗ ರಾಜಸಿಂಹ, 'ಅತ್ತೆ ಯಾವಾಗ ಇಲ್ಲಿ ಬಂದ್ರಮ್ಮ?' ಎಂದ. 'ಶ್ರೀನಿವಾಸ, ಪದ್ಮಾ ಈಗ ಇಲ್ಲೇ ಇದ್ದಾರಪ್ಪಾ. ಮಹಡಿ ಮೇಲಿನ ಮನೆ ಬೇಕೂಂತ ಇಬ್ಬರು ಅಳಿಯಂದಿರು ಒಂದಾಗಿ ಗಲಾಟೆ ಮಾಡಿದರು. ನಾನು ಮುದುಕಿ. ಏನು ಆಟ ಆಡಿದರೂ ನಡೆಯುತ್ತೇಂತ ಭಾವಿಸಿದ್ದರೇನೋ ? ಮಹಡಿಯ ಮೇಲೆ ಬಾಡಿಗೆಗಿರೋ ಕುಟುಂಬದವರಲ್ಲಿ ತಂದೆ ತಾಯಿ ಮಗ ಇದ್ದಾರೆ. ಆತನ ತಂದೆ ಲಾಯರ್. ಮಗನೂ ಅಡ್ವಕೇಟ್. ಅವರಿಗೆ ವಿಷಯ

ತಿಳಿಸಿದೆ. ಅವರು ಇವರಿಬ್ಬರನ್ನ ಕರೆಸಿ, ಉಗಿದು ಉಪ್ಪು ಹಾಕಿ, ಕಾನೂನಿನ ಬೆದರಿಕೆ ಹಾಕಿದರು. ಅದೇ ಸಮಯದಲ್ಲ ಮೂರು ವರ್ಷದ ಲೆಕ್ಕಾಚಾರ, ಇನ್‌ಕಂಟ್ಯಾಕ್ಸ್ ಕಟ್ಟಿದ್ದು ಎಲ್ಲಾ ಪರಿಶೀಲಿಸಲು ಹೇಳಿದ್ದೆ.

'ಅವರು ಲೆಕ್ಕಾಚಾರದ ಪುಸ್ತಕ, ರಸೀತಿಗಳನ್ನ ತರಿಸಿ ಪರಿಶೀಲಿಸಿದಾಗ ಎಲ್ಲಾ ಏರುಪೇರಾಗಿತ್ತು. ಮೂರು ಲಕ್ಷ ರೂ. ಗಳವರೆಗೆ ನುಂಗಿ ಹಾಕಿದ್ದು ಬೆಳಕಿಗೆ ಬಂತು. ಲಾಯರ್ ಕೇಸ್ ಹಾಕೋಣಾ ಅಂದರು. ಆದರೆ ನಾನು ಮುದುಕಿ, ಕೋರ್ಟಿಗೆಲ್ಲಿ ಅಲೆದಾಡಲಿ ?

'ಋಣಾ ಇತ್ತು. ತಿಂದಿದ್ದೀರಿ. ಪುನಃ ಈ ಕಡೆ ಮುಖ ಹಾಕಬೇಡಿ. ಅನ್ನ ಹಾಕಿದ ಮನೆಗೆ ಕನ್ನ ಹಾಕಿದ ನಿಮ್ಮನ್ನ ಪೋಲೀಸರಿಗೆ ಹಿಡಕೊಡಬೇಕು. ಆದರೆ ತಮ್ಮನ ಅಳಿಯಂದಿರು ಅಂತ ಸುಮ್ಮನೆ ಬಿಟ್ಟಿದ್ದೇನೆ. ಹೊರಟು ಹೋಗಿ. ಅಂಗಡಿ ಋಣ ನಿಮಗೆ ತೀರಿಹೋಯ್ತು ಅಂದೆ. ಅವರಿಬ್ಬರು ಹೊರಟು ಹೋದರು. ಒಳಗಿಂದೊಳಗೆ ಚೆನ್ನಾಗಿ ಸಂಪಾದಿಸಿದ್ದಾರೆ. ಕೆಲವು ಏಜೆನ್ಸಿ ಹಿಡಿದಿದ್ದಾರೆ. ಹೀಗಾಗಿ ಶಾಂತಿನಗರದಲ್ಲೊಂದು ಅಂಗಡಿ ಹಾಕಿದ್ದಾರೆ. ಶ್ರೀನಿವಾಸನ ಮೂರನೇ ಮಗಳು, ಅವರ ಸಂಬಂಧಿಕರ ಹುಡುಗನನ್ನೇ ವಿವಾಹ ಆಗ್ತಿದ್ದಾಳೆ. ಆ ಮದುವೆ ಮುಂದಿನ ತಿಂಗಳಿದೆ. ಶ್ರೀನಿವಾಸನ ಮೂರನೆ ಮಗಳ ಮದುವೆ ಆದಮೇಲೆ ಆ ಮನೆಗೆ ಹೊರಟ್ಹೋಗ್ತಾನೆ. ಆ ಮದುವೆಗೆ ನಾನೊಂದು ಇಪ್ಪತ್ತು ಸಾವಿರ ಸಹಾಯ ಮಾಡ್ತಿದ್ದೀನಿ. ಹೀಗಾಗಿ ಈ ಒಂದು ತಿಂಗಳು ಇಲ್ಲಿರ್ತಾರೆ' ಎಂದು ವಿವರವಾಗಿ ತಿಳಿಸಿದರು ವನಜಮ್ಮ.

ಕಾಫಿ ಕುಡಿದು ಸುಧಾರಿಸಿಕೊಂಡ ಮೇಲೆಯೂ ತಾಯಿ ಮಗನದೇ ಮಾತು. ಕೈ ಕಾಲು ತೊಳೆದು ಬಂದ ಇಬ್ಬರೂ ಜೊತೆಗೆ ತಾವು ಕೂತು ಊಟ ಮಾಡಿದರು.

ಮಧುಮತಿಗೆ ತಾನು ನೆಂಟರ ಮನೆಗೆ ಬಂದಿದ್ದೇನೊ? ಕೆಲಸ ಕೇಳಿ ಉದ್ಯೋಗಕ್ಕೆ ಬಂದಿದ್ದೇನೋ ? ಅರ್ಥ ಆಗಲಿಲ್ಲ. ಊಟದ ಸಮಯದಲ್ಲಿ ತಾಯಿ ಮಗ ಮಾತಾಡಿಕೊಂಡ ಕೆಲವು ಸಂಭಾಷಣೆ ಕೇಳಿಸಿಕೊಂಡಾಗ ಅವನ ದಾಂಪತ್ಯ ಜೀವನದಲ್ಲಿ ಅಪಸ್ವರ ನುಡಿಯುತ್ತಿದೆಯೆಂದು ಅವಳಿಗನಿಸಿತು. ಶ್ರೀಮಂತ, ಫ್ಯಾಕ್ಟರಿ ಹಾಗೂ ಟೆಕ್ಸ್‌ಟೈಲ್ ಮಾಲಿಕ. ಬೆಲೆಬಾಳುವ ಕಾರು, ಭವ್ಯವಾದ ಬಂಗಲೆ ಎಲ್ಲಾ ಇರುವ ಇಂಥವರ ಜೀವನದಲ್ಲಿಯೂ ಈ ರೀತಿ ಅಶಾಂತಿ, ಮನಃ ಕದಡುವ ಸನ್ನಿವೇಶಗಳು ಇರುತ್ತವೆಯೆ ? ಬಡವರಾದ ತಮಗೆ ಹೊಟ್ಟೆಪಾಡಿನ ಚಿಂತೆ ಬಡತನದ ಕಿರುಕುಳಗಳಾದರೆ... ಇವರಿಗೆ ಹೊಟ್ಟೆ ತುಂಬಿದ್ದು ಇಂಥಾ ಸಮಸ್ಯೆಗಳೇ ಏನಿಸಿತು. ತಾಯಿ ಮಗನಿಗೆ 'ಚೆನ್ನೈಗೆ ವಾರ ವಾರ ಮುಂಬೈಗೆ ಟ್ರಂಕ್‌ಕಾಲ್ ಮಾಡೋ ಸೌಲಭ್ಯನಾದರೂ ಇದೆಯೇನಪ್ಪಾ...?' ಎಂದರು.

'ಸೌಲಭ್ಯ ಏನೋ ಇದೆಯಮ್ಮ. ಆದರೆ ಮಗು ಅಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳೋವರೆಗೂ ಇಲ್ಲಿಂದ ಫೋನ್ ಮಾಡಿ ಅವಳ ಮನಸ್ಸು ವಿಚಲಿತ ಗೊಳಿಸಬೇಡಿ. ಮೊದಲೇ ಪಪ್ಪಾ... ಪಪ್ಪಾ ಅಂತ ಎರಡು ರಾತ್ರಿ ಅತ್ತಳಂತೆ. ಈಗೀಗ ಹೊಂದ್ಕೋತಿದ್ದಾಳೆ. ವಾರ ವಾರ ಪಾಲಕರು ಹೋಗಿ, ಎರಡು ಗಂಟೆ ಇದ್ದು ಬರಬಹುದು. ಅಮ್ಮ ಪ್ರತಿವಾರ ಹೋಗಿ ಬರ್ತ್ತಾಳೆ. ಮೂರು ತಿಂಗಳಾದ ಮೇಲೆ ನಿಮಗೆ ಫೋನ್ ನಂಬರ್, ವಿಳಾಸ ಕೊಡ್ತೀನಿ ಅಂದಿದಾಳೆ ಜಯಶ್ರೀ' ಎಂದ.

'ಏನೋ ಆ ಮಗೂನ್ನ ನೆನಸಿಕೊಂಡ್ರೆ ನನಗೆ ಚಡಪಡಿಸೋ ಹಾಗಾಗುತ್ತಪ್ಪಾ. ಏಕಾದರೂ ಹಚ್ಚಿಕೊಂಡನೊ?' ಎಂದರು. ಅವನು ನಿಟ್ಟುಸಿರಿಟ್ಟು-

'ಆಫೀಸಿಂದ ಬಂದರೆ ಹುಡುಕಾಡೋ ಹಾಗಾಗತ್ತಮ್ಮ. ಡೈನಿಂಗ್ ಟೇಬಲ್ ಮುಂದೆ ಕೂತರೂ, ಪಕ್ಕದ ಪುಟ್ಟ ಕುರ್ಚಿ ನೋಡಿದರೆ ಊಟ ಗಂಟಲಲ್ಲಿಳಿಯಲ್ಲ. ಯಾವ ಅಪರಾಧಕ್ಕೆ ಈ ಒಂಟಿತನದ ಶಿಕ್ಷೆ ಅಂತ ಒಮ್ಮೊಮ್ಮೆ ನನಗೆ ನಾನೇ ಯೋಚಿಸಿ ಖಿನ್ನನಾಗ್ತೇನೆ...'

'ನನಗೂ ಒಂಟಿತನದ್ದೇ ಶಿಕ್ಷೆ ಆಗಿದೆಯಪ್ಪಾ. ಆಗಾಗ ನೀನು ಬರ್ತ್ತಿ. ಇದೊಂದೆ ಆಸೆಗೆ ನಾನು ಬದುಕಿದ್ದೀನಿ. ಅವಳು ಬರೋದು ಇನ್ನು ಎರಡೂವರೆ ತಿಂಗಳಲ್ಲೇನಪ್ಪಾ ?' ಎಂದರು. 'ಹೌದಮ್ಮ ಏಕೆ ?' ಎಂದ.

'ವಾರವಾರ ಬಂದು ಹೋಗಪ್ಪಾ. ಆಮೇಲೆ ಅವಳು ಬಂದು ಸೆರೆ ಹಿಡಿದ್ರೆ ಮೂರು– ನಾಕು ತಿಂಗಳು ನೀನು ಈ ಕಡೆ ಬರೋಹಾಗಿಲ್ಲ' ಎಂದರು.

'ಅವಳು ನನ್ನ ದೇಹ ಮಾತ್ರ ಸೆರೆ ಹಿಡಿತಾಳಮ್ಮ... ಮನಸ್ಸು, ಹೃದಯ ಇಲ್ಲೇ ಇರತ್ತೆ. ಇಲ್ಲಿ ಬಂದಾಗಲೇ ಕೊಂಚ ಶಾಂತಿ' ಎಂದ. ಎದುರಿಗೊಬ್ಬ ಅಪರಿಚಿತ ವ್ಯಕ್ತಿ ಇದ್ದಾರೆಂದು ಗಮನಿಸದೇ ತಾಯಿ ಮಗ ತೀರ ಅಂತರಂಗದ ಇಂಥಾ ವಿಷಯ ಮಾತಾಡಿದ್ದು ಮಧುಮತಿಗೆ ಕೊಂಚ ಆತಂಕವೆನಿಸಿತ್ತು. ಆಗಾಗ ಅವಳ ಕಡೆ ತಿರುಗಿ 'ನಿಧಾನವಾಗಿ ಊಟ ಮಾಡಮ್ಮ. ಹೊಸ ಜಾಗ ಅಂತ ಸಂಕೋಚ ಪಡಬೇಡ' ಅಂತ ಹೇಳಿ ಉಪಚರಿಸಿದರು.

'ಅವರಿಗೆ ಉದ್ಯೋಗದ ವಿಷಯದಲ್ಲಿ ಆತಂಕವಿದೆ, ಉದ್ಯೋಗ ಕೊಡ್ತೀನಿ ಅಂತ ನೀನು ಹೇಳಿಬಿಟ್ರೇ ನಿಶ್ಚಿಂತರಾಗಿ ಊಟ ಮಾಡ್ತಾರೆ' ಎಂದು ನಕ್ಕ ರಾಜಸಿಂಹ.

'ಖಂಡಿತ ಕೊಡ್ತೀನಪ್ಪಾ, ನೀನು ಶಿಫಾರಸ್ ಮಾಡಿ ಕರೆದುಕೊಂಡು ಬಂದ ಹುಡುಗಿ ಅಂದಮೇಲೆ ನಾನು ಖಂಡಿತ ಉದ್ಯೋಗ ಕೊಡ್ತೀನಿ' ಎಂದರು.

ಊಟ ಮಾಡಿದ ಮೇಲೆ ಪದ್ಮಾವತಿ ಎಲೆಗೋಮೆ. ಮಾಡತೊಡಗಿದಳು, 'ಬಾಮ್ಮಾ... ಹೊರಗಡೆ ಮಾತಾಡೋಣ' ಎಂದು ಅವಳನ್ನು ಕರೆದೊಯ್ದರು.

ರಾಜಸಿಂಹ ಊಟ ಮುಗಿಸಿ, ಒಳಗಿನ ಕೋಣೆಯಲ್ಲಿ ಮಲಗಿಬಿಟ್ಟ. ಒಂದೇ ಗೋಡೆ ಅಡ್ಡದ, ಆ ಪುಟ್ಟ ಹಜಾರದಲ್ಲಿ... ಮಾತುಕತೆ ಏಕೆಂದು ಆಕೆ ಅವಳನ್ನು ಹೊರಗೆ ಕರೆದೊಯ್ದರು. ಎರಡು ಗಂಟೆ ನಿರಾಳವಾಗಿ ಮಾತುಕತೆ ನಡೆಯಿತು.

ತಮ್ಮ ಮನೆ ಪರಿಸ್ಥಿತಿ ಮುಚ್ಚಿಟ್ಟುಕೊಳ್ಳದೆ ಹೇಳಿದಳವಳು. ಆಕೆ ಅಂಗಡಿಯ ಪಕ್ಕ ಇದ್ದ ತಮ್ಮನ ಸಂಸಾರ ವಾಸವಾಗಿತ್ತು. ಆಗ ಇದು ಚಿಕ್ಕದಾಗಿತ್ತು. ತನ್ನ ಮಗ ಚೆನ್ನಾಗಿ ಹಣಕಾಸು ಕೊಟ್ಟಮೇಲೆ ಅಂಗಡಿಯ ಗೋಡೌನ್ ಮನೆಯ ಆ ಪಕ್ಕ ಕಟ್ಟಿಸಿ, ವಿಶಾಲ ಹಜಾರ, ಒಂದು ರೂಮ್, ಅಡಿಗೆ ಮನೆ, ಬಚ್ಚಲ ಮನೆ, ಶೌಚಗೃಹ ಕಟ್ಟಿಸಿದ್ದೇನೆ. ಒಟ್ಟು ಮನೆಗೆ ಬೋರ್‌ವೆಲ್ ಹಾಕಿಸಿದ್ದೇನೆ. ಮಹಡಿಯ ಮೇಲಿನ ಮನೆ, ನಮ್ಮನೆ. ಈ ಮನೆ ಮೂರು ಮನೆಗೂ ನೀರಿನ ಸಮೃದ್ಧಿ ಇದೆ. ಈ ಮನೇಲಿ ನನ್ನ ತಮ್ಮ, ತಮ್ಮನ ಹೆಂಡತಿ, ಒಬ್ಬ ಅಳಿಯ, ಇಬ್ಬರು ಹೆಣ್ಮಕ್ಕಳಿದ್ದರು. ಈಗ ಅವರೆಲ್ಲಾ ಶಾಂತಿನಗರದ ಮನೆಗೆ ಹೋಗಿದ್ದಾರೆ. ಈ ಮನೇಲಿ ನಿಮ್ಮ ತಂದೆ ತಾಯಿ ನಿಮ್ಮ ಕುಟುಂಬ ಇರಲಿ. ನೀನು ನನ್ನ ಮನೇಲಿರು. ನಿಮ್ಮ ತಂದೆಗೂ ಕೆಲಸ ಕೊಡ್ತೀನಿ. ನಿನ್ನ ತಮ್ಮ ಕಾಲೇಜು ಮುಗಿಸಿ, ಸಂಜೆ ಅಂಗಡಿ ವ್ಯಾಪಾರಕ್ಕೆ ಬರಲಿ. ಸಂಜೆ ಹೊತ್ತು ಐದಾರು ಜನ ಕೆಲಸಗಾರರು ಬೇಕಾಗುತ್ತೆ. ಮನೆ ಸಾಲದಿದ್ರೆ ರಾತ್ರಿ ಹೊತ್ತು ನಿನ್ನ ತಮ್ಮನೂ, ನಮ್ಮ ಆ ಮನೆ ಹಜಾರದಲ್ಲಿ ಬಂದು ಮಲಗಲಿ. ನೀನಂತೂ ಅಲ್ಲೇ ಇರ್ತೀ ಎಂದರು ವನಜಮ್ಮ.

'ಅದಕ್ಕಿಂತ ಚಿಕ್ಕ ಮನೇಲಿದ್ದು, ಬೀದಿ ನಲ್ಲಿ, ಬೋರ್‌ವೆಲ್‌ನಿಂದ ನೀರು ತಂದು, ಬೆಂಗಳೂರಲ್ಲಿ ಜೀವನ ಮಾಡ್ತ ಇದ್ದೀವಿ. ಇಂಥಾ ಮನೆ ಸಿಕ್ತಾ ಇರೋದು ನನ್ನ ಪುಣ್ಯ' ಎಂದರು. ಮಧುಮತಿ. ಆಕೆ ಆತ್ಮೀಯವಾಗಿ– 'ಈ ಮನೆಗೆ ನಾನು ಬಾಡಿಗೆ ತೆಗೆದುಕೊಳ್ಳಲ್ಲಮ್ಮ. ನಿಮ್ಮ ತಂದೆ ಕೈಲಾದಷ್ಟು ಹೊತ್ತು ಅಂಗಡೀಲಿದ್ದು, ಅಂಗಡಿ ಲೆಕ್ಕಾಚಾರ ನೋಡಿಕೊಳ್ಳಲಿ. ಅವರಿಗೆ ಎಂಟುನೂರು ಕೊಡ್ತೀನಿ. ನಿನಗೆ ನನ್ನ ಮನೆ ಕೆಲಸ ರಾತ್ರಿಹೊತ್ತು ರಸೀತಿ ಪರಿಶೀಲಿಸಿ ಅಂಗಡಿ ಲೆಕ್ಕಾಚಾರಗಳನ್ನು ಬರೆದಿಡೋದು ಎಲ್ಲಾ ಮಾಡಬೇಕು. ಎರಡು ಸಾವಿರ ರೂ. ಕೊಡ್ತೀನಿ' ಎಂದರು.

'ತುಂಬಾ ಉಪಕಾರ ಆಯ್ತಮ್ಮ. ಜನ್ಮ ಕೊಟ್ಟ ತಾಯಿ ನಂತರ ನೀವೇ ನನಗೆ ಎರಡನೆಯ ತಾಯಿ' ಎಂದು ಕೃತಜ್ಞತೆಯಿಂದ ಹೇಳಿದಳು. ಆಕೆ ವಿಚಲಿತರಾಗಿ-

'ನನ್ನ ಹಣಕ್ಕಾಗಿ ಹತ್ತಿರ ಬರೋರು ಹತ್ತಾರು ಜನ ಇದ್ದಾರಮ್ಮ, ಆದರೆ ನನ್ನಲ್ಲಿರೋ ತಾಯ್ತನದ ಒರತೆ ಹಾಗೇ ಬತ್ತಿ ಹೋಗ್ತಾ ಇದೆ. ನಮ್ಮ ಅಣ್ಣನ ಮಕ್ಕಳು ಬಿ.ಎ., ಬಿ.ಎಸ್ಸಿ ಓದಿದ ಬುದ್ಧಿವಂತೆಯರು, ತಾವೇ ಬೃಹಸ್ಪತಿಗಳೂಂತ ಅಹಂಕಾರ. ಹೈಸ್ಕೂಲ್, ಬ್ಯಾಂಕ್, ಎಲ್ಲೆಲ್ಲೋ ಉದ್ಯೋಗದಲ್ಲಿ ಸೇರಿಕೊಂಡು, ಡೈಲಿ ಟ್ರಾವಲ್ ಮಾಡಿ ತೊಳಲಾಡ್ತಾರೆ. ಈ ಅಂಗಡಿ ಕೆಲಸ ಅಂದರೇ ಅವರಿಗೆ

ನಿಕೃಷ್ಟ. ಎಸ್ಸೆಲ್ಸಿ ಫೇಲಾದ ಮೂರು ಚುರುಕಾದ ಹುಡುಗೀರು, ಸೇಲ್ಸ್ ಗರ್ಲ್ ಆಗಿ ಈ ಅಂಗಡಿ ಕೆಲಸಕ್ಕೆ ಬಂದಿದ್ದಾರೆ. ಅವರಿಗೆ ಆರುನೂರು ರೂ.ಗಳು ಕೊಡ್ತೀನಿ. ಶೀನು ಜೊತೆ ಬಾಂಬೆಗೆ ಹೋಗಿ ಅಭ್ಯಾಸ ಇರೊ ವೆಂಕಟೇಶ್ ಅನ್ನೋ ಕೆಲಸಗಾರ ಒಬ್ಬ ಹೋಗಿ ಮಾಲು ತರ್‍ತಾನೆ, ನನ್ನ ತಮ್ಮ ಅವನ ಇಬ್ಬರು ಅಳಿಯಂದಿರು ಬೇರೆ ಊರಿನ ಏಜೆನ್ಸಿಗಳಿಗೆ ಕಾಗದ ಬರಿಯೋದು ಅಲ್ಲಿನ ಪ್ರತಿನಿಧಿಗಳು ಮಾಲು ತಂದಾಗ, ಅವರೊಂದಿಗೆ ಮಾತುಕತೆ, ಹಣಕಾಸಿನ, ಚೆಕ್ ವ್ಯವಹಾರ ಎಲ್ಲಾ ನೀನು ನೋಡಿಕೊಳ್ಳಬೇಕು' ಎಂದು ಕೆಲಸದ ಬಗ್ಗೆ ವಿವರಣೆ ನೀಡಿದರು.

'ಆಗಲಮ್ಮ, ನೀವು ಹೇಳಿದ ಎಲ್ಲಾ ಕೆಲಸಗಳನ್ನು ದಕ್ಷತೆಯಿಂದ ಮಾಡ್ತೀನಿ' ಎಂದಳು ಮಧುಮತಿ .

ಅಷ್ಟು ಹೊತ್ತಿಗೆ ಪದ್ಮಾವತಿ ಬಂದು 'ಅತ್ತಿಗೆ ಆ ಮನೆಗೆ ಹೋಗಿಬರ್‍ತೀನಿ. ನಳಿನಿ ಫೋನ್ ಮಾಡಿದ್ದಳು. "ಐದು ಗಂಟೆಗೆ ಮೋಹನ್ ರೇಷ್ಮೆ ಸೀರೆಗಳು ತರ್‍ತಾನೆ, ಸೀರೆ ಆರಿಸುವಾಗ ನೀನು ಇರಮ್ಮ" ಅಂತಾಳೆ' ಎಂದರು. ವನಜಮ್ಮ ಅಸಮಾಧಾನದಿಂದ 'ಈಗ ನೀನು ಹೊರಟರೇ ಗತಿಯೇನೇ ಪದ್ಮ, ರಾಜು ಬಂದಿದ್ದಾನೆ. ರಾತ್ರಿಗೆ ಬಿಸಿಬೇಳೆ ಹುಳಿ ಅನ್ನ, ಗಸಗಸೆ ಪಾಯಸ, ಉಪ್ಪೇರಿ ಎಲ್ಲಾ ಅವನಿಗಿಷ್ಟವಾದ ಅಡಿಗೆ ಮಾಡ್ಸೋಳಿದ್ದೆ' ಎಂದಳು.

'ಇಲ್ಲಾ ಅತ್ತಿಗೇ... ಈಗ ಫೋನ್ ಮಾಡಿದರೂ ಹೋಗದೇ ಇದ್ದರೆ ನಳಿನಿ ಕೋಪ ಮಾಡ್ಕೋತಾಳೆ. "ಮಳೆ ನಿಂತರೂ ಮರದ ಹನಿ ನಿಲ್ಲಲಿಲ್ಲಾಂತ ನಿಂದೇನಮ್ಮ ಅವಸ್ಥೆ ? ಅವರಂಗಡಿ ಕೆಲಸಾ ಬಿಟ್ಟಿದ್ದಾಯಿತು. ಅವರ ಮನೆ ಖಾಲಿ ಮಾಡಿದ್ದು ಆಯಿತು, ಇನ್ನು ಅವರ ಮನೆ ಊಳಿಗದಾಳಾಗೇ ನೀನು ಎಷ್ಟು ದಿನ ಇರ್‍ತೀ ?' ಎಂದಳು. ಇಲ್ಲವೇ ಅತ್ತಿಗೆಗೆ ಜ್ವರಾ ಬಂದಿತ್ತು. ಅದಕ್ಕೆ ನಾಲ್ಕು ದಿನ ಇದ್ದೇ ಅಂದೆ. ಮನೇಲಿ ಮದುವೆಯ ಕೆಲಸ ಕಾರ್ಯಗಳು ಕಾದು ಕೂತಿದೆ, ಬೇಗ ಬಾ... ಅಂದಳು ಎಂದರು' ವನಜಮ್ಮ ಕೋಪದಿಂದ.

'ಹೋಗಮ್ಮ ಹೋಗು. ಮೊದಲಿಂದ ನಳಿನೀನೇ ನಿನ್ನ ಸಾಕು ಸಲಹಿದೋಳು' ಎಂದರು.

ಪದ್ಮಾವತಿ ಕಂಗಳೊರೆಸಿ ಕೊಂಡು, 'ಹಿಂದೆ ಸಾಕಿ ಆಶ್ರಯ ಕೊಟ್ಟೋರು ನೀವತ್ತಿಗೆ. ಆದರೆ ಇವರು ಶಕ್ತಿಮೀರಿ ನಿಮ್ಮ ಅಂಗಡಿಗೆ ದುಡಿದಿದ್ದಾರೆ. ಆದರೆ ಮುಂದೆ ನಮ್ಮನ್ನ ಸಾಕೋರು ಅಳಿಯಂದಿರುಗಳೆ. ಇಲ್ಲಾ, ನಿಮಗೆ ಕೆಟ್ಟೋರಾಗ ಬೇಕು. ಇಲ್ಲದಿದ್ದರೆ ಅವರ ಪಾಲಿಗೆ ಕೆಟ್ಟೋರಾಗಬೇಕು. ನಿನಗೆ ಹೇಗಿದ್ದರೂ ಬೇರೆ ಹುಡುಗಿ ಸಿಕ್ಕಿದ್ದಾಳಲ್ಲ. ನಾನು ಹೋಗ್ತೀನಿ ಅಪ್ಪಣೆ ಕೊಡು' ಎಂದರಾಕೆ.

'ಹೋಗಮ್ಮ, ಹೋಗಿ ಬಾ... ಹೋಗುವಾಗ ವಿರಸ ಏಕೆ?' ಎಂದ ವನಜಮ್ಮ

ಮಧುಮತಿಯ ಕಡೆ ತಿರುಗಿ 'ಇವತ್ತಿನಿಂದಲೇ ನಿನಗೆ ಅಡಿಗೆ ಕೆಲಸ ಎಲ್ಲಾ ಗಂಟು ಬಿತ್ತಮ್ಮ. ಬಂದ ಎರಡು ದಿನ ವಿಶ್ರಾಂತಿ ಕೊಡಬೇಕು ಅಂತಿದ್ದೆ' ಎಂದರು.

'ಪರವಾಗಿಲ್ಲ ಅಮ್ಮ, ನನಗೆ ಬೇಕಾಗಿದ್ದು ದುಡಿಮೆ, ತಂದೆ ತಾಯಿ ಎಲ್ಲೋ ನಾನೆಲ್ಲೋ ಅನ್ನೋ ಹಾಗಿಲ್ಲ. ನಮ್ಮ ತಂದೆ ತಾಯಿಗೂ ಇಲ್ಲೇ ಆಶ್ರಯ ಕೊಡ್ತಿದ್ದೀರಿ. ನಿಮ್ಮಂಥಾ ಆಶ್ರಯದಾತರು ಒಡತಿಯಾಗಿ ಸಿಕ್ಕಿದ್ದು ನನ್ನ ಭಾಗ್ಯ' ಎಂದಳವಳು.

ಕೊಂಚ ಹೊತ್ತಿನ ನಂತರ ಆಕೆ ಅವಳನ್ನು ಅಡುಗೆ ಮನೆಗೆ ಕರೆತಂದರು. ಅಡುಗೆ ಮನೆ ಒಂದು ಭಾಗಕ್ಕೆ ಅಡುಗೆ ಕಟ್ಟೆ, ಗ್ಯಾಸ್... ಇನ್ನೊಂದೆಡೆ ಗೂಡಿನಲ್ಲಿ ಮಿಕ್ಸರ್. ಅದಕ್ಕೆ ಹತ್ತಿರಾಗಿ ಎಲೆಕ್ಟ್ರಿಕ್, ಸಾಕೆಟ್ ಪ್ಲಗ್ ಜೋಡಿಸಲು ಅನುಕೂಲವಿತ್ತು. ಎದುರು ಭಾಗದ ಗೂಡಿನಲ್ಲಿ ಓರಣವಾಗಿ ಜೋಡಿಸಿಟ್ಟ ದೊಡ್ಡ ದೊಡ್ಡ ಡಬ್ಬಿಗಳು. ಅದರಲ್ಲಿದ್ದ ಬಗೆ ಬಗೆಯ ದಿನಸಿ ಸಾಮಾನು. ಕೆಳಗೆ ಹತ್ತು ಕೆ.ಜಿ. ಹಿಡಿಸುವ ದೊಡ್ಡ ದೊಡ್ಡ ಸ್ಟೀಲ್ ಡಬ್ಬಿಗಳಲ್ಲಿ ಅಕ್ಕಿ, ಬೇಳೆ, ಗೋಧಿ, ಗೋಧಿಹಿಟ್ಟು ಇದ್ದವು. 100 ಲೀಟರಿನ ಪುಟ್ಟ ಫ್ರಿಜ್, ಅದರಲ್ಲಿ ತರಕಾರಿ ಮಾತ್ರ ಇಟ್ಟಿದ್ದರು. 'ನನಗೆ ಹೊತ್ತುಹೊತ್ತಿಗೆ ಬಿಸಿ ಅಡುಗೆ ಆಗಬೇಕು. ಫ್ರಿಜ್ನಲ್ಲೇನಿದ್ರು ಉಳಿದ ಹಾಲು, ತರಕಾರಿ ಅಷ್ಟೆ. ಇದನ್ನ ತಂಗಳು ಪೆಟ್ಟಿಗೆಯಾಗಿ ನಾನು ಉಪಯೋಗಿಸಲ್ಲ' ಎಂದರು ವನಜಮ್ಮ.

ಸಂಜೆ ರಾಜಸಿಂಹ ಎದ್ದಾಗ ಐದು ಗಂಟೆ. ಅವನು ಹೊರಗಡೆ ಬಂದಾಗ, ಹಜಾರದ ಮಂಚದ ಮೇಲೆ ಕುಳಿತಿದ್ದ ವನಜಮ್ಮ 'ಎದ್ಯಾಪ್ಪಾ, ಕಾಲು ತೊಳೆದುಕೊ, ಮಧು... ಕಾಫಿ ತಗೊಂಬಾಮ್ಮ' ಎಂದರು. ಕಾಲು ತೊಳೆದುಕೊಂಡು ಬಂದು ಮಂಚದ ಮೇಲೆ ತಾಯಿ ಪಕ್ಕ ಕೂತವ.

ಒಳಗಿನಿಂದ ಒಂದು ಸ್ಟೀಲ್ ಟ್ರೇನಲ್ಲಿ ಎರಡು ಲೋಟ ಕಾಫಿ ತಂದ ಮಧು, ಇಬ್ಬರಿಗೂ ನೀಡಿದಳು. ಕೊಂಚ ಕೆದರಿ ಹಾರಾಡಿದ ಮುಂಗುರುಳು... ಒಲೆ ಮುಂದಿದ್ದವರಿಂದ ಬೆವರಿ ಕೆಂಪೇರಿದ ಕೆನ್ನೆಗಳು, ಅಲಂಕಾರದ ಸಂಪರ್ಕ ಇಲ್ಲದಿದ್ದರೂ ಸುಂದರವಾದ ಮುಖ, ಅವಳ ಮುಖ ನೋಡಿ ಹಾಸ್ಯದಿಂದ. 'ಇದೇನು ! ಇವತ್ತಿನಿಂದಲೇ ಡ್ಯೂಟಿಗೆ ಜಾಯಿನ್ ಆಗ್ಬಿಟ್ರಾ? ಅತ್ತೆ ಎಲ್ಲಿ?' ಎಂದ.

ಅವಳ ಕೊಂಚ ನಾಚಿ ಕೆಂಪೇರಿದಳು. ವನಜಮ್ಮನೇ ಉತ್ತರಿಸಿದರು. 'ನಿಮ್ಮತ್ತೆ ದೊಡ್ಡ ಮಗಳು ಫೋನ್ ಮಾಡಿದಳೂಂತ ನೆಪಮಾಡಿ, ಹೊರಟು ಬಿಟ್ಟಳಪ್ಪಾ. ಹೊಳೆ ದಾಟಿದ ಮೇಲೆ ಅಂಬಿಗನ ಮಿಂಡಾ... ಅಂತ. ಇಲ್ಲಿಂದ ದುಡ್ಡು ಹೊಡೆದು, ಸಾಕಷ್ಟು ಶ್ರೀಮಂತರಾಗಿದ್ದಾರೆ. ಈಗ ನಮ್ಮ ಹಂಗೇನಿದೆ ? ಮೊನ್ನೆ ತೀರ

ಜ್ವರದಲ್ಲಿದ್ದೆ, ಫೋನ್ ಮಾಡಿ ಕರೆಸಿಕೊಂಡಿದ್ದೆ. ಮಗಳ ಮದುವೆಯ ಇಪ್ಪತ್ತು ಸಾವಿರದ ಬಂಧನ ಇದೆ. ಹೀಗಾಗಿ ಬಂದಿದ್ದಳು' ಎಂದು ಏನೇನೋ ಹೇಳಿದರು.

'ವಾಚ್‌ಮನ್ ರಾಮಸಿಂಗ್ ಮಲಗಲಿಕ್ಕೆ ಬರ್‍ತಾ ಇದ್ದಾನ ಅಮ್ಮ...?' ಎಂದ.

'ಅವನೊಬ್ಬ ಒಳ್ಳೇ ನಿಷ್ಠಾವಂತ ಕೆಲಸಗಾರನ್ನ ಕೊಟ್ಟಿದ್ದಿ ಅಪ್ಪಾ. ಹುಲಿ ಹಾಗಿದ್ದಾನೆ. ಇಡಿ ಈ ಬೀದಿಗೇ ನಿಶ್ಚಿಂತೆ, ನಾಲ್ಕಾರು ಸಲ ಗಸ್ತು ಹೊಡೆದು, ನಮ್ಮಂಗಡಿ ಮುಂದೆ ಮಲಗ್ತಾನೆ. ಕೈಯಲ್ಲಿ ದೊಣ್ಣೆ ಇರತ್ತೆ. ತಿಂಗಳಿಗೆ ಈ ನಡುವೆ ನಾನ್ನೂರು ಕೊಡ್ತೀನಿ... ಅವನಿಗೆ' ಎಂದರು.

ಕಾಫಿ ಕುಡಿದು ಲೋಟ ಕೆಳಗಿಟ್ಟ ಮೇಲೆ 'ನಡೀ ಕಾಂಪೌಂಡಲ್ಲಿ ಪಾರಿಜಾತ ಗಿಡದ ಬುಡದಲ್ಲಿ ಕೂತು ಮಾತಾಡೋಣ... ಒಳ್ಳೇ ಪರಿಮಳ ಇರತ್ತೆ' ಎಂದು ಮಗನನ್ನು ಹೊರಡಿಸಿ, 'ಮಧು... ಮುಂಬಾಗಿಲು ಹಾಕಿಕೊಮ್ಮ. ನಾವು ಕಾಂಪೌಂಡಲ್ಲಿ ಇರ್‍ತೀವಿ' ಎಂದು ಕೂಗಿ ಹೇಳಿ... ಮಗನೊಡನೆ ಓಣಿ ಹಾದು, ಮುಂಭಾಗದ ಕಾಂಪೌಂಡಿಗೆ ಬಂದರು. 'ಚಿಂಟು ಹೇಗಿದ್ದಾನಪ್ಪಾ?' ಎಂದರು.

'ಒಬ್ಬ ಪುಟ್ಟ ರಾಕ್ಷಸ. ಬಹುಶಃ ರಾವಣಾಸುರ, ಕಂಸಾ... ಇವರೆಲ್ಲರ ಬಾಲ್ಯದ ವರ್ತನೆ ಹೇಗಿತ್ತು ಅಂತ ನಾವು ಓದಿಲ್ಲ. ಅವರು ದೊಡ್ಡೋರಾದ ಮೇಲೆ ಮಾಡಿದ ಲೋಕಕಂಟಕ ಕಾರ್ಯಗಳು ಓದಿದ್ದೀವಿ. ಬಾಲ್ಯದಲ್ಲಿ ಅವರುಗಳು ಬಹುಶಃ ನಮ್ಮ ಚಿಂಟು ಹಾಗೆ ವರ್ತಿಸಿರಬಹುದು ಅನಿಸತ್ತಮ್ಮ' ಎಂದ ನೋವಿನಿಂದ. ತಾಯಿ ಚಿಂತೆಯಿಂದ,

'ಅವನನ್ನ ಹೀಗೇ ಬಿಟ್ಟರೆ ಹೇಗಪ್ಪಾ? ನಿನ್ನ ಹೆಂಡತಿ ಇಷ್ಟು ಬುದ್ಧಿವಂತಳು. ಮಗನನ್ನ ಏಕೆ ಅವಳು ಗಮನಿಸಿಲ್ಲ. ಮಗಳನ್ನ ಬೋರ್ಡಿಂಗಿಗೆ ಹಾಕೋ ಬದಲು ಮಗನನ್ನ ಏಕೆ ಹಾಕಬಾರದಿತ್ತು?' ಎಂದರು.

'ಆ ಮಗು ನನ್ನ ಪ್ರೀತಿಸತ್ತೆ ಅನ್ನೋ ಅಸೂಯೆಗೆ ಆ ಮಗೂನ ಸಂಪರ್ಕ ನನಗೆ ತಪ್ಪಿಸಬೇಕೂಂತ ಅದನ್ನ ಬೋರ್ಡಿಂಗ್‌ಗೆ ಸೇರಿಸಿದ್ದಾಳಮ್ಮ. ಚಿಂಟೂ ಹಾಗಾಗ್ಲಿಕ್ಕೆ ನಾನೇ ಕಾರಣ ಅಂತೆ. ನಾನೇ ಅವನನ್ನ ತಿದ್ದಬೇಕಂತೆ. ಕಥೆಗಳು ಹೇಳಿ ತಿದ್ದಬೇಕಂತೆ. ಒಂದು ವಾರದಿಂದ ಸಾಕಾಗಿತ್ತಮ್ಮ. ಇವತ್ತಂತು ಬ್ಯಾಟ್ ತಗೊಂಡು ಸಿಕ್ಕಾ ಪಟ್ಟೆ ಹೊಡೆದ್ಬಿಟ್ಟು ಬಂದಿದ್ದೀನಿ...'

'ಆದರೆ ಅವಳಿಗೆ ತಿಳಿದರೆ ಸುಮ್ಮನಿರ್‍ತಾಳೇನಪ್ಪಾ. ದೊಡ್ಡ ರಣರಂಗ ಆಗತ್ತಲ್ಲ...'

'ಅವಳ ಜೊತೆ ಸೌಹಾರ್ದ ಎಂದಿತ್ತಮ್ಮ? ನನಗೂ ಸಹಿಸಿ, ಸಹಿಸಿ ಸಾಕಾಗಿದೆ. ಅವಳಿಗೂ ಆ ಮಗನ್ನ ನಿಭಾಯಿಸ್ಲಿಕ್ಕಾಗಲ್ಲ. ಅವಳತ್ತೇನೂ ಆ ಹುಡುಗನ್ನ ನಿಭಾಯಿಸಲಾಗದೆ ಸೋತಿದ್ದಾರೆ. ಕಡೆಗೆ ನನಗೆ ಹರ್ಟ್ ಮಾಡಬೇಕೂಂತಲೂ

ಈ ಪುಂಡುಗೂಳಿಯನ್ನು ಪಳಗಿಸೊ ಕೆಲಸ ನನಗೆ ಬಿಟ್ಟಿದ್ದಾರೆ. ಇದು ದಂಡದಿಂದಲೇ ಪಳಗೋ ಗೂಳಿ' ಎಂದ.

ಮಗನ ಮಾತಲ್ಲಡಗಿದ ವಿಷಾದ ಗಮನಿಸಿ ಆಕೆ ನಿಟ್ಟುಸಿರಿಟ್ಟರು.

'ಈ ಮದುವೆಗೆ ನೀನು ಒಪ್ಪಿಗೆ ಕೇಳಿದಾಗ- ನಾನು ಆರಂಭದಲ್ಲೇ ಬೇಡಾ ಅನ್ಬೇಕಿತ್ತು. ನನ್ನ ಸ್ವಾರ್ಥಕ್ಕೆ ಮಗನ ಪಾಲಿಗೆ ಬಂದ ಒಳ್ಳೇ ಅವಕಾಶವನ್ನ ದೂರ ಮಾಡಬಾರದೂಂತ ಮದುವೆಗೆ ಒಪ್ಪಿದೆ. ದಿನೇ ದಿನೇ ನಿಮ್ಮಿಬ್ಬರ ವಿರಸ ಜಾಸ್ತಿ ಆಗ್ತಾನೆ ಇದೆಯಲ್ಲಪ್ಪಾ?' ಎಂದರು.

'ಹೊಗೆ ತುಂಬಿದ ಕೋಣೇಲಿ ಬಾಗಿಲು ಹಾಕಿ ಒಬ್ಬ ಮನುಷ್ಯನ್ನ ಬಿಟ್ರೆ ಹೊರಗೆ ಬರಲಿಕ್ಕೆ ಹೇಗೆ ಚಡಪಡಿಸ್ತಾನೋ ಹಾಗಾಗಿದೆಯಮ್ಮ ನನ್ನ ಸ್ಥಿತಿ. ಆಫೀಸಲ್ಲಿ ಲಕ್ಷಾಂತರ ರೂ. ಗಳ ಲೆಕ್ಕಾಚಾರದ ವಹಿವಾಟು. ಅಲ್ಲಿನ ಕೆಲಸ ಮುಗಿಸಿ, ಮನೆಗೆ ಬಂದಾಗ... ಮನಸ್ಸಿನ ಒತ್ತಡ ಕಳೆಯಲು ಶಾಂತಿ ಬೇಕಾಗಿರತ್ತೆ. ಚಿನ್ನಿಯನ್ನ ಮುಂಬೈಗೆ ಕಳಿಸಿದ ಮೆಲೆ ಕೆಲವು ಆಡಿಯೋ ಕ್ಯಾಸೆಟ್ಸ್ ಕೇಳ್ತ ಕಣ್ಮುಚ್ಚಿ ಮಲಗ್ತಿದ್ದೆ. ಲತಾ ಮಂಗೇಶ್ಕರ್, ಅನುರಾಧ ಪೌಡ್ವಾಲ್, ಎಸ್. ಜಾನಕಿಯವರ ಹಾಡು ಕೇಳ್ತ ಮಲಗಿದ್ರೇ ಏನೊ ರಿಲ್ಯಾಕ್ಸ್ ಸಿಕ್ಕ ಹಾಗಿರೋದು. ಈಗ ಅದಕ್ಕೂ ಕುತ್ತು ಬಂದಿದೆ. ಆ ಪುಂಡ ಮಗನ್ನ ಪಳಗಿಸೋ ಹೊಣೆ ನನ್ನ ತಲೆಗೆ ಕಟ್ಟಿದ್ದಾಳೆ. ಒಂದು ವಾರದಲ್ಲಿ ಅವನ ಕಾಟಕ್ಕೆ ನಾನು ಬೇಸತ್ತು ಹೋಗಿದ್ದೇನೆ. ಅವಳು ಜಗಳ ಆಡಿದರೂ ನಾನು ಇಷ್ಟೇ ಹೇಳೋದು. "ಅವನನ್ನ ಪಳಗಿಸಲಿಕ್ಕೆ ನನ್ನ ಹತ್ತಿರ ಬಿಟ್ಟಿದ್ದಿ. ನಾನು ಅವನನ್ನ ಪಳಗಿಸೋ ವಿಧಾನವೇ ಹಾಗೆ" ಅಂತೀನಿ. ಬರೀ ನನ್ನ ಕಥೇನೇ ಆಯ್ತು. ನಿನ್ನ ವಿಷಯ ಏನಮ್ಮ?' ಎಂದ.

'ನಿನಗೀಗ ಮೂವತ್ನಾಲ್ಕನೆಯ ವಯಸ್ಸು. ನನ್ನ ಇಪ್ಪತ್ತನೇ ವಯಸ್ಸಿನಲ್ಲಿ ನಿನ್ನ ಹೆತ್ತಿದ್ದೆ. ಈಗ ನನಗೂ ಐವತ್ನಾಲ್ಕು ವರ್ಷ ಆಯ್ತಪ್ಪಾ. ಮೊದಲಿದ್ದ ಯೌವನದ ಉತ್ಸಾಹ, ಒಂಟಿಯಾಗಿ ಬದುಕಬಲ್ಲೆ ಅನ್ನೋ ಕೆಚ್ಚು ಈಗಿಲ್ಲ. ಮುಪ್ಪು ನನ್ನನ್ನ ಆವರಿಸ್ತಿದೆ. ಮಗ, ಸೊಸೆ, ಮೊಮ್ಮಕ್ಕಳು ಇವರೊಂದಿಗೆ ಬದುಕಿದ್ರೆ ಅನಿಸತ್ತೆ. ನೆಂಟರ ಸಮಾರಂಭಕ್ಕೆ ವಜ್ರದ ವಾಲೆ, ಚಿನ್ನದ ಹಾರ, ರೇಷ್ಮೆ ಸೀರೆಗಳಲ್ಲೇ ನಾನು ಹೋಗಿರ್ತೀನಿ. ಆದರೂ ಅತ್ತಿಗೆಯರು, ನಾದಿನಿ ಪದ್ಮಾ ಇವರೆಲ್ಲರ ಮೊಮ್ಮಕ್ಕಳು ಅಜ್ಜಿ, ಅಜ್ಜಿ ಅಂತ ಅವರ ಹತ್ತಿರ ಸುತ್ತಾಡಿದಾಗ ಒಂಟಿತನ ನನ್ನ ಮನಸ್ಸು ಕಾಡತ್ತೆ. ಮಗ ಸೊಸೆ ದೂರವಾಗಿದ್ದರೂ ಒಂದೆರಡು ಮೊಮ್ಮಕ್ಕಳಾದರೂ ಸಹ ನನ್ನ ಹತ್ತಿರ ಇರಬಾರದಿತ್ತೆ, ಹದಿನೈದು ಲಕ್ಷದವರೆಗೆ ಮನೆ, ಅಂಗಡಿ, ಸ್ಥಿರಾಚರ ಆಸ್ತಿ ನನ್ನದಾಗಿದೆ. ತಿಂಗಳಿಗೆ ಅಂಗಡಿಯಿಂದ ಇಪ್ಪತ್ತು ಸಾವಿರ ರೂಪಾಯಿ ಆದಾಯ ಇದೆ. ಆದರೆ ಇದೆಲ್ಲಾ ಯಾರು ಅನುಭವಿಸಬೇಕು ?

ನನಗಂತೂ ಈ ನಡುವೆ ಎಣ್ಣೆ ಬೆಣ್ಣೆ ತಿಂಡಿಗಳು ಸಹ ಜೀರ್ಣವಾಗಿಲ್ಲ. ಒಂದು ಮಾತು ಹೇಳಲಾ ? ಈಗ ನೀನು ಕರೆದುಕೊಂಡು ಬಂದ ಹುಡುಗಿ ರೂಪದಲ್ಲಿ ಅಪ್ಸರೆ ಹಾಗೆ ಇದ್ದಾಳೆ. ಶ್ರೀಮಂತರ ಮನೇಲಿ ಹುಟ್ಟಿದ್ದರೆ ಎಂಥಾವರನ್ನ ಹುಡುಕಿ, ಮದುವೆ ಮಾಡ್ತಿದ್ದರೊ? ನೀನೇನೂ ಮುದುಕನಾಗಿಲ್ಲ. ಆ ಅಶಾಂತಿ ಸಮುದ್ರ ದಂತಹ ಅರಮನೆಯ ಬಂದಿ ಹಾಗೆ ನೀನೇಕೆ ಇರ್ತಿ ? ಇಲ್ಲಿ ಬಂದು ಈ ಹುಡುಗೀನ್ನ ವಿವಾಹವಾಗು. ನೀನೇನು ಮುದುಕ ಆಗಿಲ್ಲ. ಮೂವತ್ನಾಲ್ಕು ವರುಷ. ಆ ಹುಡುಗಿಗೂ ಇಪ್ಪತ್ತೆರಡು ವರುಷ. ಬೆಳಗ್ಗೆ ನೀವಿಬ್ಬರೂ ಊಟಕ್ಕೆ ಕೂತಿದ್ದರೆ ಶ್ರೀನಿವಾಸ, ಪದ್ಮಾವತಿ ಜೋಡಿ ಇದ್ದಾಗಿತ್ತು. ನನ್ನ ಮನಸ್ಸಿನಲ್ಲಿ ನೂರು ಆಸೆ ಹುಟ್ಟಿತು. ಮುಪ್ಪಿನ ಹಂಬಲವ್ರೋ ಏನೋ ? ಒಂದೆರಡು ಮುದ್ದಾದ ಮೊಮ್ಮಕ್ಕಳು ಮನೇಲಿ ಆಡಲೀಂತ ಆಸೆ ಇದೆಯೊ ? ಕೈತುಂಬಾ ಹಣ ಇದೆ. ಯಾರಿಗೇನು ತೆಕ್ಕೊಡಲಿ ? ಪಾಪಿ ಸಂಪಾದಿಸಿದ್ದೆಲ್ಲಾ ಪರರ ಪಾಲು ಅನ್ನೋ ಹಾಗೆ... ಆ ಹಣ ಯಾರ್‍ಯಾರೋ ಲೂಟಿ ಹೊಡೀತಾರೆ' ಎಂದು ಕಣ್ಣೊರೆಸಿಕೊಂಡರು.

'ಕನಸಿನ ಲೋಕ ಬೇರೆ, ವಾಸ್ತವ ಲೋಕ ಬೇರೆ ಅಮ್ಮ. ನಮ್ಮ ನಮ್ಮ ಒಳ ಮನಸ್ಸಿನ ನೋವು ಹೃದಯದ ತೊಳಲಾಟ ಏನೇ ಇರಲಿ, ಹೊರಗಿನ ಆ ಪ್ರಪಂಚಕ್ಕೆ ನನ್ನ ಪರಿಚಯ ಏನಿದೆಯೋ ಅದೇ ಕೊಡಬೇಕು. ಜಯಶ್ರೀ ಟೆಕ್ಸ್‌ಟೈಲ್ ಮಾಲೀಕರ ಅಳಿಯ, ಪದ್ಮಾ ರೆಡಿಮೇಡ್ ಡ್ರೆಸ್ ಕಾರ್ಖಾನೆ ಮಾಲೀಕಳ ಪತಿ... ಒಬ್ಬ ಗೃಹಸ್ಥ, ಎರಡು ಮಕ್ಕಳ ತಂದೆ ಆ ಕಂಪನಿ ದೊಡ್ಡ ಅಧಿಕಾರಿ, ನಾನು ಯಾವ ವಿಧದಲ್ಲಿಯೂ ಆ ಜನಗಳಿಂದ ತಪ್ಪಿ ನಡಿಯೋ ಹಾಗಿಲ್ಲಮ್ಮ. ಪುಟ್ಟ ಆರು ವರುಷದ ಮಗು ಚಿನ್ನೀನ ನಾನು ಪ್ರೀತಿಸಿದ್ದಕ್ಕೆ ಆ ಮಗೂನ್ನ ತಗೊಂಡು ಹೋಗಿ ಮುಂಬಯಿನ ಬೋರ್ಡಿಂಗ್ ಸ್ಕೂಲಿಗೆ ಸೇರಿಸಿದಳು. ಈಗ ನಾನು ಬೇರೆ ಹುಡುಗೀನ್ನ ವಿವಾಹ ಆದರೆ ಸುಮ್ಮನಿರ್ತಾಳಾ ? ಆ ಹುಡುಗೀನ್ನ ಕೊಲೆ ಮಾಡಿಸ ಬಲ್ಲಳು. ಜೊತೆಗೆ ಆ ಕಂಪನಿ ಬಿಟ್ಟು ಹೋಗದ ಹಾಗೆ ನನಗೂ ದಿಗ್ಬಂಧನ ಹಾಕಿದ್ದಾರೆ. ನಾನು ಅಕಸ್ಮಾತ್ ಆ ಕಂಪನಿ ಬಿಟ್ಟು ಬೇರೆ ಕಡೆ ಸೇರಲೆತ್ನಿಸಿದರೆ... ಲಕ್ಷಾಂತರ ರೂ.ಗಳು ನಮ್ಮ ಕಂಪನಿಗೆ ವಂಚನೆ ಮಾಡಿದ್ದ ಎಂದು ಸುಳ್ಳು ದೂರು ಕೊಟ್ಟು ಜೈಲಿಗೆ ಹಾಕಿಸುವುದಕ್ಕೂ ಹೇಸಲಾರರು ಆ ಜನ' ಎಂದು ಹೇಳಿದ.

ವನಜಮ್ಮ ನಿಟ್ಟುಸಿರಿಟ್ಟು 'ಬದುಕಿನುದ್ದ ನನಗೆ ಒಂಟಿತನವೇ ಕಟ್ಟಿಟ್ಟಬುತ್ತಿ ಆಯ್ತಪ್ಪಾ' ಎಂದರು. ಅವರ ದನಿಯಲ್ಲಿ ತುಂಬಿದ ನಿರಾಶೆ ಗಮನಿಸಿ ಅವನಿಗೆ ವ್ಯಥೆ ಆಯಿತು. ತಾಯಿ ಹಸ್ತ ಹಿಡಿದು 'ಅಮ್ಮ, ಮೂವತ್ತನೆಯ ವಯಸ್ಸಿನಲ್ಲೇ ಅಪ್ಪನ ಕಳೆದುಕೊಂಡು ಒಂಟಿಯಾಗಿದ್ದಿ. ನಿನ್ನ ಅಲ್ಲಿನ ಮನೆಯವರು, ಅಪ್ಪನ ಅಕ್ಕನ ಮನೆಯವರು, ಯಾರು ಕೂಗಿದರೂ ಒಪ್ಪದೇ ಧೀರಳಾಗಿ ನಿಂತು ಬದುಕು

ಸಂಪಾದಿಸಿಕೊಂಡೆ. ನೀನೇ ಒಂದು ಕುಟುಂಬಕ್ಕೆ ಆಶ್ರಯದಾತಳಾಗಿ ನಿಂತೆ. ನನ್ನ ಓದಿಸಿ ಮುಂದೆ ತಂದೆ. ಆ ಕೆಚ್ಚು ಈಗ ಏನಾಯ್ತು?' ಎಂದ. ವನಜಮ್ಮ ವಿಷಾದದಿಂದ–

'ಆಗ ಬದುಕಿನಲ್ಲಿ ಛಲವಿತ್ತು ರಾಜು, ಪರಾಧೀನ ಆಗಬಾರದೆಂಬ ಕೆಚ್ಚು ಇತ್ತು. ಚೆನ್ನಾಗಿ ಹಣ ಸಂಪಾದಿಸಬೇಕು, ಆಗ ಎಲ್ಲಾ ನೆಂಟರು ತಾವೇ ಬಂದು ಶರಣಾಗ್ತರೆ ಅನಿಸಿತ್ತು. ಮುಪ್ಪಿನಲ್ಲಿ ಈ ಹಣದ ರಾಶಿಯೆ ಹೊರೆ ಅನಿಸತ್ತೆ. ಈಗಲೇ ನನಗೆ ಒಂಟಿತನ ಕಾಡ್ತಿರೋದು. ನನ್ನ ಕಷ್ಟಪಟ್ಟು ಬೆಳೆಸಿದ ಈ ಅಂಗಡಿ ವಹಿವಾಟನ್ನು ಬೆಳೆಸಿ, ಅಭಿವೃದ್ಧಿಪಡಿಸಿ ಅನುಭವಿಸೋ ನನ್ನವರಾರು ? ನಿನಗೆ ಶ್ರೀಮಂತಳಾದ ಆ ಹುಡುಗೀನ್ನ ಮದುವೆ ಮಾಡಿಸೋಕ್ಕಿಂತ ತುಂಬಾ ಮುದ್ದಾಗಿರೋ, ಬದುಕಿನಲ್ಲಿ ಕಷ್ಟ ಸುಖ ಕಂಡ ಒಬ್ಬ ಬಡ ಹುಡುಗೀನ್ನ ವಿವಾಹ ಮಾಡಿಸಿದ್ರೆ... ಚೆನ್ನಾಗಿರ್ತಿತ್ತೇನೋ ಅನಿಸ್ತಿದೆ–'

'ಏಳಮ್ಮ, ಹೊತ್ತಾಯ್ತು. ನಿನಗೆ ಚಳೀ ತಡಿಯಲ್ಲ. ಶಾಲು ಬೇರೆ ತಂದಿಲ್ಲ.'

'ದೇಹಕ್ಕೆ ಚಳೀ ಆದರೂ ಮನಸ್ಸಿಗೆ ವೇಗ ಇದೆಯಪ್ಪಾ' ಎಂದು ಗೊಣಗಿ ಕಂಡು ಎದ್ದು ಬಂದರು.

ತಾಯಿ ಮಗ ಮನೆಗೆ ಬಂದಾಗ ಎಂಟು ಗಂಟೆ. ಹಜಾರದಲ್ಲಿ ಕೂತಿದ್ದ ಮಧು 'ಅಮ್ಮ ಅಡಿಗೆ ಆಗಿದೆ. ತಟ್ಟೇ ಹಾಕಲೇ' ಎಂದಳು.

'ಇನ್ನೊಂದರ್ಧ ಗಂಟೆ ಆಗಲಿ. ಬೆಳಗಿನೂಟ ಇನ್ನು ಕರಗಿಲ್ಲ' ಎಂದು ರಾಜಸಿಂಹ ನುಡಿದ. ಮಧು ಕೊಂಚ ಅನುಮಾನಿಸುತ್ತ, ವನಜಮ್ಮನೆದುರು 'ಅಮ್ಮ ನನಗೆ ಇಲ್ಲಿ ಕೆಲಸ ಸಿಕ್ಕಿರೋ ವಿಷಯ ಮನೆಗೆ ಫೋನ್ ಮಾಡಲೆ? ನಾನು ರಾತ್ರಿ ಎಂಟರ ಮೇಲು ಮನೆಗೆ ಹೋಗದೆ ಇದ್ದರೆ ಅಮ್ಮ ಹೆದರಿಕೊಳ್ತಾರೆ' ಎಂದಳು.

'ಫೋನ್ ಮಾಡಮ್ಮ. ನಿಮ್ಮನೇಲಿ ಫೋನ್ ಇದೆಯಾ ?' ಎಂದರು. ಅವಳು ವಿನಯವಾಗಿ-

'ಇಲ್ಲ. ನಮ್ಮ ಮಾಲೀಕರ ಮನೆ ನಂಬರಿಗೆ ಮಾಡ್ತೀನಿ. ವಿಷಯ ಹೇಳ್ತಾರೆ' ಎಂದಳು.

'ನಾಳೆ ರಾಜು ಊರಿಗೆ ಹೋಗ್ತಾನೆ. ಅವನ ಜೊತೆಗೆ ಊರಿಗೆ ಹೋಗು. ನಿಮ್ಮ ತಂದೆ ಜೊತೆ ಸಂಜೆ ಇಲ್ಲಿ ಬಾ. ನಾನು ಆತನ ಜೊತೆ ಉಳಿದ ವಿಷಯ ಮಾತಾಡ್ತೀನಿ. ನೀನು ಇಲ್ಲಿದ್ಬಿಡು. ಮುಂದುಗಡೆ ಮನೆ ಖಾಲಿ ಇದೆ. ಅವರುಗಳು ನಾಲ್ಕು ದಿನಗಳಲ್ಲಿ ಬಂದುಬಿಡಲಿ. ಲಾರಿ ಬೇಕಾದರೆ, ನಮ್ಮ ಅಂಗಡಿ ಕೆಲಸಗಾರ ಮಹದೇವ ತರಿಸಿ ಕೊಡ್ತಾನೆ' ಎಂದರು.

'ಆಗಲಮ್ಮ...' ಎಂದು ಟ್ರಂಕಾಲ್ ಮಾಡಿದಳು. ಹತ್ತು ನಿಮಿಷಗಳಲ್ಲಿ

ಸಂಪರ್ಕ ಸಿಕ್ಕಿತು. ಮನೆ ಮಾಲಿಕರ ಮಗಳು ರಾಗಿಣಿಯೆ ಎತ್ತಿದಳು.

'ಹಲೋ ರಾಗಿಣಿ, ನಾನು ಮೈಸೂರಲ್ಲಿ ರಾಜಸಿಂಹ ನಿವಾಸದಲ್ಲಿದ್ದೀನಿ. ಇಲ್ಲಿನ ರಾಜಸಿಂಹ ಡಿಪಾರ್ಟ್‌ಮೆಂಟಲ್ ಸ್ಟೋರಲ್ಲಿ ಅಕೌಂಟೆಂಟ್ ಕೆಲಸ ಸಿಕ್ಕಿದೆ. ಈ ದಿನ ನನ್ನ ಗೆಳತಿಯರ ಜೊತೆ ಇಲ್ಲಿದ್ದೇನೆ. ಡ್ಯೂಟಿಗೆ ಜಾಯಿನ್ ಆಗಿದ್ದೇನೆ. ನಾಳೆ ಊರಿಗೆ ಬರ್ತೇನೆ. ಏನೂ ತೊಂದರೆ ಇಲ್ಲ. ಹೆದರಬೇಡಾ ಅಂತ ಅಮ್ಮನಿಗೆ ಹೇಳು' ಎಂದಳು.

ಅವಳ ಜಾಣ್ಮೆಗೆ ಮನದಲ್ಲೇ ಮೆಚ್ಚಿದ ರಾಜಸಿಂಹ. ಅವಳ ಬಾಯಲ್ಲಿ ರಾಜಸಿಂಹ ಎಂಬ ತನ್ನ ಹೆಸರು ಕೇಳಿದಾಗ ಏನೋ ಒಂದು ತರಹ ಪುಳಕವೆನಿಸಿತು. ಅಮ್ಮ ಅಂಗಡಿಗೆ, ಮನೆಗೆ, ಎಲ್ಲಕ್ಕೆ ತನ್ನ ಹೆಸರು ಇಟ್ಟಿದ್ದಾಳೆ. ಇಲ್ಲಿ ಬಂದರೆ ತನ್ನತನವಿದೆ, ವ್ಯಕ್ತಿತ್ವಕ್ಕೆ ಸ್ವಾತಂತ್ರ್ಯವಿದೆ, ಪ್ರೀತಿ ಮಮತೆ ಇದೆ. ತಾಯ್ತನದ ಪ್ರೀತಿ, ಮಮತೆ, ವಾತ್ಸಲ್ಯವುಂಡು, ತಾಯಿ ಜೊತೆ ಕೂತು, ತಾಯಿ ಪ್ರೀತಿಯಿಂದ ಮಾಡಿಸುವ ಬಗೆಬಗೆಯ ಪಕ್ವಾನ್ನವುಂಡು ಆನಂದಗೊಳ್ಳುವ ಅವಕಾಶವಿದೆ.

ಬೆಂಗಳೂರಿನ ಆ ಪರಿಸರ...! ಪದ್ಮಾನಿವಾಸ... ವೆಂಕಟೇಶ್ ಅವರ ತಾಯಿ ಹೆಸರು. ಜಯಶ್ರೀ ಟೆಕ್ಸ್‌ಟೈಲ್ಸ್, ಪದ್ಮಾ ರೆಡಿಮೇಡ್ ಡ್ರೆಸ್ ಫ್ಯಾಕ್ಟರಿ, ಜರ್ಮನಿ, ಜಪಾನ್‌ನಿಂದ ತರಿಸಿದ ಆಧುನಿಕ ಯಂತ್ರಗಳಿಂದ ಸುಸಜ್ಜಿತವಾದ ಆ ಕಾರ್ಖಾನೆ, ವಿದೇಶಗಳಿಗೂ ರಫ್ತಾಗುತ್ತಿದ್ದ ಉಡುಪುಗಳು... ಆದರೆ ಆ ಫ್ಯಾಕ್ಟರಿ, ಆ ಉದ್ದಿಮೆಗಳಿಗೆ ತಾನೊಬ್ಬಳೇ ಮಾಲೀಕಳು ಎಂಬಂತೆ ವರ್ತಿಸುತ್ತಿದ್ದಳು. ಆಫ್ಟರ್ ಆಲ್ ಇವರೊಬ್ಬ ಕೆಲಸಗಾರರು ಎನ್ನುತ್ತಿದ್ದಳು. ಆಗೆಲ್ಲ ಅವನ ಮನಕ್ಕೆ ನೋವಾಗುತ್ತಿತ್ತು. ಇಲ್ಲಿ ಬಂದಾಗ ಏನೋ ಮನಃಶಾಂತಿ ಎನಿಸುತ್ತಿತ್ತು.

ಕೊಂಚ ಹೊತ್ತಿಗೆ ತಟ್ಟೆಹಾಕಿ, ತಾಯಿ ಮಗನಿಗೆ ತಾನೇ ಬಡಿಸಿದಳು. 'ಅಡಿಗೆ ತುಂಬಾ ರುಚಿಯಾಗಿ ಮಾಡಿದ್ದೀಯಮ್ಮ' ಎಂದು ವನಜಮ್ಮ ಹೊಗಳಿದರು.

ಅನಂತರ ಅವನು ರೂಮಿನಲ್ಲಿ ಮಲಗಲು ಹೋದ. ಅವಳು ಊಟ ಮಾಡಿ, ಅಡುಗೆ ಮನೆ ಕೆಲಸಮಾಡಿ ಬಂದು ಹಜಾರದಲ್ಲಿ ಚಾಪೆ ಹಾಕಿಸಿಕೊಂಡು, ಒಂದು ದಿಂಬಿಟ್ಟುಕೊಂಡು ಮಲಗಿದಳು. 'ನಾಳೆಯಿಂದ ಹಜಾರದ ಈ ಭಾಗಕ್ಕೆ ಒಂದು ಮಂಚ ಹಾಕಿಸಿ, ಕರ್ಲಾನ್ ಹಾಸಿಗೆ ತರಿಸ್ತೀನಿ' ಎಂದರು ವನಜಮ್ಮ.

'ಅದೆಲ್ಲಾ ಏನು ಬೇಡಿ ಅಮ್ಮ' ಎಂದಳು.

'ನೀನು ಬೇಡ ಎಂದರೂ ನಾನು ಬಿಡಬೇಕಲ್ಲಮ್ಮ. ಮೊದಲು ನನ್ನ ತಮ್ಮನ ಹೆಣ್ಣು ಮಕ್ಕಳಿದ್ದರು. ಅವರು ಊರು ಜನ ಉಪಯೋಗಿಸಿದ ಮಂಚ. ಹೀಗಾಗಿ ಮೊನ್ನೆ ಅವರಿಗೇ ಕೊಟ್ಟು ಬಿಟ್ಟೆ' ಎಂದರು.

'ಶ್ರೀಮಂತಿಕೆಗೆ ತಕ್ಕ ಧಾರಾಳತನವೂ ಈಕೆಗಿದೆ' ಎಂದು ಮನದಲ್ಲಿ

ಯೋಚಿಸಿಕೊಂಡಳು. ನಿಜಕ್ಕೂ ತನ್ನ ಈಗಿನ ಉದ್ಯೋಗದ ವ್ಯವಸ್ಥೆ ಬಗ್ಗೆ ಕೇಳಿದರೆ ತಾಯಿ ಎಷ್ಟು ಸಂತೋಷಪಡುವಳೊ !

ಒಂಟಿಯಾಗಿ ತಾನು ಮೈಸೂರಲ್ಲಿ ಇರಬೇಕಾಗುತ್ತದೆ ಎಂದು ಎರಡು ಸಾವಿರ ಸಂಬಳದಲ್ಲಿ ಊಟ ತಿಂಡಿ, ವಸತಿ ತನ್ನ ಖರ್ಚು ಕಳೆದು, ಸಾವಿರ ರೂ. ಕಳಿಸಿದರೇ ಐನೂರು ರೂ. ಮನೆಗೆ ಕಟ್ಟಿ, ಐನೂರು ರೂ.ಗಳಲ್ಲಿ ಹೇಗೆ ಜೀವನ ಮಾಡುವರೋ? ಎನಿಸಿತ್ತು. ತಂದೆಯ ಕೈಯಲ್ಲಿ ಐವತ್ತು ಸಾವಿರ ರೂ.ಗಳಿತ್ತು. ತಾಯಿಯ ಆರೋಗ್ಯ ಆರೈಕೆಗೆ, ತಮ್ಮನ ಓದಿಗೆ ಎಂದು ಆ ಹಣ ಮೀಸಲಾಗಿತ್ತು. ಇಪ್ಪತ್ತು ವರ್ಷದ ತಮ್ಮ ಹರೀಶ ಬಿ.ಕಾಂ. ಓದುತ್ತಿದ್ದ. ಇನ್ನು ಒಂದು ವರುಷದ ಓದು ಬಾಕಿ ಇತ್ತು. ತಾಯಿಯನ್ನು ಉಳಿಸಿಕೊಳ್ಳಲೇಬೇಕು. ವೈದ್ಯರು ಹೇಳಿದ ಎಲ್ಲಾ ಔಷಧಿ, ಚಿಕಿತ್ಸೆ ಕೊಡಿಸಬೇಕು. ಇದು ಎಲ್ಲರ ಮನೀಷ ಆಗಿತ್ತು. ಈಗ ಇಲ್ಲಿ ಉಚಿತವಾಗಿ ಮನೆ ಸಿಗುತ್ತಿದೆ. ತಂದೆಗೆ ಎಂಟು ನೂರು ರೂ. ಸಂಬಳದ ಕೆಲಸ. ತನಗೆ ಇವರ ಮನೆಯಲ್ಲಿ ಊಟ ವಸತಿ. ಬಂದ ಸಂಬಳ ತಾನು ಇಡಿಗಂಟಾಗಿ ತಾಯಿಗೆ ಕೊಡಬಹುದು ಎನಿಸಿತ್ತು.

ಬೆಳಗ್ಗೆ ಹಾಲಿನವನು ಬಂದು, ಕರೆಗಂಟೆ ಹೊಡೆದಾಗ–

'ಅಮ್ಮ... ಮಧು... ಹಾಲು ಬಂದಿದೆ' ಎಂದು ಆಕೆ ಕೂಗಿದರು. ಮಧುಮತಿ ಎದ್ದು ಬಾಗಿಲು ತೆಗೆದು ಹಾಲು ತೆಗೆದುಕೊಂಡು, ಕಾರ್ಯತತ್ಪರಳಾದಳು. ಅಂಗಡಿ ಆಳು ತಿಮ್ಮ ಬಂದು ಮನೆ ಗುಡಿಸಿ ಹೋದ. ಮಧುಮತಿ ಬಾಗಿಲಿಗೆ ನೀರು ಹಾಕಿ ರಂಗೋಲಿ ಹಾಕಿದಳು. ತಾನು ಸ್ನಾನ ಮಾಡಿದಳು. ವನಜಮ್ಮ ಸ್ನಾನ ಮಾಡಿ, ದೇವರ ಪ್ರಾರ್ಥನೆ ಮಾಡಿಯೇ ಕಾಫಿ ಕುಡಿಯುತ್ತಿದ್ದದ್ದು.

ಏಳು ಗಂಟೆಗೆ ರಾಜಸಿಂಹ ಎದ್ದು ಮುಖ ತೊಳೆದು ಬಂದ. ಆಕೆ ಮಗನೊಂದಿಗೆ ಕೂತು ಕಾಫಿ ಕುಡಿದರು. .

'ಔತಣದಡಿಗೆ ಬೇಡಮ್ಮ, ಏಕೋ ಹೊಟ್ಟೆ ಸರಿಯಿಲ್ಲ. ತಿಳಿಸಾರು, ಅನ್ನ, ಪಲ್ಯ ಮಾಡಿಸಿಬಿಡು' ಎಂದ.

'ಆಗಲಪ್ಪಾ...' ಎಂದರು. 'ಸ್ನಾನ ಮಾಡಿ, ಚಾಮುಂಡೇಶ್ವರಿ ದರ್ಶನ ಮಾಡಿ ಬರೋಣ' ಎಂದ.

ತಾಯಿ ಸಂತೋಷದಿಂದ ಒಪ್ಪಿದರು.

'ನೀನು ಬಂದಾಗಲೇ ಹೀಗೆ ಚಾಮುಂಡೇಶ್ವರಿ ದರ್ಶನ, ನಂಜುಂಡೇಶ್ವರ, ರಂಗನಾಥ ಇಲ್ಲದಿದ್ದರೆ ಮನೆ ಬಿಟ್ಟು ಕದಲಲ್ಲಪ್ಪಾ' ಎಂದರು.

ಸ್ನಾನ ಮುಗಿಸಿ, ಮಧುಮತಿಯ ಬಳಿ ಬಂದು 'ಹತ್ತು ಗಂಟೆಗೆ ಊಟ ಮಾಡಿ, ಹನ್ನೆರಡಕ್ಕೆ ನಾವು ಬೆಂಗಳೂರಿಗೆ ಹೊರಡೋದು. ಉದ್ಯೋಗ ಅಂತು ಅಮ್ಮ

ಕೊಟ್ಟಿದ್ದಾಳೆ. ಇಲ್ಲಿಗೆ ಬಂದು ಜಾಯಿನ್ ಆಗೋದು ಎಲ್ಲಾ ನಿಮಗೆ, ಅಮ್ಮನಿಗೆ ಸೇರಿದ್ದು' ಎಂದ.

'ತಂದೆಯವರಿಗೆ ಹೇಳಿ, ಇವತ್ತೇ ತಂದೆಯವರ ಜೊತೆ ಇಲ್ಲಿ ಬರ್ತಿದ್ದೀನಿ' ಎಂದಳು.

ಕೆಂಪು ಜರಿ ಅಂಚಿನ ಹಸಿರು ರೇಷ್ಮೆ ಸೀರೆ ಉಟ್ಟು ಬಂದರು ವನಜಮ್ಮ. ಮಗ ಕಣ್ಣರಳಿಸಿ-

'ಯಾವುದಮ್ಮ ಈ ಸೀರೆ ?' ಎಂದ.

'ಮೊನ್ನೆ ನಿನ್ನ ಬರ್ತ್‌ಡೇಗೆ ತಗೊಂಡೆನಪ್ಪಾ. ಯಾವ ಹಬ್ಬಕ್ಕೂ ಸೀರೆ ತಗೊಳ್ಳಲ್ಲ. ಆದರೆ ನಿನ್ನ ಬರ್ತ್‌ಡೇಗೆ ಮಾತ್ರ ಹೊಸ ಸೀರೆ ಬೇಕೇಬೇಕು. ಈ ಸೀರೆ ಉಟ್ಟೇ ಇಲ್ಲಿನ ಶ್ರೀ ವೆಂಕಟೇಶ್ವರ ದೇವರ ಗುಡೀಲಿ ನಾನು ಅರ್ಚನೆ ಮಾಡಿಸಿದೆ' ಎಂದರು.

'ನಾನಂತು ನಿಂಗೆ ಏನೂ ತಕ್ಕೊಡೋಹಾಗಿಲ್ಲ. ನನ್ನ ಹೆಸರಲ್ಲಿ ನೀನೆ ಕೊಂಡ್ಕೋಬೇಕು' ಎಂದ.

'ನಂಗೆ ನೀನೇನು ಕಡಿಮೆ ಮಾಡಿದ್ದೀ ಅಪ್ಪಾ...? ಈ ಎಲ್ಲಾ ಆಸ್ತಿ ನಿಂದೇ?' ಎಂದರಾಕೆ. ವಿದ್ಯಾವತಿಯಾದ ಮಧುವಿಗೆ ತಾಯಿ ಮಗ ಇಬ್ಬರಿಗೂ ಏನೋ ಒಳಮನಸ್ಸಿನ ನೋವಿದೆ ಎಂದು ತಿಳಿಯಿತು. ಆದರೆ ಆ ನೋವು ಏನೆಂದು ತಿಳಿಯಲಿಲ್ಲ.

'ಮಧು, ಬಾಗಿಲು ಹಾಕಿಕೋ ಅಮ್ಮ. ಬಂದರೆ ನಮ್ಮ ಅಂಗಡಿ ಕೆಲಸಗಾರರು ಏನಾದರೂ ಕೇಳಲಿಕ್ಕೆ ಬರ್ತಾರೆ...'

'ಅಮ್ಮ ಒಂಬತ್ತು ಗಂಟೆಗೆ ಅಂಗಡಿ ಹತ್ತಿರ ಬರ್ತಾರೆ ಅಂತ ಹೇಳಿಬಿಡು. ಕಿಟಕಿಯಿಂದಲೇ ಹೇಳಿಬಿಡು, ಬಾಗಿಲೇನು ತೆಗೀಬೇಡ. ಅನ್ನ, ಮೆಣಸಿನ ಸಾರು, ಹುರುಳಿ ಕಾಯಿ ಪಲ್ಯ ಮಾಡಿಬಿಡು ಸಾಕು' ಎಂದರು.

ತಾಯಿ ಮಗ ಹೊರಗೆ ಹೊರಟರು. ಇಡೀ ಮನೆಗೆ ಮಧು ಒಬ್ಬಳೇ, ಬೆಂಗಳೂರಿನ ಆ ಭವ್ಯ ಬಂಗಲೆಗೆ ಆಕೆ ಏಕೆ ಬಂದಿಲ್ಲ? ಪ್ರತ್ಯೇಕವಾಗಿ ಇಲ್ಲಾಕೆ ಇದ್ದಾರೆ ? ಏನೇನೋ ಯೋಚನೆ ಬಂತು.

ತಾನು ಒಂದು ವಾರದ ಹಿಂದೆ ರಾಜಸಿಂಹನನ್ನು ಭೇಟಿ ಮಾಡಿದ್ದು ತಾಯಿಗೆ ಹೇಳಿದಾಗ ತಾಯಿ ಕೊಂಚ ನಿರಾಶೆಯಿಂದ– 'ಚಿಕ್ಕ ಮಾಲೀಕರು ನಮ್ಮ ವಿಭಾಗಕ್ಕೆ ಬರೋದಿಲ್ಲ. ಶೈನಿಮೇಡಂ, ಲಿಜಿ ಮೇಡಂ ನಮ್ಮ ಕಡೆ ಹೆಡ್. ನಮ್ಮ ಬಾಸ್ ಜಯಶ್ರೀ ಅಮ್ಮನವರು. ಅವರಿಗೆ ಇಬ್ಬರು ಮೇಡಂಗಳ ಮಾತೆಂದರೆ ವೇದವಾಕ್ಯ. ನೀನು ಅವರನ್ನ ಬೇಟಿ ಮಾಡಿದ್ರೇ ಚೆನ್ನಾಗಿತ್ತು' ಎಂದರು.

'ಇಲ್ಲ. ಅವರೆಲ್ಲಾ ಫಾರಿನ್‌ಗ್ಹೋಗಿದಾರೇಂತ, ಆ ಆಫೀಸ್ ಸಿಬ್ಬಂದಿ ಹೇಳಿದರಲ್ಲಮ್ಮ. ಗಂಡಸರಿಗಾದರೇ ಸ್ವಲ್ಪ ಹೆಂಗರಲು ಇರತ್ತೆ. ಹೋಗಿಬಂದದ್ದು ವಿಫಲ ಆಗಲಿಲ್ಲ. ಎಲ್ಲೋ ಮೈಸೂರಲ್ಲಿ ಕೆಲಸ ಕೊಡಿಸ್ತೀನಿ ಅಂದಿದ್ದಾರೆ. ಅವರ ಕಂಪನಿ ಬ್ರಾಂಚ್ ಇರಬಹುದು' ಎಂದಳು. ತಾಯಿ ವಾಸಂತಿರಾವ್ ವಿಚಲಿತಳಾಗಿ-

'ಈ ಕಂಪನಿಯ ಬ್ರಾಂಚ್ ಆಫೀಸ್ ಇರುವುದು ನನಗೆ ತಿಳಿದ ಮಟ್ಟಿಗೆ ಮುಂಬೈಯಲ್ಲಿ ಮಾತ್ರ. ಬೇರೆ ಬೇರೆ ರಾಜ್ಯಗಳ ವಿತರಣೆ, ಫಾರಿನ್ ಎಕ್ಸ್‌ಪೋರ್ಟ್ ಎಲ್ಲಾ ಆ ಬಾಂಬೆ ಬ್ರಾಂಚ್‌ನ ಷೋರೂಮ್ ಮೂಲಕಾನೇ ನಡಿಯೋದು. ಅದಕ್ಕೆ ಎರಡು ತಿಂಗಳು, ಮೂರು ತಿಂಗಳಿಗೊಮ್ಮೆ ಮೇಡಂ ಹದಿನೈದಿಪ್ಪತ್ತು ದಿನ ಬಾಂಬೆಗೆ ಹೋಗ್ತಿರ್ತಾರೆ, ಬಾಂಬೆ, ಬೆಂಗಳೂರಿನ ಓಡಾಟ ಅಂದ್ರೆ, ಅಡಿಗೆ ಮನೆ, ಬಚ್ಚಲ ಮನೆಯ ಓಡಾಟ ಇದ್ದಹಾಗೆ ಅವರಿಗೆ' ಎಂದಿದ್ದರು. ಅತ್ತೆ ಸೊಸೆಗೆ ಸರಿಯಾಗಿಲ್ಲ ವೇನೋ... ಎಂಬ ಯೋಚನೆಯೂ ಬಂತು.

ಹತ್ತುಗಂಟೆಯ ಹೊತ್ತಿಗೆ ತಾಯಿ ಮಗ ಬಂದರು. ವನಜಮ್ಮ ಮಗನಿಗೆ 'ಕುಂಕಮಾರ್ಚನೆ ಪ್ರಸಾದದ ಕುಂಕುಮ ಅವಳಿಗೆ ಕೊಡಪ್ಪಾ' ಎಂದರು. ಅವನು ಕುಂಕುಮದ ಪೊಟ್ಟ ಮಧುಮತಿಗಿತ್ತ. ವನಜಮ್ಮ ಅವಳಿಗೆ- 'ಅಮ್ಮನೋರ ಪ್ರಸಾದ, ಅರ್ಚನೆಯ ಕುಂಕುಮ ಹಚ್ಕೋಮ್ಮ. ಒಂಬತ್ತೂವರೆಗೆ ಬಂದಿವಿ. ಮುಂದುಗಡೆ ಅಂಗಡೀಲಿದ್ದಿವಿ. ಇನ್ನರ್ಧಗಂಟೆ ಬಿಟ್ಟು ತಟ್ಟೆ ಹಾಕು. ಯಾರಾದರೂ ಕೇಳಿಕೊಂಡು ಬಂದಿದ್ದರೇನು ?' ಎಂದಳು.

'ಇಲ್ಲಮ್ಮ ಯಾರೋ ಗೋವಿಂದ ಅಂತ ಫೋನ್ ಮಾಡಿದ್ದರು. ಚಹಾಪುಡಿ ಏಜಂಟರಂತೆ' ಎಂದಳು.

'ಹೌದಾ ? ಏನು ಹೇಳಿದರು ?' ಎಂದರಾಕೆ.

'ನಾಳೆ ಹನ್ನೆರಡಕ್ಕೆ ಭೇಟಿಗೆ ಬರ್ತೀನಿ' ಅಂದಿದ್ದಾರೆ.

'ಅಂತು ಅಂಗಡೀನ್ನ ದೊಡ್ಡ ಸಾಮ್ರಾಜ್ಯವಾಗಿ ಬೆಳಸಿಬಿಟ್ಟಿದ್ದೀಯಮ್ಮ. ವಿಮೆನ್ಸ್ ಲಿಬ್‌ನೋರು ನಿನ್ನ ನೋಡಿ ಕಲೀಬೇಕು. ಯಾವ ಪುರುಷದ್ವೇಷ ಇತ್ಯಾದಿಗಳಿಲ್ಲದೇ, ವೇದಿಕೆ, ಭಾಷಣಗಳಿಲ್ಲದೇ, ಸ್ತ್ರೀ ತನ್ನ ಬದುಕು ಸ್ಥಾಪಿಸಿ ಕೊಂಡು, ತನ್ನ ಸ್ವಾತಂತ್ರ್ಯ ಉಳಿಸಿಕೊಂಡು, ಪರರಿಗಧೀನಳಾಗದೇ ಹತ್ತು ಜನ ಪುರುಷರಿಗೆ ನೀನೆ ಉದ್ಯೋಗ ಕೊಟ್ಟು, ಹತ್ತು ಕುಟುಂಬಕ್ಕೆ ಆಸರೆಯಾಗಿದ್ದಿ' ಎಂದ. ಆಕೆ ನಕ್ಕು–

'ಹುಲಿ ಬೆನ್ನೇರಿದ ಹಾಗಾಗಿದೆಯಪ್ಪಾ. ದಿನೇ ದಿನೇ ವ್ಯಾಪಾರ, ವಹಿವಾಟು ಅಭಿವೃದ್ಧಿಯಾಗಿ ಬೆಳೀತಾನೇ ಇದೆ. ಈಗ ಅದರಿಂದ ಕಳಚಿಕೊಳ್ಳೋ ಹಾಗೇ ಇಲ್ಲ. ನನ್ನ ನಂತರ ಈ ರಾಜಸಿಂಹ ಸ್ಟೋರ್ ಯಾರಿಗೆ ವಹಿಸಲಿ? ಇದೇ

ಚಿಂತೆಯಾಗಿದೆ' ಎಂದರು. ಅವರು ಹಾರ್ದಿಕವಾಗಿ,

'ನಿನ್ನ ನಂತರ ಅನ್ನೋ ಮಾತು ಹೇಳಲೇಬೇಡಮ್ಮ. ನೀನು ನೂರು ವರ್ಷ ಗಟ್ಟಿ ಮುಟ್ಟಾಗಿದ್ದು ಹೀಗೆ ರೇಷ್ಮೆ ಸೀರೆ ಉಟ್ಟು, ವಜ್ರದ ವಾಲೆ ಹಾಕ್ಕೊಂಡು ರಾಜಮಾತೆ ಇದ್ದಹಾಗೆ ಇರಬೇಕು' ಎಂದ.

'ಹೌದಪ್ಪಾ... ರಾಜಸಿಂಹನ ಮಾತೆ ಅಂದರೆ ರಾಜಮಾತೇನೇ ನಾನು. ನನ್ನ ಮಗನ ಬಗ್ಗೆ ನನಗೆ ಹೆಮ್ಮೆ ಇದೆ' ಎಂದರು.

ಏಕೋ ಅವನು ನಿರ್ವಿಣ್ಣನಾಗಿಬಿಟ್ಟ. ತಾನು ಕೋಟ್ಯಾಧೀಶರ ಅಳಿಯನಾದರೂ ಹೆತ್ತ ತಾಯಿಗೆ ಮೂರು ಕಾಸು ಕೊಡುವ ಹಾಗಿಲ್ಲ ಎಂಬ ಚಿಂತೆ ಆವರಿಸಿತ್ತು. ಮಗನ ಮನದ ಲಹರಿ ಗಮನಿಸಿದ ತಾಯಿ ಮೃದುವಾಗಿ ಹೇಳಿದರು. 'ಮೊದಲು ಅಂಗಡಿ ಸಾಧಾರಣ ಸ್ಥೀತೀಲಿತ್ತು. ನಿನ್ನ ಎರಡು ವರ್ಷದ ಸಂಬಳ, ಆರು ಲಕ್ಷ ಬಿದ್ದ ಮೇಲೆ ಅದು ಚೇತರಿಸಿಕೊಂಡು, ಇವತ್ತಿಗೆ ಈ ಸ್ಥಿತಿ ಮುಟ್ಟಿರೋದು. ಮೊದಲೇನು? ಹೇರ್‌ಪಿನ್, ಟೇಪ್, ಬಳೆ, ನೈಲಾನ್ ವೈರ್, ಸ್ನೋ, ಪೌಡರ್ ಈ ಮಟ್ಟದಲ್ಲಿತ್ತು. ಈಗ ಎಲ್ಲಾ ಕಂಪನಿ ಸೂಟ್‌ಕೇಸ್, ಏರ್‌ಬ್ಯಾಗ್, ಈಗಲ್ ಫ್ಲಾಸ್ಕ್, ಬ್ಯಾಟರಿ ಶೆಲ್, ಲ್ಯಾಂಪ್ಸ್, ಸ್ಟೌವ್ಸ್, ಮಿಕ್ಸಿಯಿಂದ ಹಿಡಿದಿದೆ. ಎಂಟು ವರ್ಷ ಆಯ್ತಲ್ಲಪ್ಪಾ, ಹೊಸ ಬಂಡವಾಳ ಬಿದ್ದು' ಎಂದರು.

ಆದರೆ ಎಂಟು ವರ್ಷದಿಂದ ತಾನು ಮೂರು ಕಾಸು ಕೊಟ್ಟಿಲ್ಲ. ಆಗಾಗ ತಾಯಿಯನ್ನು ನೋಡಲು ಒಂದು ದಿನದ ಮಟ್ಟಿಗೆ ಬರುವ. ಅಷ್ಟಕ್ಕೆ ಸಂತೋಷಿಸುವ ತಾಯಿ.

'ರಾಜು, ಕಾಲು ತೊಳೆದು ಊಟಕ್ಕೆ ಬಾಪ್ಪಾ' ಎಂದರು. ತಾಯಿ ಮಗ ಊಟಕ್ಕೆ ಕೂತಾಗ ಮಧುಮತಿ ಬಡಿಸಿದಳು. ಊಟವಾದ ಮೇಲೆ ಅವನು ಮಲಗಲು ರೂಮಿಗೆ ಹೋದ. ಅಡಿಗೆ ಮನೆಗೆ ಬಂದ ವನಜಮ್ಮ ಅಲ್ಲೇ ಇದ್ದ ಡೈನಿಂಗ್ ಕುರ್ಚಿಯ ಮೇಲೆ ಕುಳಿತು;

'ನಿಧಾನವಾಗಿ ಊಟ ಮಾಡಮ್ಮ. ಊಟ ಆದಮೇಲೆ ವಿಶ್ರಾಂತಿ ತಗೊ. ಒಂದು ಗಂಟೆಗೆ ಅವನು ಊರಿಗೆ ಹೋಗ್ತಾನೆ. ಹೊರಟುಬಿಡು. ಸಾಧ್ಯವಾದರೆ ಇವತ್ತು ಸಂಜೆಯೇ ನಿಮ್ಮ ತಂದೆಯ ಜೊತೆ ಬಂದುಬಿಡು' ಎಂದರು.

'ಖಂಡಿತ ಬರ್ತೀನಮ್ಮ' ಎಂದಳು.

'ಮೈಸೂರು ನೀನು ನೋಡಿದ್ಯಾಮ್ಮ' ಎಂದರು.

'ಇಲ್ಲಮ್ಮ. ಕಾಲೇಜಿನ ಟ್ರಿಪ್ ಅಂತ ಒಂದು ಸಲ ಹಾಕಿದ್ದರು, ಏನೋ ತೊಂದರೆಯಾಗಿ ಬರಲಿಲ' ಎಂದಳು.

'ಇನ್ನು ಮೇಲೆ ಮೈಸೂರಲ್ಲೇ ಇರ್ತೀಯಲ್ಲ. ಆಗಾಗ ಅರಮನೆ, ಚಾಮುಂಡಿ ಬೆಟ್ಟ, ಶ್ರೀರಂಗಪಟ್ಟಣ, ನಂಜನಗೂಡು ಎಲ್ಲಾ ಕಡೇ ಹೋಗ್ತೀರೋಣಾ' ಎಂದರು.

ಅವರ ಆತ್ಮೀಯತೆ, ಪ್ರೀತಿ ಪ್ರೇಮಕ್ಕೆ ಅವಳ ಹೃದಯ ತುಂಬಿ ಬಂತು. ಊಟ ಮುಗಿಸಿ, ವಿಶ್ರಾಂತಿ ಪಡೆದು ಕಾಫಿ ಮಾಡಿದಳು. ಅವನು ಎದ್ದು ಮುಖ ತೊಳೆದು ಫುಲ್‌ಸೂಟ್ ಧರಿಸಿಬಂದ. ಕಾಫಿ ಕುಡಿದು ತಾಯಿಗೆ ನಮಸ್ಕರಿಸಿ ಹೊರಟು ನಿಂತ.

'ಆಗಾಗ ಬರ್ತಿರಪ್ಪಾ' ಎಂದಾಗ ಆಕೆಯ ಕಂಠ ಗದ್ಗದವಾಗಿತ್ತು. ಅವನ ಮುಖ ಮ್ಲಾನವಾಗಿತ್ತು. ಮಧುಮತಿ ಅವರೊಂದಿಗೆ ಹೆಜ್ಜೆ ಹಾಕಿದಳು. ಕಾರಿನ ಹಿಂದಿನ ಸೀಟಿನಲ್ಲಿ ಕೂತಳು. ಮುಂದುಗಡೆ ಡ್ರೈವರ್ ಪಕ್ಕ ಅವನು ಕೂತ.

'ನಿನ್ನೆ ಬೆಳದಿಂಗಳು ಹರಡಿದ ಹಾಗೆ ಇತ್ತಪ್ಪಾ. ನೀನು ಬಂದಾಗ ಪೂರ್ಣಚಂದ್ರ ಮನೇಲಿ ಬಂದ್ಹಾಗಿರತ್ತೆ.'

'ಜಾಸ್ತಿ ಯಾವ ಯೋಚನೇನೂ ಹಚ್ಕೋಬೇಡಮ್ಮ' ಎಂದ.

'ಸಂಜೆ ಬಾಮ್ಮ ಮಧು...' ಎಂದು ಅವಳಿಗೂ ನುಡಿದರು. ಕಾರು ಚಲಿಸಿತು. ಈಗ ಮಧುಮತಿ ನಿಶ್ಚಿಂತಳಾಗಿದ್ದಳು. ಕಾರು ಬೆಂಗಳೂರು ಕುಮಾರಪೇಟೆ ಬಡಾವಣೆ ತಲುಪಿ ಶ್ರೀಗಣೇಶನ ದೇವಸ್ಥಾನದ ಮುಂದೆ ನಿಂತಾಗ ಅವಳು ಇಳಿದಳು. ಅವನೂ ಇಳಿದ.

'ಇಲ್ಲಿಂದ ಹೇಗೆ ಹೋಗ್ತೀರಿ ?' ಎಂದ.

'ಸಿಟಿಬಸ್ಸಲ್ಲಿ ಹೋಗ್ತೀನಿ' ಎಂದಳು.

'ನಮ್ಮ ಮನೆ ವಾತಾವರಣ ಏನನಿಸಿತು ನಿಮಗೆ?' ಎಂದ.

'ನಿಮ್ಮ ತಾಯಿ ದೇವರಂತೋರು, ಅಪರಿಚಿತಳಾದ ನನ್ನ ಮೇಲೆ ತಾಯ್ತನದ ವಾತ್ಸಲ್ಯದ ಮಮತೆಯನ್ನು ಹರಿಸಿದರು. ಯಾವ ಇಂಟರ್‌ವ್ಯೂ ಇಲ್ಲದೇ ನನಗೆ ಎರಡು ಸಾವಿರ ರೂ.ಗಳ ಸಂಬಳದ ಕೆಲಸ ಕೊಟ್ಟರು' ಎಂದಳು. ಅವನು ಅವಳನ್ನು ಪರೀಕ್ಷಿಸುವಂತೆ.

'ಆದರೆ ಆ ಕೆಲಸದಿಂದ ನಿಮ್ಮ ಆತ್ಮಾಭಿಮಾನಕ್ಕೆ ಕುಂದು ಅನಿಸಲ್ವಾ? ಅಡಿಗೆ ಮಾಡು, ಎಲೆಗೋಮೆ ಮಾಡು, ಬಡಿಸು, ಈ ಕೆಲಸಕ್ಕೆ ಬಿ.ಎಸ್ಸಿ ಫಸ್ಟ್‌ಕ್ಲಾಸ್ ಮಾಡಿದ್ದೇನಾ ಅನಿಸಲಿಲ್ವಾ?' ಎಂದ.

'ಇಲ್ಲ, ಮೊದಲನೆಯದಾಗಿ ನನ್ನ ಕ್ವಾಲಿಫಿಕೇಷನ್ ಅಳೆದು ಯಾವ ಸಂಸ್ಥೆ, ಸ್ಕೂಲ್ ಎಲ್ಲಿಯೂ ನನಗೆ ಕೆಲಸ ಸಿಕ್ಕಲಿಲ್ಲ. ಬೇರೆ ಊರಲ್ಲಿ ಒಂದು ಪ್ರೈವೇಟ್ ಸ್ಕೂಲಲ್ಲಿ ಒಂದು ಸಾವಿರ ರೂ. ಸಂಬಳ ಸಿಕ್ಕಿದ್ದರೂ, ನನ್ನ ಅಡಿಗೆ, ಊಟ, ತಿಂಡಿ ನಾನೇ ಮಾಡಿಕೊಂಡು, ಒಂದು ಇನ್ನೂರು, ಮುನ್ನೂರು ಆದರೂ ಉಳಿಸಿ, ಮನೆಗೆ

ಕಳಿಸ್ತಿದ್ದೆ. ಇಲ್ಲಿ ನನ್ನ ಪಾಲಿನ ವರದಾನ ಅನಿಸತ್ತೆ. ನಮ್ಮ ತಂದೆ ತಾಯಿಗೂ ಅದೇ ಕಾಂಪೌಂಡಲ್ಲಿ ವಾಸಿಸ್ಲಿಕ್ಕೆ ಮನೆ ಕೊಡ್ತಿದ್ದಾರೆ. ನಮ್ಮ ತಂದೆ ತಾಯಿಗೂ ವಯಸ್ಸಿನ ಮಗಳನ್ನ ಎಲ್ಲೋ ಬಿಟ್ಟೇ ಅನ್ನೋ ಚಿಂತೆ ಇರಲ್ಲ. ತಂದೆಗೂ ಉದ್ಯೋಗ ಕೊಡ್ತಿದ್ದಾರೆ. ಜೊತೆಗೆ ಒಡತಿ ಆದರೂ ಅವರಿಗೆ ಬಾಸಿಂಗ್ ನೇಚರ್ ಇಲ್ಲ. ಹೆತ್ತ ತಾಯಿಯ ಒಂದು ಬಗೆಯ ಆತ್ಮೀಯತೆ ಇದೆ. ವಯಸ್ಸಾದ ಅವರಿಗೆ ಸೇವೆ ಮಾಡಿದರೆ ತಪ್ಪೇನು ? ನನ್ನ ಆತ್ಮಾಭಿಮಾನಕ್ಕೆ ಯಾವ ಕುಂದೂ ಇಲ್ಲ. ನನ್ನ ಹಾಗೆ ಬಿ.ಎ. ಫಸ್ಟ್‌ಕ್ಲಾಸ್ ಮಾಡಿದ ಗೆಳತಿ ಇಲ್ಲೇ ಕೋಲಾರದ ಒಂದು ಪ್ರೈವೇಟ್ ಸ್ಕೂಲಲ್ಲಿ ಇದ್ದಾಳೆ. ಒಂದು ತುಂಬು ಕುಟುಂಬದವರ ಮನೆಯ ಕೋಣೆ ಬಾಡಿಗೆಗೆ ಹಿಡಿದಿದ್ದಾಳೆ. ಹೊರಗಡೆ ಕಾಂಪೌಂಡ್ ನಲ್ಲಿಯಿಂದ ನೀರು ತಂದು, ತಾನೇ ಬಟ್ಟೆ ಒಗೆದುಕೊಂಡು, ತನ್ನ ಅಡಿಗೆ ತಾನು ಮಾಡಿಕೊಂಡು, ಪಾತ್ರೆ, ತಟ್ಟೆ, ಲೋಟಾ ತಾನೇ ತೊಳೆದುಕೊಳ್ತಾಳೆ. ಶಾಲೆಗೂ ಹೋಗಿ ಬಂದು ಸ್ವಂತ ಕೆಲಸಗಳು ಮಾಡಿಕೊಂಡು, ತಂದ ಸಾವಿರ ರೂ.ಗಳಲ್ಲಿ ಅವಳ ಊಟ, ವಸತಿ, ಸ್ವಂತ ಖರ್ಚು ಆಗಿ ಇನ್ನೂರು ರೂ. ಕಳಿಸ್ತಾಳೆ. ಅವಳ ಸ್ಥಿತಿಗೆ ಹೋಲಿಸಿದರೆ ನನ್ನ ಈ ಅವಕಾಶ ದೇವರ ವರದಾನ' ಎಂದಳು.

'ಓಕೆ ಥ್ಯಾಂಕ್ಯೂ. ನಿಮಗೆ ಸ್ಯಾಟಿಸ್‌ಫ್ಯಾಕ್ಷನ್ ಆಗಿದ್ರೆ ಸಂತೋಷ. ಅಮ್ಮನ್ನ ಪ್ರೀತಿಯಿಂದ ಚೆನ್ನಾಗಿ ನೋಡ್ಕಳ್ಳಿ. ನೋಡೋಕೆ ಒಬ್ಬ ಜಮೀನ್ದಾರಿಣಿ ಹಾಗೆ ದರ್ಪೂತಿಯಾಗಿ ಕಂಡು ಬಂದರೂ ಅಮ್ಮನ ಮನಸ್ಸು ಮಲ್ಲಿಗೆ ಹೂವಿನಷ್ಟು ಮೃದು' ಎಂದ.

'ನಿಮಗೆ ತಾಯಿ, ನನಗೆ ಒಡತಿಗಳಾಗಿವೆ.' ಕಾಂಪೌಂಡಲ್ಲಿ ಕರೆದೊಯ್ದು ಅವಳಿಗೆ ಏನು ಹೇಳಿದರೂ ಏನೋ? ಅವಳು ಅಡಿಗೆ ಮನೆ ಕೆಲಸ ವಹಿಸಿಕೊಂಡಾಗ ಅವನಿಗೆ ಅಚ್ಚರಿ ಆಗಿತ್ತು. ಅವಳ ಮನಸ್ಸು ತಿಳಿಯಲು ಕೇಳಿದ ಪ್ರಶ್ನೆಗೆ ಈ ರೀತಿ ಉತ್ತರ ಕೊಟ್ಟು, ಅವನ ಮನದ ಚಿಂತೆ ಹರಿಸಿದ್ದಳು.

ರಾಜಸಿಂಹ ಮನೆಗೆ ಬಂದಾಗ, ಗೋವಿಂದ ಅವನೆದುರು ಬಂದು 'ಚಿಕ್ಕ ಸಾಹೇಬರಿಗೆ ಜ್ವರ ಬಂದಿದೆ ಸಾಹೇಬರೇ... ನಿನ್ನೆಯಿಂದ ಗಂಜಿ ಸಹ ಕುಡಿದಿಲ್ಲ. ಎರಡು ಸಲ ಗಂಜಿ ಕುಡಿಸೋಕೆ ಹೋದೆ, ಮುಖದ ಮೇಲೆ ಚೆಲ್ಲಿದರು. ಔಷಧಿ, ಮಾತ್ರೆ, ಯಾವುದೂ ನುಂಗಿಲ್ಲ' ಎಂದ.

'ಅವರಜ್ಜಿ ಏನು ಮಾಡ್ತಿದ್ದಾಳೆ?' ಎಂದ.

'ಅವರಜ್ಜಿ... ತಾತಾ ಎಲ್ಲಾ ಪ್ರಯತ್ನಿಸಿದರು. ಯಾರ ಮಾತೂ ಕೇಳಲ್ಲ.

ಡಾಕ್ಟರ್ ಬಂದಾಗ ನಾವು ಇಬ್ಬರು ಆಳುಗಳು ಹಿಡಿದುಕೊಂಡಿವಿ. ಹೇಗೋ ಇಂಜೆಕ್ಷನ್ ಕೊಟ್ಟರು' ಎಂದು ವರದಿ ಮಾಡಿದ.

'ಸರಿ, ಈಗೇನು ಮಾಡ್ತಿದ್ದಾನೆ ?' ಅವನ ದನಿಯಲ್ಲಿ ತಂದೆಗೆ ಇರಬೇಕಾದ ಯಾವ ಆತಂಕವೂ ಇರಲಿಲ್ಲ.

'ಚಿಕ್ಕ ಸಾಹೇಬರು ಮಂಪರಿನಲ್ಲಿದ್ದಾರೆ, ತಾತನವರು ಅಲ್ಲೇ ಕೂತಿದ್ದಾರೆ' ಎಂದು ಹೇಳಿದ ಗೋವಿಂದ.

'ನಿನ್ನ ಚಿಕ್ಕ ಸಾಹೇಬರ ತಲೆ ಕುಟ್ಟಿದರು' ಎಂದು ಮನಸ್ಸಿನಲ್ಲೇ ಅಂದುಕೊಂಡು ತನ್ನ ಕೋಣೆಗೆ ಬಂದ. ಅಲ್ಲೇ ಮಂಚದ ಬಳಿ ಕೂತು ಪತ್ರಿಕೆ ಓದುತ್ತಿದ್ದ ಮೋಹನರಾಯರು ತಲೆ ಎತ್ತಿದರು.

'ಏನು ಮಾಮ? ನಿಮ್ಮ ಮೊಮ್ಮಗನ ಗಲಾಟೆ ?' ಎಂದ. 'ಏನು ಹೇಳಲಪ್ಪಾ, ಡ್ಯಾಡಿ ಕೈಗೆ ಸಿಕ್ಕಲಿ ಅವನಿಗೆ ಬ್ಯಾಟಿಂದ ಚೆನ್ನಾಗಿ ಹೊಡೀತೀನಿ, ಆಮೇಲೆ ಊಟ ಅಂತಾನೇ. ಮಹಾ ಸೇಡಿನ ಛಲದ ಹುಡುಗ. ನಿನ್ನೆಯಿಂದ ಒಂದು ಹನಿ ನೀರು ಬಾಯಿಗೆ ಹಾಕಿಲ್ಲ. ಒಂದಿಷ್ಟು ತಿನಿಸಲಿಕ್ಕೆ ನಾನು, ಅವಳು ಬುದ್ಧಿ ಎಲ್ಲಾ ಖರ್ಚು ಮಾಡಿದೆವು. ನಿನ್ನೆ ಸಂಜೆ ಅವರಮ್ಮ ಅಮೆರಿಕಾದಿಂದ ಫೋನ್ ಮಾಡಿದ್ದಳು. ಅವಳು ಬುದ್ಧಿ ಹೇಳಿದ್ಳು. ಈ ಹುಡುಗ ಕೇಳಲಿಲ್ಲ. ಪಪ್ಪನಿಗೆ ಬ್ಯಾಟ್ ತಗೊಂಡು ಸಿಕ್ಕಾಪಟ್ಟೆ ಹೊಡೀತೀನಿ. ಅವರು ಹೊಡಿಸಿಕೊಂಡ್ರೇ ಊಟ ಅಂತಾನೆ' ಎಂದರು.

'ಇದು ದುರ್ಯೋಧನನ ತುಣುಕೊ, ಕಂಸನ ತುಂಡೋ ? ಹೋಗಿ ಹೋಗಿ ಎಂಥಾ ಮಗನ್ನ ಹೆತ್ತಳು ಆ ಮಹಾತಾಯಿ' ಎಂದ. ನಂತರ 'ನಾನು ಹೋಗಿ ಅವಳ ರೂಮಿನಲ್ಲಿ ಮಲಗ್ತೀನಿ. ಆ ಅಯೋಗ್ಯ ಎದ್ದರೆ ಹೇಳಿ' ಎಂದು ಹೇಳಿ ಪಕ್ಕದ ಕೋಣೆಗೆ ಬಂದ.

ಮಲಗಿದರೂ ಮನಃಶಾಂತಿ ಇರಲಿಲ್ಲ. ನಾಲ್ಕು ಗಂಟೆಗೆ ಫೋನ್ ಟ್ರಿಣ್ ಎಂದಾಗ ಮಲಗಿದ್ದಂತೇ ರಿಸೀವರ್ ಕಿವಿಗೆ ಹಿಡಿದ. ಅಮೆರಿಕಾದಿಂದ ಜಯಶ್ರೀ ಮಾತಾಡುತ್ತಿದ್ದಳು.

'ನಿನ್ನೆ ನಾನು ಫೋನ್ ಮಾಡ್ತೀನಿ ಅಂತ ಗೊತ್ತಿದ್ದು ಮೈಸೂರಿಗೆ ಹೋಗ್ಲಿಕ್ಕೆ ಕಾರಣ ಏನು? ಆ ಮಗೂಗೆ ಹೊಡೆದು, ಬಡಿದು, ಮೈಸೂರಿಗೆ ಹೋಗ್ಲಿಲ್ಲಾಂದರೆ ಯಾವ ದೇವರು ಅಳ್ತಿದ್ದ?' ಅವಳ ಧ್ವನಿಯಲ್ಲಿ ತುಂಬಿದ ಆಕ್ಷೇಪಣೆಗೆ ಅವನ ಸಹನೆಯ ಕಟ್ಟೆ ಒಡೆಯಿತು. ಕೋಪದಿಂದ ನುಡಿದ :

'ನಿನ್ನ ಫೋನ್‌ಕಾಲ್‌ಗಿಂತ ಹದಿನೈದು ದಿನಕ್ಕೆ ಒಮ್ಮೆಯಾದರೂ ನಮ್ಮಮ್ಮನ್ನ ನೋಡಬೇಕಾದ್ದು ನನ್ನ ಧರ್ಮ.'

'ಹೋದ ವಾರವೂ ಹೋಗಿದ್ದಿರಿ. ಹದಿನೈದು ದಿನ ಎಲ್ಲಾಗಿದೆ? ಮಗು ಒಂದೇ

ಇರತ್ತೆ. ಪ್ರೀತಿಯಿಂದ ನೋಡ್ಕೋಬೇಕೂನ್ನೋ ಪ್ರಜ್ಞೆ ಇಲ್ಲವಾ?' ಎಂದಳು.

'ಮಗುವಿನ ತಾಯಿ ನಿನಗೇ ಇಲ್ಲದ ಪ್ರಜ್ಞೆ ನನಗೆ ಹೇಗೆ ಬರತ್ತೆ?' ಎಂದ.

'ಮಾತಿಗೆ ಮಾತು ಬೆಳಿಸಬೇಡ್ರಿ. ದೊಡ್ಡ ಸಾಮ್ರಾಜ್ಯ ನಮ್ಮಪ್ಪ ನನ್ನ ತಲೆಗೆ ಕಟ್ಟಿದ್ದಾರೆ. ಆಗಾಗ ಇಂಥ ಪ್ರಯಾಣ ನನಗಿರತ್ತೆ. ನಿಮ್ಮ ಹಾಗೆ ಹೋಗಿ ಸಂಜೆ ಬರೋ ಕೆಲಸ ಆದರೆ ನಾನು ನನ್ನ ಮಗನ್ನ ನೋಡಿಕೊಳ್ತಿದ್ದೆ. ನಾನಿಲ್ಲಿ ಕಳ್ಳೇಪುರಿ ತಿನ್ನಿಕ್ಕೆ ಬಂದಿಲ್ಲ. ಕಂಪನಿಯ ಜವಾಬ್ದಾರಿ ಹೊತ್ತು ಬಂದಿದ್ದೀನಿ ಅಂತ ನಿಮಗೆ ಗೊತ್ತಿದೆ' ಎಂದಳು.

'ನೀನು ಅಲ್ಲಿ ಕಳ್ಳೇಪುರಿ ತಿನ್ನಿಕ್ಕೆ ಹೋಗಿಲ್ಲ, ನಿಜ. ಆದರೆ ನಿಮ್ಮ ಮಗ ನನಗೆ ಕಬ್ಬಿಣದ ಕಡಲೇ ತಿನ್ನಿಸ್ತಾ ಇದ್ದಾನೆ' ಎಂದ.

'ಅವನು ಚಿಕ್ಕ ಹುಡುಗ ಕಣ್ರಿ, ನೀವು ಸ್ವಲ್ಪ ಸುಧಾರಿಸಿಕೊಳ್ಳಬೇಕು. ಮಗೂನ್ನ ಹೊಡೆದು ಬಡಿದು ಮಾಡಿಯಾದರೂ, ಮೈಸೂರಿಗೆ ಹೋಗೋಂಥಾ ಆಕರ್ಷಣೆ ಏನು ? ಆ ಮುದಿ ತಾಯಿಗೋಸ್ಕರ ಹೋಗ್ತೀರೀಂತ ನಾನು ನಂಬಲ್ಲ' ಎಂದಳು.

'ಹೌದು! ಅಲ್ಲೊಬ್ಬ ರೂಪಸೀನ್ನ ತಂದಿಟ್ಟಿದ್ದೀನಿ. ಅವಳಿಗಾಗಿ ಹೋಗ್ತೀನಿ' ಎಂದ ಉಡಾಫೆಯಾಗಿ.

'ತಮಾಷೆಗೂ ಇಂಥಾ ಮಾತು ಸಹಿಸೋ ಮೂರನೇ ದರ್ಜೆ ಗೃಹಿಣಿ ಅಲ್ಲ ನಾನು. ಅಲ್ಲಿನ ವಾತಾವರಣ ಸಾಕಷ್ಟು ಪರಿಶೀಲಿಸಿದ್ದೀನಿ. ಹಾಗೇನಾದರೂ ಇದ್ದರೆ ಆ ಮನೆಗೆ ಬಾಂಬ್ ಹಾಕಿಸ್ತಿದ್ದೆ. ಆ ಮುದಿತಾಯಿ ಮೋಹ ನಿಮಗೆ. ಸಾಕ್ಷಾತ್ ಶ್ರೀರಾಮಚಂದ್ರ. ನನ್ನ ಗೆಳತೀರ ಅತ್ತೇರೆಲ್ಲಾ ಸತ್ತು ಸುಣ್ಣವಾಗಿದ್ದಾರೆ. ಈ ಹಾಳು ಮುದುಕಿ ಮದುವೆ ಆಗಿ ಹತ್ತು ವರ್ಷ ಆದರೂ ಕಲ್ಲುಗುಂಡಿನ ಹಾಗಿದ್ದು, ನನ್ನ ಜೀವ ತಿಂತಾ ಇದೆ' ಎಂದಳು.

'ಹಣದ ಮದದಿಂದ ಬಾಯಿಗೆ ಬಂದ ಹಾಗೆ ಮಾತಾಡಬೇಡ ಜಯಾ..? ನೀನು ಅತ್ತೆ ಸೇವೆ ಮಾಡಿ ಬಳಲಿ ಬೆಂಡಾದದ್ದು ಯಾವಾಗ? ಅಮ್ಮನಿಗೆ ಸಾವು, ಕೇಡು ಹಾರೈಸಬೇಡ' ಎಂದು ಗದರಿಸಿದ.

'ನಿಮ್ಮಮ್ಮ ನೂರು ವರ್ಷ ಕಲ್ಲು ಗುಂಡಿನ ಹಾಗೆ ಬಿದ್ದಿರಲಿ. ನೀವ್ಯಾಕೆ ನನ್ನ ಹೊಟ್ಟೆ ಉರಿಸ್ತೀರಿ ಹೇಳಿ ?' ಕೈ ಹಿಡಿದ ಹೆಂಡ್ತಿ ಬಗೆಗೂ ಗಂಡನಿಗೆ ಒಂದು ಕರ್ತವ್ಯ ಇದೇಂತ ನಿಮಗೆ ಗೊತ್ತಿದೆಯಾ ?' ಎಂದ.

'ಏನು ಕರ್ತವ್ಯಲೋಪ ಆಗಿದೆ ನನ್ನಿಂದಾ?' ಎಂದ. ಅವಳು ಬುದ್ಧಿ ಹೇಳುವಂತೇ–

'ನೋಡಿ ರಾಜ್ ! ನಮಗಿರೋದು ಎರಡೇ ಮಕ್ಕಳು. ಬೇಕೂಂದರೂ ಮತ್ತೆ ಮಕ್ಕಳಾಗಲ್ಲ. ನಾನು ಆಪರೇಷನ್ ಮಾಡಿಸಿಕೊಂಡಿದ್ದೀನಿ. ಇರೋ ಎರಡು

ಮಕ್ಕಳನ್ನು ಜೋಪಾನವಾಗಿ ನೋಡಿಕೋಬೇಕಾದ್ದು ನಮ್ಮ ಕರ್ತವ್ಯ. ಆ ಮಗೂಗೆ ಸಿಕ್ಕಾಪಟ್ಟೆ ಹೊಡೆದು, ಅವನು ಜ್ವರದಲ್ಲಿ ಮಲಗಿದ್ದಾನೆ ಅಂದರೆ ಏನು ಅರ್ಥ? ನಾಳೆ ಆ ಮಗೂಗೆ ಏನಾದರೂ ಆದರೆ ಆ ಜವಾಬ್ದಾರಿ ನೀವು ಹೊತ್ಕೋಬೇಕಾಗತ್ತೆ' ಎಂದಳು.

'ಆದರೆ ಅವನ ವರ್ತನೆ ಹೇಗಿರತ್ತೆ ನಿನಗೆ ಗೊತ್ತಾ?' ಎಂದ.

'ಗೊತ್ತು. ಅವನು ಮಹಾ ಹಠವಾದಿ. ಪುಂಡ. ಆದರೆ ಅವನಿಗೆ ಎಂಟು ವರ್ಷ, ನಿಮಗೆ ಮೂವತ್ತಾರು ವರುಷ. ಅವನ ಅವಿವೇಕಕ್ಕೆ ನೀವು ತಾಳ್ಮೆಯಿಂದ ತಿದ್ದಬೇಕು' ಎಂದಳು.

'ಹೇಗೆ ತಿದ್ದಬೇಕು ? ನೀನೇ ದಿನಾ ಫೋನ್ ಮಾಡಿ ಪಾಠ ಹೇಳಿಕೊಡು' ಎಂದ.

'ಹೇಳಿಕೊಡ್ತೀನಿ. ನಿನ್ನೆ ಅವನಿಗೆ ಫೋನ್ ಮಾಡಿದ್ದೆ. ಅವನಿಗೆ ನಿಮ್ಮ ಮೇಲೆ ತುಂಬಾ ಕೋಪ ಬಂದಿದೆ. ಪಪ್ಪಾ ನನಗೆ ಬ್ಯಾಟಿಂದ ಹೊಡೆದಿದ್ದಾರೆ. ನಾನು ಪಪ್ಪಂಗೆ ಬ್ಯಾಟಿಂದ ಚೆನ್ನಾಗಿ ಹೊಡಿಬೇಕು. ಅದುವರೆಗೂ ಊಟ ಮಾಡಲ್ಲ, ಏನೂ ತಿನ್ನಲ್ಲ, ಕುಡಿಯಲ್ಲ ಅಂದಿದ್ದಾನೆ. ಮಹಾ ಹಠಮಾರಿ, ಊಟ ತಿಂಡಿ ಬಿಟ್ಟು ಉಪವಾಸದಲ್ಲಿ ಪ್ರಾಣ ಹೋದರೆ ಗತಿ ಏನು ? ಅವನ್ನ ಪ್ಲೀಸ್ ಮಾಡೋದಕ್ಕೆ ನೀವು ನಾಲ್ಕೇಟು ತಿನ್ನಿ. ಎಳೇ ಮಗು ಎಷ್ಟರಮಟ್ಟಿಗೆ ನಿಮಗೆ ಹೊಡೆದಾನು ?' ಎಂದಳು.

ಹೆಂಡತಿಯ ಮಾತಿಗೆ ಅತೀವ ಸಂತಾಪವಾಯಿತು. ಅತ್ಯಂತ ಖೇದದಿಂದ,

'ಅವನು ಎಳೇ ಮಗು ನಿಜ. ಆದರೆ ಬ್ಯಾಟ್ ತಗೊಂಡು ಬೀಸಿ ಬೀಸಿ ಹೊಡೆದಾಗ ಏಟು ಎಳೇದಿರುತ್ತೇನು ?' ಎಂದ.

'ಆ ಎಳೇ ಚರ್ಮದ ಎಂಟು ವರ್ಷದ ಹುಡುಗನಿಗೆ ದನ ಬಡಿದ್ಹಾಗೆ ಬಡಿದಿದ್ದೀರಿ. ಅವನು ಬೀದಿ ಭಿಕ್ಷುಕರ ನಿರ್ಗತಿಕರ ಹುಡುಗ ಅಲ್ರಿ. ಕೋಟ್ಯಾಧೀಶರ ಮೊಮ್ಮಗ, ಮುಂದೆ ನಮ್ಮಪ್ಪನ ಕೋಟ್ಯಂತರ ರೂ. ಆಸ್ತಿಗೆ ಅವನೇ ವಾರಸುದಾರ! ಬೇರೆ ದರಿದ್ರರ ಮಕ್ಕಳ ಹಾಗೆ ಏಟು ಹೊಡಿಸಿಕೊಂಡು ಅವನು ಬದುಕಬೇಕಾಗಿಲ್ಲ' ಎಂದಳು.

'ಬೆಂಕಿಬಿತ್ತು ನಿನ್ನ ಕೋಟ್ಯಾಂತರ ರೂಪಾಯಿಗಳ ಆಸ್ತಿಗೆ ? ಅವನು ದುರ್ಗುಣಗಳ ಗಣಿ ಆಗ್ತಿದ್ದಾನೆ. ಅದರ ಚಿಂತೆ ನಿನಗಿಲ್ಲವಾ ?' ಎಂದ.

'ಏನು, ದುರ್ಗುಣಾನಾ ! ನಿಮ್ಮನ್ನೇ ಹೋತಿದ್ದಾನೆ. ಹಠವಾದಿ, ಹಠದಲ್ಲಿ ನೀವೇನು ಕಡಿಮೆ ಇದ್ದೀರಿ ? ನಿಮ್ಮ ಹಠವೇ ಹಠ. ಒಂದಿನ ನನಗೆ ಹಿತವಾಗಿ ನಡೆದುಕೊಂಡಿದ್ದೀರಾ ? ಒಂದೊಂದ್ಸಲ ಕನ್ನಡಿ ಮುಂದೆ ನಿಂತಾಗ ನನಗೆ ನಾನೇ ಆಶ್ಚರ್ಯಪಡ್ತೀನಿ. ಇಂಥಾ ರೂಪ ಇಂಥಾ ಐಶ್ವರ್ಯ ! ನನ್ನಂಥಾ ಹೆಂಡ್ತೀನ್ನೆ ಹೀಗೆ ಯಃಕಶ್ಚಿತ್ ತಿಳಿದಿದ್ದಾರಲ್ಲ. ಒಬ್ಬ ಬಡವಿ, ಕುರೂಪಿ ಅವಿದ್ಯಾವಂತೆ ಹೆಂಡ್ತಿ

ಸಿಕ್ಕರೆ ಕಾಲಲ್ಲಿ ಒದ್ದೇ ನೀವು ಮಾತಾಡಿಸ್ತಿದ್ರೇನೋ ಅನಿಸತ್ತೆ' ಎಂದಳು.

ಅವಳು ಮಾತು ಕೇಳಿಸಿಕೊಳ್ಳುತ್ತ ಕೂತಿದ್ದವನಿಗೆ ಹಿಂದಿನಿಂದ ಬ್ಯಾಟ್ ತಂದು ಭುಜಕ್ಕೆ ಹೊಡೆದ ಮಗನ ಏಟಿಗೆ 'ಹ್ಹಾ' ಎಂದು ಚೀರಿದ.

'ಅಯೋಗ್ಯ... ಪಪ್ಪನಿಗೆ ಹೊಡಿದೆಯಾ ?' ಮೋಹನ್‌ರಾವ್ ಬಂದು ಬ್ಯಾಟ್ ಕಿತ್ತುಕೊಂಡರು. ತಂದೆಯ ತೊಡೆ ಏರಿದ. ಫೋನ್ ಕಿತ್ತುಕೊಂಡು 'ಮಮ್ಮಿ ಮಮ್ಮಿ.. ಪಪ್ಪ ತೊಡೆ ಮೇಲೆ ಕೂತು ಮಾತಾಡ್ತಿದ್ದೀನಿ. ಪಪ್ಪನಿಗೆ ಚೆನ್ನಾಗಿ ಹೊಡೀಬೇಕೂಂತಿದ್ದೀನಿ. ನಿನ್ನೆ ನನಗೆ ಎಷ್ಟೊಂದು ಹೊಡಿದಿದ್ದರು, ನಿನ್ನ ಒಂದೇ ಏಟು ಹೊಡೀಬೇಕು, ಜಾಸ್ತಿ ಹೊಡೆದರೆ ಕಾರು ತಂದುಕೊಡಲ್ಲ ಅಂದಿದ್ದೆಯಲ್ಲ' ಎಂದ.

'ಹೌದು !, ಮಮ್ಮಿ, ಪಪ್ಪನ ತೊಡೇ ಮೇಲೇ ಕೂತಿದ್ದೀನಿ. ಪಪ್ಪನ ಜೊತೇಲೇ ಊಟಕ್ಕೆ ಕೂತ್ಕೋತೀನಿ, ಪಪ್ಪನ ಜೊತೇಲೆ ಮಲಗ್ತೀನಿ' ಎಂದ.

'ಜ್ವರಾ ಇಲ್ಲ ಮಮ್ಮಿ, ಬೆಳಿಗ್ಗೆ ಡಾಕ್ಟರ್ ಅಂಕಲ್ ಇಂಜೆಕ್ಷನ್ ಚುಚ್ಚಿದರು. ತೋಳು, ಕಾಲು ಎಲ್ಲಾ ಇನ್ನೂ ನೋಯ್ತಾ ಇದೆ ಮಮ್ಮಿ. ಪಪ್ಗೆ ಇನ್ನೊಂದೇಟು ಹೊಡೀತೀನಿ' ಎಂದ. ಅವಳೇನು ಹೇಳಿದಳೊ ?

'ಇಲ್ಲ ಇಲ್ಲ. ಹೊಡಿಯಲ್ಲ ಮಮ್ಮಿ. ಖಂಡಿತ ಕಾರು ತಗೊಂಬಾ... ಪಪ್ಪನ ಕಿವೀಲಿ ಹಾಡು ಹೇಳ್ತೀನಿ' ಎಂದ.

'ಪಪ್ಪಾ, ಮಮ್ಮಿ ಮಾತಾಡ್ತಾಳಂತೆ' ಎಂದ. ಅವನು ಯಾಂತ್ರಿಕವಾಗಿ ರಿಸೀವರ್ ಕಿವಿಗಿಟ್ಟುಕೊಂಡ.

'ಆ ರ್‍ಯಾಸ್ಕಲ್ ಹೊಡೆದಾಗ ತುಂಬಾ ನೋವಾಯ್ತೇನ್ರಿ ? ನೀವು ಹ್ಹಾ ಅಂತ ಚೀರಿದ್ದು ಕೇಳಿ ಹೊಟ್ಟೇಲಿ ಬೆಂಕಿ ಬಿದ್ದಂಗಾಯ್ತು. ಅವನನ್ನು ನಾವಿಬ್ಬರೂ ಕಂಟ್ರೋಲ್ ಮಾಡಬೇಕ್ರಿ. ಮಹಾ ಹಠವಾದಿ, ದಂಡಕ್ಕೆ ಬಗ್ಗಲ್ಲ. ನಾನು ಕೆಲವು ಸಲ ಬೆಲ್ಟ್ ತಗೊಂಡು ಸಹ ಹೊಡೆದಿದ್ದೆ. ಇನ್ನಷ್ಟು ಹಠ ಮಾಡ್ತಾನೆ. ಪ್ರೀತಿ ಪ್ರೇಮದಿಂದಲೇ ತಿದ್ದಬೇಕು' ಎಂದು ಉಪದೇಶಿಸಿದಳು.

'ಸರಿ, ಪ್ರೀತಿ ಪ್ರೇಮದಿಂದಲೇ ತಿದ್ದಿತೀನಿ. ಇನ್ನಾದರೂ ನನ್ನ ಕಿವಿಗೆ ವಿಶ್ರಾಂತಿ ಇದೆಯಾ ?' ಎಂದ.

'ಏಕ್ರಿ ಹಾಗಾಡ್ತೀರಿ? ವಾರಕ್ಕೊಂದ್ಸಲ ಫೋನ್ ಮಾಡ್ತೀನಿ. ನನ್ನ ದನಿಯು ನಿಮ್ಮ ಪಾಲಿಗೆ ಕರ್ಕಶ ಅನಿಸ್ತಾ ಇದೆಯಾ ?' ಎಂದಳು. ಅವನು ಬೇಸತ್ತು.

'ಒಮ್ಮೊಮ್ಮೆ ಬದುಕೇ ಸಾಕಾಗಿದೆ ಅನಿಸತ್ತೆ ನನಗೆ' ಎಂದಾಗ ಅವಳು ಸಿಡಿದೆದ್ದಳು. 'ಏಕೆ ? ಏನಂತಾ ಹಿಂಸೆ ಇದೆ ನಿಮಗೆ? ಅರಮನೆ ಅಂಥಾ ಮನೆ, ಅಪ್ಸರೆ ಅಂಥಾ ಹೆಂಡ್ತಿ, ಮುತ್ತಿನಂಥಾ ಮಕ್ಕಳು. ಲಕ್ಷಾಂತರ ಸಾಲ ಇದೆಯಾ?

ಬೆಲೆ ಏರಿಕೆ ಕಾಲದ ಜೀವನೋಪಾಯದ ಸಮಸ್ಯೇನಾ? ಹೆಂಡತಿ ರೋಗಿಷ್ಟೇನಾ? ಜೀವನದಲ್ಲಿ ಬೇಸತ್ತು ನಿಟ್ಟುಸಿರು ಬಿಡೋಂಥಾದ್ದೇನಿದೆ?' ಎಂದಳು.

'ಸರಿ ನಾನು ಇಡಿ ಜಗತ್ತಿನಲ್ಲೇ ಅತ್ಯಂತ ಸುಖಿ, ಅದೃಷ್ಟಶಾಲಿ ಮನುಷ್ಯ' ಎಂದ.

ಅವಳು ಕೋಪದಿಂದ ಫೋನ್ ಡಿಸ್‌ಕನೆಕ್ಟ್ ಮಾಡಿದಳು.

'ಪಪ್ಪಾ, ಊಟ ಮಾಡೋಣ ಬಾ... ನಿನ್ನೆಯಿಂದ ನಾನು ಊಟ ಮಾಡಿರಲಿಲ್ಲ. ಪಪ್ಪಂಗೆ ಚೆನ್ನಾಗಿ ಹೊಡೆದ ಮೇಲೆ ಊಟ ಮಾಡೋದು ಅಂತಿದ್ದೆ. ಆದರೆ ಮಮ್ಮಿ ನಿಂಗೆ ಒಂದೇ ಏಟು ಹೊಡೀಬೇಕು ಅಂದಿದ್ದಳು. ನನಗೆ ಮಾತ್ರ ನೀನು ಎಂಟು ಏಟು ಹೊಡೆದಿದ್ಯಲ್ಲ' ಎಂದ.

ರಾಜಸಿಂಹನ ತೋಳು ಚುರುಗುಟ್ಟುತ್ತಿತ್ತು. ಒಂದು ಏಟಿಗೆ ತತ್ತರಿಸುವ ಹಾಗಾಗಿದೆ. ನಿನ್ನೆ ತಾನು ಎಷ್ಟು ಹೊಡೆದೆ ಕೋಪದಲ್ಲಿ ಭರದಲ್ಲಿ, ಎನಿಸಿ ಆ ಹುಡುಗನ ಬಗ್ಗೆ ಕೊಂಚ ಮರುಕವೂ ಆಯಿತು. ತೊಡೆ ಮೇಲೆ ಕೂತ ಆ ಹುಡುಗನ ಮೈ ಕೊಂಚ ಬಿಸಿಯಾಗಿತ್ತು.

'ಜ್ವರ ಇದೆ. ಹಾಲು ಬ್ರೆಡ್ ತಿನ್ನಿಸ್ತೀನಿ, ತಿನ್ನು' ಎಂದ. ಚಿಂಟು ಆಸೆಯಿಂದ- 'ನಿನ್ನ ತೊಡೆ ಮೇಲೆ ಮಲಗ್ತೀನಿ, ತಿನ್ನಿಸು. ಆವತ್ತು ಚಿನ್ನಿಗೆ ಜ್ವರ ಬಂದಾಗ ತೊಡೆ ಮೇಲೆ ಮಲಗಿಸಿಕೊಂಡು ಬ್ರೆಡ್ ತಿನ್ನಿಸಿದ್ಯಲ್ಲ' ಎಂದ.

ರಾಕ್ಷಸಾಕಾರದ ಈ ಎಂಟು ವರ್ಷದ ಕೊಂಟೆ ಕೋಣನನ್ನು ತೊಡೆ ಮೇಲೆ ಮಲಗಿಸಿಕೊಳ್ಳುವುದೆಂದರೆ ಪರಮಹಿಂಸೆಯೇ. ಆದರೆ ಬೇಡ ಎಂದರೆ ಕೇಳುವನೆ? 'ಮೂಳೆ ಒತ್ತುತ್ತೆ. ನಿಂಗೆ ನೋವಾಗತ್ತೆ. ಮಲಗಿ ನೋಡು' ಎಂದು ಮೊಣಕಾಲು ಚಿಪ್ಪು ತಲೆಗಾನಿಸಿಕೊಂಡು ಮಲಗಿಸಿಕೊಂಡ. ಒಂದು ನಿಮಿಷದಲ್ಲೇ ಸ್ಪ್ರಿಂಗಿನಂತೇ ಎದ್ದ ಚಿಂಟು 'ಬೇಡ ಪಪ್ಪಾ... ನೋವತ್ತೆ ತಲೆಗೂ ಹೊಡಿದ್ಯೇನು ನೀವು. ನಾನು ಎಂಟೇ ಏಟು ಎಣಿಸಿಕೊಂಡಿದ್ದೆ. ಹಾಗಾದರೆ ಒಂಬತ್ತು ಏಟು ಹೊಡಿದಿದ್ದೆಯ?' ಎಂದ ಉತ್ಸಾಹದಿಂದ.

'ಎಂಟೋ... ಒಂಬತ್ತೋ, ನಿನ್ನಿನ ವಿಷಯ ಬೇಡ. ಇನ್ಮೇಲೆ ಒಳ್ಳೇ ಹುಡುಗನಾಗಿರು, ನನ್ನ ರೇಗಿಸಬೇಡ...'

'ಇನ್ಮೇಲೆ ನೀನು ಮೈಸೂರಿಗೆ ಹೋಗೋವಾಗ ಹೋಗ ಬೇಡ ಅನ್ನಲ್ಲ. ಮಮ್ಮಿ ಹೇಳಿದ್ದಾಳೆ. ಅವರು ಮೈಸೂರಿಗೆ ಹೋಗುವಾಗ ಅಡ್ಡಿ ಮಾಡಿದರೆ ರಾಕ್ಷಸರಾಗ್ತಾರೆ. ಆಗ ಏನು ಗಲಾಟೆ ಮಾಡಬೇಡಾ ಅಂದಿದ್ದಾಳೆ' ಎಂದ.

ಡೈನಿಂಗ್ ಟೇಬಲ್ ಮೇಲೆ ಕೂತಾಗಲು ಅವನಿಗೆ ತನ್ನದೇ ಚಿಂತೆ. 'ನಾಳೆ ಬಾಬ್ರಿ ಮುಂದೆ, ಎಂಟು ಏಟು ಅಂತ ಹೇಳಲೊ ? ಒಂಬತ್ತು ಏಟು ಅಂತ

ಹೇಳಲೋ ಪಪ್ಪ. ನಾನು ಎಂಟೇ ಏಟು ಎಣಿಸಿಕೊಂಡಿದ್ದೆ' ಎಂದ.

ಬ್ರೆಡ್ಡನ್ನು ಹಾಲಲ್ಲಿ ಅದ್ದಿ ಮಗನಿಗೆ ತಿನ್ನಿಸಿದ ರಾಜಸಿಂಹ 'ಬಾಬ್ರಿ ಯಾರು?' ಎಂದ.

'ನನ್ನ ಫ್ರೆಂಡ್. ಅವನ ತಂದೇನೂ ಕುಡಿದಾಗ ಮಗಂಗೆ ಸಿಕ್ಕಾಪಟ್ಟೆ ಹೊಡೀತಾರಂತೆ. ಒಂದು ಸಲ ಬೆಲ್ಟ್ ತಗೊಂಡು ಎಂಟು ಏಟು ಹೊಡಿದಿದ್ದರಂತೆ. ಅವನು ಅಳಲಿಲ್ಲವಂತೆ. ನಾಳೆ ಅವನ ಹತ್ತಿರ ಜಂಭ ಕೊಚ್ಕೋತೀನಿ. ನಮ್ಮ ಪಪ್ಪಾ ಬ್ಯಾಟ್ ತಗೊಂಡು ಒಂಬತ್ತು ಏಟುಗಳು ಹೊಡೆದಿದ್ದರೂ ನಾನು ಅಳಲಿಲ್ಲ ಅಂತೀನಿ' ಎಂದ.

'ಹುಡುಗ ಎಷ್ಟು ಪುಂಡನೋ... ಅಷ್ಟೇ ಮುಗ್ಧ' ಎನಿಸಿ ಕನಿಕರವಾಯಿತು. ಬ್ರೆಡ್ ತಿನ್ನುತ್ತಾ-

'ನೀನು ಡ್ರಿಂಕ್ ಮಾಡಿದ್ದೆಯಾ ಪಪ್ಪಾ ನಿನ್ನೇ?'

'ಹೂಂ ಒಂದು ಲೋಟಾ ಮಿಲ್ಕ್ ಡ್ರಿಂಕ್ ಮಾಡಿದ್ದೇ...' ಎಂದ.

'ಊಂ... ವ್ಹಿಸ್ಕಿ, ಬೀರ್, ರಮ್... ಅವರ ಪಪ್ಪಾ ಏನೇನೋ ಕುಡೀತಾರಂತೆ ಗೊತ್ತಾ?' ಎಂದ.

ಮಗನ ಬಾಯಲ್ಲಿ ಸರಾಗವಾಗಿ ಬಂದ ಈ ಶಬ್ದಗಳು ಅವನಿಗೆ ಅಹಿತವೆನಿಸಿತು. 'ಇಂಥಾ ವಿಷಯಗಳೆಲ್ಲಾ ನೀನು ಮಾತಾಡಬಾರದು ಮರಿ, ಹಾಲು, ಬಾದಾಮಿ ಹಾಲು, ಬೋರ್ನ್‌ವಿಟಾ ಇದು ತಾನೇ ನೀನು ಕುಡಿಯೋದು' ಎಂದ.

'ಈಗ ಚಿಕ್ಕವನಾಗಿರೋದ್ರಿಂದ ಅದನ್ನ ಕುಡೀತೀನಿ. ದೊಡ್ಡೋನಾದಮೇಲೆ ವ್ಹಿಸ್ಕಿ ಕುಡೀತೀನಿ. ವ್ಹಿಸ್ಕಿ ಕುಡಿದರೆ ಮಜಾ ಇರತ್ತಂತೆ ಪಪ್ಪಾ.. ಬಾಬ್ರಿ ಹೇಳ್ತಾನೆ' ಎಂದ. ಈ ಹುಡುಗನನ್ನು ತಿದ್ದುವುದು ಅಸಾಧ್ಯ ಎನಿಸಿತು. 'ದೊಡ್ಡೋನಾದ ಮೇಲೆ ವ್ಹಿಸ್ಕಿ ಕುಡಿಯುವಂತೆ. ಈಗ ಬ್ರೆಡ್ ತಿಂದ್ ಮೇಲೆ ಕ್ರೋಸಿನ್ ನುಂಗಿಸ್ತೀನಿ.'

'ಸರಿ ನಿಂಗೆ ರಾಮ, ಭೀಮ ಇವರ ಹಾಗೆ ಆಗ್ಬೇಕೂಂತ ಇಷ್ಟ ಇದೆಯೊ ? ರಾವಣ ದುರ್ಯೋಧನನ ಹಾಗೆ ಆಗಬೇಕೂಂತ ಇಷ್ಟ ಇದೆಯೋ?' ಎಂದ. ಚಿಂಟು ಯೋಚಿಸುತ್ತ 'ಫೈಟಿಂಗಲ್ಲಿ ಯಾರು ಗೆದ್ದರೆ ಅವರ ಹಾಗೆ. ಭೀಮ, ದುರ್ಯೋಧನ ಗದೆ ಹಿಡಿದುಕೊಂಡು ಫೈಟಿಂಗ್ ಆಡಿದಾಗ ಭೀಮ ತಾನೇ ಗೆದ್ದಿದ್ದು' ಎಂದ. ನಂತರ ಯೋಚಿಸುತ್ತ-

'ರಾಮ, ರಾವಣ ಯುದ್ಧ ಮಾಡಿದಾಗ ಯಾರು ಗೆಲ್ತಾರೆ, ಪಪ್ಪಾ. ತಾತಾ ಪೂರ್ತಿ ಕಥೆ ಹೇಳಿಲ್ಲ' ಎಂದ.

'ರಾಮನೇ ಗೆಲ್ತಾನೆ' ಎಂದ.

'ಹಾಗಾದರೆ ನಾನು ರಾಮನೇ ಆಗ್ತೀನಿ' ಎಂದ.

'ಆದರೆ ಚಿಕ್ಕಂದಿನಲ್ಲಿ ಚಂದ್ರ ಬೇಕೂಂತ ಹಠ ಮಾಡಿದ್ದನಲ್ಲ. ತಾತಾ ಕಥೆ ಹೇಳಿದ್ದಾರೆ' ಎಂದ.

ಬ್ರೆಡ್ ಮುಗಿದಿತ್ತು. 'ಏಳು, ಮಾತ್ರೆ ನುಂಗಿಸ್ತೀನಿ ಬಾ... ಮಲಗಿಕೋ' ಎಂದ.

ಕೋಣೆಗೆ ಬಂದ ಮಗನಿಗೆ ಮಾತ್ರೆ ನುಂಗಿಸಿ ಮಲಗಿಸಿದ. ತಾನೂ ಪಕ್ಕದಲ್ಲಿ ಮಲಗಿಕೊಂಡ.

'ಚಂದ್ರನಿಗಾಗಿ ರಾಮ ಹಠಮಾಡಿದ್ದಕ್ಕೆ ಅವನಿಗೆ ರಾಮಚಂದ್ರ ಅಂತ ಹೆಸರು ಬಂತಂತೆ ಪಪ್ಪಾ' ಎಂದ.

'ಹೌದು ! ನೀನು ಚಂದ್ರನಿಗೆ ಹಠಮಾಡು. ನಿನಗೆ ಚಿಂಟು ಚಂದ್ರ ಅಂತ ಕರೀತಾರೆ' ಎಂದ.

'ಉಂಹೂ. ನನಗೆ ಬ್ಯಾಟರೀಲಿ ಓಡೋ ಕಾರು ಬೇಕು. ಕಾರು ತಂದು ಕೊಡಲಿಕ್ಕೆ ಮಮ್ಮಿ ಎಷ್ಟು ಕಂಡೀಷನ್ ಹಾಕ್ತಾಳೆ. ನನ್ನ ಹತ್ತಿರವೇ ಕಾರಿದೇಂತ ಬಾಬ್ರಿ ಜಂಭ ಮಾಡ್ತಾನೆ. ಮಮ್ಮಿ ಕಾರು ತಂದರೆ ಆ ಕಾರು ಡ್ರೈವ್ ಮಾಡಿಕೊಂಡ್ಹೋಗಿ ಅವನ ಕಾರಿಗೆ ಡ್ಯಾಷ್ ಹೊಡೀತೀನಿ. ಅವನ ಕಾರು ಗಜ್ಜಿ ಗುಜ್ಜಿ ಆಗತ್ತೇ. ಅವನ ಜಂಭ ಹೋಗತ್ತೆ' ಎಂದ. ಹುಡುಗನ ಆಲೋಚನೆಗಳೆಲ್ಲಾ ಈ ದಿಕ್ಕಿನಲ್ಲೇ ಓಡುತ್ತದೆ. ಇಂಥಾ ಮಗನನ್ನು ತಾನು ತಿದ್ದಬೇಕೆಂದು ಬಾರಿ ಬಾರಿಗೆ ಬುದ್ಧಿ ಬೇರೆ ಹೇಳುತ್ತಾಳೆ. ಅವನು ಮಾತಾಡಿ ದಣಿದು ನಿದ್ರಿಸಿದರೂ ರಾಜಸಿಂಹನಿಗೆ ಬಹು ಹೊತ್ತು ನಿದ್ರೆ ಬರಲಿಲ್ಲ.

ಅರಮನೆಯಂಥಾ ಮನೆ, ಅಪ್ಸರೆಯಂಥಾ ಹೆಂಡತಿ, ಏನು ಕಡಿಮೆ ಆಗಿದೆ ನಮಗೆ ? ಎಂದು ಹಂಗಿಸುವ ಹೆಂಡತಿ ಮಾತು ನೆನಪಿಗೆ ಬಂತು ಮನಃಶಾಂತಿಯೆ ಇಲ್ಲದ ಈ ಅರಮನೆಗಿಂತ ಒಂದು ಗುಡಿಸಿಲೇ ಮೇಲು ಏನಿಸುತ್ತಿತ್ತು.

ತಾಯಿಯ ಆಜ್ಞೆ ಹಾಗೂ ಕಾರಿನ ಆಸೆಗೆ ಚಿಂಟು ತನ್ನ ಸನ್ನಿಧಾನ ಬಯಸುತ್ತಿದ್ದಾನೆ. ಆಫೀಸಿನಿಂದ ಬಂದೊಡನೆ ಓಡಿಬರುತ್ತಿದ್ದ. 'ಪಪ್ಪಾ ತೊಡೆ ಮೇಲೆ ಕೂತು ಹಾಡು ಹೇಳ್ತೀನಿ.'

ಈ ತೊಡೆ ಮೇಲೆ ಕೂಡುವ ಅಭ್ಯಾಸ ನಿಧಾನವಾಗಿ ಬಿಡಿಸಿದ. 'ನೋಡು ಚಿನ್ನಿ ಹಾಗೆ ನೀನು ಚಿಕ್ಕ ಹುಡುಗ ಅಲ್ಲ. ತೊಡೆ ಮೇಲೆ ಕೂತರೆ ನಿನಗೂ ಹಿಂಸೆ, ನನಗೂ ಹಿಂಸೆ. ಪಕ್ಕದಲ್ಲಿ ಕೊತ್ಕೊ, ಭುಜ ಹಿಡಿದು, ಕಿವಿ ಹತ್ತಿರವೇ ಹಾಡು' ಎಂದ. ಚಿಂಟು ಗೊಂದಲದಿಂದ-

'ಆದರೆ ಚಿನ್ನಿ ಹಾಗೆ ನಿನ್ನ ಪ್ರೀತಿ ಮಾಡಿದರೆ ಮಾತ್ರ ಮಮ್ಮಿ ನನಗೆ ಕಾರು ತಂದುಕೊಡೋದು' ಎಂದಳು.

'ನಾನು ಮಮ್ಮಿಗೆ ಈ ಸಲ ಫೋನ್ ಮಾಡ್ತೀನಿ, ಚಿಂಟೂ ಚಿನ್ನೀಗಿಂತ ಒಳ್ಳೆ ಹುಡುಗ ಆಗಿದ್ದಾನೆ' ಎಂದ.

'ನಿಜವಾಗಲು ಹಾಗೆ ಮಮ್ಮಿಗೆ ಹೇಳ್ತೀಯ ಪಪ್ಪಾ?'

'ಹೌದು ! ನಾನು ಹೇಳಿದ ಹಾಗೆ ನೀನು ಕೇಳ್ತಿಯಾ, ಈ ನಡುವೆ ನೀನು ಜಾಣ ಆಗಿದ್ದಿ' ಎಂದ ರಾಜಸಿಂಹ.

ಹುಡುಗನ ಕಂಗಳು ಆನಂದದಿಂದ ಹೊಳೆದವು. 'ಮಮ್ಮಿ ಯಾವಾಗಲೂ ಹೇಳ್ತಾಳೆ. ನಿಮ್ಮ ಪಪ್ಪಾ ತುಂಬಾ ಬ್ರಿಲಿಯಂಟ್, ನೀನು ಅವರ ಹಾಗೆ ಆಗ ಬೇಕೂಂತಾಳೆ. ನಾನು ಬ್ರಿಲಿಯಂಟ್ ಆಗೋಕೆ ಏನು ಮಾಡಬೇಕು?' ಎಂದು ಕುತೂಹಲದಿಂದ ಪ್ರಶ್ನಿಸಿದ.

'ದೊಡ್ಡೋರು ಹೇಳಿದ್ದಾಗೆ ಕೇಳಬೇಕು. ಮೈಸೂರಲ್ಲಿ ನಮ್ಮನ್ನ ಇದ್ದಾರಲ್ಲ. ನಾನು ಚಿಕ್ಕೋನಿದ್ದಾಗ ನಮ್ಮಮ್ಮ ಹೇಳಿದ್ದೆಲ್ಲಾ ಕೇಳಿದ್ದೆ. ಅದಕ್ಕೆ ಬ್ರಿಲಿಯಂಟ್ ಆದೆ.'

'ನನ್ನನ್ನು ಒಂದು ಸಲ ಮೈಸೂರಿಗೆ ಕರೆದುಕೊಂಡು ಹೋಗು. ಅಜ್ಜಿ ಏನೇನು ಹೇಳ್ತಾರೋ ಕೇಳಿ, ನಾನು ಬ್ರಿಲಿಯಂಟ್ ಆಗ್ತೀನಿ' ಎಂದ ಚಿಂಟು. 'ಈ ಸಲ ಬಾಬ್ರಿ ಫಸ್ಟ್ ರ್‍ಯಾಂಕ್ ಬಂದಿದ್ದಾನೆ ಪಪ್ಪಾ. ಮಮ್ಮಿ ಕೇಳಿದರೆ ನಂಗೆ ಕಾರು ಕ್ಯಾನ್ಸಲ್ ಮಾಡ್ತಾಳೆ. ನಾನು ತುಂಬಾ ಬ್ರಿಲಿಂಟ್ ಆಗ್ಬೇಕು' ಎಂದೂ ಸೇರಿಸಿದ.

'ನೀನು ತುಂಬಾ ಬ್ರಿಲಿಯಂಟ್ ಆಗಬೇಕಾದ್ರೆ ರಾತ್ರಿ ಹೊತ್ತು, ಒಳ್ಳೇ ಹಾಡು ಕೇಳ್ತ ರಿಲ್ಯಾಕ್ಸ್ ಮಾಡಬೇಕು, ಮೆದುಳು ಶಾಂತವಾಗತ್ತೆ. ಬುದ್ಧಿ ಚುರುಕಾಗತ್ತೆ' ಎಂದು ಅವನು ಲತಾ ಮಂಗೇಶ್ಕರ್‌ರ ಮೀರಾ ಭಜನೆ ಹಾಕಿದ. ಹುಡುಗ ತಂಟೆ ಮಾಡದೆ ಆಲಿಸುತ್ತ ಮಲಗಿದ. ಏಳೆಂಟು ಹಾಡು ಮುಗಿಯುವುದರೊಳಗೆ ನಿದ್ರೆ ಮಾಡಿದ.

ಮಕ್ಕಳನ್ನು ಪಳಗಿಸುವುದು ಎಷ್ಟು ಸುಲಭ ಎನಿಸಿತು. ಅತಿ ತಂಟೆಕೋರ ಮಕ್ಕಳಿಗೆ ಅತಿಯಾದ ಮುಗ್ಧತೆಯೂ ಇರುತ್ತದೆ. ತಾಯಿ ಕಾರು ತರುತ್ತಾಳೇ... ಎಂದೊಡನೆ ಅವಳು ಹಾಕಿದ ಷರತ್ತೆಲ್ಲ ಪಾಲಿಸಿದ. ಮಗ ಫೋನಿನ ರಿಸೀವರ್ ಕಿವಿಗಿಟ್ಟಾಗ ಅಲ್ಲಿಂದ ಅವಳೇನು ಹೇಳುತ್ತಾಳೋ ಕೇಳಿಸುತ್ತಿರಲಿಲ್ಲ. ಆದರೆ ಇಲ್ಲಿಂದ ತಾಯಿಗೆ ಅವನು ಉತ್ಸಾಹದಿಂದ ಕೂಗಿ ಕೂಗಿ ಮಾತಾಡುತ್ತ...

'ಪಪ್ಪನ ತೊಡೆ ಮೇಲೆ ಕೂತಿದ್ದೀನಿ ಮಮ್ಮಿ, ರಾತ್ರಿ ಪಪ್ಪನ ಪಕ್ಕಾನೆ ಮಲಗ್ತೀನಿ ಮಮ್ಮಿ. ಪಪ್ಪನ ಕಿವೀಲಿ ಹಾಡು ಹೇಳ್ತೀನಿ' ಇತ್ಯಾದಿ ಉದ್ಗಾರ ಕೇಳಿದಾಗ, ಅಲ್ಲಿಂದ

ನಾಲ್ಕಾರು ನಿಮಿಷಗಟ್ಟಲೇ ಅವನಿಗೆ ಅವಳೇನು ಬೋಧನೆ ಮಾಡುತ್ತಿದ್ದಳೆಂದು ಅವನಿಗರಿವಾಗುತ್ತಿತ್ತು.

ಮೊದಲಿನಿಂದ ಅವಳಿಗೆ ತನ್ನಮೇಲೆ ಒಂದೇ ದೂರು, 'ಮಗಳನ್ನ ತುಂಬಾ ಮುದ್ದು ಮಾಡಿ, ಮಗನ್ನ ನೆಗ್ಲೆಕ್ಟ್ ಮಾಡಿ ದೂರ ಇಟ್ಟಿದ್ದೀರಿ' ಅಂತ ! ಅದಕ್ಕೆ ಅವನು ಬೇಸರದಿಂದ 'ಆ ಮಹಾ ಪುಂಡತನ ನಿನ್ನಿಂದಲೇ ಅವನಿಗೆ ಬಂದದ್ದು. ನಿನ್ನ ಮುದ್ದು ಮಗನ್ನ ನೀನೇ ತಿದ್ದು' ಎನ್ನುತ್ತಿದ್ದ.

ಮಗಳನ್ನ ಕಂಡರೆ ಅವನಿಗೆ ಅಪರಿಮಿತ ಒಲವಿತ್ತು. ಆ ಮಗುವೂ ಸಹಜವಾಗಿ ಪಪ್ಪಾ... ಪಪ್ಪಾ ಎಂದು ಅವನಿಗೆ ದುಂಬಾಲು ಬೀಳುತ್ತಿತ್ತು. ತಾಯಿ ಕಾರು ತಂದು ಕೊಡುತ್ತಾಳೆ ಎಂಬ ಆಸೆಗೆ ಇವನು ಅವಳ ಆಜ್ಞೆ ಪಾಲಿಸಲು ತನ್ನ ಸಾನ್ನಿಧ್ಯ ಬರುತ್ತಾನೆ. ಆ ಮಗುವಿಗೆ ಇಂಥಾ ಯಾವ ಸ್ವಾರ್ಥವೂ ಇಲ್ಲ. ಸಹಜ ಪ್ರೀತಿ ಆದರದು. ಅಂಥಾ ಪ್ರೀತಿಪಾತ್ರ ಮಗುವನ್ನು ತನ್ನಿಂದ ದೂರ ಮಾಡಿದಳಲ್ಲ ಎಂದು ಹೆಂಡತಿಯ ಮೇಲೆ ಕೋಪ ಉಕ್ಕಿಬರುತ್ತಿತ್ತು.

ಚಿಂಟುವಿನ ಒದೆ ಹೊಟ್ಟೆಗೆ ಬಿದ್ದಾಗ ಎಚ್ಚೆತ್ತು ಹೊಟ್ಟೆಯ ಬಳಿ ದಿಂಬು ಅಡ್ಡ ಇಟ್ಟುಕೊಳ್ಳಲಿಲ್ಲವೆಂದು ನೆನಪಾಗಿ ದಿಂಬು ಅಡ್ಡ ಇಟ್ಟು ಕೊಂಡು ಮಲಗಿದ. ಆಲೋಚನೆಗಳು ನಡುವೆ ನಿದ್ರಾದೇವಿ ಬಹು ತಡವಾಗಿ ಅವನನ್ನಾಲಿಂಗಿಸಿದಳು.

ಒಂದು ವಾರ ಉರುಳಿತ್ತು. ಚಿಂಟು ಮೊದಲಿನಷ್ಟು ತಂಟೆ ಮಾಡುತ್ತಿರಲಿಲ್ಲ. ಹಾಡು ಕೇಳುತ್ತ ನಿದ್ರಿಸುವ ಪರಿಪಾಠ ಬೆಳೆಸಿಕೊಂಡ. ಕಥೆ ಹೇಳು... ಕಥೆ ಹೇಳು ಎಂಬ ತಲೆನೋವಿನ ಒತ್ತಾಯವೂ ಇರಲಿಲ್ಲ. ಆಗಾಗ 'ಪಪ್ಪಾ... ಮೈಸೂರಿಗೆ ಹೋಗೋಣಾ... ಅಜ್ಜೀನ್ನ ಕೇಳಿ, ನೀನು ಹೇಗೆ ಇಷ್ಟು ಬ್ರಿಲಿಯಂಟ್ ಇದ್ದೆ. ಕೇಳಿಸಿಕೊಳ್ತೀನಿ' ಎನ್ನುತ್ತಿದ್ದ.

ಆ ಶನಿವಾರ ಕಂಪನಿ ಆಡಿಟ್ ಕೆಲಸ ಪರ್ವತದ ಹಾಗೆ ಉಳಿದಿತ್ತು. ಭಾನುವಾರ ಹತ್ತು ಗಂಟೆಗೆ ಬರಲು ಕೆಲವು ಅಧಿಕಾರಿಗಳಿಗೆ ತಿಳಿಸಿದ್ದ.

'ಈ ಸಲ ತುಂಬಾ ಕೆಲಸ ಇದೆ ಮರಿ, ಭಾನುವಾರವೂ ಆಫೀಸಿಗೆ ಹೋಗ್ಬೇಕು. ಬರೋ ಶನಿವಾರ ಹೋಗೋಣಾ' ಎಂದ. ಶನಿವಾರ ಆಫೀಸಿಂದ ಬಂದು ಕೂತಿದ್ದೇ, ಐದು ಗಂಟೆಗೆ ಫೋನ್ ಮೊಳಗಿದಾಗ ಎತ್ತಿ ಕಿವಿಗೆ ಇಟ್ಟು ಕೊಂಡ. 'ಹಲೋ ! ಚಿಂಟೂ ಎಲ್ಲಿ ?'

'ಚಿಂಟೂ ಅಪ್ಪಾ ಮಾತಾಡ್ತಿರೋದು, ಚಿಂಟು ತೋಟದಲ್ಲಿ ಫ್ರೆಂಡ್ ಜೊತೆ ಆಡ್ತ ಇದ್ದಾನೆ' ಎಂದ.

'ಸೂರ್ಯ ಪಶ್ಚಿಮದಲ್ಲಿ ಹುಟ್ಟಿದಷ್ಟು ಅಪರೂಪದ ಸುದ್ದಿ. ಚಿಂಟೂಗು ಗೆಳೆಯರು, ಒಟ್ಟಾಗಿ ಆಟ ಆಡ್ತಾರೇ?' ಎಂದಳು ಜಯಶ್ರೀ. ರಾಜಸಿಂಹ ನಕ್ಕು.

'ನಿನ್ನ ಮಗ ಈಗ ಮೊದಲಿನಷ್ಟು ಪುಂಡನಾಗಿಲ್ಲ. ಕಥೆ ಹೇಳೂಂತ ಕಾಡಿಸೋದು, ಹಗಲು ರಾತ್ರಿ ಬ್ಯಾಟ್, ಕ್ಯಾಟರ್‌ಪಿಲ್ಲರ್ ಹಿಡಕೊಂಡು, ಮನೆ ಆಳುಗಳ ಜೀವ ಹಿಂಡೋದು ಯಾವುದಿಲ್ಲ. ಸಂಜೆ ಸ್ವಲ್ಪ ಹೊತ್ತು ಗೆಳೆಯನ ಜೊತೆ ಆಟ... ಅವನಿಂದಲೇ ಪಾಠ.... ರಾತ್ರಿ ನನ್ನೊಂದಿಗೆ ಊಟ ನನ್ನ ಜೊತೆ ನಿದ್ರೆ ಮಾಡ್ತಾನೆ' ಎಂದ.

ಜಯಶ್ರೀ ಸಂತಸದಿಂದ 'ಹೌದೇನ್ರೀ ! ಅವನ ಪುಂಡಾಟಿಕೆ ನಿಜವಾಗಿ ಕಮ್ಮಿ ಆಗಿದೆಯಾ ? ನಿಮ್ಮ ಬಾಯ್ಲಿಂದ್ಲೆ ಈ ಸುದ್ದಿ ಬಂದಮೇಲೆ ನಾನು ನಂಬ್ತೀನಿ. ಏಕೆಂದರೆ ಅವನನ್ನು ಪುಂಡಾ ಅಂತ ದೂರ್ತಿದ್ದೋರೆ ನೀವು' ಎಂದವಳು.,

'ಅಂದಹಾಗೆ ಹೋದವಾರ ಅವನ ಕಾಡ್ ಬಂದಿರಬೇಕಲ್ಲ, ಎಷ್ಟನೇ ರ್‍ಯಾಂಕ್ ಅವನು ?'

'ಎರಡನೇ ರ್‍ಯಾಂಕ್ ಇದ್ವಾ, ನಿನ್ನ ವಿಚಾರಣೆಗೆ ತುಂಬಾ ಹೆದರಿದ್ದಾನೆ. ಅದಕ್ಕೆ ಇವತ್ತು ಮಮ್ಮಿ ಪೋನ್ ಮಾಡಿದಾಗ ಎತ್ತಲ್ಲ ಎಂತ ಹೊರಗೆ ಹೋಗಿದ್ದಾನೆ. ಅವನನ್ನೇನೂ ಬೈಬೇಡಾ... ಮುಂದಿನ ತಿಂಗಳು ಅವನನ್ನ ಫಸ್ಟ್ ರ್‍ಯಾಂಕ್ ತರೋ ಹೊಣೆ ನನ್ನದು' ಎಂದ.

'ನಿಜವಾಗಲು... ಇವತ್ತು ಸೂರ್ಯ ಪೂರ್ವದಲ್ಲಿ ಮುಳುಗಿರಬೇಕು. ನನಗಂತು ತುಂಬಾ ಸಂತೋಷವಾಗಿದೆ ಕಣ್ರಿ. ಎಂದಿಗೆ ನೀವು ಅವನ ಓದಿನ ಮೇಲುಸ್ತುವಾರಿ ವಹಿಸ್ತಿರೋ ಅಂದಿಗವನು ಉದ್ಧಾರ ಆಗ್ತಾನೇಂತ ನನಗೆ ಗೊತ್ತಿತ್ತು. ಚಿನ್ನೀ ಇರೋವರಿಗೆ ಅವನನ್ನ ನೀವು ಅಸ್ಪೃಶ್ಯನ ಹಾಗೆ ದೂರ ಇಟ್ಟಿದ್ದಿರಿ. ಈಗ ನಿಮಗೂ ಒಂಟಿತನ ತಾಳಲಾರದೇ ಅವನನ್ನೇ ಅವಲಂಬಿಸಿದ್ದೀರಿ. ಮಗೂನ್ನ ಕರೀರಿ. ಅವನು ಕಾಂಪೌಂಡಲ್ಲಿ ಯಾರ ಜೊತೆ ಆಡ್ತಿದ್ದಾನೆ ?' ಎಂದಳು.

'ಅವನು ಆಗಾಗ ಎದುರು ಬಂಗಲೆಯ ಆ ಬಾಬ್ರೀ ಜೊತೆ ಆಡ್ತಿದ್ದ. ಆ ಸಹವಾಸ ನನಗೆ ಸರಿ ಬೀಳ್ಲಿಲ್ಲ. ಯಾವಾಗಲೂ ಫೈಟಿಂಗ್ಸ್... ಜಗಳ. ಈಗ ಆ ಸ್ನೇಹಾ ಬಿಡಿಸಿದ್ದೀನಿ. ಮೋಹನ್ ಅಂತ ಒಬ್ಬ ಹದಿನಾಲ್ಕು ವರ್ಷದ ಹುಡುಗ. ನಮ್ಮ ಕಂಪನಿ ಶ್ರೀನಿವಾಸ್ ಅವರ ಮಗ. ತೋಟದಲ್ಲಿ ಫುಟ್‌ಬಾಲ್ ಆಟ ಆಡಿಸ್ತಾನೆ. ಆಮೇಲೆ ಅವನೇ ಪಾಠ ಹೇಳಿಕೊಡ್ತಾನೆ. ಫ್ರೆಂಡ್ಲಿ ಪ್ರೀತಿಸ್ತಾ ಹೇಳಿ ಕೊಡೋದ್ರಿಂದ ಇವನು ಉಲ್ಲಾಸವಾಗಿ ಕಲೀತಾನೆ' ಎಂದ.

'ಏನಾದರೂ ಮಾಡಿ ಅವನನ್ನ ಪಳಗಿಸೋದು ನಿಮಗೆ ಒಪ್ಪಿಸ್ತೀನಿ. ನಿಮ್ಮನ್ನೇ ನಂಬಿದ್ದೀನಿ, ನೀವು ಮನಸ್ಸು ಮಾಡಿದರೇ ಚಿಟಿಕಿ ಹೊಡೆದಷ್ಟು ಸುಲಭವಾಗಿ

ಸಾಧಿಸಬಲ್ಲಿರಿ' ಎಂದಳು.

'ಆದರೆ ನನ್ನದಾದ ಕೆಲವು ಸ್ವತಂತ್ರ ನಿಯಮಗಳನ್ನು ಪಾಲಿಸಬೇಕಾಗುತ್ತೆ. ಆ ಬಂಗ್ಲೆ ಹುಡುಗ ಬಾಬ್ರಿ ಸ್ನೇಹಾ ಬಿಡಿಸಿ, ಮಧ್ಯಮ ವರ್ಗದ ಹುಡುಗನ್ನ ಇವನ ಗಾರ್ಡಿಯನ್ ಆಗಿ ಹಾಕಿದ್ದೀನಿ. ಈ ಹುಡುಗ ಸಿಕ್ಕಾಪಟ್ಟೆ ಬ್ರಿಲಿಯಂಟ್, ಅಷ್ಟೇ ತಾಳ್ಮೆಯಿದೆ. ಆದರೆ ಶ್ರೀಮಂತರಲ್ಲದವರು ನಿನ್ನ ಮಗನ ಸ್ನೇಹಕ್ಕೆ ಯೋಗ್ಯರಲ್ಲಾಂತ ನೀನು ಬಂದು ಜಗಳ ತೆಗೆದರೇ ಅಂತ ನನ್ನ ಭಾವನೆ' ಎಂದ.

'ನೋಡ್ರಿ, ಬ್ರಿಲಿಯಂಟ್ ನೆಸ್ ಇದ್ದು ನನ್ನ ಮಗನ್ನ ತಿದ್ದೋ ಅಂಥೋರಾದ್ರೆ ಅಂಥಾ ಹುಡುಗ ಶ್ರೀಮಂತನಲ್ಲದಿದ್ದರೂ ಪರವಾಗಿಲ್ಲ. ನಿಮ್ಮ ಬ್ರಿಲಿಯಂಟ್‌ನೆಸ್ ನೋಡಿ ನಾನು ನಿಮ್ಮನ್ನ ಮೆಚ್ಚಿದಾಗ ನೀವೇನು ಶ್ರೀಮಂತರಿದ್ದಿರಿ ? ನನಗೆ ಅವನು ಬ್ರಿಲಿಯಂಟ್ ಇರೋದು ಮುಖ್ಯ. ಇನ್ನು ಹಾಳು ಬಾಬ್ರಿಯ ಸ್ನೇಹಾ ಬಿಡಿಸಿದ್ದೇ ಒಳ್ಳೇದು. ಅವರ ಮನೆ ವಾತಾವರಣ ಚೆನ್ನಾಗಿಲ್ಲ. ಶ್ರೀಮಂತಿಕೆ ಒಂದು ಧಂಡಿಯಾಗಿದೆ. ಇಡೀ ನಮ್ಮ ಪಾಶ್ ಏರಿಯಾದಲ್ಲೇ ಅವನ ಬಂಗ್ಲೆ ಇದ್ದ ಹಾಗೆ ಯಾರದಿದೆ ? ಬೆಂಜ್, ಟಯೊಟಾ, ಕ್ಯಾಡಿಲಾಕ್ ಕಾರುಗಳು ಇಟ್ಕೊಂಡಿದ್ದಾನೆ. ಆದರೆ ಮನೇಲಿ ಗಂಡ ಹೆಂಡ್ತಿಗೆ ಒಬ್ಬರ ಕಂಡ್ರೆ ಒಬ್ಬರಿಗಾಗಲ್ಲ' ಎಂದಳು. ನಮ್ಮ ಕುಟುಂಬದ ತರಹವೇ ಇರಬಹುದು ಅಂದುಬಿಡೋಣ ಎಂದುಕೊಂಡ. ಆದರೆ ಅವಳನ್ನು ರೊಚ್ಚಿಗೆಬ್ಬಿಸಬಾರದೆಂದು ಸುಮ್ಮನಿದ್ದ. ಮತ್ತೆ ಅವಳೇ ಪ್ರಾರಂಭಿಸಿದಳು.

'ಆತ ಸಿಕ್ಕಾಪಟ್ಟಾ ಡ್ರಂಕ್‌ರ್ಡ್. ಏಕೆ ಗೊತ್ತೆ ? ಬಿಸಿನೆಸ್ ಕೆಲಸ ಅಂತ ಹೊರಗೆ ಹೋದಾಗ ಹೆಂಡತಿ ಅದೇ ಊರಲ್ಲಿರೋ ಸೋದರ ಮಾವನ ಮಗನ್ನ ಕರೆಸಿಕೊಂಡು ಮಜಾ ಮಾಡೋಳಂತೆ. ಒಂದ್ಸಲ ರೆಡ್ ಹ್ಯಾಂಡಡ್ಡಾಗಿ ಸಿಕ್ಕಿಬಿದ್ದಳಂತೆ. ಅವಳಿಗೆ ಹೊಡೆದು ಬಡಿದು ಮಾಡಿದ. ಡೈವೋರ್ಸ್ ಮಾಡಿ, ತನ್ನ ಪ್ರೆಸ್ಟೀಜ್ ಹಾಳು ಮಾಡಿಕೊಳ್ಳೋ ಧೈರ್ಯವಿಲ್ಲ. ಕೋಪ ಬಂದಾಗ ಮಗನಿಗೂ ಸಿಕ್ಕಾಪಟ್ಟೆ ಹೊಡೀತಾನೆ. ಹೆಂಡತಿಗೂ ಹೊಡೀತಾನೆ. ಸಿಕ್ಕಾಪಟ್ಟೆ ಡ್ರಿಂಕ್ ಮಾಡ್ತಾನೆ' ಎಂದಳು.

'ಬೇರೊಬ್ಬರ ಸಮಾಚಾರ ನಮಗ್ಯಾಕೆ ಬಿಡು' ಎಂದ ಸಿಂಹ. ಅವಳು ಹಠದಿಂದ 'ಹಾಗಲ್ಲ, ನಾನು ಆಗಾಗ ಆತ್ಮಾವಲೋಕನ ಮಾಡಿಕೊಳ್ತೇನೆ. ನನಗೂ, ನಿಮಗೂ ವಿರಸ ಏತಕ್ಕೆ? ಅಂತ. ನನಗಂತು ಪರಪುರುಷರ ಚಾಳಿ ಇಲ್ಲ. ಯಾವೂರಿಗೆ ಹೋದರೂ ರಾತ್ರಿ ನಿಮ್ಮನ್ನೇ ನೆನಸ್ತಾ ಮಲಗೋದು. ನಾನು ನಿಮ್ಮನ್ನ ಅತಿಯಾಗಿ ಪ್ರೀತಿಸ್ತೀನಿ. ಅಷ್ಟೇ ಅಧಿಕಪ್ರೀತಿ ನಿಮ್ಮಿಂದ ಬಯಸ್ತೀನಿ. ನನ್ನ ಹೊರತು ಯಾರು ನಿಮ್ಮ ಗಮನ ಸೆಳೀ ಬಾರಾದೂಂತ ಬಯಸ್ತೀನಿ. ಇವುಗಳಿಗೆ ವ್ಯತಿರಿಕ್ತವಾಗ ನೀವು ನಡೆದಾಗ ವ್ಯಾಘ್ರಳಾಗ್ತೀನಿ, ಉದ್ವಿಗ್ನಳಾಗ್ತೀನಿ. ಇದೇ ನಮ್ಮಿಬ್ಬರ ಜಗಳಕ್ಕೆ ಕಾರಣ' ಎಂದಳು.

'ನಿನ್ನನ್ನ ನಾನು ಪ್ರೀತಿಸ್ತೀನಿ ಜಯಾ! ನಿನ್ನ ರೂಪ, ಬುದ್ಧಿವಂತಿಕೆ, ಶ್ರೀಮಂತಿಕೆ ಎಲ್ಲದರ ಬಗ್ಗೆ ನನಗೆ ಹೆಮ್ಮೆಯಿದೆ. ಒಬ್ಬ ಪ್ರೇಮಿಯಾಗಿ ಆರಾಧಿಸ್ತೀನಿ. ಆದರೆ ಒಬ್ಬ ಗುಲಾಮನಾಗಿ ನಿನಗೆ ಜೀ ಹುಜೂರ್ ಎನ್ನಲಾರೆ. ಇದೇ ನಮ್ಮಿಬ್ಬರ ವಿರಸಕ್ಕೆ ಕಾರಣ' ಎಂದ.

'ಪ್ರೇಮ ಅಧಿಕವಾಗಿದ್ದರೆ ಗುಲಾಮಗಿರಿ ತಪ್ಪೇನಲ್ಲ. ಗಂಡನಿಗಿಂತ ಹೆಂಡತಿಯೇ ಎಲ್ಲಾ ವಿಧದಲ್ಲಿ ಜೋರಾಗಿದ್ದರೆ ಅವನು ಅದನ್ನು ತಲೆಬಾಗಿ ಒಪ್ಕೋಬೇಕು' ಎಂದಳು.

ಅವನು ಸುಮ್ಮನಿದ್ದ.

'ಮದುವೆ ಆದ ಹೊಸತರಲ್ಲಿ ಹುಚ್ಚರ ಹಾಗೆ ಪ್ರೀತಿಸ್ತಿದ್ದಿರಿ. ನನ್ನ ಗುಲಾಮನು ಆಗಿದ್ದಿರಿ. ಎರಡು ಮಕ್ಕಳು ಆಗಿ ನಾನು ಹಳಬಳಾದ ಮೇಲೆ ಈಗ ತಿರಸ್ಕಾರ ಶುರುವಾಗಿದೆ. ನಿಮಗೆ ಹೊಸ ಹುಡುಗಿ ಬೇಕು ಹೌದಲ್ಲವೋ? ಫಾರಿನ್ನಿಂದ ಬರುವಾಗ ನಿಮಗಾಗಿ ಒಬ್ಬ ಹುಡುಗೀನ್ನ ಕರ್‍ಕೊಂಬರ್ತೀನಿ...'

'ಹೊಸ ಹುಡುಗಿ...!' ಎಂದ ವಿಸ್ಮಯದಿಂದ.

ಅವಳು ನಗುತ್ತ.

'ಹೌದು ! ಹುಡುಗಿ... ಹೋಸ ಹುಡುಗಿ, ಅಬ್ಬಾ! ನಾಲಿಗೆ ಚಪ್ಪರಿಸ್ತಾ ಹೇಗೆ ಕೇಳ್ತೀರಿ..! ಹೊಸ ಹುಡುಗೀನಾ ? ಅಂತ. ಹೂಂ... ಚಿಂಟೂ ಬರೋ ತಿಂಗಳು ಫಸ್ಟ್ ರ್‍ಯಾಂಕ್ ತೆಗೆದರೆ ನಿಮಗೆ ಒಂದು ಹೊಸ ಹುಡುಗೀನ್ನ ಕಾಣಿಕೆ ಕೊಡ್ತೀನಿ' ಎಂದಳು.

ಅವನು ಯೋಚಿಸುತ್ತಾ-

'ಹೊಸ ಹುಡುಗಿ ಯಾರೂ ಬೇಡ. ಚಿನ್ನೀನ್ನ ಮುಂಬೈಯಿಂದ ಕರ್‍ಕೊಂಬಂದ್ಬಿಡು. ನನ್ನ ಮನಸ್ಸಿನ ಕಣಕಣವೂ ಅವಳಿಗಾಗಿ ಹಂಬಲಿಸತ್ತೆ' ಎಂದ.

'ಚಿನ್ನಿ ವಿಷಯ ಬೇರೆ, ನಾನು ನಿಮಗೊಬ್ಬ ದತ್ತುಪುತ್ರಿ ಕರೆತರ್ತಿಲ್ಲ, ಹದಿನೆಂಟರ ಹೊಚ್ಚ ಹೊಸ ಹರೆಯದ ಒಬ್ಬ ಹುಡುಗೀನ್ನ ನಿಮ್ಮ ಬೆಡ್‌ರೂಮ್ ಕಾಮೆಡಿಗಾಗಿ ಕರೆತರ್‍ತಾ ಇದ್ದೀನಿ. ಅವಳನ್ನ ನೋಡುತ್ತಲೆ ಮದುವೆಯಾದ ಮೊದಲ ವರ್ಷದ ಹನಿಮೂನ್ ಭಾವಗಳು ನಿಮಗೆ ಉಕ್ಕಿ ಬರುತ್ತವೆ. ಇನ್ನೊಮ್ಮೆ ನಿಮ್ಮ ಬದುಕಿನಲ್ಲಿ ಸುಖದಾಂಪತ್ಯದ ಹಾಗೂ ಹೊಸ ಪ್ರಣಯಲಹರಿಯ ಮಧುಚಂದ್ರೋದಯ ವಾಗತ್ತೆ' ಎಂದಳು. ಅವನು ಕೊಂಚ ಗೊಂದಲದಿಂದ.

'ನೀನು ಏನು ಹೇಳ್ತಿಯೋ ನನಗೆ ಅರ್ಥವಾಗಲ್ಲ' ಎಂದ.

'ಬರೋ ತಿಂಗಳು ಇಪ್ಪತ್ತನೇ ತಾರೀಖಿನವರೆಗೆ ಸಸ್ಪೆನ್ಸ್, ಇಪ್ಪತ್ತನೆ ತಾರೀಖು ನಿಮ್ಮ ಬೆಡ್‌ರೂಮಲ್ಲಿ ಒಬ್ಬ ಹೊಸ ಹೊಸ ಚೆಲುವೆ ನಗಾ ಕೂತಿರ್‍ತಾಳೆ' ಎಂದಳು.

ಆ ಹೊತ್ತಿಗೆ ಚಿಂಟೂ ಬಂದ.

'ಚೆಲುವೆಯ ವರ್ಣನೆ ಸಾಕು, ನಿನ್ನ ಮಗ ಬಂದ. ಫೋನ್ ಕೊಡ್ತಿದ್ದೀನಿ' ಎಂದ.

ಅಲ್ಲಿಂದಾ ತಾಯಿ ಮಗನ ಮಾತು ಪ್ರಾರಂಭವಾಯಿತು. ಅವನಿಗೆ ಈ ಮಾತಿನ ಮೇಲೆ ಗಮನವಿರಲಿಲ್ಲ. ಹೊಚ್ಚ ಹೊಸ ಚೆಲುವೆ ತರುತ್ತಾಳೆಂದರೆ ಯಾರು? ಏನಾದರೂ ಬೊಂಬೆ ಇರಬಹುದೇ ಎನಿಸಿತು. ಇದ್ದಕ್ಕಿದ್ದಂತೆಯೇ ಅವನ ಮನಸ್ಸಿನ ಆಲೋಚನಾಲಹರಿಯಲ್ಲಿ ಮಧು ತೇಲಿಬಂದಳು. ಈಗ ಅವಳು ಅಮ್ಮನ ಬಳಿ ಕೆಲಸಕ್ಕೆ ಸೇರಿಕೊಂಡಿರಬಹುದು. ಅವರು ಕುಟುಂಬ ಮುಂದುಗಡೆ ಮನೆಗೆ ಬಂದಿರಬಹುದು. ಅಮ್ಮನಿಗೆ ಅವಳು ಆತ್ಮೀಯಳಾಗಿರಬಹುದು. ಒಮ್ಮೆ ಮೈಸೂರಿಗೆ ಹೋಗಿ ನೋಡಿಬರಬೇಕೆನಿಸಿತು.

ಚಿಂಟುವನ್ನು ನೋಡಿಕೊಳ್ಳಲು ತಾನು ಆಯ್ಕೆ ಮಾಡಿದ ಹುಡುಗ ಮಧ್ಯಮ ವರ್ಗದವನು. ಎಸ್ಸೆಲ್ಸಿ ವಿದ್ಯಾರ್ಥಿ. ಈ ಬಾರಿ ರ್‍ಯಾಂಕ್ ಪಡೆದ ಹವಣಿಕೆಯಲ್ಲಿದ್ದ. ದಿನಾ ಸಂಜೆ ಐದರಿಂದ ರಾತ್ರಿ ಏಳರವರೆಗೆ ಚಿಂಟುವಿನ ಒಡನಾಡಿಯಾಗಿರಲು ಒಪ್ಪಿ ಬಂದಿದ್ದ. ವಿಶ್ವ ಅವನ ಹೆಸರು. ಅಣ್ಣಾ... ಎಂದೇ ಕೂಗಬೇಕೆಂದು ರಾಜಸಿಂಹ ಹೇಳಿಕೊಟ್ಟಿದ್ದ. ಪಾಠ, ಆಟಗಳ ಸಂಗಮದಿಂದ ಚಿಂಟುವನ್ನು ಆ ಹುಡುಗ ತಿದ್ದುತ್ತಿದ್ದ.

ಇದರಿಂದ ರಾಜಸಿಂಹನಿಗೂ ಆಫೀಸಿನಿಂದ ಬಂದಮೇಲೆ ಒಂದು ಪತ್ರಿಕೆ ಓದಲು, ಆರಾಮವಾಗಿ ತಿಂಡಿ ತಿನ್ನಲು ಸಮಯ ಸಿಗುತ್ತಿತ್ತು. ಮೊದಲಿನಂತೆ ತೊಡೆ ಮೇಲೆ ಬಂದು ಮೂಟೆ ಹೇರಿದಂತೇ ಕೂಡುವುದು, ಕಿವಿಯಲ್ಲಿ ಕರ್ಕಶವಾಗಿ ಹಾಡುವುದು ಮಾಡುತ್ತಿರಲಿಲಲ.

ರಾತ್ರಿ ಮಗನಿಗೆ ಒಂದೆರಡು ಕಥೆ ಓದಿ ಹೇಳುತ್ತಿದ್ದ. 'ದಿನಕ್ಕೊಂದು ಕಥೆ' ಎಂಬ ಅನುಪಮಾ ನಿರಂಜನರ ಮಕ್ಕಳ ಕಥೆಗಳ ಪುಸ್ತಕ ತಂದಿದ್ದ. ಅದರಲ್ಲೇ ಒಂದೆರಡು ಓದಿ ಹೇಳುತ್ತಿದ್ದ. ನಂತರ ಜಾನಕಿ, ಲತಾ ಮಂಗೇಶ್ಕರ್, ಅನುರಾಧಾ ಪೋಡ್ವಾಲ್, ವಾಣಿ ಜಯರಾಂ ಯಾರದಾದರೂ ಭಕ್ತಿಗೀತೆ ಗಜಲ್ ಅಥವಾ ಮೀರಾ ಭಜನೆ ಹಾಕಿಕೊಂಡು ಮಲಗುತ್ತಿದ್ದ.

ತಂದೆಯಂತೆ ಮಗನೂ ಅರೆಗಣ್ಣು ಮುಚ್ಚಿ ಹಾಡು ಕೇಳುತ್ತ ಮಲಗುವುದು ಅಭ್ಯಾಸ ಮಾಡಿಕೊಂಡ. ಹೀಗಾಗಿ ಈ ನಡುವೆ ಚಿಂಟುವಿನೊಡನೆ ಅಂಥಾ ಹಿಂಸೆ ಇರಲಿಲ್ಲ.

'ಮಮ್ಮೀನ್ನ ನೋಡಬೇಕೂನಿಸತ್ತೆ ಪಪ್ಪಾ... ಚಿನ್ನೀನ ನೋಡಬೇಕೂನಿಸತ್ತೆ ಪಪ್ಪಾ' ಎಂದು ಒಂದೆರಡು ಬಾರಿ ಹಂಬಲಿಸಿದ್ದ. ಶನಿವಾರ ಬರುತ್ತಿದ್ದಂತೆಯೇ-

'ಪಪ್ಪಾ, ಅಜ್ಜೀನ್ನ ನೋಡಲಿಕ್ಕೆ ಮೈಸೂರಿಗೆ ಹೋಗೋಣ' ಎಂದ. ತಾಯಿಯನ್ನು ನೋಡಿ ಈಗಾಗಲೇ ಹದಿನೈದು ದಿನ ಆಗಿತ್ತು. ಮುಂದಿನ ಶನಿವಾರದಿಂದ ಆಫೀಸ್ ಮೀಟಿಂಗ್ ಪ್ರಾರಂಭ ಆಗುವುದರಲ್ಲಿತ್ತು. ಹೀಗಾಗಿ ಆಗ ಹೋಗಲಾಗುವುದಿಲ್ಲ. ಹೋದರೆ ಈ ವಾರವೇ ಹೋಗಬೇಕು ಎನಿಸಿತು. ಮಧ್ಯಾಹ್ನ ಮೂರು ಗಂಟೆಗೆ ಮಗನೊಂದಿಗೆ ಹೊರಟ.

ಕಾರು ಮೈಸೂರು ತಲುಪಿ, ಮನೆ ಮುಂದೆ ನಿಂತೊಡನೇ ಎಂದಿನಂತೇ ವನಜಮ್ಮ ಧಾವಿಸಿ ಬಂದರು.

'ಈ ಸಲ ನಿನಗೊಂದು ಸ್ಪೆಷಲ್ ಕಾಣಿಕೆ ಅಮ್ಮ. ನಿನ್ನ ಮೊಮ್ಮಗ ನಿನಗಾಗಿ ಹಂಬಲಿಸಿ ಬಂದಿದ್ದಾನೆ. ನಿನ್ನ ಹತ್ತಿರ ಬುದ್ಧಿವಾದ ಹೇಳಿಸಿಕೊಂಡು, ಫಸ್ಟ್ ರ್‍ಯಾಂಕ್ ಬರ್‍ತಾನಂತೆ' ಎಂದ. ಕಾರಿನಿಂದ ಇಳಿದ ಮೊಮ್ಮಗನನ್ನು ನೋಡಿ ವನಜಮ್ಮ ಆನಂದಗೊಂಡರು. ರಾಜಸಿಂಹನದೇ ಪ್ರತಿರೂಪ. 'ಎಷ್ಟು ಮುದ್ದಾಗಿ ಆಗಿದ್ದಾನಲ್ಲೋ. ಚಿಕ್ಕಂದಿನಲ್ಲಿ ನೀನೂ ಹೀಗೆ ಇದ್ದೀ...' ಎಂದರು. ಚಿಂಟು ಅವರನ್ನು ನೋಡಿ 'ಅಜ್ಜೀ, ನಿಮ್ಮದು ದೊಡ್ಡ ಅಂಗಡಿ ಇದೆಯಂತೆ. ಚಿನ್ನಿ ಹೇಳ್ತಾ ಇರ್‍ತಾಳೆ. ಅಂಗಡೀಲಿ ದೊಡ್ಡ ದೊಡ್ಡ ಶೀಶೆಗಳಲ್ಲಿ ಬಿಸ್ಕತ್, ಪೆಪ್ಪರ್‌ಮೆಂಟ್ಸ್, ಚಾಕ್ಲೆಟ್ಸ್, ಜೆಮ್ಸ್, ಪೆಪ್ಸಿಸ್ ಪ್ಯಾಕೆಟ್ಸ್ ಎಲ್ಲಾ ಇದೆಯಂತೆ' ಎಂದ.

'ಅಂಗಡಿ ತೋರಿಸ್ತೀನಿ ಕಂದ, ನನ್ನ ಅಂಗಡಿ ನಿನಗೇನು ಲೆಕ್ಕಾ? ದೊಡ್ಡ ಸಾಮ್ರಾಜ್ಯದ ವಾರಸುದಾರ ನೀನು' ಎಂದು ಮೊಮ್ಮಗನ ಕೈ ಹಿಡಿದುಕೊಂಡು ಓಣಿಯಲ್ಲಿ ನಡೆದು ಹಿಂದಿದ್ದ ಮನೆಗೆ ಬಂದರು.

'ನೀನು ಬರ್‍ತಿ ಅಂತ ನಿನ್ನೆ ಫೋನ್ ಮಾಡಿದ್ದೆಯಪ್ಪಾ, ಮಧು ಕೈಲಿ ಮೈಸೂರು ಪಾಕ್ ಮಾಡಿಸ್ತೀನಿ. ಮಧು ಕಾಫಿ ತಗೊಂಬಾಮ್ಮ' ಎಂದರು.

ಮಧು ಕಾಫಿ ತಂದಳು. ತಾಯಿ ಮಗನಿಗಿತ್ತಳು. 'ಇಲ್ಲೇ ಸೆಟಲ್ ಆಗಿದ್ದೀರಾ?' ಎಂದು ಪರಿಚಯದ ನಗೆ ಬೀರಿದ. ಅವಳು ಸಂಕೋಚದ ನಗೆಬೀರಿ- 'ಹದಿನೈದು ದಿನ ಆಯ್ತು. ಇಲ್ಲೇ ಇದ್ದೀವಿ' ಎಂದಳು.

'ಮುಂದುಗಡೇ ಮನೇಲಿ ಅವರ ತಂದೆ ತಾಯಿ, ಅಕ್ಕಾ ತಂಗಿ ತಮ್ಮ ಎಲ್ಲಾ ಬಂದಿದ್ದಾರಪ್ಪ. ತುಂಬಾ ಸಾತ್ವಿಕ ಜನ. ಅವರ ತಂದೆ, ಅಂಗಡಿ ಕೆಲಸಕ್ಕೆ ಬರ್‍ತಾರೆ. ಸಂಜೆ ತುಂಬಾ ವ್ಯಾಪಾರದ ಭರಾಟೆ ಇರತ್ತೆ. ಇವರಕ್ಕಾ ಹಾಗೂ ಇವರ ತಮ್ಮ ಬರ್‍ತಾರೆ. ಮಧು ಅಂತೂ ಯಾವ ಜನ್ಮದಲ್ಲಿ ನನಗೆ ಮಗಳಾಗಿದ್ದಳೋ ನನ್ನ ತುಂಬಾ ಹೊಂದಿಕೊಂಡುಬಿಟ್ಟಿದ್ದಾಳೆ' ಎಂದರು.

ಆ ಹೊತ್ತಿಗೆ ಪಕ್ಕದ ರೂಮಲ್ಲಿ ಅನ್ವೇಷಣೆ ಮಾಡಲು ಹೊರಟಿದ್ದ ಚಿಂಟು ಓಡಿಬಂದ.

'ಅಜ್ಜೀ.... ಅಜ್ಜೀ ಪಕ್ಕದ ರೂಮಿನಲ್ಲಿ ಗಾಜಿನ ಬೀರೂಲಿ ಚೆಂಡು, ದಾಂಡು, ಫೋನ್, ಗೋಲಿಗಳು ಏನೇನೋ ಇಟ್ಟಿದ್ದೀರಿ ? ಯಾರದ ಅದೆಲ್ಲಾ?' ಎಂದ.

'ಅದೆಲ್ಲಾ.... ನಿಮ್ಮಪ್ಪಾ ಚಿಕ್ಕೋನಾದಾಗ ತೆಗೆದುಕೊಂಡಿದ್ದ ಸಾಮಾನುಗಳು. ಕಂದ ಬೇಕೇನು ನಿಂಗೆ, ಬಾ... ಕೊಡ್ತೀನಿ' ಎಂದು ಪಕ್ಕದ ರೂಮಿಗೆ ಬಂದು ಬೀರು ಬಾಗಿಲು ತೆಗೆದು, ಮ್ಯಾಜಿಕ್ ಸ್ಲೇಟ್, ಬೊಂಬೆ ಪುಸ್ತಕ, ಜಿಗ್ ಜಾಗ್ ಅನಿಮಲ್ಸ್ ಹಾಗೂ ಆಟದ ಫೋನ್ ಎಲ್ಲಾ ಕೊಟ್ಟರು.

ಜಿಗ್‌ಜಾಗ್ ಅನಿಮಲ್ಸ್ ಹಾಗೂ ಆಟದ ಫೋನ್ ಅವನಿಗೆ ಇಷ್ಟವಾಯಿತು. ಫೋನಿನ ಮುಂಭಾಗದ ಹತ್ತು ಬಟನ್‌ಗಳಲ್ಲಿ ಒಂದೊಂದು ನಂಬರಿನ ಬಟನ್ ಒತ್ತಿ, ರಿಸೀವರ್ ಕಿವಿಗೇರಿಸಿದಾಗ ಒಂದೊಂದು ಪ್ರಾಣಿಯ ಸ್ವರ ಬರುತ್ತಿತ್ತು. ಒಂದನೆ ನಂಬರಿಗೆ ನಾಯಿ ಬೌಬೌ ಎಂದು ಬೊಗಳುವುದು, ಎರಡನೇ ನಂಬರಿಗೆ ಬೆಕ್ಕು ಮಿಯಾವ್ ಎನ್ನುವುದು, ಮೂರನೇ ನಂಬರಿಗೆ ಕೋಳಿ ಕೊಕ್ಕೋಕೌ ಎನ್ನುದು, ಹಸು ಗಿಳಿ, ಕಾಗೆ, ಆನೆ ಘೀಳಿಡುವುದು ಹೀಗೆ ಈ ಎಲ್ಲಾ ಪ್ರಾಣಿಗಳ ಸ್ವರ ಕೇಳಿ ಆನಂದಗೊಂಡ.

'ಇದನ್ನೆಲ್ಲಿಂದ ತರಿಸಿದ್ದಿ ಅಜ್ಜಿ, ಇಂಗ್ಲೆಂಡಿಂದ್ಲಾ? ಜಪಾನಿಂದ್ಲಾ?' ಎಂದ.

'ನಿಮ್ಮ ತಾತಾ ಬಾಂಬೆಗೆ ಮಾಲು ತರಲಿಕ್ಕೆ ಹೋದಾಗ ಅಲ್ಲಿನ ಬಜಾರದಲ್ಲಿ ಹುಡುಕಿ ತಂದಿದ್ದರು: ಚಿಕ್ಕಂದಿನಲ್ಲಿ ನಿಮ್ಮಪ್ಪ ಆಡ್ತಿದ್ದ' ಎಂದರು.

ಜಿಗ್‌ಜಾಗ್ ಅನಿಮಲ್ಸ್, ಒಂದು ಮರದ ಪೀಠದ ಹಿಂದೆ ಸಾಲಾಗಿ ನಿಲ್ಲಿಸಿದ ಪ್ರಾಣಿಗಳು. ಬಟನ್ ಒತ್ತಿದಾಗ ಬರುವ ದೊಡ್ಡ ಚಿಂಪಾಂಜಿ, ಆನೆಗಳು ಅವನಿಗೆ ಆಕರ್ಷಣೆ ಎನಿಸಿತು. ಮೊಮ್ಮಗನನ್ನು ಹಿಗ್ಗಿನಿಂದ ನೋಡುತ್ತ ಕುಳಿತರು ಅಜ್ಜಿ.

ಬಹು ಹೊತ್ತು ಬಟನ್ ಒತ್ತಿ ಪ್ರಾಣಿಗಳ ಚಲನೆ ಹಿಂದೆ ಮುಂದೆ ಸರಿಯುವುದು ನೋಡಿ ಆನಂದಿಸಿದ.

'ಅಜ್ಜಿ, ಇದೆಲ್ಲಾ ನಂಗೆ ಕೊಡ್ತಿಯಾ? ಊರಿಗೆ ತೆಗೆದುಕೊಂಡು ಹೋಗ್ತೀನಿ' ಎಂದ.

'ತೆಗೆದುಕೊಂಡು ಹೋಗಪ್ಪಾ. ಅಂತು ನನ್ನ ಮುದ್ದಿನ ಕೋಟ್ಯಾಧೀಶ ಮೊಮ್ಮಗಂಗೇ ಈ ಬಡ ಅಜ್ಜಿಯ ಮನೆ ಸಾಮಾನು ಇಷ್ಟವಾಯಿತಲ್ಲ?' ಎಂದ.

'ಅಜ್ಜಿ, ನೀನು ಬಡವಳೂಂತ ಚಿಂತಿಸಬೇಡ. ನಮ್ಮಮ್ಮನ ಹತ್ತಿರ ತುಂಬಾ ತುಂಬಾ ಹಣ ಇದೆ. ನಾನು ದೊಡ್ಡೋನಾದ ಮೇಲೆ ಲಕ್ಷ ಲಕ್ಷಾ ಹಣ ತಂದು ನಿನಗೆ ಕೊಡ್ತೀನಿ. ದೊಡ್ಡ ಬಂಗಲೆ ಕಟ್ಟಿಸು. ಬೆಂಗಳೂರಲ್ಲಿ ನಮ್ಮನೆಯಿದೆಯಲ್ಲಾ, ಅಂಥಾ ದೊಡ್ಡ ಮನೆ ಕಟ್ಟಿಸು' ಎಂದ ಮೊಮ್ಮಗ.

ಮಗನಿಗೆ ಎರಡು ಬಿಗಿಯುವ ಮನಸ್ಸಾಯಿತು ರಾಜಸಿಂಹನಿಗೆ. ತಾಯಿಗೆ

ಅಸಮಾಧಾನವಾಯಿತೇನೋ ಎಂದುಕೊಂಡ ; ಆದರೆ ವನಜಮ್ಮ ಹಿಗ್ಗಿನಿಂದಲೇ ಇದ್ದರು. 'ಅಪ್ಪಾ, ಏನು ಕುಡೀತಿಯಪ್ಪಾ ನೀನು ? ಬೋರ್ನ್‌ವಿಟಾ ? ಬಾದಾಮಿ ಹಾಲು ?' ಎಂದರು.

'ಅಜ್ಜಿ ಬಂದಾಗೆಲ್ಲ ಹಾಲುಖೀರು ಮಾಡಿ ತೊಡೆಮೇಲೆ ಕೂಡಿಸಿಕೊಂಡು ಕುಡಿಸ್ತಿದ್ದರೂಂತ ಚಿನ್ನಿ ಹೇಳ್ತಿದ್ದಳು. ನನಗೆ ಹಾಲುಖೀರು ಮಾಡಿ ಕುಡಿಸಜ್ಜಿ. ಅಂಗಳದಲ್ಲಿ ಉಯ್ಯಾಲೆ ಕಟ್ಟಿಸ್ತೀಯಂತೆ. ರಾಮಪ್ಪಾ ಬಂದು ತೂಗ್ತಾನಂತೆ' ಎಂದ.

'ಮಧು ಹಾಲು ಖೀರು ತಗೊಂಬಾಮ್ಮ...' ಎಂದರು.

ಮಧು ಒಳಗಿಂದ ಬಟ್ಟಲಲ್ಲಿ ಹಾಲು ಖೀರು ಒಂದು ಚಮಚಾ ತಂದಳು.

'ಅಮ್ಮಾ... ಮಧು... ಗಾದ್ರೆಜ್ ಬೀರು ಬಾಗಿಲು ತೆಗೆದು ಬೆಳ್ಳಿಯ ಬಟ್ಟಲು, ಬೆಳ್ಳಿ ಚಮಚಾ ತಗೊಂಬಾಮ್ಮ. ನನ್ನ ಮೊಮ್ಮಗನಿಗೆ ನಾನೇ ಪಾಯಸ ಕುಡಿಸ್ತೀನಿ' ಎಂದರು.

'ಅಜ್ಜಿ ನಿಮ್ಮನೇಲೂ ಬೆಳ್ಳಿ ಬಟ್ಟಲು, ತಟ್ಟೆ ಇದೆಯಾ? ಹಾಗಾದರೆ ನೀನು ಬಡವಳಲ್ಲ' ಎಂದ.

'ಇಲ್ಲಪ್ಪಾ ಕಂದಾ... ನಿನಂಥಾ ಮೊಮ್ಮಗ ಇದ್ದಮೇಲೆ ನಾನು ಹೇಗೆ ಬಡವಳು? ನಾನು ಶ್ರೀಮಂತಳೆ' ಎಂದರಾಕೆ.

'ಮತ್ತೆ ಮನೆ ಇಷ್ಟು ಪುಟ್ಟದಾಗಿದೆಯಲ್ಲ, ನಾನು ದೊಡ್ಡೋನಾದ ಮೇಲೆ ನಿನಗೆ ದೊಡ್ಡಮನೆ ಕಟ್ಟಿಸಿ ಕೊಡ್ತೀನಿ. ನಮ್ಮನೆಗಿಂತ ಗ್ರಾಂಡಾಗಿರೋದು, ಬಾಬ್ರೀ ಅವರ ಬಂಗ್ಲೆ ಇದೆಯಲ್ಲ ಅಂಥಾ ಬಂಗಲೆ ಕಟ್ಟಿಸಿ ಕೊಡ್ತೀನಿ' ಎಂದ. ಮಧು ಬೆಳ್ಳಿ ಬಟ್ಟಲು ತಂದಾಗ-

'ಪಕ್ಕದಲ್ಲಿ ಕೂಡಿಸಿಕೊಂಡು ಕುಡಿಸಮ್ಮ, ಚಿನ್ನಿ ಹೂವಿನ ಹಾಗೆ ಇದ್ದಳು. ಇವನು ನಲವತ್ತು ಕೆ.ಜಿ. ತೂಗೋ ಧಾಂಡಿಗ' ಎಂದ.

'ಇಲ್ಲ ನಾನು ಮುವತ್ತೆರಡು ಕೆ.ಜಿ. ಅಜ್ಜೀ...' ಎಂದ. 'ಇರ್ಲಿ ಬಿಡೋ ನನ್ನ ಮೊಮ್ಮಗ ನನಗೆ ಭಾರವಿಲ್ಲ' ಎಂದು ತೊಡೆ ಮೇಲೆ ಕೂರಿಸಿಕೊಂಡರು. ತಾಯಿಯ ಸಹನೆ ನೋಡಿ ಅವನಿಗೆ ಅಚ್ಚರಿ ಆಯಿತು.

ಆದರೆ ಎರಡು ನಿಮಿಷದಲ್ಲಿ ಅವನೇ ಕೆಳಗಿಳಿದ, 'ನಮ್ಮ ಲಿಟಲ್ ಮಾಸ್ಟರ್ ಹೇಳಿದ್ದಾರೆ, ಮುದುಕರಿಗೆ ನಾವು ತೊಂದರೆ ಕೊಡಬಾರದಂತೆ. ಜೀಸಸ್ ಕೋಪ ಮಾಡ್ಕೋತಾನಂತೆ. ನಾನು ತೊಡೆಮೇಲೆ ಕೂತರೆ ನೀನು ಏದುಸಿರುಬಿಡ್ತಿದ್ದಿ' ಎಂದ. 'ಕೆಳಗೆ ಕೂತ್ಕೊ. ಒಂದೊಂದೇ ಚಮಚಾ ಕುಡಿಸ್ತೀನಿ' ಎಂದು ವನಜಮ್ಮ ಬಾಚಿ ತಬ್ಬಿಕೊಂಡು ಎದೆಗೆ ಒರಗಿಸಿಕೊಂಡು ಕುಡಿಸತೊಡಗಿದರು.

ಪೂರ್ತಿ ಕುಡಿಸಿದ್ದಾದಮೇಲೆ ತಾವೇ ಒದ್ದೆ ಬಟ್ಟೆಯಿಂದ ಬಾಯಿ ಒರೆಸಿದರು.

'ಅಜ್ಜಿ, ನೀನು ಒಳ್ಳೆಯವಳು. ನಾನು ವಾರ ವಾರ ಬರ್ತೀನಿ. ನಮ್ಮನೇಲಿ ಒಂದು ಅಜ್ಜಿ ಇದೆ. ಅದು ನನ್ನ ಬೈತಿರತ್ತೆ. ಒಂದಿನ ಆ ಅಜ್ಜಿ ಮುಖಕ್ಕೆ ಬಿಸಿ ಸಾರು ಎರಚಿದೆ. ಅವತ್ತಿಂದ ಆ ಅಜ್ಜಿ ನಮ್ಮಮ್ಮಂಗೆ "ನಿನ್ನ ಮಗನ್ನ ನೋಡಿ ಕೊಳ್ಳೋದು ಬಿಟ್ಟು ಬೇರೆ ಏನು ಬೇಕಾದರೂ ಹೇಳು. ಇಲ್ಲದಿದ್ದರೆ ಮಗನ ಮನೆಗೆ ಹೊರಟು ಹೋಗ್ತೀನಿ" ಅಂದಿತು. ಅದಕ್ಕೆ ಅಮ್ಮ ಆ ಅಜ್ಜಿ ಹತ್ತಿರ ಹೋಗಬೇಡ, ನಿಮ್ಮ ಪಪ್ಪನ ಹತ್ತಿರವೇ ಇರಬೇಕು ಅಂದರು. ಪಪ್ಪಾ, ಚಿನ್ನಿ ಇದ್ದಾಗ ನನ್ನ ಹತ್ತಿರ ಸೇರಿಸ್ತಾ ಇರಲಿಲ್ಲ. ಈಗ ಮಮ್ಮಿ ಚಿನ್ನೀನ್ನ ಬಾಂಬೆಗೆ ಸೇರಿಸಿಬಿಟ್ಟಳು. ಈಗ ಮನೇಲಿ ನಾನು ಪಪ್ಪಾ ಇಬ್ಬರೇ...' ಎಂದ. ಮೊಮ್ಮಗ ಏನು ಮಾತಾಡಿದರೂ ಅಜ್ಜಿಗೆ ಮುದ್ದೋ ಮುದ್ದು. ಎದುರಿಗೆ ಮಗಾ ಇರುವುದು ಮರೆತುಹೋಯಿತು. ಆನಂದವಾಗಿ ಮೊಮ್ಮಗನನ್ನು ಲಾಲಿಸುತ್ತ ಕೂತರು.

'ಅಮ್ಮ, ಮಗನ ಜ್ಞಾಪಕ ಆದರೂ ಇದೆಯೋ ಇಲ್ಲವೋ ? ನಂಗೆ ಹಸಿವಾಗ್ತ ಇದೆ' ಎಂದ ರಾಜಸಿಂಹ.

'ಬಾರೋ ನನ್ನಪ್ಪಾ. ಮೊಮ್ಮಗನ ಸಂತೋಷದಲ್ಲಿ ನಿನ್ನನ್ನೇ ಮರೆತೆ' ಎಂದವರೇ 'ಮಧೂ, ತಟ್ಟೆ ಹಾಕಮ್ಮ' ಎಂದರು. ಮಧು ತಟ್ಟೆ ಹಾಕಿ ಬಡಿಸಿದಳು.

ಕಲಸನ್ನ, ಶಾವಿಗೆ ಪಾಯಿಸ, ಆಂಬೊಡೆ, ಮೈಸೂರು ಪಾಕಿನ ಊಟ ಆಯಿತು. ಶಾವಿಗೆ ಹಾಲು ಕೀರಂತು ಬಹಳ ರುಚಿಯಾಗಿತ್ತು. 'ನಮ್ಮನೇಲಿ ಆ ರತ್ನಮ್ಮಾಂಟಿ ಅಡಿಗೇನೇ ಚೆನ್ನಾಗಿ ಮಾಡಲ್ಲ. ಚಪಾತಿ, ಪೂರಿ, ತಿಳಿಸಾರು, ಸಾಗು, ಅಜ್ಜಿ ತಾತಂಗೆ ಏನು ಅರಗಲ್ಲ. ಮಮ್ಮೀಗೆ ಡಯಟ್, ಬರಿ ನೆನೆಸಿದ ಕಾಳು, ತಿಳಿ ಮಜ್ಜಿಗೆ, ಒಣ ಚಪಾತಿ ತಿಂತಾಳೆ. ಪಪ್ಪನಿಗೂ ಡಯಟ್ ಮಾಡಿ ಅಂತ ಬೈತಾಳೆ. ಪಪ್ಪಾ ಪೂರಿ ತಿಂದ್ರೆ ಬೈತಾಳೆ' ಎಂದ. ವನಜಮ್ಮನಿಗೆ ಆ ಮನೆಯ ವಿಷಯ ಗೊತ್ತು. ನೋಡಲು ಭವ್ಯವಾದ ಮನೆ, ಮೂರು ಜನ ಅಡಿಗೆಯವರು. ಆಳುಕಾಳುಗಳಿಂದ ಹಿಡಿದು ಎಲ್ಲರಿಗೂ ಊಟ ನಡೆಯುತ್ತಿತ್ತು. ಆದರೆ ಹಬ್ಬಾ ಹಾಡಿ, ಹೋಳಿಗೆ, ಪಾಯಿಸಾ, ಕಡುಬು ಇಂಥಾ ಅಡಿಗೆ ಎಲ್ಲ ಅಪರಿಚಿತ.

ಹಸಿ ತರಕಾರಿ ಪಚಡಿಗಳು, ನೆನಸಿದ ಹೆಸರು, ಮೊಳಕೆ ಹರಸಿದ ಕಾಳುಗಳಿಗೆ ಒಗ್ಗರಣೆ, ಉಪ್ಪು ಹಾಕಿ ಸೇವಿಸುವ ವಿಧಾನ, ನಾವೇನು ದನಕರುಗಳೇ ಎಂದು ಹೆಂಡತಿಯೊಡನೆ ಗಲಾಟೆ ಮಾಡುತ್ತಿದ್ದ.

'ನಿಮಗೆ ಆರೋಗ್ಯದ ಬಗ್ಗೆ ನಿಗಾ ಇಲ್ಲ. ಹೊಟ್ಟೆ ಬರ್ತ್ತಿದೆ. ಜಾಗಿಂಗ್ ಮಾಡ್ತಿಲ್ಲ. ಪೂರಿ ತಿಂತೀರಿ.'

'ಇಡ್ಲಿ, ವಡೆ, ಕೇಸರಿಭಾತ್, ಪೂರಿ ಬಿಟ್ಟರೆ ನಿನ್ನ ಅಡಿಗೆಯವರ್ಗಿಗೆ ಏನು ಬರತ್ತೆ? ನಮ್ಮಮ್ಮ ಒತ್ತು ಶಾಮಿಗೆ, ತೊಗರಿನುಚ್ಚಿನ ಉಂಡೆ, ಹಾಲುಬಾಯಿ

ಏನೇನೋ ಮಾಡ್ತಿದ್ದರು ಗೊತ್ತ?' ಎಂದಾಗ 'ಆಗ ಏಜ್ ಇತ್ತು ತಿನ್ತಿದ್ದಿರಿ. ಈಗ ಮುವ್ವತ್ತಾದ ಮೇಲೆ ಸ್ವಲ್ಪ ಬಾಯಿಚಪಲ ಕಡಿಮೆ ಮಾಡಬೇಕು. ತಿನ್ನಲಿಕ್ಕಾಗಿಯೇ ಬದುಕಬಾರದು. ಬದುಕಲಿಕ್ಕಾಗಿ ತಿನ್ನಬೇಕು' ಎನ್ನುವಳು.

'ಈ ವೈರಾಗ್ಯವೆಲ್ಲಾ ಅರವತ್ತಾದ ಮೇಲೆ ಪಾಲಿಸ್ತೀನಿ ನೋಡು' ಎನ್ನುತ್ತಿದ್ದ. ಮೈಸೂರಿಗೆ ಹದಿನೈದು ದಿನಕ್ಕೊಮ್ಮೆ ತಿಂಗಳಿಗೊಮ್ಮೆ ಬಂದಾಗ ತಾಯಿ ರುಚಿರುಚಿಯಾಗಿ ಮಾಡಿ ಬಡಿಸುವಳು. ಶನಿವಾರ ಬೆಳಿಗ್ಗೆಯೇ ತಾಯಿಗೆ ಆಫೀಸಿಂದಲೇ ಟ್ರಂಕಾಲ್ ಮಾಡಿಬಿಡುತ್ತಿದ್ದ. ರುಚಿಯಾದ ಊಟವಾದ ಮೇಲೆ ಅವನು ಮಲಗಲು ಹೊರಟ. ಹೀಗೆ ಅಜ್ಜಿ, ಮೊಮ್ಮಗನ ಹರಟೆ ಸಾಗಿತ್ತು.

'ಅಜ್ಜಿ, ಆ ಮೇಲಿನ ಗೂಡಿನಲ್ಲಿ ಏನಿದೆ? ಆ ದೊಡ್ಡ ಪುಸ್ತಕ...'

'ಇದು ನಿಮ್ಮಪ್ಪಾ ಹೈಸ್ಕೂಲ್ ಹುಡುಗ ಆದಾಗ ಪ್ರೈಜ್ ಬಂದಿದ್ದು. ರಾಮಾಯಣ, ಇಂಗ್ಲಿಷಿನದು. ಚಿತ್ರಗಳಿವೆ. ನೋಡ್ತೀಯಾ ?' ಎಂದು ತೆಗೆದು ಕೊಟ್ಟರು.

ಕೊಂಚಹೊತ್ತು ಚಿತ್ರ ನೋಡಿದ. ಅನಂತರ 'ಕಥೆ ಓದಿ ಹೇಳಜ್ಜಿ...' ಎಂದ.

'ಅಯ್ಯೋ, ನಮ್ಮಪ್ಪಾ... ನನಗೆ ಇಂಗ್ಲಿಷ್ ಬರಲ್ಲಪ್ಪಾ. ಚಿನ್ನಿ ನಂಗೆ ಎ, ಬಿ, ಸಿ, ಡಿ ಕಲಿಸ್ತಿದ್ದಳು, ನೀನು ನಂಗೆ ಕಲಿಸು' ಎಂದರು.

'ಊರಂ, ನನಗೆ ರಾಮಾಯಣ ಓದಿ ಹೇಳಬೇಕಲ್ಲ. ತಡಿ, ಪಪ್ಪನ್ನ ಕೇಳ್ತೀನಿ' ಎಂದ.

'ನಿಮ್ಮ ಪಪ್ಪಾ ಬೇಡಾ, ನಿದ್ದೆ ಮಾಡ್ತಿದ್ದಾರೆ. ನಮ್ಮ ಮಧು ಹೇಳ್ತಾಳೆ. ಮಧು ಬಾಮ್ಮ. ನನ್ನ ಮೊಮ್ಮಗನಿಗೆ ರಾಮಾಯಣ ಓದಿ ಹೇಳು.'

ಮಧು ಸ್ವಲ್ಪ ಸ್ವಲ್ಪ ಓದಿ ಆಕರ್ಷಕವಾಗಿ ಅವನಿಗೆ ವಿವರಿಸುತ್ತಿದ್ದಳು. 'ಈಗ ಬೇಕಾದರೆ ಮಲಗಿಕೊ. ರಾತ್ರಿ ಇನ್ನು ಹತ್ತು ಪುಟ ಓದಿ ಹೇಳ್ತೀನಿ. ಆಕಳಿಸ್ತಿದ್ದಿ, ನಿದ್ದೆ ಬರುತ್ತೆ ಅಲ್ವಾ?' ಎಂದಳು.

'ಮಧು ಆಂಟಿ, ನೀವು ಎಷ್ಟು ಚೆನ್ನಾಗಿದ್ದೀರಿ. ನಮ್ಮ ಮೋಹಿನಿ ಮಿಸ್ ನಿಮ್ಮ ಹಾಗೆ ತುಂಬಾ ಚೆನ್ನಾಗಿದ್ದಾರೆ. ಉದ್ದಕ್ಕೆ ಜಡೆ ಹಾಕ್ತಾರೆ, ನೀವು ಎಷ್ಟು ಚೆನ್ನಾಗಿ ಇಂಗ್ಲಿಷ್ ಓದಿ ಅರ್ಥ ಹೇಳ್ತೀರಿ. ಅವರು ಪಾಠ ಚೆನ್ನಾಗಿ ಮಾಡಲ್ಲ. ಬರಿ ಪ್ರಶ್ನೆ ಕೇಳ್ತಾರೆ, ಹೇಳದಿದ್ದರೆ ಹೊಡೀತಾರೆ' ಎಂದ.

'ನಿಂಗೆ ಏಟು ಬಿದ್ದಿದೆಯಾ ?' ಎಂದಳು ಮಧು.

'ಇಲ್ಲ. ನಾನು, ಬಾಬ್ರಿ ಬ್ರಿಲಿಯಂಟ್ ಇದ್ದೀವಲ್ಲ. ಮನೇಲೆ ಟ್ಯೂಷನ್ ಮಾಸ್ಟರ್‌ರಿಂದ ಆ ಪಾಠಗಳು ಎರಡೆರಡು ಸಲ ರಿವಿಷನ್ ಆಗಿರತ್ತೆ. ನಾನು ಎಲ್ಲಾ ಪ್ರಶ್ನೆಗೂ ಉತ್ತರ ಹೇಳ್ತೀನಿ. ಪ್ರತಿ ತಿಂಗಳು ನಾನೇ ಫಸ್ಟ್ ರ್‍ಯಾಂಕ್. ಹೋದ

ತಿಂಗಳು ಮಾತ್ರ ಮೂರು ನಂಬರಲ್ಲಿ ರ್‍ಯಾಂಕ್ ಹೋಯ್ತು. ಬಾಬ್ರಿ ಫಸ್ಟ್. ನಾನು ಸೆಕೆಂಡ್' ಎಂದ.

ಅವನ ಶಾಲೆ ಬಗ್ಗೆ ಏನೇನೋ ಹೇಳುತ್ತ ಕುಳಿತ. ಐದು ಗಂಟೆಗೆ ಅವಳು ಕಾಫಿ ಮಾಡಲು ಹೊರಟಳು. ಅವನು ಮಲಗಿ ಅವಳ ಮಂಚದ ಮೇಲೇ ನಿದ್ರಿಸಿದ್ದ. ತಾಯಿ ಮಗ ಎದ್ದಿದ್ದರು, ಕಾಫಿ ಮಾಡಿ ತಂದಿತ್ತಳು. ಆಕೆ ಎದ್ದು 'ನಾನು, ನನ್ನ ಮಗ ಕಾಂಪೌಂಡಲ್ಲಿ ಮಾತಾಡ್ತ ಕೂತಿರ್ತೀವಮ್ಮ. ಚಿಂಟು ಎದ್ದರೆ ಮುಖ ತೊಳೆಸಿ, ಕ್ರಾಪ್ ಬಾಚಿ, ಕರೆದುಕೊಂಡು ಬಾ...ಹಾಲು ಖೀರು ಕೇಳಿದರೆ ಬಿಸಿಮಾಡಿ ಕುಡಿಸು. ಇಲ್ಲದಿದ್ದರೆ ಬೋರ್ನ್‌ವಿಟಾ ಬೆರಸಿ ಕೊಡು' ಎಂದರು.

ತಾಯಿ ಮಗ ಕಾಂಪೌಂಡಿನಲ್ಲಿದ್ದ ಕಟ್ಟೆ ಮೇಲೆ ಬಂದು ಕೂತರು. 'ಮಗೂನ್ನ ನೋಡಿ ಸಂತೋಷ ಆಯ್ತಪ್ಪಾ. ಮೊದಲನೇ ವರ್ಷದ ಹುಟ್ಟಿದ ಹಬ್ಬದಲ್ಲಿ ಬಂದು ನೋಡಿದ್ದು. ಆಮೇಲೆ ನಾನು ಬರಲಿಲ್ಲ. ನೀನೂ ಕರ್‍ಕೊಂಬರಲಿಲ್ಲ' ಎಂದರು.

'ಮಹಾತುಂಟ ಉದ್ಧಟ ಇದ್ದನಮ್ಮ. ಅವನು ಇಷ್ಟರಮಟ್ಟಿಗಾಗ್ತಾನೆ ಅಂತ ನನಗೆ ನಂಬಿಕೆ ಇರಲಿಲ್ಲ. ಇವಳು ಒಂದೂವರೆ ತಿಂಗಳಿಂದ ದೂರ ಇದ್ದಾಳೆ. ಅವರಜ್ಜಿಯ ಹತ್ತಿರವೂ ಹೋಗಲ್ಲ. ನನ್ನ ಹತ್ತಿರವೇ ಇರ್ತಾನೆ. ಜೊತೆಗೆ ಒಂದು ಹೈಸ್ಕೂಲ್ ಹುಡುಗನ್ನ ಇವನ್ನ ಪಳಗಿಸಲಿಕ್ಕೆ ಹಾಕಿದ್ದೀನಿ. ಲಿಟಲ್ ಮಾಸ್ಟರ್ ಅಂತ ತಾನೇ ಹೆಸರಿಟ್ಟುಕೊಂಡಿದ್ದಾನೆ. ಟಿ. ವಿ.ಯಲ್ಲಿ ಯಾವ ಯಾವ ಪ್ರೋಗ್ರಾಂ ನೋಡಬೇಕು....? ಆಟಗಳಾಡಿಸೋದು, ಪಾಠ ಹೇಳಿಕೊಡೋದು ಎಲ್ಲಾ ಅವನೆ. ಶನಿವಾರ, ಭಾನುವಾರ ಪುಲ್ ಅವನೆ. ಶನಿವಾರ, ಭಾನುವಾರ ಪುಲ್ ಇಲ್ಲೇ ಇರ್ತಾನೆ. ಅವನು ತುಂಬ ಬುದ್ಧಿವಂತ. ಅವನ ಸಹವಾಸ ಆದಮೇಲೆ ಪಳಗಿದ್ದಾನೆ' ಎಂದ.

'ಮಕ್ಕಳಿಗೆ ಪ್ರೀತಿಯಿಂದ ಲಾಲಿಸಿ, ಪಾಲಿಸೋದು ಬೇಕು, ನಿನ್ನ ಹೆಂಡ್ತಿಗೆ ಕಂಪನಿ, ಆಫೀಸ್ ಟೂರ್, ನಿನಗೆ ಕಂಪನಿಯ ಆಡಿಟ್ ಕೆಲಸ. ಈ ಹುಡುಗ ಪ್ರೀತಿ ಮಮತೆಯ ಕೊರತೆಯಿಂದ ಹಾಗೆ ಪುಂಡನಾಗಿದ್ದ ಅನಿಸತ್ತೆ' ಎಂದರು.

'ನನಗು ಹಾಗೆ ಅನಿಸತ್ತಮ್ಮ. ಚಿನ್ನಿಗೆ ಜ್ವರ ಬಂದಾಗ ತೊಡೆ ಮೇಲೆ ಮಲಗಿಸಿಕೊಂಡು ಬ್ರೆಡ್ ತಿನ್ನಿಸ್ತಿದ್ದೆ. ನನಗೂ ಹಾಗೆ ಮಾಡು ಅಂತ ಒಮ್ಮೆ ಜ್ವರ ಬಂದಾಗ ಕೇಳಿದ್ದ. ಆಗ ಪ್ರೀತಿ ಪ್ರೇಮಕ್ಕೆ ಹಂಬಲಿಸಿದ್ದಾನೆ ಅನಿಸಿತು. ಆಗಿನಿಂದ ಸ್ವಲ್ಪ ಪ್ರೀತಿಯಿಂದಲೇ ನೋಡ್ಕೋತಿದ್ದೀನಿ. ಒಂದೊಂದ್ಸಲ ಹಳೇ ಚಾಳಿ, ರಚ್ಚೇನು ತೆಗೀತಾನೆ, ನಿಧಾನವಾಗಿ ಪಳಗಿಸಬೇಕು' ಎಂದ.

'ಏನೇ ಆಗಲಿ, ಗಂಡ ಹೆಂಡತಿ ಜಗಳದಲ್ಲಿ ಮಕ್ಕಳ ಮೇಲಿನ ಗಮನ ಕಡಿಮೆ ಆಗಬಾರದು. ಇರೋದು ಬಂಗಾರದಂಥಾ ಎರಡು ಮಕ್ಕಳು' ಎಂದರು ತಾಯಿ.

'ಇಲ್ಲಿನ ಸಮಾಚಾರ ಏನಮ್ಮ? ಆ ಹುಡುಗಿ ಮನೇಲಿ, ಯಾರು ಯಾರು ಇದ್ದಾರೆ ?' ಎಂದು ರಾಜಸಿಂಹ ತನ್ನ ತಾಯಿಯನ್ನು ಕೇಳಿದ.

ವನಜಮ್ಮ ಉತ್ತರಿಸುತ್ತ,

'ತಂದೆ ತಾಯಿ... ಅವಳ ಇಬ್ಬರು ಅಕ್ಕಂದಿರು... ಒಬ್ಬ ತಮ್ಮ. ಬಡವರು. ಆದರೆ ಜನಾ ಮಹಾಸಜ್ಜನರು. ಹತ್ತು ಸಾವಿರ ರೂಪಾಯಿ ಮದುವೇಲಿ ಒಪ್ಕೊಂಡಿದ್ದು ಕೊಡಲಿಲ್ಲಾಂತ ಮಗಳನ್ನು ವಾಪಸ್ ಕಳಿಸಿದ್ದಾರೆ. ಆ ವ್ಯಥೇಲಿ ಅವರಮ್ಮ ಹಾರ್ಟ್ ಪೇಷೆಂಟಾಗಿದ್ದಾರೆ. ಆ ಹುಡುಗಿಗೆ ಅಂಗಡೀಲಿ ಎಂಟುನೂರು ರೂ. ಸಂಬಳದ ಸೇಲ್ಸ್ ಗರ್ಲ್ ಕೆಲಸ ಕೊಟ್ಟಿದ್ದೀನಿ. ಪಿ.ಯು.ಸಿ. ಪಾಸಾಗಿದ್ದಾಳೆ. ಇನ್ನೊಬ್ಬ ಅಕ್ಕನಿಗೆ ಇಪ್ಪತ್ನಾಲ್ಕು ವರ್ಷ. ಮದುವೆ ಇಲ್ಲ. ಅವರಮ್ಮ ಏಳಲಾರದೆ ಹಾಸಿಗೆ ಹಿಡಿದಿದ್ದಾರೆ. ಮನೆ ಸಮಸ್ತ ಕೆಲಸ ತಾನೇ ಮಾಡ್ತಾಳೆ. ತಮ್ಮ ಬಿ. ಕಾಮ್. ಓದ್ತಿದ್ದಾನೆ. ಹತ್ತೊಂಬತ್ತು ಇಪ್ಪತ್ತರ ವಯಸ್ಸಿರಬಹುದು. ಅವನಿಗೂ ಅಂಗಡೀಲಿ ಕೆಲಸಾ ಕೊಟ್ಟಿದ್ದೀನಿ. ಅವರಿಬ್ಬರು ಸಂಜೆ ಮಾತ್ರ ಬರ್ತಾರೆ. ಅವರಪ್ಪ ಬೆಳಗ್ಗಿಂದ ಸಂಜೆವರಿಗೆ ಅಂಗಡೀಲಿದ್ದು ಗೋವಿಂದನ ಜೊತೆ ವ್ಯಾಪಾರ ನೋಡ್ಕೋತಾರೆ. ಆತನಿಗೂ ಎಂಟುನೂರು ಕೊಡ್ತೀನಿ' ಎಂದರು. ಅವನು ತಮಾಷೆಯಾಗಿ-

'ಈ ಹುಡುಗಿ ನಿನ್ನ ದತ್ತು ಪುತ್ರಿ...?' ಎಂದ.

'ಅವಳು ನಿಜವಾಗಿ ನನ್ನ ಯಾವ ಜನ್ಮದ ಮಗಳೋ ? ಏಜನ್ಸಿ ವಿಭಾಗದೋರು ಬಂದರೆ ಪರಿಶೀಲಿಸ್ತಾಳೆ, ಮಾತುಕತೆ ಆಡ್ತಾಳೆ, ಪತ್ರ ವ್ಯವಹಾರ, ಅವರಿಗೆ ಡ್ರಾಫ್ಟ್ ಕಳಿಸೋದು... ಮುಂಬೈಯಿಂದ ಮಾಲು ಬಂದಾಗ ಚೆಕ್ ಮಾಡೋದು, ಆಗಾಗ ರಾಮಪ್ಪಾ, ನಾನು, ಅವಳು ಗೋಡೌನ್ ಚೆಕ್ ಮಾಡಲಿಕ್ಕೆ ಹೋಗ್ತೀವಿ. ಲಕ್ಷಾಂತರ ರೂ.ಗಳ ಮಾಲು, ಎಲ್ಲಾ ಚೆಕ್ಕಿಂಗ್ ಅವಳದೇ ಕೆಲಸ, ನಾನು ಸುಮ್ಮನೇ ಕೂತಿರ್ತೀನಿ. ಅಂಗಡಿಯ ಅವತ್ತವತ್ತಿನ ಲೆಕ್ಕಾಚಾರ, ಹಣ ಅವರಪ್ಪಾ ತಂದು ಕೊಡ್ತಾರೆ, ಅವಳೇ ಪರಿಶೀಲಿಸಿ, ರಸೀತಿಗಳೆಲ್ಲಾ ನೋಡ್ತಾಳೆ. ಹಣ ಪ್ರತಿ ಸೋಮವಾರ ಬ್ಯಾಂಕಿಗೆ ಕಟ್ತಾಳೆ' ಎಂದರು.

'ಹುಡುಗಿ ಬುದ್ಧಿವಂತೇ ಇದ್ದಾಳೆ ಹಾಗಾದರೆ...?'

'ಮಹಾ ಬುದ್ಧಿವಂತಳು, ಅಷ್ಟೇ ತಾಳ್ಮೆ, ವಿನಯ. ಯಾವ ಹುಡುಗ ಪುಣ್ಯ ಮಾಡಿದ್ದಾನೋ?' ಎಂದ ಆಕೆ, 'ಈಗ ಹತ್ತು ವರ್ಷದ ಹಿಂದೆ ಈ ಹುಡುಗಿ ಕಣ್ಣಿಗೆ ಬಿದ್ದಿದ್ದರೇ....?'ಎಂದರು. ಅವನು ನಗುತ್ತ 'ಬಹುಶಃ ಆಗ ಅವಳಿಗೆ ಹನ್ನೆರಡು ವರ್ಷ ಇರ್ತಿತ್ತೇನೊ?' ಎಂದ.

'ನೀನೇನು ಮುದುಕನಾಗಿದ್ದೀಯಪ್ಪಾ? ಈಗಿನ್ನು ಮುವತ್ನಾಲ್ಕು. ಓದು ಮುಗಿಸೋ ಹೊತ್ತಿಗೆ, ಅವರ ಆ ಭಾರಿ ಕಂಪನಿಯ ಕೆಲಸ ಸಿಕ್ಕಿತು. ಹಿಂದೆ ಮಗಳನ್ನು

ಗಂಟು ಹಾಕಿಬಿಟ್ಟರು. ಇಪ್ಪತ್ನಾಲಕ್ಕು ವರ್ಷಕ್ಕೇ ಮದುವೆಗೆ ಏನು ಆತುರವಿತ್ತು?' ಎಂದರು.

'ಆಕಾಶದ ಅಪ್ಸರೆ ಸಿಕ್ಕಿದಳೂಂತ ಆನಂದದಿಂದ ಮದುವೆಯಾದೆ. ಅವಳ ಭಾವನೆಗಳು ಆಕಾಶದಲ್ಲೇ ಇರತ್ತೆ. ನನ್ನ ಭಾವನೆಗಳು ಭೂಮಿಲಿ ಹುದುಗಿರತ್ತೆ. ಇಬ್ಬರ ಮನಸು ಬೆರೆಯಲೇ ಇಲ್ಲಮ್ಮ. ವಿವಾಹವಾದ ಮಧುಚಂದ್ರದ ಕೆಲವು ದಿನಗಳು ಏನೋ ಕನಸಿನ ಲೋಕದಲ್ಲಿದ್ದ ಹಾಗಿತ್ತು. ಈಗ ನನಗೆ ಶಾಂತ ಸ್ವಭಾವದ ಗೃಹಿಣಿ ಬೇಕು ಅನಿಸತ್ತೆ. ಆ ಬಾಬ್‌ಕಟ್, ಆ ತುಟಿಗೆಂಪು, ಆ ಬಾಸಿಂಗ್ ನೇಚರ್, ಅವಳ ಸುಪೀರಿಯಾರಿಟಿ ಕಾಂಪ್ಲೆಕ್ಸ್ ನನಗೆ ಜುಗುಪ್ಸೆ ಆಗಿಹೋಗಿದೆ. ಒಂದೊಂದ್ಸಲ ಈ ಹುಡಗೀನ್ನ ನೋಡಿದಾಗ ನಾನು ಕನಸು ಕಂಡ ಚೆಲುವೆ ಅನಿಸತ್ತಮ್ಮ, ಆ ಉದ್ದ ಜಡೇ....ಶಾಂತ ಸರೋವರದಂತಹ ಸ್ವಭಾವ. ನಾನು ಮನಸಾರೆ ಪ್ರೀತಿಸೋ ನಿನ್ನನ್ನು ಹೆತ್ತತಾಯಿ ಹಾಗೆ ಓಲೈಸೋ ಅವಳ ರೀತಿ, ಇಂಥ ಹುಡುಗಿ ಸಿಕ್ಕು ಮೈಸೂರಿನ ಒಂದು ಕಂಪನೀಲಿ ಕೆಲಸ ಸಿಕ್ಕಿದ್ದರೇ ಹಾಯಾಗಿ ನಿನ್ನ ಜೊತೆಯೇ ಇದ್ದು....ಸುಖಸಂಸಾರ ಹೂಡಬಹುದಾಗಿತ್ತು' ಎಂದ.

'ನನ್ನ ಚಿಂತೇ ನನಗಿಲ್ಲಪ್ಪಾ. ನಾನಾಗಿ ದೂರ ಬಂದುಬಿಟ್ಟಿದ್ದೀನಿ. ನೀನು ತಿಂಗಳಿಗೊಮ್ಮೆ, ಹದಿನೈದು ದಿನಕ್ಕೆ ಒಮ್ಮೆ ಅಮ್ಮಾ ಅಂತ ಬರ್ತಿದ್ದಿ, ಸಾಕು. ನಾನು ಶಾಂತಳಾಗಿ ಇರ್ತೀನಿ. ಆದರೆ ನಿನ್ನ ಪ್ರೀತಿಸಿ, ಪ್ರೀತಿಸಿ ವಿವಾಹ ಆದಳು. ಹೊಂದಿಕೊಂಡು ಇರಲಿಕ್ಕೇನು? ಹೀಗೆ ಕೈಗೆ ಸಿಕ್ಕಿಯೂ ಸಿಕ್ಕದ ಹಾಗೆ ಚೆಲ್ಲಾಟ ಆಡಿದರೆ ಹೇಗೆ? ಸಂಸಾರ ಹೂಡಿದಾಗಿಂದ ಇದೇ ಗೋಳಲ್ಲವೇನಪ್ಪಾ? ನೀನು ಅಧಿಕಾರ ಮಾಡಿ, ಹೀಗೆ ಮಾಡಬೇಡಾಂತ ಹೇಳೋ ಸ್ಥಿತಿಯಲ್ಲಿಲ್ಲ. ಅದೇ ನನಗೆ ಕೊರಗಾಗಿದೆ.'

'ತಾನೇ ಆ ಸಾಮ್ರಾಜ್ಯದ ರಾಣಿ ಅಂತ ತಿಳಿದಿದ್ದಾಳೆ. ನಾನು ಅಧಿಕಾರ ಚಲಾಯಿಸಬಾರದು, ಅವಳನ್ನ ಆರಾಧಿಸ್ತಾ ಇರಬೇಕು. ಇದೊಂದು ವಿಚಿತ್ರ ಪ್ರೇಮದಾಹ. ಬಹುಶಃ ಚಿಕ್ಕಂದಿನಲ್ಲಿ ಅವರ ತಂದೆ ತಾಯಿಯರ ವಿರಸದಾಂಪತ್ಯ ಅವಳ ಮೇಲೆ ಪರಿಣಾಮ ಮಾಡಿ, ಮಾನಸಿಕ ಅಸ್ವಾಸ್ಥ ಹೊಂದಿದ್ದಾಳೆ. ಗಂಡು ಹೆಣ್ಣಿಗೆ ದ್ರೋಹ ಮಾಡ್ತಾನೆ, ಹೆಣ್ಣು ತನ್ನ ಬಿಗಿಮುಷ್ಟೀಲಿ ಗಂಡನ್ನ ಸದಾ ಹಿಡಿದಿಟ್ಟಿರಲೇಬೇಕು. ಇದವಳ ಅಭಿಪ್ರಾಯ.'

'ಗಂಡನ್ನ ಹಿಡಿದಿಡಲಾರದೆ ಮೂರು ಮೂರು ತಿಂಗಳ ಕಾಲ ಹಾಗೆ ದೂರ ಹೋಗ್ತಾರೇನಪ್ಪಾ ? ಒಂಟಿತನ ತಾಳಲಾರದೇ ನೀನೇನಾದರೂ ಕೆಟ್ಟ ದಾರಿಗೆ ಹೋದರೇ...?' ಎಂದರು.

'ಆ ವಿಷಯದಲ್ಲಿ ಅವಳು ಬಹು ಜಾಗರೂಕಳಮ್ಮ. ಅವಳು ನನ್ನ ಮೇಲೆ

ಪಹರೆ ಹಾಕಿರ್ತ್ತಾಳಮ್ಮ, ಆ ಬಗ್ಗೆ ನಿನಗೆ ಸಲೀಮ್ ಹೇಳಿದ್ದಾನಲ್ಲ. ಮನೇಲಿ ಗೋವಿಂದನಿಗೆ ಐನೂರು ರೂ. ಜಾಸ್ತಿ ಕೊಡ್ತಾಳೆ. ನಾನು ಎಷ್ಟು ಹೊತ್ತಿಗೆ ಮನೆಬಿಟ್ಟೆ...? ಎಷ್ಟು ಹೊತ್ತಿಗೆ ಮನೆ ಸೇರಿದೆ ಮಾಹಿತಿ ಕೊಡಲಿಕ್ಕೆ...' ಎಂದ.

'ಇದ್ಯಾವ ಪ್ರೀತಿಯ ಪರಿಯೋ ಅಪ್ಪಾ?' ಎಂದರಾಕೆ.

'ಅವಳ ಹೃದಯದ ಪ್ರೀತಿಯ ಸೆರೆಮನೆ ಖೈದಿ ನಾನು' ಎಂದ. ಆ ಹೊತ್ತಿಗೆ ಮಧುವಿನೊಂದಿಗೆ ಚಿಂಟು ಬಂದ,

ಅವನನ್ನು ಜಗುಲಿ ಬಳಿ ಬಿಟ್ಟು ಹೊರಟುಬಿಟ್ಟಳು.

'ಅಜ್ಜಿ ಅಂಗಡಿ ನೋಡ ಬೇಕಲ್ಲ' ಎಂದ.

'ಬಾಪ್ಪಾ ಕಂದಾ ಹೋಗೋಣ....' ಎಂದ ವನಜಮ್ಮ 'ಮುಂದುಗಡೆ ಬಾಗಿಲಿಂದ ಬೇಡಾ, ಸಂಜೆಹೊತ್ತು. ಜನಾ ಜಾಸ್ತಿ ಇರ್ತಾರೆ, ಹಿಂದುಗಡೆ ಗೋಡೌನ್ ಕಡೆಯಿಂದ ಹೋಗೋಣಾ' ಎಂದು ಕರೆದೊಯ್ದರು.

ಮತ್ತೆ ಅವರು ಮನೆ ಸೇರಿದ್ದು, ಎಂಟರ ಮೇಲೆ. 'ಅಜ್ಜಿ, ನೀನು ತುಂಬಾ ಸಾಹುಕಾರಳು. ಗೋಡೌನ್‌ನಲ್ಲಿ ಎಷ್ಟೊಂದು ಸೂಟ್‌ಕೇಸಿದೆ, ಎಷ್ಟೊಂದು ಪಿ. ಜಿ. ಲ್ಯಾಂಪಿದೆ, ಈಗಲ್ ಫ್ಲಾಸ್ಕ್‌ಗಳಿವೆ, ನಾನು ದೊಡ್ಡೋನಾದ ಮೇಲೆ ನಿನ್ನ ಹತ್ತಿರ ಬಂದು ಅಂಗಡಿ ನೋಡ್ಕೋತೀನಿ. ಬಾಬ್ರಿ ಅವರ ಅಪ್ಪಂದು ಟೈರ್ ಕಾರ್ಖಾನೆ, ನಾನೂ ಕಾರು ತಯಾರಿಸ್ತೀನಿ. ಅವನಿಗಿಂತ ದೊಡ್ಡ ಫ್ಯಾಕ್ಟರಿ ಹಾಕ್ತೀನಿ. ಒಂದು ಏರೋಪ್ಲೇನ್ ಕೊಂಡ್ಕೋತೀನಿ' ಎಂದು ಏನೇನೋ ಹರಟುತ್ತಿದ್ದ ಚಿಂಟು.

ರಾತ್ರಿ ಊಟವಾದ ಮೇಲೆ ಅಜ್ಜಿಯ ಜೊತೆ ಮಾತಾಡುತ್ತಿದ್ದವನು ಮಧು ಊಟ ಮುಗಿಸಿ ಬಂದೊಡನೆ 'ಮಧು ಆಂಟೀ ರಾಮಾಯಣ....' ಎಂದು ಅವಳ ಬಳಿ ಓಡಿದ. ಅವಳು ನಗುತ್ತ 'ನನ್ನ ಹೆಸರು ನಿನಗೆ ಹೇಗೆ ಗೊತ್ತಾಗಿದೆ' ಎಂದಳು.

'ಊಂ ಮತ್ತೆ ಅಜ್ಜಿ ಮಧು, ಮಧೂ ಅಂತ ಕೂಗ್ತಾ ಇರ್ತಾರಲ್ಲ' ಎಂದ. 'ತುಂಬಾ ಚುರುಕಿದ್ದಿ ನೀನು...' ಎಂದು ಹೊಗಳಿ ಅರ್ಧಗಂಟೆ ರಾಮಾಯಣ ಓದಿದಳು.

'ಪಪ್ಪನ ಹತ್ತಿರ ಮಲಗಿಕೋತೀನಿ. ನಿದ್ರೆ ಬರತ್ತೇ....' ಎಂದು ತಂದೆ ರೂಮಿಗೆ ಹೋದ. ತಂದೆಯ ಬಳಿ ಮಲಗಿದಾಗ

'ಅಜ್ಜಿಗೆ ದೊಡ್ಡ ಮನೆ ಕಟ್ಟಿಸಿಕೊಡು ಪಪ್ಪಾ, ಸೋಫಾ ಇಲ್ಲ, ದೊಡ್ಡ ಸೋಫಾ ತಗೊಂಬಾ...' ಎಂದು ಏನೇನೋ ಹೇಳಿದ. ರಾಜಶಿಂಹ ನೀರಸವಾಗಿ-

'ನೀನು ದೊಡ್ಡೋನಾದ ಮೇಲೆ ಅಜ್ಜಿಗೆ ಏನೇನು ಮಾಡ್ತೀಯೋ ಮಾಡು' ಎಂದ. ಅಂತು ಆ ರಾತ್ರಿ ನಿದ್ರೆ ಮಾಡಿ ಮರುದಿನ ಊಟ ಮುಗಿಸಿ, ಒಂದು ನಿದ್ರೆ ಮಾಡಿ ಮೂರುಗಂಟೆಗೆ ಹೊರಟು ಬರುವವರೆಗೂ, ಅಜ್ಜಿ ಮೊಮ್ಮಗನ ಸಲ್ಲಾಪವೇ

ಸಲ್ಲಾಪ. ತಿಳಿಸಾರು ಇಷ್ಟ ಎಂದಾಗ ವನಜಮ್ಮ ಆನಂದವೇ ಆನಂದ.

'ನಿಮ್ಮಪ್ಪಾ ಇದ್ದಾಗ ಹೀಗೆ ಮಾಡೋರು. ತಾತನ್ನೇ ಹೋತಿದ್ದಾನೆ' ಎಂದು ಹಿಗ್ಗಿದರು.

ಮೊಮ್ಮಗ ಅವರಿಗೆ ಬಹು ಇಷ್ಟವಾಗಿ ಹೋದ. 'ಒಂದು ವಿಷಯದಲ್ಲಿ ನಾನು, ನನ್ನ ಸೊಸೆ ಒಂದೆ ಅಪ್ಪಾ...' ಎಂದರು. 'ಯಾವ ವಿಷಯ ಅಮ್ಮ....?' ಎಂದ.

'ಚಿಂಟು ಚಿನ್ನಿ ಇಬ್ಬರಲ್ಲಿ ಚಿನ್ನೀಗಿಂತ ಚಿಂಟೂನೆ ನನಗೆ ಇಷ್ಟ' ಎಂದರು. ಜಯಶ್ರೀಗೆ ಇಬ್ಬರು ಮಕ್ಕಳಲ್ಲಿ ಚಿಂಟು ಇಷ್ಟ. ರಾಜಸಿಂಹನಿಗೆ ಚಿನ್ನಿ ಮುದ್ದಿನ ಮಗಳು. ಅಂತು ತಂದೆ ಮಗ ಊರಿಗೆ ಹೊರಟರು. ಶ್ರೀರಾಮ ತಾಟಕೀನ್ನ ಕೊಂದಿದ್ದರವರೆಗೆ ಕಥಾಭಾಗವನ್ನು ಹೇಳಿದ್ದಳು ಮಧು. 'ಬರೋ ವಾರ ಬರ್‍ತೀನಿ ಅಜ್ಜಿ' ಎಂದು ಹೇಳಿ, ಮಧುವಿಗೆ 'ಬರೋವಾರ ಬರ್‍ತೀನಿ ಆಂಟಿ, ಪೂರ್ತಿ ಕಥೆ ಹೇಳಿ' ಎಂದಿದ್ದ ಚಿಂಟು.

ಆದರೆ ಮುಂದಿನ ಎರಡು ವಾರ ಆಫೀಸ್ ಆಡಿಟ್ ಜವಾಬ್ದಾರಿ ಕೆಲಸಗಳಲ್ಲಿ ರಾಜಸಿಂಹನಿಗೆ ಮೈಸೂರಿಗೆ ಹೋಗಲಾಗಲಿಲ್ಲ. 'ಮೈಸೂರಿಗೆ ಹೋಗೋಣಾ ಪಪ್ಪಾ....' ಎಂದು ಪೀಡಿಸುತ್ತಿದ್ದ. 'ಅಜ್ಜಿ, ನಂಬರ್ ಕೊಡ್ತೀನಿ, ನೀನೇ ಮಾತಾಡು' ಎಂದು ಫೋನ್ ನಂಬರ್ ಪಡೆದ ಮೇಲೆ ಮನಸು ಬಂದಾಗ ಅಜ್ಜಿಗೆ ಫೋನ್ ಮಾಡಿ ಮಾತನಾಡುತ್ತಿದ್ದ.

ಈ ಮಧ್ಯೆ ಜಯಶ್ರೀಯಿಂದ ಫೋನ್ ಬಂತು. 'ಹಲೋ ರಾಜ್, ನಾನು ಎಲ್ಲಿಂದಾ ಮಾತಾಡ್ತಿದ್ದೀನಿ ಹೇಳಿ ?'

'ಎಲ್ಲಿಂದಾ ? ಫೋನ್‌ನಿಂದ' ಎಂದ.

'ನಾನು ಬಾಂಬೆಗೆ ಬಂದಿದ್ದೀನಿ. ಹದಿನೈದು ದಿನ ಮುಂಚೇನೆ ಮುಗೀತು ನನ್ನ ಕೆಲಸ. ಇಲ್ಲೊಂದು ಎಂಟು ದಿನ ಮಾತ್ರ ಇರಬೇಕಾಗಿದೆ' ಎಂದಳು.

'ಎಂಟು ದಿನ ಏಕೆ, ಹದಿನೈದು ದಿನ ಪೂರ್ತಿ ಇದ್ದು ಮೂರು ತಿಂಗಳು ಫಿಲ್‌ಆಪ್ ಮಾಡಿ ಬಾ' ಎಂದ.

'ನಾಳೆ ಫ್ಲೈಟಲ್ಲಿ ನೀವು ಬರೋ ತರಹ ಟಿಕೇಟ್ ರಿಸರ್ವ್ ಮಾಡಿಸಿದ್ದೀನ್ರಿ. ನಾರಾಯಣ್ ಏರ್‌ಟಿಕೇಟ್ ತಂದ್ಕೊಡ್ತಾನೆ. ನಾಳೆ ಬೆಳಿಗ್ಗೆ ಫ್ಲೈಟ್‌ನಲ್ಲಿ ಬನ್ನಿ' ಎಂದ.

'ಏನು ವಿಶೇಷಾ...? ಅಮ್ಮಾವರು ನನ್ನನ್ನ ಮುಂಬಯಿಗೆ ಕರ್ಕ್ಕೊಂತ ಇರೋದು ?' ಎಂದ.

'ನಿಮಗೊಬ್ಬ ಹೊಸ ಹುಡುಗೀನ್ನ ಭೇಟಿ ಮಾಡಿಸ್ತೀನಿ ಅಂತ ಹೇಳಿದ್ನಲ್ಲ.

ಇಲ್ಲೇ ಭೇಟಿ ಆಗ್ತಾಳಂತೆ' ಎಂದಳು.

ಅವನು ಬೇಸರದಿಂದ, 'ನನ್ನ ಮನಸ್ಸಿನ ಕಣಕಣವೂ ಚಿನ್ನೀನ ನೋಡಬೇಕೂಂತ ಹಂಬಲಿಸ್ತಿದೆ. ನೀನು ನೋಡಿದರೆ ಯಾರೋ ಹೊಸ ಹುಡುಗಿ ಅಂತ ಚಿನ್ನಾಟಾ ಆಡಿಸ್ತಿದ್ದಿ. ನಾನೊಬ್ಬ ಸಂತೃಪ್ತ ಗೃಹಸ್ಥ. ಎರಡು ಮಕ್ಕಳ ತಂದೆ. ಹುಡುಗಿಯರ ಬಯಕೆ ನನಗೀಗ ಇಲ್ಲ' ಎಂದ.

'ಈ ಸ್ಲೋಗನ್ ಹಲವಾರು ಬಾರಿ ಕೇಳಿದ್ದೀನಿ. ಕೈ ಹಿಡದ ಹೆಂಡತಿ ಬಗ್ಗೆ ನಿಮಗೆ ನಿರ್ಲಿಪ್ತತೆ ಬಂದುಬಿಟ್ಟಿದೆ. ಆದರೆ ಹೊಸ ಹುಡುಗೀನ್ನ ನೋಡಿದಾಗ ಉಲ್ಲಾಸ ಪುಟಿದೇಳುತ್ತೆ. ಗಂಡು ಜಾತಿಯ ಗುಣವೇ ಅಷ್ಟು. ನಿಮಗಂತಿದ್ದೀನಿ ಅನ್ಕೋಬೇಡಿ. ಒಂದು ಪ್ರಾಣಿಯ ಗುಣ ಸಹ ಗಂಡು ಜಾತೀಲಿ ಇಷ್ಟೆ. ಒಂದು ಕೊಬ್ಬಿದ ಟಗರನ್ನು ಬೋನಿನಲ್ಲಿ ಹಾಕಿ, ಒಂದೇ ಹೆಣ್ಣು ಟಗರನ್ನು ಮೂರು ದಿನ ಇಟ್ಟು ಪರಿಶೀಲಿಸಿದರಂತೆ. ಮೂರು ದಿನದಲ್ಲಿ ಎರಡು ಸಲ ಮಾತ್ರ ಅದು ಸಂಗಾತಿ ಜೊತೆ ಲೈಂಗಿಕ ಚಟುವಟಿಕೆ ನಡೆಸಿತಂತೆ. ಆದರೆ ಒಂದೇ ದಿನ ಹನ್ನೆರಡು ಹೆಣ್ಣು ಸಂಗಾತಿ ಅದಕ್ಕೆ ಬೋನಿನಲ್ಲಿ ಬಿಟ್ಟರಂತೆ. ಅದು ಉತ್ಸಾಹದಿಂದ ಪ್ರತಿ ಸಂಗಾತಿ ಜೊತೆ ರೋಮಾನ್ಸ್ ಮಾಡಿ, ಒಂದೇ ದಿನ ಹನ್ನೆರಡು ಸಲ..'

'ಥೂ...ಥೂ...ಥೂ. ಈ ವಲ್ಗರ್ ಉದಾಹರಣೆಗಳು ಸಾಕು. ಗಂಡ ಹೆಂಡತಿ ಆರಂಭದಲ್ಲಿ ಕಾಮದಿಂದ ಜೀವನ ಆರಂಭಿಸಿದರೂ ಬದುಕು ಮಾಗಿದ ಮೇಲೆ ಪರಸ್ಪರ ಪ್ರೇಮದಿಂದ ಮನಸ್ಸು ಬೆಸೆದು, ಜೋಡಿ ಜಕ್ಕವಕ್ಕಿಗಳ ಹಾಗೆ ಇರಬಹುದು. ಬೆರೆತ ಮನಸ್ಸು, ಅರಿತ ಹೃದಯ ಇದ್ದರೆ ಬದುಕು ಸುಂದರ ಸುಮಧುರವಾಗತ್ತೆ. ಉನ್ಮತ್ತ ಲೈಂಗಿಕ ಸಂಪರ್ಕವೊಂದೇ ದಂಪತಿಗಳ ಪ್ರೀತಿಯ ಗುರುತಲ್ಲ' ಎಂದ ರಾಜಸಿಂಹ. ಜಯಶ್ರೀ ಬೇಸರದಿಂದ–

'ಬದುಕಿರುವವರೆಗೂ ಜೀವನದ ಎಲ್ಲಾ ಸುಖಗಳನ್ನು ಉನ್ಮತ್ತವಾಗಿ ಅನುಭವಿಸಬೇಕೂಂತ ನನ್ನಾಸೆ. ಆ ನನ್ನ ಸಂಗಾತಿ ನೀವೇ ಆಗಿರಬೇಕೆಂದು ನನ್ನ ಹಿರಿಯಾಸೆ. ನನ್ನ ಆಶಿಸಿ ಬರೋ ನೂರು ಹೈಲೆವಲ್ ಮಂದಿ ಇದ್ದಾರೆ. ಆದರೆ ನಾನು ಅವರಾರನ್ನು ಕೈ ಬೆರಳು ಸೋಕಲಿಕ್ಕೆ ಸಹ ಇಷ್ಟಪಡಲ್ಲ. ನನಗೆ ಬೇಕಾದ್ದು ನೀವು' ಎಂದಳು.

'ಹೀಗೆ ಪಾತಿವ್ರತ್ಯ ಸಾರಿಕೊಳ್ಳೋ ನಿನ್ನಂಥಾ ಪತ್ನಿಯನ್ನು ಪಡೆದಿರೋದು ನನ್ನ ದೌರ್ಭಾಗ್ಯ, ಇಂಥಾ ಡೈಲಾಗ್ಸ್ ಕೇಳಿದಾಗ ನಿನ್ನ ಬಗ್ಗೆ ಹೆಮ್ಮೆ ಹುಟ್ಟಲ್ಲ, ಅಸಹ್ಯವಾಗತ್ತೆ. ಸರೀ ಪರಪುರುಷರ ಬಗ್ಗೆ ನನ್ನೆದುರು ಕೊರೀತಾ ಅವರೆಲ್ಲಾ ನನಗಾಗಿ ಹಾತೊರೆದು ಬಂದರೂ ನಾನೇ ನಿರಾಕರಿಸ್ತೀನಿ... ಅಂತ ಬೊಗಳ್ತಿ. ಒಬ್ಬ ಗಂಡಸು ಹಾತೊರೆದು ಬರೋಷ್ಟು... ಅವನ ಕೂಡ, ಸಲಿಗೆ, ಸಂಪರ್ಕ ಬೆಳೆಸಿರಿ. ಸುಮ್ಮನೆ

ಅಪರಿಚಿತವಾಗಿ ದೂರ ಉಳಿದ ಹೆಂಗಸನ್ನು ಯಾವೋನೂ ಬಯಸಿರಲಾರ?' ಎಂದ.

'ರಾಜ್, ನನ್ನ ಬಗ್ಗೆ ನಿಮೆ ಅನುಮಾನಾನಾ? ಹಾಗಿದ್ದರೆ ನಾನು ಧನ್ಯೆ!' ಅವಳು ಕಿಲಕಿಲ ನಕ್ಕು ಮತ್ತೆ ಮಾತು ಮುಂದುವರಿಸಿದಳು: 'ನಿರ್ಲಿಪ್ತವಾಗಿದ್ದ ಆ ನಿಮ್ಮ ಜಡವಾದ ಹೃದಯದಲ್ಲಿ ಒಂದಿಷ್ಟು ಅನುಮಾನ, ಅಸೂಯೆಗಳು ಮೂಡಿದರೂ ನಾನು ಧನ್ಯೆ. ಅಸೂಯೆ ಪ್ರೀತಿಯ ಗುರುತು' ಎಂದಳು. ಅವನು ಬೇಸರದಿಂದ-

'ಜಯಾ, ನಿನ್ನ ಹೃದಯದಲ್ಲಿ ಪ್ರೀತಿಯ ದಾಹವೇ ತುಂಬಿದೆ, ಮ.ನ. ಮೂರ್ತಿಯವರು "ಅತಿಕಾಮಿ" ಅಂತ ಒಂದು ಕಾದಂಬರಿ ಬರೆದಿದ್ದಾರೆ. ಓದಿ ನೋಡು, ಅದರಲ್ಲಿ ಒಬ್ಬ ಹೆಣ್ಣು, ಕೀತಿಗಾಗಿ, ಅತಿಯಾದ ಹಣಕ್ಕಾಗಿ, ಹೇಗೆ ತನ್ನ ಬದುಕನ್ನ ಸುಟ್ಟುಕೊಳ್ತಾಳೆ. ಕೀರ್ತಿ ದಾಹ ಅತಿಯಾದರೆ ಆತ್ಮರತಿ ಅತಿಯಾದರೆ ಹಣದ ದಾಹ ಅತಿಯಾದರೆ ಏನು ದುರಂತ ಅನ್ನೋದು ಚಿತ್ರಿಸಿದ್ದಾರೆ. ತನ್ನನ್ನು ಎಲ್ಲರು ದೇವತೆಯ ಹಾಗೆ ಆರಾಧಿಸಬೇಕೂನ್ನೋ ಅವಳ ಆತ್ಮರತಿ ಕಡೆಗೆ ಯಾವ ಹಂತ ಮುಟ್ಟಿತೆಂದರೆ..?'

'ಸ್ಟಾಪ್... ಸ್ಟಾಪ್... ನಾಳೆ ಮುಂಬಯಿಗೆ ಬನ್ನಿ, ಲಿಜಿ ಮೇಡಂ ನಿಮ್ಮನ್ನ ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿ ಇಲ್ಲಿನ ತಾಜ್ ಹೋಟಲಿಗೆ ಕರ್ಕೊಂಬರ್ತಾರೆ, ನಾಳೆ ಜಗಳಾ ಮುಂದುವರಿಸೋಣ.. ನಿಮ್ಮ ಜೊತೆ ಘರ್ಷಣೆ ಇದ್ದೇ ಇದೆ. ನನ್ನ ಹೃದಯದ ತಂತೀ ಮಿಡಿಯೋ ನಿಮ್ಮ ಕೈಬೆರಳು ನಿಸ್ತೇಜವಾಗಿದೆ ಎಂದು ನಾನು ಬಲ್ಲೆ. ಈ ದಾಂಪತ್ಯ ದುರಂತ ಎಂಟು ವರ್ಷಗಳಿಂದ ನಾನು ಅನುಭವಿಸ್ತಿದ್ದೀನಿ. ಮದುವೆಯಾದ ಎರಡು ವರ್ಷ ನನ್ನನ್ನು ದೇವತೆಯ ಹಾಗೆ ಆರಾಧಿಸಿದಿರಿ. ಆಮೇಲೆ ನಾನು ನಿಮಗೆ ಯಾವುದೋ ಕಾದಂಬರಿ ಕೀಳುಪಾತ್ರದ ಹಾಗೆ ಆತ್ಮರತಿಯ ಆರಾಧಕಿ, ಕೀರ್ತಿಕಾಮಿ, ಧನದಾಹವುಳ್ಳವಳು ಹೀಗೆಲ್ಲಾ ಕಾಣಿಸ್ತೀನಿ, ನನ್ನ ಎಡಗಾಲ ಕಿರುಬೆರಳ ಸಮಕ್ಕಿರೋ ಒಬ್ಬ ಹೆಂಗಸು ನಿಮಗೆ ಇಡೀ ಪ್ರಪಂಚ ಎಲ್ಲಾ ಹುಡುಕಿದರೂ ಸಿಗ್ತಾಳೇನ್ರೀ? ಕೋಟ್ಯಾಂತರ ರೂ.ಗಳ ಇಷ್ಟು ದೊಡ್ಡ ಸಾಮ್ರಾಜ್ಯ ಲೀಲಾಜಾಲವಾಗಿ ವ್ಯವಹರಿಸ್ತಿದ್ದೀನಿ. ಅಪರಿಮಿತ ಬುದ್ಧಿವಂತೆ. ಈ ನನ್ನ ಮೂವತ್ತೆರಡರ ವಯಸ್ಸಿನಲ್ಲಿಯೂ ಹದಿನೆಂಟರ ಸೊಬಗು ಉಳಿಸಿಕೊಂಡಿದ್ದೇನೆ. ವರ್ಷಕ್ಕೆ ಹದಿನೆಂಟು ಲಕ್ಷ ಇನ್‌ಕಂಟ್ಯಾಕ್ಸ್ ಕಟ್ಟುವ ಉದ್ಯಮಿ..' ಎನ್ನುತ್ತಿದ್ದಂತೇ ಅವನು...

'ಆದರೂ ಗಂಡನ ಇಪ್ಪತ್ತೈದು ಸಾವಿರ ರೂ. ಸಂಬಳದಲ್ಲಿ ಒಂದು ಪೈಸೆ ಅವನಿಗೆ ಬಿಡದಂತೆ ವರ್ಷಕ್ಕೊಂದು ನಾಲ್ಕಾರು ಲಕ್ಷದ ಆಭರಣ ಖರೀದಿಸಿ ಗಂಡನನ್ನು ಕಂಪನಿಸಾಲದಲ್ಲಿ ಕಟ್ಟಿಹಾಕಿರುವಳು' ಎನ್ನುತ್ತಿದ್ದಂತೆ ರಿಸೀವರ್ ಅಪ್ಪಳಿಸಿ, ಫೋನ್ ಡಿಸ್‌ಕನೆಕ್ಟ್ ಮಾಡಿದ ಸದ್ದಾಯಿತು.

ಸದ್ಯ! ಮಾತಿನ ಭರದಲ್ಲಿ ಸಲೀಮ್ ಹಾಗೂ ಗೋವಿಂದ ಎಂಬ ಇಬ್ಬರನ್ನು ನನ್ನ ಸೇವೆ ನೆಪದಲ್ಲಿ, ನನ್ನ ಮೇಲೆ ಪಹರೆ ಹಾಕಿರುವವಳು ಎಂದು ವಾಕ್ಯ ಮುಂದುವರಿಸುತ್ತಿದ್ದ. ಉದ್ವೇಗದಲ್ಲಿ ತಾನು ವಾಕ್ಯವನ್ನು ಮುಂದುವರಿಸಿದ್ದರೂ ಆ ಬಡಪಾಯಿಗಳಿಗೆ ತೊಂದರೆ ಆಗುತ್ತಿತ್ತು. ಅದರ ಬದಲು ಅವಳು ಫೋನ್ ಡಿಸ್‌ಕನೆಕ್ಟ್ ಮಾಡಿದ್ದು ಒಳ್ಳೆಯದಾಯಿತೆಂದುಕೊಂಡ ರಾಜಸಿಂಹ.

ನಿಜಕ್ಕೂ ಅವಳು ತನ್ನನ್ನು ತುಂಬಾ ಪ್ರೀತಿಸುತ್ತಾಳೆಯೇ? ತಾನೇ ಅವಳ ಪ್ರೀತಿಗೆ ಸ್ಪಂದಿಸುತ್ತಿಲ್ಲವೆ ? ತಾನೇ ಅಪರಾಧಿಯೆ ? ಎಂಬ ಭಾವ ಅವನ ಮನದಲ್ಲಿ ತೇಲಿ ಬಂತು. ಹೇಗೂ ನಾಳೆ ಮುಂಬೈಗೆ ಹೋಗಬೇಕು. ಎರಡೂವರೆ ತಿಂಗಳಿಂದ ಅಗಲಿದ ಹೆಂಡತಿ, ಮೂರು ತಿಂಗಳಿಂದ ಅಗಲಿದ ಮಗಳು ಎಲ್ಲರನ್ನೂ ನೋಡಬೇಕೆಂಬ ಕುತೂಹಲ ಕಾಡಿತು.

ಮಾರನೆಯ ದಿನ ಮಗನಿಗೆ ಹೇಳಿದ : 'ನಾನು ಮುಂಬಯಿಗೆ ಹೋಗ್ತಿದ್ದೀನಿ ಚಿಂಟು, ನಿಮ್ಮಮ್ಮ ಒಂದೇ ಟಿಕೇಟ್ ರಿಸರ್ವ ಮಾಡ್ಸಿದ್ದಾಳೆ' ಎಂದ. ಆಶ್ಚರ್ಯ ವೆಂದರೆ ಚಿಂಟು ಮುಂಬೈಗೆ ಬರುತ್ತೇನೆಂದು ಹಠ ಮಾಡಲೇ ಇಲ್ಲ.

'ಪಪ್ಪಾ ಹೇಗಿದ್ರೂ ರಜಾ ಇದೆ. ಸಲೀಮನಿಗೆ ಹೇಳಿ, ನನ್ನ ಮೈಸೂರಿಗೆ ಅಜ್ಜಿ ಮನೆಗೆ ಬಿಡಲಿಕ್ಕೆ. ನೀವು ಇಲ್ಲದೇ ನನಗೆ ಒಬ್ಬನೇ ಇಲ್ಲಿರಲಿಕ್ಕೆ ಬೇಜಾರು' ಎಂದ.

'ಸರಿ, ಹೋಗಿ ಬಾ...' ಎಂದ. ಒಟ್ಟಿಗೆ ನಾಲ್ಕುದಿನ ರಜಾ ಇತ್ತು, ಅವನ ಕಾನ್ವೆಂಟಿಗೆ.

'ನಾಲ್ಕು ದಿನ ಅಜ್ಜಿ ಹತ್ತಿರ ಗಲಾಟೆ ಇಲ್ಲದೆ ಇರ್ತೀಯಾ?' ಎಂದ ಮೊದಲಿನಷ್ಟು ಹುಚ್ಚು ತುಂಟತನ ಪುಂಡಾಟಿಕೆ ಇಲ್ಲದಿದ್ದರೂ ಹಠ ಗದ್ದಲ ಇದ್ದೇ ಇತ್ತು.

'ಏನು ರಗಳೇ ಮಾಡಲ್ಲ ಪಪ್ಪಾ, ಮಧು ಆಂಟಿ ಹತ್ರ ರಾಮಾಯಣ ಕೇಳಬೇಕು. ಎಷ್ಟು ಚೆನ್ನಾಗಿ ಇಂಗ್ಲೀಷಲ್ಲಿ ಓದಿ, ಎಕ್ಸ್‌ಪ್ಲೈನ್ ಮಾಡ್ತಾರೆ' ಎಂದ.

ತಾನು ಹದಿನಾಲ್ಕು. ಹದಿನೈದು ಹರೆಯದಲ್ಲಿ ಆ ರಾಮಾಯಣ ಓದಿ ಮರುಳಾಗಿ ಆನಂದಿಸಿದ ಪುಸ್ತಕ ಈಗ ಮಗ ಇಷ್ಟಪಟ್ಟಿದ್ದಾನೆ ಎನಿಸಿ, ಸಂತೋಷವೇ ಆಯಿತು. ಅವನನ್ನು ಕಾರಿನಲ್ಲಿ ಸಲೀಮನ ಜೊತೆ ಮೈಸೂರಿಗೆ ಕಳಿಸಿದ.

ತಾನು ಮುಂಬೈ ವಿಮಾನ ಏರಿದ. ಮುಂಬೈ ತಲುಪಿದಾಗ ವಿಮಾನ ನಿಲ್ದಾಣ ದಲ್ಲಿ ಲಿಜಿ ಬಂದಿದ್ದಳು. ಅವಳೇ ಕಾರಿನಲ್ಲಿ ತಾಜ್ ಹೋಟಲಿಗೆ ಕರೆತಂದಳು. ಎರಡನೆಯ ಅಂತಸ್ತಿನ ಒಂದು ಕೋಣೆ ಬಾಗಿಲು ತಳ್ಳಿ. ವರಾಂಡದವರೆಗೆ ಕರೆದು, ಈ ಕಡೇ ಬೆಡ್‌ರೂಮ್, ಮೇಮ್ ಸಾಬ್ ಅಲ್ಲಿರಬಹುದು ಎಂದು ತೆರೆ ಹಾಕಿದ ಕೋಣೆ ತೋರಿಸಿ ಹೊರ ನಡೆದಳು. ಅವನು ತೆರೆ ತಳ್ಳಿ, ಒಳಗೆ ಬಂದ 'ಹಲೋ!' ಎಂದು ವ್ಯಯ್ಯಾರವಾಗಿ ನಗುತ್ತ ಮುಖದ ತುಂಬಾ ಆವರಿಸಿದ ತನ್ನ ಹೊಂಬಣ್ಣದ

ಕೂದಲನ್ನು ಹಿಂದೆ ತಳ್ಳಿ ಹಸಿರು ಕಂಗಳ, ಗುಲಾಬಿ ಬಣ್ಣದ ಕೆಂದುಟಿಯ ಆ ಚೆಲುವೆ ನಕ್ಕಾಗ ದಿಗ್ಭ್ರಾಂತನಾಗಿ ಒಂದು ಹೆಜ್ಜೆ ಹಿಂದೆ ಸರಿದೆ.

'ರಾಜ್, ನನ್ನ ಗುರುತು ಸಿಗಲಿಲ್ಲವಾ ? ನಾನು ನಿಮ್ಮ ಪ್ರೀತಿಯ ಜಯಾ...?' ಎಂದಳು. ಬಂದು ಅಪ್ಪಿದಳು.

ನಿಧಾನವಾಗಿ ನೋಡಿದಾಗ ತನ್ನ ಪತ್ನಿ ಎಂದರಿವಾಯಿತು. ಆದರೆ ಕಪ್ಪು ಕೂದಲ, ಕಪ್ಪು ಕಂಗಳ ಹೊಂಬಣ್ಣದ ಚರ್ಮ ಹೊಂದಿದ ಆ ಚೆಲುವೆ ಎಲ್ಲಿ? ಫಾರಿನ್ ಹುಡುಗಿಯಂತೇ ಕೆಂಗುಲಾಬಿಯ ಈ ಮುಖ... ಈ ಹೊಂಬಣ್ಣದ ಥಳಥಳೆವ ಕೂದಲು... ಆ ಹಸಿರು ಅವನು ಕೊಂಚ ದಿಗ್ಭ್ರಾಂತಿಯಿಂದ :

'ಏನಿದು ನಿನ್ನ ವೇಷಾ, ಜಯಾ ?' ಎಂದ.

'ವೇಷಾ ಅಲ್ಲ. ಇನ್ನು ಒಂದು ವರ್ಷ ಈ ಕೂದಲು ಈ ಹೊಂಬಣ್ಣದಲ್ಲಿರತ್ತೆ. ಅಮೆರಿಕಾದ ಬ್ಯೂಟಿಪಾರ್ಲರಿನಲ್ಲಿ ಎಷ್ಟು ದುಡ್ಡು ತೆತ್ತಿದ್ದೇನೆ ಗೊತ್ತ? ಈ ರೋಸ್ ಮೇಕಪ್ ಹಾಲಿವುಡ್‌ನದು. ಹದಿನೆಂಟು ಸಾವಿರ ರೂಪಾಯಿ, ಚರ್ಮಕ್ಕೆ ಹಾನಿ ಇಲ್ಲ. ಬಟ್ಟೆಗೆ ಮೆತ್ತಲ್ಲ, ನೀರು ಸಾಬೂನು ಹಾಕಿ ತೊಳೆದರೂ, ಚರ್ಮದ ಮೇಲಿನ ಕೊಳೆ ಹೋಗತ್ತೆ ಹೊರತು, ಗುಲಾಬಿ ಹೊಳಪು ಹೋಗೋದಿಲ್ಲ. ಆದರೆ ವಾರಕ್ಕೆ ಒಮ್ಮೆ ಈ ಮೇಕಪ್ ರಿಮೂವರ್ ಲೋಷನ್ ಹಾಕಿ, ಈ ಹಳೇ ಮೇಕಪ್ ತೆಗೆದು, ಚರ್ಮ ವಿಶೇಷವಾದ ಮಾಯಿಶ್ಚರೈಸರ್ ಹಚ್ಚಿ, ಒನ್ ಅವರ್ ಹಾಗೆ ಬಿಟ್ಟು, ಆಮೇಲೆ ಮತ್ತೆ ಈ ಗುಲಾಬಿ ಮೇಕಪ್ ಹಚ್ಚಬೇಕು. ಏಕೆಂದರೆ ಈ ಹೊಂಗೂದಲಿಗೆ ಹೊಂಬಣ್ಣ ಒಪ್ಪಲ್ಲ. ಕಪ್ಪು ಕಣ್ಣು ಚೆನ್ನಾಗಿರಲ್ಲ ಅಂತ ಹಸಿರು ಲೆನ್ಸ್ ಹಾಕ್ಸಿದ್ದೀನಿ. ಇದು ಮಾಮೂಲು ಲೆನ್ಸ್‌ಗಿಂತ ದುಬಾರಿ. ಐದು ಸಾವಿರ ರೂಪಾಯಿ. ಆದರೆ ಮಾಮೂಲು ಲೆನ್ಸ್ ದಿನಾ ಹಾಕಬೇಕು, ತೆಗೀಬೇಕು. ಇದು ಹಾಗಲ್ಲ. ಒಂದ್ಸಲ ಹಾಕಿಬಿಟ್ರೆ ಎರಡು ತಿಂಗಳು ತೆಗೆಯೋಕ್ಕಿಲ್ಲ. ದಿನಾ ರಾತ್ರಿ ಲೋಷನ್‌ನಲ್ಲಿ ಹಾಕೋದು... ತೊಳೆಯೋದು ಏನೂ ತಂಟೆಯಿಲ್ಲ. ಎರಡು ತಿಂಗಳು ಉಪಯೋಗಿಸಿ, ರಿಮೂ ಮಾಡಿ ಬಿಸಾಕಬಹುದು. ಮತ್ತೆ ಹೊಸ ಲೆನ್ಸ್ ಹಾಕಿ ಎರಡು ತಿಂಗಳು ಉಪಯೋಗಿಸಬಹುದು. ಆರು ಜೊತೆ ಲೆನ್ಸ್‌ಗೆ ಮೂವತ್ತು ಸಾವಿರ ಕೊಟ್ಟಿದ್ದೀನಿ. ಇನ್ನು ಒಂದು ವರ್ಷ ಹಸಿರು ಕಂಗಳ ಹೊಸ ಚೆಲುವೆ ಆಗಿ, ನಿಮ್ಮನ್ನ ಒಲೈಸಬೇಕಲ್ಲ' ಎಂದಳು.

ಮೃದುವಾಗಿ ಕೆಂಪು ಮುಖ, ಹಸಿರು ಹೊಳಸಿನ ಕಂಗಳು... ಹೊಬಣ್ಣದಿಂದ ಥಳಥಳಿಸುವ ಕೂದಲು.. ನಿಜಕ್ಕೂ ತನ್ನ ತೋಳಿನಲ್ಲಿರುವುದು ಯಾರೋ ಅಪರಿಚಿತ ಆಂಗ್ಲ ಹುಡುಗಿ ಎನಿಸಿತು.

ಆದರೆ ಅವನಿಗೆ ಇದರಿಂದ ಮುಜುಗರವಾಯಿತೇ ಹೊರತು ಮನಸ್ಸು ಅರಳಲಿಲ.

'ನಮ್ಮ ಪಪ್ಪಾ ನನ್ನ ಅಮೆರಿಕಾದಲ್ಲಿದ್ದಾಗ, ಬಂಗಾರ ಕೂದಲ ಸಿಂಗಾರಿ ಚೆಲುವೆ, ಬಂಗಾರ ಕೂಲದ ಕಿನ್ನರಿ, ಅಂತಿದ್ದರು. ಇಲ್ಲಿ ಬಂದಮೇಲೆ ನಮ್ಮ ಮಮ್ಮಿ ನೋಡಿ ಆಂಗ್ಲ ಕಾದಂಬರೀಲಿ ಅಲೆಗ್ಸಾಂಡ್ರಿಯ ಅಂತ ಒಬ್ಬ ಚೆಲುವೆ ವರ್ಣನೆ ಬರತ್ತಂತೆ. ನನಗೆ ಅಲೆಗ್ಸಾಂಡ್ರಿಯಾಂತ್ಲೇ ಹೆಸರಿಟ್ಟಿದ್ದಾಳೆ. ಲಿಜಿ ಆಂಟಿ ಅಂತೂ ನನಗೆ "ಮೇಮ್‌ಸಾಬ್ ನೀವು ಹುಟ್ರಾ ಯೋರೋಪಿಯನ್ ಲೇಡಿ ಕಂಡ್ಹಾಗೆ ಕಾಣ್ತೀರಿ. ಬ್ರಿಟೀಷ್ ಬ್ಯೂಟಿ, ರಾಣಿ ಎಲಿಜಬೆತ್" ಅಂತ ಏನೇನೋ ಅಂತಾಳೆ, ಎಂದಳು.

ಅವನು ಸುಮ್ಮನೆ ನಿರ್ಲಿಪ್ತನಾಗಿದ್ದ. 'ನಿಜಾ ಹೇಳಿ ರಾಜ್! ನಾನು ಹೊಚ್ಚ ಹೊಸ ಹದಿನೆಂಟರ ಚೆಲುವೆ ಹಾಗೆ ಕಾಣ್ತಿಲ್ವಾ? ಬದುಕಿದ್ದಂತೆ ಇದೊಂದು ಹೊಸ ಜನ್ಮ ತಾಳಿದ್ದೀನಿ ಅನಿಸತ್ತೆ. ಜಯಾ ಅನ್ನೋ ಹೆಸರಿನ ಬದಲು ಜೇನಿ ಅಂತ ಇಟ್ಕೊಂಡರೆ ಹೇಗೆ ?' ಎಂದಳು.

'ಇಷ್ಟೆಲ್ಲಾ ಸರ್ಕಸ್ ಮಾಡೋ ಅಗತ್ಯವೇನು ಜಯಾ...?' ಎಂದ. ಜಯಶ್ರೀ ಉದ್ವೇಗದಿಂದ:

'ನಿಮಗೇ.... ನಿಮಗೇ... ನಿಮಗಾಗಿ ಇಷ್ಟೆಲ್ಲಾ ತಪಸ್ಸು. ಇದು ಸರ್ಕಸ್ಸಲ್ಲ ತಪಸ್ಸು, ಅರಲಿಸಲಿಕ್ಕೆ ಸಾಧ್ಯವಿರ್ತ ಇರಲಿಲ್ಲ. ನಿರ್ಲಿಪ್ತರಾಗಿರ್ತಾ ಇದ್ದಿರಿ. ಹೊಸ ಹುಡುಗಿಯಾಗಿ ನಿಮಗಾಗಿ ಅವತಾರವೆತ್ತಿ ಬಂದಿದ್ದೀನಿ. ಇದನ್ನ ಸರ್ಕಸ್ ಅಂತೀರಾ?' ಎಂದಳು. ರಾಜಸಿಂಹ ನಿಧಾನವಾಗಿ 'ನಿನ್ನ ರೂಪಾ ನನಗೆಂದು ಅಸಹನೀಯವಾಗಿರಲಿಲ್ಲ ಜಯಾ..? ಕಪ್ಪು ಕಂಗಳ, ಕಪ್ಪು ಕೂದಲ ಬಂಗಾರದ ಬೊಂಬೆ ಹಾಗಿದ್ದ ಆ ನಿನ್ನ ರೂಪಾ ಅದ್ವಿತೀಯವಾಗೇ ಇತ್ತು. ಈ ಅಸಹ್ಯ ಕೆಂಬಣ್ಣ-ನೆರೆತ ತಲೆಗೂದಲಿಗೆ ಲೋಮ ಹಚ್ಚಿದಾಗ ಒಂದು ತರಹ ವಿಕಾರವಾದ ಹಳದಿ ಬಣ್ಣ ಬರುತ್ತೆ. ಅದನ್ನು ಹೊಂಗೂದಲೂಂತ ನೀನು ಬಣ್ಣಿಸಿದರೆ ನಾನು ಆನಂದ ಪಡಲೇ? ನಿನ್ನ ಸುಂದರ ರೂಪಾ ಕಳೆದುಕೊಂಡು ಅಸಹ್ಯ ವಿಕಾರ ಪಡೆಯಲಿಕ್ಕೆ ನೀನು ಸಾವಿರ ಸಾವಿರ ಸುರಿದ್ದೀಯೇ? ಮೇಕಪ್ಪಿಗೆ ಹದಿನೆಂಟು ಸಾವಿರ ಲೆನ್ಸ್‌ಗೆ ಮುವತ್ತು ಸಾವಿರ.. ಕೂದಲು ಹೀಗೆ ಮಾಡಿಸಲಿಕ್ಕೆ ಎಷ್ಟು ಸಾವಿರ ಸುರಿದೆ?' ಎಂದ.

'ರಾಜ್, ನನ್ನ ತಾಳ್ಮೆ ಕೆಡಿಸಿಬಿಟ್ಟಿರಿ. ನನ್ನ ಪೇಷೆನ್ಸ್‌ಗೂ ಒಂದು ಮಿತಿ ಇದೆ. ಸಾವಿರ ಸಾವಿರ ಸುರಿದೆನಂತೆ. ಹೌದು ! ಸುರೀತೀನಿ. ನಿಮ್ಮ ತಾತನ ಮನೆ ಗಂಟಾ? ನಮ್ಮಪ್ಪಾ ಸಂಪಾದಿಸಿದ್ದು. ನಾನು ಹಕ್ಕುದಾರಳು, ಸುರೀತೀನಿ. ನಿಮಗೆ ಹೃದಯ ಇದೆಯಾ ? ನಿಮ್ಮ ಹೃದಯ ಕಲ್ಲು. ನಿಮಗಾಗಿ ಹಂಬಲಿಸಿ, ನಿಮ್ಮ ಪ್ರೀತಿಗಾಗಿ ಹಂಬಲಿಸಿ ಇಷ್ಟು ಮಾಡಿದ್ದೀನಿ. ಪ್ರೀತಿಯಿಂದ ಹೊಗಳಲಿಕ್ಕೂ ಬಡತನವಾ? ನಿಮಗೆ

ಒಳ್ಳೊಳ್ಳೆ ಹೊಗಳಿಕೆ ವಾಕ್ಯಗಳು ಹೇಳಲಿಕ್ಕೂ ಬರಲ್ಲಾಂತ ನಾನೇ ಕೆಲವು ಪ್ರೇಮ, ಹೊಗಳಿಕೆ ವಾಕ್ಯ ಪರಿಚಯ ಮಾಡ್ಸಿದ್ದೀನಿ. ಬ್ರಿಟಿಷ್ ಬ್ಯೂಟಿ ಪ್ರೆಟ್ಟಿ, ಯೂರೋಪಿಯನ್ ಲೇಡಿ, ಬಂಗಾರ ಕೂದಲ ಕಿನ್ನರಿ, ಹೊಂಗೂದಲ ಅಪ್ಸರೇ... ಈ ರೀತಿ ಬಣ್ಣನೆ ಸಹ ನಿಮಗೆ ಬರಲಿಲ್ಲವಾ ? ಅಸಹ್ಯ ಕಾಣ್ತೀನಂತೆ. ಈ ವಿಕಾರ ರೂಪಕ್ಕೆ ಸಾವಿರಾರು ರೂಪಾಯಿ ಚೆಲ್ತೀನಂತೆ..' ಎಂದು ಅಳತೊಡಗಿದಳು.

ಅವನಿಗೆ ಒಂದು ತರಹ ಅನುಕಂಪವಾಯಿತು. ನಿಜವಾಗಿ ತನ್ನ ಪ್ರೀತಿಗೆ ಹಂಬಲಿಸಿ ಸಾವಿರಾರು ರೂ.ಗಳು ಸುರಿದು, ಹೀಗೆ ಹುಚ್ಚುಚ್ಚು ಮಾಡಿಸಿಕೊಂಡು ಬಂದಿದ್ದಾಳೆ. ಅಪ್ಪಿ, ಚುಂಬಿಸಿ, ಸಂತೈಸಿದ. ಅವಳಿಗೆ ಉನ್ಮತ್ತವಾದ ಗಾಢ ಪ್ರಣಯಲಹರಿ ಇಷ್ಟವೆಂದವನಿಗೆ ಗೊತ್ತು. ತನ್ನ ಪ್ರಣಯ ಸರೋವರದ ಪ್ರೇಮನೌಕೆಯಲ್ಲಿ ಅವಳನ್ನು ತೇಲಿಸಿದ. ಸಮಯ ಉರುಳಿದ್ದೇ ಇಬ್ಬರಿಗೂ ತಿಳಿಯಲಿಲ್ಲ.

'ಜಯಾ ಡಾರ್ಲಿಂಗ್, ನಿಜವಾಗಲೂ ನನ್ನ ಮೆಚ್ಚುಗೆಗೆ ಅಷ್ಟು ಹಂಬಲಿಸ್ತಿಯಾ ?' ದಾಂಪತ್ಯ ಸರೋವರದಲ್ಲಿ ಮಿಂದು ಸಂತೃಪ್ತಳಾಗಿದ್ದ ಅವಳನ್ನು ಕೇಳಿದ.

'ನಾನು ಇಷ್ಟೆಲ್ಲಾ ಖರ್ಚುಮಾಡಿ ಹೊಸಜನ್ಮ ಪಡೆದಿದ್ದು ಸಾರ್ಥಕವಾಯ್ತು. ನಿಜಕ್ಕೂ ನೀವು ಲಹರಿ ಬಂದರೇ.. ಟೀನ್ ಏಜ್ ನಾಟಿ ಗೈ, ಐ ಯಾಮ್ ವೆರಿ ಹ್ಯಾಪಿ' ಎಂದಳು.

'ಹಾಗಿದ್ರೆ ಒಂದು ಮಾತು ಚಿನ್ನ. ಗಂಡನ್ನ ಮೆಚ್ಚಿಸಬೇಕು ಅನ್ನೋ ನಿನ್ನ ತೀವ್ರ ಹಂಬಲಕ್ಕೆ ನಾನು ಇಷ್ಟಪಟ್ಟೆ ಹೊರತು ಈ ವೇಷಕ್ಕಲ್ಲ. ನಾನು ಮನಸಾರ ಆಶಿಸೋ ರೂಪ ಬೇರೆ...' ಎಂದ. ಅವಳು ಹುಟ್ಟು ಗಂಟಿಕ್ಕಿ 'ಯಾವುದು ನೀವು ಮನಸಾರೆ ಆಶಿಸುವ ಆ ರೂಪಾ ?' ಎಂದಳು.

'ನೀನು ನನ್ನ ಮೆಚ್ಚಿಸಲಿಕ್ಕೆ ಇಷ್ಟು ಹಂಬಲಿಸ್ತಿ ಅಂತ ಗೊತ್ತಿದ್ರೆ ಹೇಳ್ತಿದ್ದೆ. ನಿನ್ನ ಈ ಬಾಬ್‌ಕಟ್, ಸ್ಲೀವ್‌ಲೆಸ್ ಬ್ಲೌಸ್, ಹೊಕ್ಕುಳ ಕೆಳಗಿನ ಸೀರೆ, ತುಟಿಗೆಂಪು, ಆ ಗಾಗಲ್ಸ್ ನನಗೆ ಬೇಸರ. ಜರಿ ಅಂಚಿನ ಮೈಸೂರು ಸಿಲ್ಕ್ ಸೀರೆ ಒಪ್ಪವಾಗಿ ಉಟ್ಟು, ಜರಿಯ ಅಂಚಿನ ಅದೇ ವರ್ಣದ ಕುಪ್ಪಸ... ವಾಲೆ ಜುಮುಕಿ, ಕೆನ್ನೆ ಸರಪಳಿ, ಕೊರಳಿಗೆ ನೆಕ್ಲೇಸ್, ಬಂಗಾರದ ಸರಗಳು, ಉದ್ದನಾದ ಜಡೆ ಹಾಕಿ ಮುಡಿತುಂಬಾ ಮಲ್ಲಿಗೆ ಮುಡಿದಾಗ, ಕಂಗಳಿಗೆ ಕಾಡಿಗೆ ಹಚ್ಚಿ, ಹಣೆಗೆ ಕೆಂಪಾದ ಕುಂಕುಮ ತಿಲಕವಿಟ್ಟಾಗ ಮೊದಲೇ ಚೆಲುವೆಯಾದ ನೀನು ಎಷ್ಟು ಸುಂದರವಾಗಿ ಕಾಣಬಹುದು ಎಂದು ಒಮ್ಮೊಮ್ಮೆ ಊಹೆ ಬರ್ತಿತ್ತು. ಆದರೆ ನನ್ನ ಮೆಚ್ಚಿಸಲು ನಿನ್ನ ವೇಷಭೂಷಣ ಸಹ ಬದಲಾಯಿಸಲು ಸಿದ್ಧಳಿದ್ದೀ ಅಂತ ನನಗೆ ಅರಿವಿರಲಿಲ್ಲ.

ನನ್ನ ಮೆಚ್ಚುಗೆಗೆ ಇಷ್ಟು ಬೆಲೆ ಇದೆ ಅಂತ ತಿಳಿದಮೇಲೆ ಇವತ್ತು ಧೈರ್ಯವಾಗಿ ಹೇಳ್ತಿದ್ದೀನಿ ನೋಡು' ಎಂದ.

ಅವಳು ಕೋಪದಿಂದ 'ನಾನು ಹಳ್ಳಿ ಗೌರಮ್ಮನಾಗಿ ದೇವಸ್ಥಾನದ ಜಾತ್ರೇಲಿ ಭಾಗವಹಿಸೋ ಹೆಂಗಸೂಂತ ತಿಳಿದುಕೊಂಡಿರಾ? ಅಥವಾ ಗೌರಿಪೂಜೆ ಮಾಡಿ ಮರದ ಬಾಗಿನ ಕೊಡೋ ಹಳೇಕಾಲದ ಮುತ್ತೈದೆ ಅನ್ಕೊಂಡ್ರಾ ? ನನ್ನ ಬೆಲೆ ನಿಮಗೆ ಗೊತ್ತಿದೆಯಾ? ಫಾರಿನ್ನಲ್ಲಿ ನಮ್ಮ ಪ್ರಾಡೆಕ್ಟ್‌ಗೆ ಮಾರ್ಕೆಟ್ ಕುದುರಿಸಲಿಕ್ಕೆ ಓಡಾಡುವಾಗ ಎಂಥೆಂಥಾ ದೊಡ್ಡ ಉದ್ಯಮಿಗಳನ್ನ ಭೇಟಿ ಆಗ್ತಿದ್ದೆ. ಒಬ್ಬ ಬ್ರಿಟಿಷ್ ಉದ್ಯಮಿ ಅಂತೂ ನನ್ನ ಮಾರ್ಕೆಟಿಂಗ್ ವ್ಯವಹಾರ ಚಾತುರ್ಯ ನನ್ನ ಹೈಸ್ಟಾಂಡರ್ಡ್ ಆಂಗ್ಲ ಮಾತುಗಾರಿಕೆ ನೋಡಿ- "ಮೇಡಂ, ನಮ್ಮ ಕಂಪನಿ ಸಲಹೆಗಾರ್ತಿಯಾಗಿ ಬನ್ನಿ, ವರ್ಷಕ್ಕೊಂದ್ಸಲ ಮೀಟಿಂಗ್ ಡಿಸ್‌ಕಸ್ಸಲ್ಲಿ ಬಂದು ಎಂಟು ದಿನ ಸಲಹೆ ಸೂಚನೆ ಹೊಸ ಐಡಿಯಾಸ್ ಬಿತ್ತರಿಸಿದರೆ ಸಾಕು. ಲಂಡನ್‌ಗೆ ಹೋಗಿ ಬರೋ ವಿಮಾನದ ಖರ್ಚು, ಎಂಟು ದಿನ ವಸತಿ ಹಾಗೂ ಇಪ್ಪತ್ತು ಸಾವಿರ ಪೌಂಡ್ ರಾಯಲ್ಟಿ ಕೊಡ್ತೀನಿ' ಅಂದ. ಸದ್ಯ! ನನ್ನ ಕಂಪನಿ ಮಾರ್ಕೆಟಿಂಗ್ ಕೆಲಸದ ಸುತ್ತಾಟವೆ ಸಾಕಾಗಿದೆ. ಈ ಭಾರತ, ಅಮೆರಿಕಾ ಓಡಾಟವೇ ಸಾಕಾಗಿದೆ. ಇನ್ನು ನಿಮ್ಮ ಕಂಪನಿ ಸಲಹೆಗಾರಳಾಗಿ ಎಲ್ಲಿ ಬರಲಿ ? ಎಂದೆ.'

'ಇನ್ನೊಂದು ಸ್ಟಾರ್ ಹೋಟೆಲ್ ಸತ್ಕಾರ ಕೂಟದಲ್ಲಿ ನನ್ನ ರೂಪ ನೋಡಿದ ಅಮೆರಿಕನ್ ಉದ್ಯಮಿ ಮೇಡಂ ನೀವು ಲಿಂಡಾ ಈವಿನ್ ಗಿಂತ ಬ್ಯೂಟಿ ಇದ್ದೀರಿ. ನಮ್ಮ ಕಂಪನಿ ಉತ್ಪನ್ನಕ್ಕೆ ರೂಪದರ್ಶಿಯಾಗಿ ಬರೋ ಹಾಗಿದ್ರೆ ವರ್ಷಕ್ಕೆ ಐವತ್ತು ಸಾವಿರ ಡಾಲರ್ ಕೊಡ್ತೀನಿ- ಅಂದ.

'ಬೇಡಿ, ನಾನು ಖ್ಯಾತ ಮಹಿಳಾ ಉದ್ಯಮಿ. ರೂಪದರ್ಶಿ ಕೆಲಸ ನನಗೆ ಒಗ್ಗದ ಹವ್ಯಾಸ' ಅಂದೆ.

'ಸಾರಿ ನಿಮ್ಮ ಅಪರಿಮಿತ ರೂಪ ನೋಡಿ ಕರೆದೆ ಅಂದ. ಅದೆಲ್ಲಾ ಏಕೆ ಹೇಳ್ತಿದ್ದೀನಿ ಅಂದರೆ ಖ್ಯಾತ ಮಹಿಳಾ ಉದ್ಯಮಿ ಆಗಿ, ನಾನು ಎದುರುಗೊಳ್ಳ ಬೇಕಾದ ಜನ ಏನು? ನಾನು ಅಮೆರಿಕಾದಲ್ಲಿ ಸುತ್ತಾಡಿದ ರಾಜ್ಯಗಳಾವುದು ? ಅಲ್ಲಿನ ವ್ಯವಹಾರ ಪಾರ್ಟಿ, ಕೂಟಗಳ ಬಗ್ಗೆ ನಿಮಗೆ ಗೊತ್ತಿದೆಯಾ? ಅಲ್ಲಿನ ಆ ಸಾಫಿಸ್ಟಿಕೇಟಡ್ ಜನಗಳ ನಡುವೆ ಹೇಗಿರಬೇಕೆಂಬ ಕಲ್ಪನೆ ಆದರೂ ಇದೆಯಾ? ಹಳ್ಳಿ ಗೌರಮ್ಮನ ಹಾಗೆ ಉದ್ದ ಜಡೆ ಹಾಕಿಕೊಂಡು, ಮುಡಿ ತುಂಬಾ ಮಲ್ಲಿಗೆ ಮುಡಿದು, ಕಣ್ಣಿಗೆ ಕಪ್ಪು ಹಚ್ಚಿ, ಹಣೆಗೆ ಕುಂಕುಮ ತಿಲಕ, ಕೈತುಂಬಾ ಬಳೆ, ಬೈತಲೆಗೆ ಸಿಂಧೂರ ಏಕೆ ಹೇಳಲಿಲ್ಲ. ನಿಮಗೇನು ನಿಮ್ಮ ಆಕಾಂಕ್ಷೆ ತಿಳಿಸಿ ಅಂದರೆ ಹಳ್ಳಿಗುಗ್ಗು ಇಟ್ಟ ಹಾಗೆ ಇರ್ತೀರಿ, ಬಾಯಲ್ಲಿ ಎಲೆ ಅಡಿಕೆ ಜಗೀತಾ ಇರಬೇಕೂಂತ ಸದ್ಯ

ಹೇಳಲಿಲ್ಲವಲ್ಲ' ಎಂದು ದೀರ್ಘ ಭಾಷಣ ಬಿಗಿದಳು.

ಅವನು ಸುಮ್ಮನಿದ್ದ. 'ನಿಮ್ಮ ಅಭಿರುಚಿ ಕೇಳ್ತ ಕೂತರೆ ತಲೆನೋವೇ ಬರತ್ತೆ. ಆರನೆ ಕ್ಲಾಸ್ ಓದಿದ ಹುಡುಗಿ ಅಥವಾ ಎಸ್ಸೆಲ್ಸಿ ಫೇಲಾದ ಒಬ್ಬ ಹುಡುಗಿ, ಮುಂದಿನ ಜನ್ಮದಲ್ಲಿ ನಿಮ್ಮ ಹೆಂಡತಿಯಾಗಲಿ ಅಂತ ಹರಸ್ತೀನಿ. ಅಥವಾ ಚಿಕ್ಕೋಳಾದ್ದರಿಂದ ಹರಸುವುದಿಲ್ಲ. ಹಾರೈಸ್ತೀನಿ. ಆಗ ಆ ಪೆದ್ದು ಹೆಂಡತಿಗೆ ಉದ್ದ ಜಡೆ ಹಾಕಿ, ಮಲ್ಲಿಗೆ ಮಾಲೆ ಮುಡಿಸಿ ಸಂತೋಷಪಡುವಿರಂತೆ.' ಅವಳ ವ್ಯಂಗ್ಯ, ಕುಹಕಕ್ಕೆ ಪ್ರತಿಕ್ರಿಯಿಸದೇ ಅವನು ಮೌನವನ್ನು ಆಶ್ರಯಿಸಿದ. ಅವನು ತನ್ನ ಮಾತಿನ ದಾಳಿಯಿಂದ ತೀವ್ರವಾಗಿ ನೊಂದಿರಬಹುದೆಂದು ಅವಳು ಕೊಂಚ ಜಾಗರೂಕಳಾದಳು.

'ರಾಜ್, ಇವತ್ತು ಸಂಜೆ ನನ್ನ ಜೊತೆ ನಮ್ಮ ಕಂಪನಿ ಮೀಟಿಂಗ್‌ಗೆ ಬನ್ನಿ. ಮೀಟಿಂಗ್ ಆದಮೇಲೆ ಒಂದು ಔತಣಕೂಟ ಇದೆ. ಈ ಕೂಟಕ್ಕೆ ನಮ್ಮ ಇಲ್ಲಿನ ಬ್ರಾಂಚಿನ ಡೈರೆಕ್ಟರ್ ಪತ್ನಿಯರು, ನಮ್ಮ ಉತ್ಪನ್ನ ಸಗಟಾಗಿ ಕೊಳ್ಳೋ ಕೆಲವು ಬೇರೆ ವ್ಯಾಪಾರಿ ಪ್ರತಿನಿಧಿಗಳ ಪತ್ನಿಯರು ಬರ್ತಾರೆ. ಅವರ ರೂಪ, ಹಾವಭಾವ, ಮಾಡ್ರನ್ ಅಲಂಕಾರಗಳನ್ನ ನೋಡಿದ್ರೆ ದಂಗಾಗ್ತೀರಿ. ಇಂಗ್ಲೆಂಡ್, ಅಮೆರಿಕಾದಿಂದ ಉದುರಿಬಿದ್ದ ಹಾಗೆ ಆಡ್ತಾರೆ. ಯಾರಿಗೂ ಭಾರತೀಯ ಸಂಸ್ಕೃತಿ, ಸೀರೆ ಬೇಕಾಗಿಲ್ಲ. ಬಗೆಬಗೆ ವಿನ್ಯಾಸದಲ್ಲಿ ಕತ್ತರಿಸಿದ ಕೂದಲು, ಬಗೆಬಗೆ ಬಾಬ್‌ಕಟ್‌ಗಳು... ಚೂಡಿದಾರ್ಸ್, ಗಾಗ್ರ ಚೂಲಿ, ಸ್ಕರ್ಟ್, ಶರ್ಟ್, ಜೀನ್ಸ್, ಟೀ ಶರ್ಟ್ ಈ ಗುಂಪಲ್ಲಿ ಸೀರೆ ಉಟ್ಕೋಳೋ ಮಹಾ ಪಾಪಿ. ನನ್ನ ಏಜಂಟ್ಸ್ ಮಿಸೆಸ್‌ಗಳೇ ಹಾಗಿದ್ದಮೇಲೆ ಅವರೆಲ್ಲರ ಮಾಲಕಿಯಾದ ನಾನು, ಅವರೆಲ್ಲರ ಕೇಂದ್ರವ್ಯಕ್ತಿಯಾದ ನಾನು ಎಲ್ಲರಿಗಿಂತ ಹೈಕ್ಲಾಸ್, ಮಾಡ್ರನ್ ಅಲಂಕಾರದಲ್ಲಿರಬೇಕೋ ಬೇಡವೋ... ಅದಕ್ಕಾಗಿ ಸಾವಿರಾರು ಖರ್ಚು ಮಾಡಿ, ಹೀಗೆ ಅಲಂಕರಿಸಿಕೊಂಡೆ' ಎಂದು ವಿವರಿಸಿದಳು.

'ಒಂದು ವರ್ಷ ಈ ಕೂದಲ ಹೊಳಪು ಹೀಗಿರತ್ತೆ, ಕ್ರಮೇಣ ಮಾಸಿ ಹೋಗತ್ತೆ. ಆಗ ಮತ್ತೆ ಕಪ್ಪು ಕೂದಲು ಮಾಡಿಸ್ಕೋಬಹುದು. ಒಂದು ವರ್ಷ ಈ ಬಣ್ಣ ರಿಮೂ ಮಾಡೋ ಹಾಗಿಲ್ಲ. ಬಲವಂತವಾಗಿ ರಾಸಾಯನಿಕಗಳ ಬಳಸಿ, ಮೂರು ದಿನ ಪ್ರಯತ್ನಿಸಿದರೇ ಬಣ್ಣ ತೆಗೆಯಬಹುದು. ಆದರೆ ಚರ್ಮದ ಆರೋಗ್ಯಕ್ಕೆ ಹಾನಿ ಅಂತ ಹೇಳಿ ಕಳಿಸಿದ್ದಾರೆ. ಮತ್ತೆ ಇದಕ್ಕಾಗಿ ಅಮೆರಿಕಾಕ್ಕೆ ಹೋಗಲಿಕ್ಕೆ ವೀಸಾ ಪಾಸ್‌ಪೋರ್ಟ್ ಎಲ್ಲಿ ಸಿಗತ್ತೆ? ಬರೋ ವರ್ಷ ಹೇಗಿದ್ರೂ ಅಮೆರಿಕಾಕ್ಕೆ ಹೋಗ್ತೀನಲ್ಲ. ಆಗ ಈ ಬಣ್ಣ ತೆಗೆಸಿ ಮತ್ತೆ ನನ್ನ ನ್ಯಾಚುರಲ್ ಕಲರ್ ಅಳವಡಿಸ್ಕೋತೀನಿ. ಒಂದು ವರ್ಷ ಸಹಿಸ್ಕೊಳ್ಳಿ' ಎಂದಳು.

ಅವನು ಬೇಸರದಿಂದ : 'ಈ ಕೂದಲು, ಈ ಅಲಂಕಾರ ಎಲ್ಲಾ ಸಹಿಸ್ಕೋತೀನಿ. ನಾಳೆ ಮುದುಕಿಯಾಗಿ, ನೀನು ಬಿಳಿಗೂದಲ, ಸುಕ್ಕುಮುಖದ ಹೆಂಗಸಾದರೂ ಸಹಿಸ್ತೀನಿ. ಗಂಡಹೆಂಡಿರ ಮಧ್ಯೆ ರೂಪದ ಆಕರ್ಷಣೆ ಕೆಲವು ದಿನ. ಮಾನಸಿಕವಾಗಿ ಒಬ್ಬರನ್ನೊಬ್ಬರು ಪ್ರೀತಿಸಿದರೇ, ಮನಸ್ಸು, ಹೃದಯ ಬೆರೆತರೆ ರೂಪದ್ದು ದೊಡ್ಡ ಪಾತ್ರವೇನಿಲ್ಲ' ಎಂದ.

'ನಾನು ಈ ಮಾತು ಒಪ್ಪಲ್ಲ. ಮುಪ್ಪು, ಕುರೂಪ, ರೋಗ, ಬಡತನ, ದಾರಿದ್ರ್ಯ ಎಲ್ಲಾ ನಾನು ದ್ವೇಷಿಸ್ತೀನಿ. ಮಾನವ ಜನ್ಮಕ್ಕಂಟಿದ ಈ ಶಾಪಗಳನ್ನೆಲ್ಲಾ ನಾನು ಹಣದ ಬಲದಿಂದ ನಿವಾರಿಸಿಕೊಂಡು ಬದುಕಬೇಕೂಂತಿದ್ದೀನಿ' ಎಂದಳು.

ಅವನು ವ್ಯಂಗ್ಯವಾಗಿ 'ಹಣದ ಬಲದಿಂದ ನೀನೊಬ್ಬ ಸೂಪರ್ ಲೇಡಿಯಾಗು, ದೇವತೆಯಾಗು, ಆದರೆ ಗಂಡನ್ನ ಮೆಚ್ಚಿಸಲಿಕ್ಕೆ ಈ ಅಲಂಕಾರ ಎಂಬ ಹಿಪಾಕ್ರಸಿ ಬೇಡ. ನಿನ್ನ ಹೈ ಸೊಸೈಟಿ ಲೈಫಿಗೆ ಈ ಅಲಂಕಾರ ಬೇಕೆನಿಸಿತು, ಮಾಡಿಸ್ಕೊಂಡೆ. ನಿನ್ನ ಈ ಪಾರ್ಟಿ ಕೂಟಗಳ ಮಾಡರ್ನ್ ಹೆಂಗೆಳೆಯರ ಮಧ್ಯೆ ಇನ್ನೂ ಹೈಲೆವಲ್ ಮಾಡರ್ನ್ ಆಗಿ ಮಿಂಚಬೇಕೂಂತ ಸಾವಿರಾರು ರೂ. ಸುರಿದು, ಈ ಅಲಂಕಾರ ಮಾಡಿಸಿಕೊಂಡಿ. ಇದು ನಿಜ, ಆದರೆ ನಿಮ್ಮನ್ನ ಮೆಚ್ಚಿಸಲಿಕ್ಕಾಗಿ ಹೀಗೆಲ್ಲಾ ತಪಸ್ಸು ಮಾಡಬೇಕಾಯಿತು, ಈಗಲು ನೀವು ಮೆಚ್ಚದಿದ್ರೆ ನನ್ನ ತಪಸ್ಸು ವಿಫಲವಾಯ್ತು ಅನ್ನೋ ಕೃತಕ ಕಣ್ಣೀರು, ಹಿಪಾಕ್ರಸಿ ನಾನು ದ್ವೇಷಿಸ್ತೀನಿ. ನನಗೂ ನನ್ನದೇ ಆದ ಕನಸುಗಳಿವೆ, ಅದನ್ನ ನಾನು ನಿನ್ಮೇಲೆ ಎಂದಿಗೂ ಹೇರಲಾರೆ , ಹೇರಿದರೂ ನೀನು ನನ್ನ ಅಭಿರುಚಿಗೆ ಅನುಸಾರವಾಗಿ ನಡೆದುಕೊಳ್ಳಲಾರೆ' ಎಂದ.

'ನಿಮ್ಮ ಮಧ್ಯಮ ವರ್ಗದವರ ಕನಸುಗಳ ಹಣೆಬರಹ ನನಗೆ ಗೊತ್ತಿಲ್ಲವಾ? ನಿಮ್ಮಮ್ಮನ ಕಾಲಿಗೆ ಅಯೊಡೆಕ್ಸ್ ಉಜ್ಜುತ್ತ, ನಿಮ್ಮ ಜೊತೆ ದೇವಸ್ಥಾನಗಳಿಗೆ ತಿರುಗಾಡುತ್ತ ನಿಮ್ಮ ಹೆಸರು, ನಾಮನಕ್ಷತ್ರ ಹೇಳಿ ದೇವರಿಗೆ ಅರ್ಚನೆ ಮಾಡಿಸ್ತ, ಆ ಕುಂಕುಮ ಪ್ರಸಾದ ಹಣೆಗಿಟ್ಕೊಳ್ಳೋದರಲ್ಲಿ ಧನ್ಯತೆ ಕಾಣ್ತಾ ಬದುಕು ಅಂತೀರಿ. ಹೆಂಡತಿ ಅಂದರೆ ಗಂಡನ ಪಾದದಾಸಿ ಹಾಗೆ ಬಾಳಬೇಕು. ತನ್ನ ಆಸೆ ಅಭಿರುಚಿ, ಎಲ್ಲಾ ಬಲಿ ಕೊಡಬೇಕು, ಇದು ನಿಮ್ಮ ಅಪೇಕ್ಷೆ. ನಿಮ್ಮ ಯೋಗ್ಯತೆಗೆ ತಕ್ಕಂತಹ ಒಂದು ಮಧ್ಯಮವರ್ಗದ ಹುಡುಗಿ ಗಂಟು ಬಿದ್ದಿದ್ರೆ, ನೀವು ಹೇಳಿದ ಹಾಗೆ ಕೇಳ್ಕೊಂಡು ಬಿದ್ದಿರೋಳು. ಆದರೆ ಇಂಥಾ ದಬ್ಬಾಳಿಕೆ ಸ್ವಭಾವ ಇದ್ದೋರು ಪ್ರೀತಿ, ಪ್ರೇಮಾ ಅಂತ ನಂಬಿಸಿ, ಯೋಗ್ಯತೆಗೆ ಮೀರಿದ ಹೆಣ್ಣಾದ ನನ್ನನ್ಯಾಕೆ ಮದುವೆ ಆದಿರಿ?'

'ಹೌದು! ದೊಡ್ಡ ತಪ್ಪು ಮಾಡಿದ್ದೀನಿ. ಆಗ ನಾನು ಬೇಡಾಂತ ನಿರಾಕರಿಸ ಬಹುದಿತ್ತು, ಮಾಡಲಿಲ್ಲ. ಈಗ...?' ಎಂದು ಹೇಳಿ ನಿಟ್ಟುಸಿರುಬಿಟ್ಟ ರಾಜಸಿಂಹ.

'ಹೂಂ ಪಾಪಾ, ಈಗ ಗಂಟಲಲ್ಲಿನ ಬಿಸಿತುಪ್ಪ ಆಗಿದ್ದೇನೆ ಅಲ್ಲವಾ?'

'ಬರಿ ಬಿಸಿ ತುಪ್ಪವಲ್ಲ, ಗಂಟಲಲ್ಲಿ ಸಿಕ್ಕಿಹಾಕಿಕೊಂಡ ಬೆಂಕಿ ಉಂಡೆ.'

'ಪ್ಲೀಸ್! ಗೆಟ್‌ಔಟ್, ಇಲ್ಲೇ ಪಕ್ಕದಲ್ಲಿ ಇನ್ನೊಂದು ಬೆಡ್ ರೂಂ ಇದೆ. ನನಗೆ ಮನಶ್ಶಾಂತಿ ಬೇಕು' ಎಂದು ಕಿರುಚಿದಳು ಜಯಶ್ರೀ.

'ನನಗೂ ಶಾಂತಿ ಬೇಕು, ನಿನ್ನ ಆಜ್ಞೆ ಪಾಲಿಸ್ತೀನಿ' ಎಂದು ಬಿರುಸಾಗಿ ಹೆಜ್ಜೆ ಹಾಕಿ ಹೊರಬಂದ ರಾಜಸಿಂಹ.

ಅಂದವಾಗಿ ಅಲಂಕರಿಸಿದ ಹಜಾರದ ಆ ಬದಿಗೆ ಇನ್ನೊಂದು ಬೆಡ್‌ರೂಮ್ ಇತ್ತು. ಬಾಗಿಲು ತೆರೆದು, ಪರದೆ ತಳ್ಳಿ ಒಳಬಂದು ಮಂಚದ ಮೇಲೆ ಮಲಗಿದ. ಮೃದುವಾದ ಹಾಸಿಗೆ, ಯಾವುದೋ ಸುಗಂಧ ಸಿಂಪಡಿಸಿದ ಏರ್ ಫ್ರೆಷನರ್, ಸುಗಂಧಿತ ತಂಗಾಳಿ, ಅಲ್ಲೇ ಫ್ರಿಜ್‌ನಲ್ಲಿ ಇಟ್ಟ ತಂಪು ಪಾನೀಯ ಕುಡಿದಾಗಲೂ ಮನಸ್ಸು ತಂಪಾಗಲಿಲ್ಲ. ಈ ವಿರಸ ದಾಂಪತ್ಯಕ್ಕೆ ಕೊನೆ ಎಂದು ಎನಿಸಿತು.

ದುಗುಡದಿಂದ ತುಂಬಿದ ಮನಸ್ಸಿಗೆ ಮಧ್ಯಾಹ್ನದ ಊಟವೂ ಬೇಕು ಎನಿಸಲಿಲ್ಲ. ಹಾಗೆಯೆ ಆಯಾಸಕ್ಕೆ ನಿದ್ರೆ ಬಂತು. ನಾಲ್ಕು ಗಂಟೆಗೆ ಹೊರಗಡೆ ಬಾಗಿಲು ಸದ್ದಾದಾಗ ಹೊರಗೆ ಬಂದ.

'ಡಿಸ್ಟರ್ಬ್ ಮಾಡಿದ್ದಕ್ಕೆ ಕ್ಷಮಿಸಿ, ಸಾರ್. ಸಾಹೇಬರು ಊಟ ಮಾಡಿಲ್ಲ ನೋಡ್ಕೋ ಅಂತ ಮೇಮ್‌ಸಾಬ್ ಹೇಳಿದರು. ನಿಮಗೆ ಶುದ್ಧ ಮದ್ರಾಸಿ ಊಟ ಬೇಕಲ್ವಾ? ಡೈನಿಂಗ್ ಹಾಲಲ್ಲಿ ಟೇಬಲ್ ಮೇಲೆ ರೆಡಿ ಇದೆ, ಬನ್ನಿ' ಎಂದು ಕರೆದೊಯ್ದಳು, ಲಿಜಿ. ರುಚಿಕರವಾದ ಊಟ....ಹಸಿವಿನಿಂದ ದಣಿದ ದೇಹಕ್ಕೆ ತೃಪ್ತಿ ನೀಡಿತು. ಮತ್ತೆ ಕೋಣೆಗೆ ಹೋಗಿ ಮಲಗಿದ.

ಫೋನ್ ರಿಂಗಾಯಿತು. ರಿಸೀವರ್ ಎತ್ತಿಕೊಂಡ.

'ನಾನು ಇದೇ ಸೂಟಿನ ಪಕ್ಕದ ಕೋಣೆಯಿಂದ ಮಾತಾಡ್ತ ಇದ್ದೀನಿ. ಆರು ಗಂಟೆಗೆ ಪಾರ್ಟಿ ಇದೆ, ಬರ್ತೀರಾ?' ಎಂದಳು ಜಯಶ್ರೀ.

'ಸಾರಿ, ನಾನು ಬರಲ್ಲಾ...' ಎಂದ.

'ನನ್ನ ಮನಶ್ಶಾಂತಿ ಹಾಳು ಮಾಡೋದಲ್ಲದೇ ನೀವೂ ಉದ್ವಿಗ್ನರಾಗ್ತೀರಿ. ನಮ್ಮ ಈ ವಿರಸ ದಾಂಪತ್ಯಕ್ಕೆ ಕೊನೆ ಎಂದು ರಾಜ್?'

'ವಿಚ್ಛೇದನಕ್ಕೆ ನೀನು ಮನಸ್ಸು ಮಾಡಿದಾಗ.....?'

'ನನ್ನಿಂದ ವಿಚ್ಛೇದನ ಪಡೆದ ಮೇಲೆ ನೀವು ಸುಖವಾಗಿ ಇರ್ತೀರಾ?' ಎಂದಳು.

'ಸುಖ ನನ್ನ ಹಣೇಲಿ ಬರೆದಿಲ್ಲ, ಆದರೆ ಮನಶ್ಶಾಂತಿ ಸಿಗಬಹುದು' ಎಂದ.

ಅವಳು ಕೋಪದಿಂದ 'ಎಂಥಾ ಕ್ರೂರಿ ನೀವು ! ನಿಮ್ಮ ಮನಶ್ಯಾಂತಿಗಾಗಿ ನನ್ನ ಸಮಾಜದೆದುರು ವಿಚ್ಛೇದಿತ ಹೆಂಗಸು ಅಂತ ತೋರಿಸಿ ನನ್ನ ಪ್ರೆಸ್ಟೀಜ್ ಹಾಳು ಮಾಡ್ತೀರಾ?' ಎಂದಳು.

'ಪ್ರೆಸ್ಟೀಜ್‌ಗಾಗಿ ಈ ವಿರಸದ ಬೆಂಕಿಹೊಳೆಯಲ್ಲೇ ಈಜಾಡೋಣಾ ಬಿಡು....' ಎಂದ ರಾಜ್.

ಅವಳು ರಿಸೀವರ್ ಕುಕ್ಕಿದ ಸದ್ದಾಯಿತು. ಜಗಳದಲ್ಲಿ ಜಯ ಪಡೆದಾಗಲೇ ಅವನ ಮನಸ್ಸಿಗೆ ನೆಮ್ಮದಿ. ಹೊಟ್ಟೆ ತುಂಬಿ ತಣಿದಿತ್ತು, ದಟ್ಟವಾದ ನಿದ್ರೆ ಬಂದಿತು.

ಮೃದುವಾದ ತೋಳುಗಳು ತನ್ನನ್ನು ಬಳಿಸಿ... ಕೆನ್ನೆತುಂಬಾ ಚುಂಬನದ ದಾಳಿ ನಡೆಸಿದಾಗ ಅವನು ಕಣ್ತೆರೆದ. 'ರಾಜ್... ಹತ್ತು ಗಂಟೆ, ನಾನು ಮೀಟಿಂಗ್ ಮುಗಿಸಿ ಬಂದು ಎರಡು ಸಲ ಫೋನ್ ಮಾಡಿದೆ. ಏನು ಅಂಥಾ ಗಾಢನಿದ್ರೆ, ಏನಾದರೂ ಡ್ರಗ್ಸ್ ತಗೊಂಡ್ರೇನೋಂತ ನನಗೆ ಭಯವಾಯಿತು' ಎಂದಳು ಜಯಶ್ರೀ.

'ನಿನ್ನ ಅಪ್ಪಣೆಯಿಲ್ಲದೆ ಖಂಡಿತ ಆತ್ಮಹತ್ಯೆ ಮಾಡಿಕೊಳ್ಳಲ್ಲ' ಎಂದ.

ಸ್ವೀಟ್ ಸ್ಕ್ಯಾಂಡ್ರಲ್ ! ನೀವೆಂಥಾ ಕಟುಕರು. ಎಂಥೆಂಥಾ ಮಾತಾಡಿ, ನನ್ನ ನೋಯಿಸ್ತೀರಿ. ಏಳಿ, ಡೈನಿಂಗ್ ಹಾಲ್‌ಗೆ ಹೋಗಿ ಊಟ ಮಾಡಿಬರೋಣ' ಎಂದಳು.

ಊಟಗೀಟಾ ಏನು ಬೇಕಾಗಿಲ್ಲ ಮ್ಯಾಡಮ್, ನಿಮ್ಮ ಹೊಂಗೂದಲ, ಗುಲಾಬಿ ಮುಖ, ಹಸಿರು ಕಂಗಳು ನೋಡೇ ಹೊಟ್ಟೆ ತುಂಬಿದೆ' ಎಂದ.

'ಏಳಿ ಪ್ಲೀಸ್ ! ನಾಳೆ ನಿಮ್ಮ ಮುದ್ದು ಚಿನ್ನೀನ ನೋಡಿ ಬರಬೇಕೋ ಬೇಡವೋ...?' ಎಂದಳು.

'ನಾಳಿನ ಅಪಾಯಿಂಟ್‌ಮೆಂಟ್ ಹೇಳು, ನಾನು ಬಂದಿರೋದೇ ಚಿನ್ನೀನ ನೋಡಲಿಕ್ಕೆ. ನನ್ನ ಮುದ್ದು ಮಗಳನ್ನ ಭೇಟಿ ಮಾಡಿಸಿದ್ರೆ ನೂರು ವಿರಸ ಮರೆಯಬಲ್ಲೆ' ಎಂದ.

'ನಾಳೆ ಒಂಬತ್ತಕ್ಕೆ ಹೋಗೋದು, ಒಂದು ಗಂಟೆ ವಿಸಿಟರ್ಸ್ ರೂಮಲ್ಲಿ ಅಥವಾ ತೋಟದಲ್ಲಿ ಅವಳೊಡನೆ ಇದ್ದು ಬರುವುದು' ಎಂದಳು.

'ಸರಿ ಕೈ ಕಾಲು ಮುಖ ತೊಳೆದು ಬರ್ತೇನೆ, ಡೈನಿಂಗ್ ಹಾಲಿಗೆ ಹೋಗಿ ಬರೋಣಾ....' ಎಂದ.

ಅವನು ಕೈಕಾಲು ಮುಖ ತೊಳೆದು ಬಂದಾಗ ಅವಳು 'ಪ್ರತಿಸಲ ಗಂಡ ಹೆಂಡ್ತೀಗೆ ವಿರಸ ಬಂದಾಗ ಗಂಡ ಬಂದು, ಹೆಂಡ್ತೀನ್ನ ರಮಿಸಿ, ರಾಜಿಯಾಗ್ತಾನೇಂತ ಓದಿದ್ದೀನಿ. ಆದರೆ ನಮ್ಮ ದಾಂಪತ್ಯ ವಿಚಿತ್ರ. ಪ್ರತಿಬಾರಿ ನಾನೇ ಬಂದು ರಾಜಿ ಆಗ್ತೀನಿ. ನಾನೇ ರಮಿಸ್ತೀನಿ. ನನ್ನಂಥಾ ಹೈಲೆವೆಲ್ ಹೆಣ್ಣನ್ನ ನಿಮ್ಮ ಮೋಹದ

ಮೋಡಿಯಲ್ಲಿ ಕಟ್ಟಿ ಹಾಕಿದ ಸೂಪರ್‌ಮ್ಯಾನ್ ನೀವೂಂತ ನಿಮ್ಮ ಬಗ್ಗೆ ಒಮ್ಮೊಮ್ಮೆ ಹೆಮ್ಮೆಯೂ ಆಗತ್ತೆ' ಎಂದಳು.

ಮುಖಕ್ಕೆ ತೆಳುವಾಗಿ ಪೌಡರ್ ಸಿಂಪಡಿಸಿ, ಪಫ್‌ನಿಂದ ಮುಖ ಸವರಿಕೊಂಡು, ಕ್ರಾಪ್ ಬಾಚಿಕೊಂಡು ಡೈನಿಂಗ್ ಹಾಲಿಗೆ ಬಂದ. ಇಬ್ಬರೂ ಊಟ ಮಾಡಿದರು.

'ಪಾರ್ಟೀಲಿ ಊಟಾ ಮಾಡಲಿಲ್ವಾ ನೀನು?'

'ಔತಣಕೂಟದಲ್ಲಿ ಭಾಗವಹಿಸಲು ಮನಸ್ಸಾಗಲಿಲ್ಲ. ಮನದಲ್ಲಿ ದುಗುಡ ತುಂಬಿತ್ತು. ಮೊದಲು ಎರಡು ಮೂರು ತಿಂಗಳ ಅಗಲಿಕೆ ನಂತರ ಒಂದಾದಾಗ ಪುನರ್ ಮಿಲನದ ಸವಿ ಹಿತವಾಗಿರ್‍ತಿತ್ತು. ಕೆಲವು ದಿನದ ನಂತರ ವಿರಸದ ಕರಹೊಗೆ ಚಾಚಿಕೊಳ್ತ ಇತ್ತು. ಆದರೆ ಈಗ....? ಎರಡೂವರೆ ತಿಂಗಳ ನಂತರ ಭೇಟಿಯಾದ ಮೊದಲ ದಿನವೇ ಹೀಗಾದರೆ ಹೇಗೆ? ಈ ವಿರಸದಲ್ಲಿ ನನ್ನ ತಪ್ಪಾವುದೂಂತ ಆತ್ಮಾವಲೋಕನ ಮಾಡಿಕೊಳ್ತಿದ್ದೀನಿ' ಎಂದಳು ಜಯಶ್ರೀ. ಊಟ ಮುಗಿಸಿ ಅವನು ರೂಮಿಗೆ ಬಂದಾಗ 'ನಿನ್ನ ಆತ್ಮಸಾಕ್ಷಿ ಏನು ಹೇಳತ್ತೇ....'

'ನಾನು ನಿಮ್ಮನ್ನ ತುಂಬಾ ಪ್ರೀತಿಸ್ತೀನಿ. ನಿಮ್ಮಿಂದ ಅಷ್ಟೇ ಪ್ರೀತಿ ಮೆಚ್ಚುಗೆ ಬಯಸ್ತೀನಿ. ಸಿಗದಿದ್ದಾಗ ಹತಾಶಳಾಗಿ ಜಗಳ ಕಾಯ್ತೀನಿ. ಇದೇ ಕಾರಣ ಅನಿಸತ್ತೆ.'

'ಮುಗ್ಧಳಾಗಿ ಪ್ರೀತಿಸಿ ಬಂದ ಹೆಣ್ಣಿಗೆ ಮೋಸ ಮಾಡೋ ಅಧಮ ನಾನಲ್ಲ ಜಯಾ...? ನಿನ್ನ ಪ್ರೀತಿಯ ಪರಿಯೆ ನನಗೆ ಅರ್ಥವಾಗಲ್ಲ. ಏಕಾಗಿ ನನ್ನನ್ನ ಸಿಂಬಳದೊಳಗಿನ ನೊಣದ ಹಾಗೆ ಆಟವಾಡಿಸ್ತಿ ಅಂತ ಒಮ್ಮೊಮ್ಮೆ ಅಚ್ಚರಿ ಆಗತ್ತೆ. ಬಿಡುಗಡೆಯೂ ಇಲ್ಲ. ನಿಜವಾದ ಪ್ರೀತಿ ಪ್ರೇಮದ ಕ್ಷೀರ ಶರಧಿಯು ಅಲ್ಲ, ಹೀಗಾಗಿದೆ ನಮ್ಮ ದಾಂಪತ್ಯ ಜೀವನ.'

'ಎಷ್ಟು ಕಟುವಾದ ಮಾತುಗಳ ಬಳಸ್ತೀರಿ, ಆಗ ನಾನು ಅಂದರೆ ನಿಮ್ಮ ಗಂಟಲಲ್ಲಿ ಸಿಕ್ಕಿದ ಬೆಂಕಿಯ ಚೆಂಡು ಅಂದಿರಿ. ಈಗ ನಮ್ಮ ದಾಂಪತ್ಯ ಜೀವನ ಅಂದರೆ ಸಿಂಬಳದಲ್ಲಿ ಸಿಕ್ಕಿ ಹಾಕಿಕೊಂಡ ನೊಣದ ಹಾಗೆ ತೊಳಲಾಟ ಅಂದ್ರಿ. ನಿಜವಾಗಿ ದಾರಿದ್ರ್ಯದಲ್ಲಿ ಸಿಕ್ಕಿ ಹಾಕಿಕೊಂಡು ನರಳಾಡ್ತಿರೋ ಇಲ್ಲಿನ ಕೆಲವು ಸ್ಲಮ್ ಏರಿಯ ಜನಾಂಗವನ್ನ ತೋರಿಸ್ತೀನಿ. ರೋಗಿಷ್ಟ ಹೆಂಡತಿ, ಕುರೂಪಿ ಹೆಂಡತಿ, ಹಾದರಗಿತ್ತಿ ಮುಂತಾದ ಹೆಂಡತಿಯರನ್ನ ಕಟ್ಕೊಂಡು ತೊಳಲ್ತಿರೋರನ್ನ ತೋರಿಸ್ತೀನಿ. ಆಗ ನಿಮಗೆ ಬದುಕು ಏನು ಕೊಟ್ಟಿದೇಂತ ಅರ್ಥವಾಗುತ್ತೆ. ನೀವು ಅದೃಷ್ಟಶಾಲಿ ರಾಜ್! ಅತ್ಯಂತ ಸುಂದರಿ, ಅಪರಿಮಿತ ಶ್ರೀಮಂತೆ, ನಿಮ್ಮೆಲ್ಲಾ ತಿರಸ್ಕಾರದ ಮಾತು ಸಹಿಸಿದರೂ....ನಿಮ್ಮ ತೋಳಲ್ಲೇ ಸುಖ ಕಾಣಬೇಕೂಂತ ಮತ್ತೆ ಮತ್ತೆ ಹಂಬಲಿಸಿಬರೋ ನನ್ನಂಥ ಹೆಂಡ್ತೀನ್ನ ಪಡೆದಿದ್ದೀರಿ.'

ಅವಳ ತೋಳ ಬಿಗಿತದಲ್ಲಿ ಬಂಧಿಯಾದ ಅವನೇನೂ ಉತ್ತರಿಸಲಿಲ್ಲ. ಅವನ

ಮನಸ್ಸಿಗೂ ಬಹು ಹೊತ್ತಿನವರೆಗೆ ಆ ಪ್ರಶ್ನೆ ಕಾಡಿತು. ಮಧ್ಯಾಹ್ನವೆಲ್ಲಾ ನಿದ್ರಿಸಿದ್ದರಿಂದ ರಾತ್ರಿ ಎರಡು ಗಂಟೆಯವರೆಗೆ ನಿದ್ರೆ ಬರಲಿಲ್ಲ, ಮುಗ್ಧ ಹಸುಳೆಯಂತೇ ತನ್ನ ಪಕ್ಕದಲ್ಲಿ ನಿದ್ರಿಸುವ ಈ ಚೆಲುವೆ ನಿಜಕ್ಕೂ ನಿರಪರಾಧಿಯೇ? ಅವಳ ಪ್ರೀತಿಯ ಹಂಬಲಕ್ಕೆ ತಾನು ಕಿಚ್ಚು ಹಚ್ಚಿ ಅವಳನ್ನು ನಿರಾಶೆಗೆ ದೂಡುತ್ತಿರುವೆನೆ ? ಇಷ್ಟೆಲ್ಲಾ ವಿರಸದ ನಡುವೆಯೂ, ಅವಳು ತನ್ನನ್ನೆ ಕಚ್ಚಿ ಕೊಂಡಿರುವ ಕಾರಣ ಏನು? ಅವಳು ಮನಸ್ಸು ಮಾಡಿದರೆ ವಿಚ್ಛೇದಿತಳಾದ ಅವಳಿಗೆ ಈ ವಯಸ್ಸಿನಲ್ಲೂ ಹಾತೊರೆದು ವಿವಾಹವಾಗುವ ಒಬ್ಬ ಶ್ರೀಮಂತ ಸಿಗುತ್ತಾನೆ. ಆದರೂ ತನಗಾಗಿ ಏಕೆ ಅವಳು ಕಚ್ಚಿಕೊಂಡಿದ್ದಾಳೆ ಎಂಬ ಭಾವನೆಯಿಂದ ಅವನ ಮನಸ್ಸು ಕೊಂಚ ಮೃದುವಾಗುತ್ತಿತ್ತು. ಆದರೆ ಅವಳ ಈ ಎಲ್ಲಾ ವರ್ತನೆಗೂ... ಒಂದು ಪ್ರಬಲ ಕಾರಣವಿದೆಯೆಂದು ಅವನಿಗೆ ಖಂಡಿತ ಗೊತ್ತಿರಲಿಲ್ಲ. ಆ ಕಾರಣ ತಿಳಿದಾಗ ಅವಳ ಪ್ರೀತಿ ಕಪಟವೆಂದು ಅವಳು ಧನದಾಹದ ರಾಕ್ಷಸಿ ಎಂದು ಅವನಿಗೆ ಖಚಿತವಾಗುತ್ತಿತ್ತು. ಆದರೆ ಪುಣ್ಯಕ್ಕೆ ಎಲ್ಲೋ ಅಮೆರಿಕಾದಲ್ಲಿರುವ ಮಾವನ ವಿಲ್ಲಿನಲ್ಲಿ ರಹಸ್ಯವಾಗಿಟ್ಟ ಆ ಕಾರಣ ಅವನಿಗೆ ಸದ್ಯಕ್ಕೆ ಗೊತ್ತಾಗದಂತೆ ಎಚ್ಚರ ವಹಿಸಿದ್ದಳು. ಅವನದು ನಿರ್ಮಲ ಹೃದಯ. ಅವಳದು ಕಪಟ ಹೃದಯ.

ಬೆಳಗ್ಗೆ ಅವಳು ಆರಕ್ಕೆ ಎದ್ದು ಕುಳಿತು ಅವನ ಮುಖ ದಿಟ್ಟಿಸತೊಡಗಿದಳು. ಮೂರು ಗಂಟೆಯ ಮೇಲೆ ನಿದ್ರೆ ಹತ್ತಿದ ಅವನು ಈಗ ಗಾಢ ನಿದ್ರೆಯಲ್ಲಿದ್ದ.

ರ್‍ಯಾಸ್ಕಲ್ ! ನಾನು ನಿನ್ನ ಗಂಟಲಲ್ಲಿ ಸಿಕ್ಕಿದ ಬೆಂಕಿಯ ಉಂಡೆಯೇ ? ನಮ್ಮ ದಾಂಪತ್ಯ ಜೀವನವೆಂಬುದು ಸಿಂಬಳವೇ? ಅದರಲ್ಲಿ ಸಿಕ್ಕಿಹಾಕಿಕೊಂಡು ತೊಳಲಾಡುತ್ತಿರುವ ನೊಣವೇ ನೀನು....? ನಿನಗೆ ಕನ್ನಡ ಸಾಹಿತ್ಯ ಪರಿಚಯ ಮಾಡಿಸಿದ್ದು ಸಾರ್ಥಕವಾಯಿತು ಎಂದುಕೊಂಡಳು ಜಯಶ್ರೀ.

ಮದುವೆಯಾದ ಹೊಸತರಲ್ಲಿ ತನ್ನ ಎಷ್ಟು ಆರಾಧಿಸುತ್ತ ಇದ್ದ. ಗ್ರಾಮಸಿಂಹ ಎಂದು ಅವರಮ್ಮ ಅಂದರೆ ಏನೆಂದು ಒಮ್ಮೆ ಕೇಳಿದ. ಮನೆಯಲ್ಲಿ ತುಂಬಿದ ಕನ್ನಡ ಲೈಬ್ರರಿ ನಿಘಂಟು ತೋರಿಸಿದಳು. ಆಗ ಅನೇಕ ಪುಸ್ತಕ ಓದಲಾರಂಭಿಸಿದ. ಇಬ್ಬರೂ ಚರ್ಚಿಸುತ್ತಿದ್ದರು.

ಶ್ರೀಮಂತಳಾದರೂ ಆಳವಾದ ಸಾಹಿತ್ಯಾಭಿರುಚಿ ಇದೆ. ಕಾಮರ್ಸ್ ಸ್ಟೂಡೆಂಟಾದರೂ, ಕನ್ನಡ ಸಾಹಿತ್ಯದ ಆರಾಧಕಿ ಎಂದು ಗೆಳತಿಯರು ಪ್ರಶಂಸಿಸ್ತಾರೆ. 'ಅದೇನೋ ದಿನಕ್ಕೆ ಒಂದು ಕಾದಂಬರಿ ಓದದಿದ್ದರೆ ನಿದ್ರೆ ಬರಲ್ಲ ನಂಗೆ' ಅಂತಿದ್ದಳು.

ತನ್ನಿಂದಲೇ ತಯಾರಾಗಿ ತನಗೆ ಉಪಮಾನ, ಉಪಮೇಯ ಬಳಸಿ ಅಪಮಾನಿಸುತ್ತಾನೆ. ಇರಲಿ, ತಂದೆಯ ಆ ವಿಲ್ಲಿನ ಕಾರಣ ನಿಬಂಧನೆ ಒಂದಿಲ್ಲ

ದಿದ್ದರೇ ಇವನನ್ನು ಎಂದೋ ಡೈವೋರ್ಸ್ ಮಾಡಬಹುದಿತ್ತು. ಆ ಗುಟ್ಟು ಇವನಿಗೆಂದೂ ತಿಳಿಯಬಾರದು. ತಿಳಿದರೆ ಮತ್ತಷ್ಟು ಕಾಡಿಸುತ್ತಾನೆ. ತಾನೇ ಸೋತಂತೆ ನಟಿಸಿ ಪ್ರೀತಿಸಿದಂತೆ ನಟಿಸಿ, ತನ್ನ ದಾಂಪತ್ಯ ಜೀವನ ಕಾಪಾಡಿಕೊಳ್ಳಲೇಬೇಕಿದೆ. ಯೋಚಿಸುತ್ತ ನಿಟ್ಟುಸಿರುಬಿಟ್ಟಳು.

'ಇರಲಿ ರ್‍ಯಾಸ್ಕಲ್, ನಿನ್ನೆ ನನ್ನ ಮನಸ್ಸು ಎಷ್ಟು ನೋಯಿಸಿದೆ. ನನ್ನನ್ನು ಬೆಂಕಿಯ ಚೆಂಡು ಎಂದೆಯಲ್ಲವೆ ? ಈ ದಿನ ನಿನ್ನ ಮಗಳನ್ನು ನೋಡಲು ಬಾ... ನಿನ್ನ ಮನಸ್ಸು ಒಡೆದು ಚೂರಾಗುತ್ತದೆ. ಆಗ ಶಾಂತಿ ಅರಸಲು ನನ್ನ ಬಳಿಯೇ ಬರಬೇಕು ನೀನು' ಎಂದು ಮನದಲ್ಲೇ ಅಂದುಕೊಂಡಳು.

ಅವಳ ಕಣ್ಣಿಂದ ಕಿಡಿಗಳು ಹಾರುತ್ತಿದ್ದವು. ಆದರೆ ನಿಶ್ಚಿಂತನಾಗಿ ಮಲಗಿ ನಿದ್ರಿಸುತ್ತಿದ್ದ ರಾಜಸಿಂಹನಿಗೆ ಇದರ ಅರಿವಿರಲಿಲ್ಲ. ಬೆಳಗ್ಗೆ ಎಂಟಕ್ಕೆ ಅವನಿಗೆ ಎಚ್ಚರವಾಯಿತು. ಅವಳು ಕನ್ನಡಿಯ ಮುಂದೆ ನಿಂತು ಅಲಂಕರಿಸಿಕೊಳ್ಳುತ್ತಿದ್ದಳು.

ಅವನು ಎದ್ದು ಕುಳಿತದ್ದು ಕಂಡು 'ಗುಡ್ ಮಾರ್ನಿಂಗ್ ! ಬೇಗ ಸ್ನಾನ ಮಾಡಿ ಕೊಂಡು ರೆಡಿಯಾಗಿ. ಒಂಬತ್ತಕ್ಕೆ ಹೋದರೆ ಒಂದು ಗಂಟೆ ಇರಬಹುದು. ಇಲ್ಲದಿದ್ದರೆ ಹತ್ತು ಗಂಟೆಗೆ ಭಾನುವಾರದ ಎಂಟರ್‌ಟೈನ್‌ಮೆಂಟ್ ಅಂತ ಎಲ್ಲಾದರೂ ವಿಹಾರಕ್ಕೆ ಹೊರಟು ಹೋಗ್ತಾರೆ' ಎಂದಳು.

'ಅವನು ಸ್ನಾನ, ಕಾಫಿ ಮುಗಿಸಿ ಉಡುಪು ಧರಿಸಿ ಕಾರಿನಲ್ಲಿ ಬಂದು ಕೂತ. ಕಾರು ಆ ಬೋರ್ಡಿಂಗ್ ತಲುಪಿದಾಗ ಒಂಬತ್ತೂವರೆ. ವಿಸಿಟಿಂಗ್ ರೂಮಿಗೆ ಬಂದಾಗ, ಆ ವಿಶಾಲ ಹಜಾರದಲ್ಲಿ ರತ್ನಗಂಬಳಿ ಹಾಗೂ ಗೋಡೆಯಿಂದ ಗೋಡೆ ಉದ್ದಕ್ಕೂ... ಮೃದುವಾದ ಸೋಫಾ....ಒಂದೆಡೆ ತಂದೆ ತಾಯಿಗಳೊಂದಿಗೆ ಮಗಳೊಬ್ಬಳು ಆನಂದದಿಂದ ಮಾತನಾಡುತ್ತಿದ್ದಳು.

ಎದುರು ಸೋಫಾ ಮೇಲೆ ಅಜ್ಜಿಯ ಬಳಿ ಕೂತು ಮಾತಾಡುತ್ತಿದ್ದ ಚಿನ್ನಿ, ಇಬ್ಬರು ಮುಂದೆ ಬಂದರು.

'ಹಲೊ ಚಿನ್ನಿ, ನಿಮ್ಮ ಪಪ್ಪಾ ಬಂದಿದ್ದಾರೆ ನೋಡು' ಚಿನ್ನಿ ಗಂಭೀರವಾಗಿ ಅಪರಿಚಿತಳಂತೆ ನೋಡಿದಳು.

'ಗುಡ್‌ಮಾರ್ನಿಂಗ್ ಹೇಳು ಪಪ್ಪಾಗೆ, ಹ್ಯಾವ್ ಯು ಚಾಯ್ಸ್ ಕಾಫಿ ಆರ್ ಟೀ ಅಂತ ಕೇಳು?'

'ಗುಡ್‌ಮಾರ್ನಿಂಗ್ ಪಪ್ಪಾ....ಬಾಲು...ಬಾಲು...ಏ ಬಾಲು...' ಎಂದು ಕೂಗಿದಾಗ ಹದಿನಾರರ ಹುಡುಗನೊಬ್ಬ ಬಂದ.

'ಅವರೆಲ್ಲಾ ನನ್ನ ವಿಸಿಟರ್ಸ್. ಅವರಿಗೆ ಕಾಫಿ ಬೇಕಾ? ಟೀ....ಬೇಕಾ ಕೇಳಿ ತಂದುಕೊಡು' ಎಂದಳು.

'ಪಪ್ಪನಿಗೆ ನಿನ್ನ ರ್‍ಯಾಂಕ್ ಕಾರ್ಡ್ ತೋರಿಸು, ಮಮ್ಮಿಗೆ ನಿನ್ನ ಗ್ರೂಪಿನವರ ಗಾರ್ಡನ್‌ಗೆ ಬಹುಮಾನ ಬಂದಿರೋ ವಿಷಯ ಹೇಳು' ಅಜ್ಜಿ ಹೇಳಿಕೊಡುತ್ತಿದ್ದರು.

ಬಾಬ್‌ಕಟ್ ಮಾಡಿದ ಕೂದಲು, ತೋಳಿಲ್ಲದ ಮಂಡಿಯ ಮೇಲೆ ಬರುವ ಬಿಳಿ ಫ್ರಾಕ್, ಕಿವಿ, ಕೊರಳು ಕೈಗಳಲ್ಲಿ ಏನೂ ಇಲ್ಲ, ಮುಖದಲ್ಲಿ ತುಂಬಿದ ಗಾಂಭೀರ್ಯದೊಂದಿಗೆ ಕಣ್ಮಲ್ಲಿ ಶೂನ್ಯತೆಯು ಮನೆ ಮಾಡಿದೆ ಎನಿಸಿತು.

'ನಿನ್ನ ಗಾರ್ಡನ್‌ಗೆ ಬಹುಮಾನ ಬಂದಿದೆಯ ಚಿನ್ನಿ? ತೋರಿಸು. ನಾನೂ ಪಪ್ಪಾ ನೋಡ್ತೀವಿ.'

'ಮೊದಲು ಕಾಫಿ ಕುಡೀರಿ. ಆಮೇಲೆ ಎಲ್ಲಾ ತೋರಿಸ್ತೀನಿ ಅನ್ನು. ನಿನ್ನ ರೂಮ್ ತೋರಿಸು. ಮಂಚ, ನಿನ್ನ ಪುಸ್ತಕದ ಬೀರು, ನಿನ್ನ ಡೈನಿಂಗ್ ಟೇಬಲ್, ನಿನ್ನ ಮೆಡಿಕಲ್ ಕೇರ್ ಸೆಂಟರ್ ವಿಭಾಗ ಎಲ್ಲಾ ತೋರಿಸು. ನಿನ್ನ ಗವರ್‌ನೆಸ್‌ನ ನಿಮ್ಮ ಪಪ್ಪನಿಗೆ ಪರಿಚಯ ಮಾಡಿಸು' ಅಜ್ಜಿಯದೇ ಬಹುಪಾಲು ಮಾತು, ಮೊಮ್ಮಗಳದು ತುಂಡಾದ ಮಾತು, ಆಕೆ ನೈಟ್‌ಗೌನ್ ಹಾಕಿ, ಕುತ್ತಿಗೆಗು ಮೇಲೆ ಕತ್ತರಿಸಿದ ಕೂದಲ ಬಾಬ್ ಶೈಲಿಯಲ್ಲಿದರೂ, ಬಾಬ್ ಮಾಡಿಸಿದರು, ಕುತ್ತಿಗೆಯಿಂದ ಇಳಿದ ಸ್ಟೆಪ್ ಬಾಬ್ ಎಷ್ಟೋ ವಾಸಿ ಎನಿಸುತ್ತಿತ್ತು.

ಆಕೆಗೂ ಹತ್ತು ವರ್ಷದ ಹಿಂದಿನ ರೂಪ ಇರಲಿಲ್ಲ. ಅಜ್ಜಿಯ ಸನ್ನಿಧಾನ ಬಿಟ್ಟು ಮಗಳು ತನ್ನ ಕಡೆ ಬರಲಿಲ್ಲ, ತಂದೆಯನ್ನು ಕಂಡರೆ ತೀರ ಅಪರಿಚಿತರನ್ನು ಕಂಡಂತೆ ವರ್ತಿಸಿದಳು. 'ಚಿನ್ನಿ ಬಾಮ್ಮ, ಬಿಸ್ಕತ್ ತಗೊ...' ಎಂದಾಗ

'ಬೇಡಿ ಅಂಕಲ್....' ಎಂದವಳು ತುಟಿ ಕಚ್ಚಿ.

'ಸಾರಿ ಅಂಕಲ್, ಸಾರಿ ಪಪ್ಪಾ... ಬೇರೇವರು ಏನು ಕೊಟ್ಟರೂ ತಗೋಬಾರ ದೂಂತ ನಮ್ಮ ದೀದಿ ಹೇಳ್ತಿರ್‍ತಾರೆ' ಎಂದಳು.

'ಅಯ್ಯೋ! ನಮ್ಮ ವಿಜ್ಜು ಬಂದು ಏನು ಕೊಟ್ಟರೂ... ತಗೊಳ್ಳಲ್ಲ. ನಾನು ನಿನ್ನ ಸೋದರಮಾವನೇ. ನಿಮ್ಮಮ್ಮನ ಅಣ್ಣಾ ಅಂದರೂ ತಗೊಳ್ಳಲ್ಲ. ಅವಳ ಗವರ್ನೆಸ್ ಎಂಜಿಲಾ ಬಹಳ ಸ್ಟ್ರಿಕ್ಟ್. ಶಾಲೆಯಲ್ಲಿ ಓದು, ವಿದ್ಯೆ ಕಲಿಸಿದರೇ ಇಲ್ಲಿ ನಡೆನುಡಿ ಶಿಸ್ತು ಕಲಿಸಲಿಕ್ಕೆ ಎಂಜಿಲಾನ್ನ ಇಟ್ಟಿದ್ದಾರೆ' ಅಜ್ಜಿಯ ಉವಾಚ.

'ನಿಮ್ಮಮ್ಮ ಇಂಗ್ಲೆಂಡ್ ಲೇಡಿ ಆಗಿದ್ದಾಳೆ, ಗುರುತು ಸಿಗತ್ತಾ?' ಅಜ್ಜಿ ಕೇಳಿದರು.

'ಅಜ್ಜೀ, ಇನ್ನು ಸ್ವಲ್ಪ ಟೈಮ್ ಇರೋದು. ನಾವು ವಾರವಾರ ಶಟಲ್‌ಕಾಕ್ ಆಡ್ತಿದ್ದೆವಲ್ಲ. ಆಡೋಣಾ ಬಾ' ಎಂದು ಎದ್ದಳು.

ಅಜ್ಜಿ ಜೋರಾಗಿ

ನಗುತ್ತಾ-'ಪಪ್ಪಾ ಮಮ್ಮಿ ಬಂದಿದ್ದಾರೆ. ಅವರಿಗೆ ನಿನ್ನ ರೂಮ್ ತೋರಿಸು,

ಅವರ ಜೊತೆ ಮಾತಾಡು. ಶಟಲ್‌ಕಾಕ್ ಬರೋವಾರ ಆಡೋಣಾ' ಎಂದರಾಕೆ.

'ಊಂ, ನಂಗೆ ಶಟಲೇಕಾಕ್ ಇಷ್ಟ. ಬಾಲು ಅವರಿಗೆ ಕಾಫಿ ಕೊಡ್ತಾನೆ, ರೂಮ್ ತೋರಿಸ್ತಾನೆ' ಎಂದಳು.

'ಹಾಗಾದರೆ ಪಪ್ಪಾ, ಮಮ್ಮಿಗೆ ಟಾಟಾ ಹೇಳು, ನೀವು ನೋಡ್ಲಿಕ್ಕೆ ಬಂದಿದ್ದಕ್ಕೆ ಥ್ಯಾಂಕ್ಸ್ ಅನ್ನು' ಅಜ್ಜಿ ಹೇಳಿಕೊಟ್ಟ ವಾಕ್ಯ ಗಿಳಿಯಂತೇ ಉಲಿದಳು.

'ನಿಮ್ಮ ಪಪ್ಪನಿಗೆ ನಿನ್ನ ಫೋನ್ ನಂಬರ್ ಕೊಡು. ಆಗಾಗ ಬೆಂಗಳೂರಿಂದ ಟ್ರಂಕಾಲ್ ಮಾಡ್ತಾರೆ' ಎಂದಳು ಜಯಶ್ರೀ.

'ನೋ...ಪಾಠ ಓದುವಾಗ ತುಂಬಾ ಫೋನ್ ಕಾಲ್ಸ್ ಬಂದರೆ ದೀದಿ ಬೈತಾರೆ. ವಾರಕ್ಕೆ ಎರಡು ಸಲ ಅಜ್ಜಿ ಮಾಡ್ತಾರೆ, ವಿಜ್ಜು ಮಾಮಾ ಮಾಡ್ತಾರೆ, ಗಾಡೇ ಅಂಕಲ್ ಮಾಡ್ತಾರೆ, ಇನ್ನೆಷ್ಟು ಜನಕ್ಕೆ ಫೋನ್ ನಂಬರ್ ಕೊಡ್ತಿ? ವಿಸಿಟರ್ಸ್ ಅವರ್ಸ್‌ನಲ್ಲಿ ಬರಲಿಕ್ಕೆ ಹೇಳು ಅಂತ ದೀದಿ ಬೈದರು' ಎಂದಳು.

ಅಜ್ಜಿ ಮೊಮ್ಮಗಳು ಶಟಲ್‌ಕಾಕ್ ಆಡಲು ಹೋದರು. ಬಾಲು ತಂದುಕೊಟ್ಟ ಕಾಫಿ ಕುಡಿದು, ಅವಳ ರೂಮ್, ಅವರ ಪಾಲಕಿ ಏಂಜೆಲಾ, ಅಲ್ಲಿನ ತೋಟ ಎಲ್ಲಾ ನೋಡಿಕೊಂಡು ಅವರು ಮರಳಿ ಹೋಟಲಿಗೆ ಬಂದರು.

ಅವನ ಮನಸ್ಸಿಗೆ ಆದ ನೋವು, ನಿರಾಶೆ, ಉದ್ವಿಗ್ನತೆ ಅವಳಿಗೆ ಚೆನ್ನಾಗಿ ತಿಳಿದಿತ್ತು. ಪ್ರೀತಿಸಿ ಮುದ್ದುಗರೆಯುತ್ತಿದ್ದ ಆ ಪುಟ್ಟ ಮಗಳು ತಂದೆಯ ಗುರುತೇ ಇಲ್ಲದಂತೆ ತೀರ ಅಪರಿಚಿತಳಂತೆ ವರ್ತಿಸಿದಾಗ ಅವನು ಖಿನ್ನನಾಗಿದ್ದ. ಆ ಖಿನ್ನತೆಯ ಅರಿವೇ ಇಲ್ಲದಂತೆ "ಇದು ನೋಡಿ ಮಕ್ಕಳು ಆಡೋ ತೋಟ. ಮೆರಿ ಗೋ ರೌಂಡ್, ರಬ್ಬರ್ ದೋಣಿ, ಕುದುರೆ ರಬ್ಬರ್ ದೋಣೇಲಿ ಕೂತು ಅಜ್ಜಿ ಜೊತೆ ಈ ಕಾಲುವೆಯ ಉದ್ದ ನೀರಲ್ಲಿ ಹೋಗೋದೂಂದ್ರೆ ಮೋಜು. ಕುದುರೆ ಸವಾರಿ ಮಾಡ್ತಾಳೆ. ಮೆರಿ ಗೋರೌಂಡ್ ಅಂದರೆ ಇಷ್ಟ. ಈ ಹೂವಿನ ಗಿಡಗಳು, ನೀರಿನ ಕಾರಂಜಿ ಎಲ್ಲಾ ಎಂಜಾಯ್ ಮಾಡ್ತಾಳೆ. ಆ ಕಡೆ ಮಕ್ಕಳಿಗೆ ಸ್ವಲ್ಪಸ್ವಲ್ಪ ಜಾಗ ಕೊಟ್ಟಿದ್ದಾರೆ. ಇವಳು ತನ್ನ ಗ್ರೂಪಿನ ಜೊತೆ ಸೇರಿ ಒಂದು ಗುಲಾಬಿ ತೋಟ ಮಾಡಿದ್ದಾಳೆ. ಫಾರಿನ್ ರಿಟರ್ನ್‌ಡ್ ಚೈಲ್ಡ್ ಸ್ಪೆಷಲಿಸ್ಟ್ ಬಂದು ವಾರ ವಾರ ಮಕ್ಕಳ ಚೆಕಪ್ ಮಾಡ್ತಾರೆ ಎಂದು ಅವಳ ಮಂಚ, ಹಾಸಿಗೆ, ರೂಮ್ ಸೇವಕರು ಊಟ ತಿಂಡಿಯ ಶ್ರೀಮಂತಿಕೆ ವೈಖರಿ ಎಲ್ಲಾ ತೋರಿಸಿ ಬಣ್ಣಿಸಿದಳು.

ಅನಂತರ ಅಜ್ಜಿಯೊಡನೆ ಆಡುತ್ತಿದ್ದ ಮಗಳ ಬಳಿ ಹೋಗಿ 'ರಜಾದಲ್ಲಿ ಮನೆಗೆ ಬರ್ತಿಯೋ ಇಲ್ಲವೋ' ಎಂದಳು. 'ಊಂ ನಾನು ಬೆಂಗಳೂರಿಗೆ ಬರಲ್ಲ, ಚಿಂಟು ಬೆಲ್ಟ್ ತಗೊಂಡು ಹೊಡೀತಾನೆ, ಕ್ಯಾಟ್‌ರ್‌ಪಿಲ್ಲರ್‌ನಲ್ಲಿ ಹೊಡೀತಾನೆ. ಅಜ್ಜಿ ಬಂಗ್ಲೆಗೆ ಹೋಗ್ತೀನಿ. ಅಜ್ಜಿ ನನ್ನ ದೆಹಲಿಗೆ ಕರಕೊಂಡ್ಹೋಗ್ತಾರೆ. ಆಗ್ರ,

ತಾಜ್‌ಮಹಲ್...ಎಲ್ಲಾ ತೋರಿಸ್ತಾರೆ' ಎಂದಳು.

'ಆಯ್ತಾಮ್ಮ. ಅಜ್ಜಿ ಮೊಮ್ಮಗಳಾಗೇ ಇರು, ನಿಂಗೆ ಪಪ್ಪಾ, ಮಮ್ಮಿ ಇಬ್ಬರೂ ಬೇಕಾಗಿಲ್ಲ' ಎಂದು ನಕ್ಕು ಟಾಟಾ ಹೇಳಿದರು. ರಾಜಸಿಂಹ ಮಾತನಾಡುವ ಶ್ರಮ ತೆಗೆದುಕೊಳ್ಳಲಿಲ್ಲ. ಹೋಟಲಿಗೆ ವಾಪಸ್ ಬಂದು 'ಟಿಫಿನ್‌ಗೆ ಬನ್ನಿ' ಎಂದು ಕರೆದೊಯ್ದಳು.

ತಿಂಡಿ ತಿನ್ನುವಾಗ 'ಚಿನ್ನೀನ ನೋಡಿದಿರಾ? ಏನನ್ನಿಸಿತು? ಈ ಚಿಕ್ಕ ವಯಸ್ಸಿಗೆ ಏನು ಪ್ರೌಢತೆ ಬಂದಿದೆಯಲ್ಲವೇ? ಅಲ್ಲಿದ್ದಾಗ ಹಠಮಾರಿ, ತುಂಟಿ ಇದ್ದಳು. ಇಲ್ಲಿ ಬಂದೋರಿಗೆ ಅತಿಥಿ ಸತ್ಕಾರ ಮಾಡೋದ್ರಿಂದ ಹಿಡಿದು, ಎಲ್ಲಾ ಕಲಿಸಿರ್ತಾರೆ' ಎಂದಳು.

'ನಮ್ಮಮ್ಮನ್ನಂತು ತುಂಬಾ ಹೊಂದ್ಕೊಂಡ್ಬಿಟ್ಟಿದ್ದಾಳೆ. ನಮ್ಮಮ್ಮನ ಎಲ್ಲಾ ಆಸ್ತಿ ಅವಳಿಗೇ ಅಂತೆ ಈಗ ಅಮ್ಮನ ಆಸ್ತಿ ಎಷ್ಟಿದೆ ಗೊತ್ತಾ?' ಎಂದಳು.

'ಬೆಂಕಿ ಬಿತ್ತು ನಿಮ್ಮಮ್ಮನ ಆಸ್ತಿಗೆ' ಎಂದು ಗಟ್ಟಿಯಾಗಿ ಚೀರುವ ಹಾಗಾಯಿತು. ಆದರೆ ಅವನು ಚೀರಲಿಲ್ಲ. ತುಂಬಾ ಮೌನ ವಹಿಸಿದ್ದ ತನ್ನನ್ನು ಆ ಮಗು ಅಷ್ಟು ಪ್ರೀತಿಸಿತ್ತು ಎನ್ನುವುದೇ ಸುಳ್ಳೇ...? ತನ್ನ ಚಿನ್ನಿ ಅಲ್ಲವೇ ಅವಳು. ಬೇರೆ ಹುಡುಗಿಯೇ? ಅದೇ ರೂಪದ ಬೇರೆ ಹುಡುಗಿಯೆ? ಈ ಬಗೆಯ ವಿಚಿತ್ರ ಆಲೋಚನೆಗಳಲ್ಲಿ ಅವನ ಹೃದಯ ದಹದಹಿಸಿ ಹೋಗುತ್ತಿತ್ತು.

ಮಧ್ಯಾಹ್ನ ಅವನ ರೂಮಿನಲ್ಲಿ ಮಲಗಿದ್ದ. ಏಕೋ ನಿದ್ರೆ ಬರಲಿಲ್ಲ. ಎದ್ದು ಹೊರಗೆ ಬಂದ.

ಲಿಜಿ ವರಾಂಡದ ರೂಮಿನ ಬಳಿ ಇದ್ದಳು. 'ನಮಸ್ಕಾರ ಸಾರ್....ಮ್ಯಾಮ್ ಬೇಕಾಗಿತ್ತಾ? ಅವರ ಬ್ರದರ್ ವಿಜಯ್ ಬಂದಿದ್ದರು. ಡೆನಿಮ್ ಎಕ್ಸ್‌ಪೋರ್ಟ್ ವಿದೇಶಿ ಪ್ರತಿನಿಧಿ ಬಂದಿದ್ದರು. ಅವರ ಭೇಟಿಗೆ ಹೋಗಬೇಕಾಗಿತ್ತು. ಹೀಗಾಗಿ ಮಧ್ಯಾಹ್ನದ ಲಂಚ್ ಅಲ್ಲೇ ಮುಗಿಸಿ ಬರ್ತಾರೆ. ತಾವು ಊಟಕ್ಕೆ ಬಂದಾಗ ರೆಡಿ ಮಾಡು ಅಂದಿದ್ದಾರೆ' ಎಂದ

'ನನಗೆ ಊಟ ಬೇಡಾ ಮ್ಯಾಡಮ್, ಒನ್ ಅವರ್ ಬೋರ್ಡಿಂಗ್‌ಗೆ ಹೋಗ ಬೇಕು, ಕಾರಿನ ಏರ್ಪಾಟು ಮಾಡ್ತೀರಾ?' ಎಂದು ಮಗಳಿರುವ ಬೋರ್ಡಿಂಗಿನ ಹೆಸರು, ವಿಳಾಸ ಹೇಳಿದ.

'ಓ. ಕೆ....ಬನ್ನಿ, ಕಾರನ್ನು ರಿಸರ್ವ್ ಮಾಡೇ ಇರ್ತೀವಿ. ಆ ಬೋರ್ಡಿಂಗ್‌ಗೆ ಆಗಾಗ ಹೋಗಿ ರೂಢಿ ಇರೋ ರಾಬರ್ಟನ ಕಾರಿನಲ್ಲೇ ಹೋಗಿ, ಮೇಮ್‌ಸಾಬ್ ಅದರಲ್ಲೇ ಹೋಗೋದು ಯಾವಾಗಲು' ಎಂದು ಪೋರ್ಟಿಕೋಗೆ ಬಂದು ಅಲ್ಲಿ ಸಾಲಾಗಿ ನಿಂತಿದ್ದ ಕಾರಿನ ಪೈಕಿ ಯಾವುದೋ ಆರಿಸಿ, ಡ್ರೈವರ್‌ನೊಡನೆ ಮಾತಾಡಿ

ಅವನನ್ನು ಕರೆದಳು. ರಾಜಸಿಂಹ ಬಂದು ಕಾರಿನಲ್ಲಿ ಕೂತ. ಕಾರು ಬುರ್ ಎಂದು ಹೊರಟಿತು. ಅರ್ಧಗಂಟೆಯಲ್ಲಿ ಭವ್ಯ ತೋಟ ತಲುಪಿತು. ಗೇಟಿನಲ್ಲಿದ್ದ ಘೂರ್ಖ ನಿಂದ ಬಿಡುಗಡೆ ಹೊಂದಿ ಒಳಗೆ ಬಂದು ಅಲ್ಲಿ ಓಡಾಡುತ್ತಿದ್ದ ಸಮವಸ್ತ್ರಧಾರಿಗೆ ಹಿಂದಿಯಲ್ಲಿ ಕೇಳಿದ. ಆತ ಸೂಪರಿಂಟೆಂಡೆಂಟ್ ಅವರ ರೂಮಿಗೆ ಕರೆತಂದು ಬಿಟ್ಟ. ರಾಜಸಿಂಹ ವಿಸಿಟಿಂಗ್ ಕಾರ್ಡ್ ತೋರಿಸಿ, ಚಿನ್ನಿಯ ಹೆಸರು ಎಲ್ಲಾ ತಿಳಿಸಿ, ಬೆಂಗಳೂರಿನಿಂದ ತಾನು ಬಂದಿರುವುದಾಗಿ ತಿಳಿಸಿದ. ಅವರು ಹಾರ್ದಿಕವಾಗಿ ಕೈಕುಲುಕಿ ರಿಜಿಸ್ಟರ್ ಪರಿಶೀಲಿಸಿ ಜವಾನನನ್ನು ಕರೆದು–

'ಮಿಸ್ ಏಂಜೆಲಾನ್ನ ಕೂಗು' ಎಂದರು.

ಕೊಂಚ ಹೊತ್ತಿಗೆ ಚೂಟಿಯಾದ, ಚುರುಕು ಕಣ್ಣಿನ ಇಪ್ಪತ್ತರ ಯುವತಿ ಯೋರ್ವಳು ಬಂದಳು. ಉತ್ಸಾಹದಿಂದ ಪುಟಿಯುವಂತೆ ಇದ್ದ ಆ ಚೂಟಿ ಹುಡುಗಿ ಅಂಥಾ ರೂಪವತಿಯಲ್ಲಿ. ಯಾವ ಅಲಂಕಾರನವೂ ಇಲ್ಲ. ಬಿಚ್ಚಿದ ಕೂದಲಿಗೆ ಎರಡು ಹೇರ್‌ಪಿನ್ ಹಾಕಿ, ಅಚ್ಚ ಹಸಿರು ನೈಟ್‌ಗೌನ್ ಧರಿಸಿದ್ದಳು.

ಅವಳ ಕಣ್ಣುಗಳಲ್ಲಿ ತುಂಬಿದ ಲವಲವಿಕೆಯೇ ಅವಳಿಗೆ ಏನೋ ಒಂದು ತರಹ ಅಲಂಕಾರ ನೀಡಿತ್ತು. 'ಮಿಸ್ ಏಂಜೆಲ್... ನೀನು ನೋಡಿಕೊಳ್ತ ಇರೋ ಸ್ವರ್ಣಲತ ಅನ್ನೋ ಮಗುವಿನ ತಂದೆ. ಮಗುವಿನ ನಿಕ್‌ನೇಮ್ ಚಿನ್ನಿ. ಇವರನ್ನ ಕರೆದುಕೊಂಡು ಹೋಗಿ, ಮಗುವಿನ ಭೇಟ್ಟಿ ಮಾಡಿಸು'ಎಂದರು.

ಮಿಸ್ ಏಂಜೆಲಾ ಹೊರಗೆ ಬಂದು-

'ಹಾಫ್ ಅನ್ ಅವರ್ ಕಾದರೆ ಮೆರಿನ್ ಡ್ರೈವ್‌ಲಿರೋ ಅವರ ಬಂಗ್ಲೆಗೆ ಫೋನ್ ಮಾಡ್ತೀನಿ, ನಿಮ್ಮನ್ನ ಅಲ್ಲಿಗೆ ಕರೆದುಕೊಂಡು ಹೋಗ್ತೀನಿ. ಈಗ ಹನ್ನೊಂದು ಗಂಟೆಗೆ. ಸ್ವರ್ಣಮ್ಮ ಹಾಗೂ ಜಯಶ್ರೀ ಆಂಟಿ ಬಂದು ಮಗೂನ್ನ ಮನೆಗೆ ಕರೆದುಕೊಂಡು ಹೋದರು. ನಾಳೆ ಬೆಳಿಗ್ಗೆ ಕರೆತಂದು ಬಿಡ್ತಾರೆ. ಬಹುಶಃ ನೀವು ಬೆಂಗಳೂರಿನಿಂದ ಬಂದಿರೋ ವಿಷಯ ಜಯಶ್ರೀ ಆಂಟಿಗೆ ಗೊತ್ತಿಲ್ವೇನೋ?' ಎಂದಳು.

ಅವನು ಕೊಂಚ ಚಕಿತನಾಗಿ-

'ಮಗೂನ್ನ ನೋಡೋಕೆ ವಾರಕ್ಕೆ ಒಂದು ದಿನ ಒಂದೇ ಗಂಟೆ ಅಂತ ನಿಯಮ ಇದೇಂತ ಕೇಳಿದ್ದೇ... ಮಗೂನ್ನ ಹೀಗೆ ಬಂಧುಗಳ ಮನೆಗೆ ಕಳಿಸ್ತೀರಾಂತ ಗೊತ್ತಿರಲಿಲ್ಲ'ಎಂದ.

ಅವಳು ನಗುತ್ತ 'ಇಲ್ಲಿ ಬೇರೆ ಹಾಸ್ಟಲಿನ ಸ್ಥಾಪಕೀನೆ ಸ್ವರ್ಣಮ್ಮ. ಇಲ್ಲಿರೋ ಮುವ್ವತ್ತು ಮಕ್ಕಳು ಅಪಾರ ಶ್ರೀಮಂತರ ಮಕ್ಕಳು. ಸ್ವರ್ಣಮ್ಮ ಅಂತು ದಿನಾ ಸಂಜೇ ಚಿನ್ನಿನ್ನ ನೋಡಲಿಕ್ಕೆ ಬರ್ತಾರೆ, ಶಾಲೆಬಿಟ್ಟ ಮೇಲೆ ಚಿನ್ನಿ ಜೊತೆ ಎರಡು

ಗಂಟೆ ಆಡಿ, ರಾತ್ರಿ ಊಟ ಸಹ ಒಮ್ಮೊಮ್ಮೆ ಅವಳ ಜೊತೆಯೇ ಮಾಡ್ತಾರೆ, ಭಾನುವಾರ ಪೂರ್ತ ತಮ್ಮನೇಲೆ ಇಟ್ಕೋತಾರೆ' ಎಂದಳು.

'ಅಂತು ಮಗು ಅವರನ್ನ ಹೊಂದ್ಕೊಂಡಿದ್ದಾಳೆ' ಎಂದ.

'ಜ್ವರ ಬಿದ್ದು ಎದ್ದಮೇಲೆ ಕೆಲವು ದಿನ ಆ ಮಗುವಿಗೆ ಹಿಂದಿನ ವಿಷಯ ಪೂರ್ತಿ ಮರೆತು ಹೋಗಿತ್ತು, ಆಗ ಆಕೆ ನಿಧಾನವಾಗಿ ಒಲಿಸಿಕೊಂಡರು' ಎಂದರು.

'ಜ್ವರಾ... ಆ ಮಗುವಿಗೆ ಜ್ವರ ಯಾವಾಗ ಬಂದಿತ್ತು ?' ಎಂದ. ಏಂಜಿಲಾ ನಿಧಾನವಾಗಿ ಕಥೆ ಹೇಳಿದಳು.

'ಮೂರು ತಿಂಗಳ ಹಿಂದೆ ಜಯಶ್ರೀ ಆಂಟಿ ಮಗೂನ್ನ ತಂದು ಇಲ್ಲಿ ಸೇರಿಸಿದರು, ಮಗು ಮೊದಲು ಮೂರು ದಿನ ತುಂಬಾ ಅತ್ತು ಹಠ ಮಾಡಿತು. ಪಪ್ಪಾ... ಪಪ್ಪಾ... ಪಪ್ಪನ್ನ ನೋಡಬೇಕೂಂತ ಒಂದೇ ಹಠ. ಈ ಜನ ರಮಿಸಿ, ಒಲಿಸಿ ಬೇಕಾದ ಆಟದ ಸಾಮಾನು ಕೊಡಿಸಿ, ಏನು ಮಾಡಿದರೂ ಊಟ ಸಹಾ ಮಾಡದೇ ಪಪ್ಪ, ಪಪ್ಪಾ ಅಂತ ಹಠ ಮಾಡ್ತಿತ್ತು. ನಾಲ್ಕನೆಯ ದಿನ ಜ್ವರ ಶುರುವಾಯಿತು.

'ಹದಿನೈದು ದಿನ ಭಯಂಕರ ಜ್ವರ. ಏನೇನು ಟ್ರೀಟ್‌ಮೆಂಟ್ ಕೊಟ್ಟರೋ... ಒಂದು ದಿನ ಹಠಮಾಡಿ ಮಂಚದಿಂದ ಬಿದ್ದಳು. ಮೊದಲೇ ಜ್ವರ ಇತ್ತು. ತಲೆಗೆ ಪೆಟ್ಟು ತಗುಲಿತು. ಆಮೇಲೆ ಒಂಥರ ಮಂಕಾದಳು. ಹಠಾ ಇಲ್ಲ, ಹಿಂದಿನ ನೆನಪು ಜಾಸ್ತಿ ಇಲ್ಲ ಅನಿಸತ್ತೆ, ಅವರಜ್ಜಿ ಭಾಳ ಪ್ರೀತಿ ಮಾಡ್ತಾಳೆ, ಈಗೀಗ ಓದಿನಲ್ಲೂ ಸ್ವಲ್ಪ ಚುರುಕಾಗಿದ್ದಾಳೆ' ಎಂದಳು.

ಮಗು ತನಗಾಗಿ ಹಂಬಲಿಸಿ ಕಾಯಿಲೆ ಬಿದ್ದದ್ದು ಕೇಳಿ, ಅವನ ಕರುಳಲ್ಲಿ ಕತ್ತರಿ ಆಡಿಸಿದ ಹಾಗಾಯಿತು.

'ಬಹುಶಃ ಜಯಶ್ರೀ ಆಂಟಿಗೂ ನಿಮಗೂ ಸಾಮರಸ್ಯ ಇಲ್ವೇನೊ ?' ಎಂದು ಆ ಹುಡುಗಿ ಕೇಳಿದಾಗ ಅವನು ಕೊಂಚ ಬೆರಗಾಗಿ - 'ನಿನಗೆ ಹೇಗೆ ಗೊತ್ತು ?' ಎಂದ.

ಅವಳು ನಗುತ್ತಲೇ 'ನಮ್ಮಮ್ಮ ಹೇಳ್ತೀರ್ತಾರೆ, ತಾಯಿ ಪ್ರತಿರೂಪವೇ ಈ ಮಗಳು ' ಅಂತ.

'ನಿಮ್ಮಮ್ಮ...?' ಎಂದ ಕೊಂಚ ಬೆರಗಾಗಿ.

'ನಮ್ಮಮ್ಮ ಮೊದಲು ಬೆಂಗಳೂರಲ್ಲಿ ಇವರ ಮನೆಯ ಅಡಿಗೆಯಾಕೆ ಆಗಿದ್ದಳು. ನಮ್ಮಪ್ಪಾ ಇವರ ಫ್ಯಾಕ್ಟರೀಯಲಿ ಕೆಲಸ ಮಾಡ್ತಿದ್ದ. ಈಕೆ ಸ್ವರ್ಣಮ್ಮ ನೋಡಲಿಕ್ಕೆ ತುಂಬಾ ರೂಪವತಿ. ಅವರ ಗಂಡನಿಗಿಂತ ಗಂಡನ ಅಣ್ಣ ಶ್ರೀಮಂತರು. ಬಾಂಬೇನಲ್ಲಿ ಡೆನಿಮ್ ಕ್ಲಾತ್, ಪಾಲಿಸ್ಟರ್ ತಯಾರಿಸಿ ಹೊರದೇಶಕ್ಕೆ ಸಹ ರಫ್ತು ಮಾಡ್ತಾರೆ. ತಮ್ಮನ ವ್ಯಾಪಾರಾಭಿವೃದ್ಧಿಗೂ ಅವರೇ ತುಂಬಾ ಸಹಾಯ

ಮಾಡ್ತಿದ್ದರು. ಅಣ್ಣಾ ತನ್ನ ಪ್ರೊಗ್ರೆಸ್‌ಗೆ ಏಕೆ ಇಷ್ಟು ಸಹಾಯ ಮಾಡ್ತಿದ್ದಾರೆ ಅಂತ ಮೊದಮೊದಲು ಆತನಿಗೆ ಗೊತ್ತಿರಲಿಲ್ಲ. ಆಮೇಲೆ ತನ್ನ ಹೆಂಡತಿಗೂ, ಅಣ್ಣನಿಗೂ ಕೆಟ್ಟ ಸಂಬಂಧವಿದೆ ಅಂತ ತಿಳಿದು, ನಮ್ಮ ತಂದೇನೇ ಈ ರಹಸ್ಯ ತಿಳಿಸಿ, ಅವರಿಬ್ಬರು ಎಲ್ಲಿ ಗುಪ್ತವಾಗಿ ಸೇರುತ್ತಿದ್ದರೋ ಅಲ್ಲಿಗೆ ಕರೆದೊಯ್ದನಂತೆ. ಆತ ಅಣ್ಣನಿಗೆ, ಹೆಂಡತಿಗೆ ಸಿಕ್ಕಾಪಟ್ಟೆ ಬೈದರಂತೆ. ಆದರೆ ಅವರಣ್ಣ ಹೆದರದೇ "ಬೇಕಾದರೆ ನೀನು ಅವಳನ್ನ ಡೈವೋರ್ಸ್ ಮಾಡು ನಾನೇ ಅವಳನ್ನ ಸಾಕ್ತೀನಿ" ಅಂದರಂತೆ. ಪ್ರೆಸ್ಟೀಜಿಗೆ ಹೆದರಿ, ಆತ ಡೈವೋರ್ಸ್ ಮಾಡಲಿಲ. ಆದರೆ ಆವತ್ತಿನಿಂದ ಹೆಂಡತಿಯ ಸಂಬಂಧ ತ್ಯಜಿಸಿದರಂತೆ. ಈಕೆ ನಿರ್ಭಯವಾಗಿ, ಉದ್ಯೋಗದ ನೆಪ ಮಾಡಿ ಬಾಂಬೆ ಸೇರಿದರು. ಆಗ ಜಯಶ್ರೀ ಹತ್ತು ವರ್ಷದ ಹುಡುಗಿ. ಮಗಳ ಮೇಲಿನ ಮೋಹಕ್ಕೆ ಆಗಾಗ ಬರೋರಂತೆ. ಈ ಮಧ್ಯೆ ನಮ್ಮ ತಂದೆ ಜಯಶ್ರೀ ತಂದೇನ್ನ ಬ್ಲಾಕ್‌ಮೇಲ್ ಮಾಡಿ, ದುಡ್ಡು ಕೀಳ್ತ ಇದ್ದನಂತೆ. ಬೇಡದೇ ಇದ್ದೋರನ್ನ ನಿವಾರಿಸೋಕೆ ಈ ಕುಟುಂಬದೋರು ಯಾವಾಗಲೂ ಸಿದ್ಧಹಸ್ತರು. ಇದ್ದಕ್ಕಿದ್ದ ಹಾಗೆ ಆತ ಕಣ್ಮರೆಯಾದ.ಜಯಶ್ರೀ ತಂದೇನೇ ಕೊಲೆ ಮಾಡಿಸಿ ಡ್ಯಾಮಿಗೆ ಹಾಕಿಸಿದರೂಂತ ವದಂತಿ ಹುಟ್ಟಿ, ಅಡಗಿ ಹೋಯಿತು. ಆಮೇಲೆ ಜಯಶ್ರೀ ತಾಯಿ ಸ್ವರ್ಣಮ್ಮ ನನ್ನ, ತಾಯೀನ್ನ ಬಾಂಬೆಗೆ ಕರೆದುಕೊಂಡುಬಂದು ಆಶ್ರಯ ಕೊಟ್ಟರು. ಆಕೆಗೂ ಯಾರೂ ಇಲ್ಲ. ಜಯಶ್ರೀ ದೊಡ್ಡಪ್ಪ ಆಕೆಯನ್ನ ತಂದು ಬೇರೆ ಬಂಗ್ಲೆ ಮಾಡಿ ಇಟ್ಟಿದ್ದಾರೆ. ಹತ್ತು ಲಕ್ಷದವರೆಗೆ ಆಸ್ತಿ ಕೊಟ್ಟಿದ್ದಾರೆ. ಅಫಿಶಿಯಲಿ ಫೈನಾನ್ಸ್ ಮ್ಯಾನೇಜರ್ ಅಂತ ಒಂದು ಹುದ್ದೇನೂ ಕೊಟ್ಟಿದ್ದಾರೆ. ಆದರೆ ಒಂಟಿ ಜೀವ, ಮಗಳಿಗಾಗಿ ಹಂಬಲಿಸುತ್ತಿದ್ದರು. ಆಗ ಜಯಶ್ರೀ ತಂದೆ ಮಗಳನ್ನ ಮುಟ್ಟಲಿಕ್ಕು ಬಿಡ್ತಿರಲಿಲ್ಲವಂತೆ. ಹೆಂಡತಿ ಮೇಲಿನ ಕೋಪಕ್ಕೆ ಸಿಕ್ಕ ಸಿಕ್ಕ ಹೆಣ್ಣಿನ ಸ್ನೇಹ ಮಾಡಿದ್ದಾರೆ. ಏಡ್ಸ್ ರೋಗಕ್ಕೆ ತುತ್ತಾಗಿದ್ದಾರೆ. ಈಗ ಹತ್ತು ವರ್ಷದ ಹಿಂದೆ ರಕ್ತ ಪರೀಕ್ಷೇಲಿ ವಿಷಯ ಗೊತ್ತಾದಾಗಲೇ ನಿರಾಶರಾಗಿ, ಮಗಳಿಗೆ ಮದುವೆ ಮಾಡಿ ಅಮೆರಿಕಾ ಸೇರಿದ್ದಾರೆ. ಅಲ್ಲೊಂದು ಪ್ರೈವೇಟ್ ನರ್ಸಿಂಗ್ ಹೋಮಲ್ಲಿ ಇದ್ದಾರೆ. ಜಯಶ್ರೀ ಆಂಟಿ ಅಮೆರಿಕಾಕ್ಕೆ ಹೋದಾಗ ತಂದೇನ್ನ ಭೇಟಿ ಮಾಡ್ತಾರೆ' ಎಂದರು.

ಈ ಎಲ್ಲಾ ವಿಚಿತ್ರ ಕಥೆ ಆತನಿಗೆ ಹೊಸತು. ಜಯಶ್ರೀ ಹೇಳಿದ್ದೇ ಬೇರೆ ಕಥೆ. ತನ್ನ ಮಾವನಿಗೆ ಇಂಥಾ ಕೆಟ್ಟರೋಗವಿದೆ ಎಂದು ಸಹ ಗೊತ್ತಿರಲಿಲ್ಲ. ತನ್ನ ಕುಟುಂಬದ ಕೆಟ್ಟ ಕಥೆ ಎಲ್ಲಾ ಮುಚ್ಚಿಟ್ಟು ತನ್ನ ವಿವಾಹವಾದ ಅವಳ ಬಗ್ಗೆ ಅತ್ಯಂತ ಕೋಪ ಬಂತು.

'ಇದೆಲ್ಲಾ ಹಳೇಕಥೆ ನಿಮಗೆ ಹೇಳಿದ್ದಕ್ಕೆ ನಿಮಗೆ ನನ್ನ ಮೇಲೆ ಬೇಜಾರಾಯಿತಾ ? ಆದರೆ ಉದ್ದೇಶಪೂರ್ವಕವಾಗೇ ಹೇಳ್ತಿದ್ದೀನಿ. ಬಹುಶಃ ಇನ್ನೆಂದೂ ನಾನು ನಿಮ್ಮನ್ನ

ಭೇಟಿ ಆಗಲಾರೆ ಅನಿಸುತ್ತೆ. ತಾಯಿ ಮಗಳು ನಿಮ್ಮ ಮೇಲೆ ಏನೋ ಮಸಲತ್ತು ಮಾಡ್ತಾರೆ ಅನಿಸುತ್ತೆ. ಏನೊ ಒಂದು ತರಹ ಮಾತಾಡಿಕೊಳ್ತಾರೆ. ಅದರಿಂದ ನಿಮ್ಮಿಬ್ಬರ ದಾಂಪತ್ಯ ಜೀವನದಲ್ಲಿ ಏನೋ ರಹಸ್ಯವಿದೆ ಅನಿಸುತ್ತೆ' ಎಂದ.

'ಜಯಶ್ರೀಗೂ ನನಗೂ ಒಂದು ಚೂರು ಹಾರ್ದಿಕತೆ ಇಲ್ಲ ಮಿಸ್ ಏಂಜಿಲಾ... ಸಂಸಾರ ಹೂಡಿದಾಗಿನಿಂದ ಜಯಶ್ರೀ ಎರಡು ತಿಂಗಳು ಅಲ್ಲಿದ್ರೆ, ಮೂರು ತಿಂಗಳು ಇಲ್ಲಿರ್ತಾಳೆ. ಅವಳ ತಾಯಿಯ ಹಾಗೆ ಇವಳಿಗೂ ಇಲ್ಲೊಬ್ಬ ಶ್ರೀಮಂತ ಪ್ರೇಮಿ ಇದ್ದಾನಾ ?' ಎಂದ.

'ಖಂಡಿತಾ ಇಲ್ಲ ಸಾರ್ ! ಅವರ ಮನೆ ಉಪ್ಪು ತಿಂದು ಸುಳ್ಳು ಹೇಳಲಾರೆ. ಜಯಶ್ರೀಗೆ ಅಹಂಕಾರ, ಸುಪಿರಿಯಾರಿಟಿ ಕಾಂಪ್ಲೆಕ್ಸ್, ಹಠಮಾರಿತನ ಮೂರು ಕೆಟ್ಟ ಗುಣಗಳಿರಬಹುದು. ಆದರೆ ಅವಳಿಗೆ ಪರಪುರುಷ ಸಂಪರ್ಕವಿಲ್ಲ. ತಂದೆಯ ರೋಗಕ್ಕೆ ತೀರ ಭೀತಳಾಗಿದ್ದಾಳೆ. ಪರಪುರುಷ ಸಂಪರ್ಕ ಅಂದರೆ ಹೆದರ್ತಾಳೆ. 'ಮನೋಹರ ನಿನಗಾಗಿ ಅಷ್ಟು ಹಂಬಲಿಸ್ತಾನೆ, ನೀನ್ಯಾಕೆ ಅವನ್ನನ ತೀರಾ ಅವಾಯ್ಡ್ ಮಾಡ್ತೀ ?' ಅಂತ ಅವರಮ್ಮ ಕೇಳ್ತಾಳೆ.

'ಇಲ್ಲಮ್ಮ ನಾನು ಅವನನ್ನ ಪ್ರೀತಿಸ್ತೀನಿ. ಅವನ ಪ್ರೀತಿ, ಆರಾಧನೆ ನನಗಿಷ್ಟ. ಜೊತೆ ಜೊತೆಗೆ ನಾವು ತಿರುಗಾಡ್ತೀವಿ. ಅಬ್ಬಬ್ಬಾ ಅಂದ್ರೆ ಕಿಸ್ ಮಾಡ್ತಾನೆ. ಆದರೆ ಅದಕ್ಕಿಂತ ಸಲಿಗೆ ಕೊಡಲ್ಲ' ಅಂತಾಳೆ.

'ನಿನ್ನ ಗಂಡ ಅನ್ನೋ ಅಯೋಗ್ಯ...ನಿನ್ನ ಅಷ್ಟು ನೆಗ್ಲೆಕ್ಟ್ ಮಾಡ್ತಾನೆ ಅಂತ ನೂರು ದೂರು ಹೇಳ್ತಿ. ಪ್ರತಿಸಲ ಜಗಳ ಆದಾಗಲು ನೀನೇ ಹಂಬಲಿಸಿ ರಾಜಿ ಆಗ್ತಿ ಅಂತ ಹೇಳ್ತಿ. ಎರಡು ತಿಂಗಳಿಂದ ಒಂಟಿಯಾಗಿದ್ದಿ. ಅವನ ಜೊತೆ ಫ್ರೀಯಾಗಿ ಇದ್ರೆ ನಿನ್ನ ಮಡಿವಂತಿಕೆ ಏನಾಗುತ್ತೆ ?' ಅಂತ ಬೈತಾರೆ. ಆದರೆ ಜಯಶ್ರೀ ಒಪ್ಪಲ್ಲ.

'ಅವನು ಬಗೆಬಗೆಯ ಕಾಣಿಕೆ ತಂದುಕೊಡ್ತಾನೆ. ಇವಳು ಏನೇನೋ ತೆಗೆದು ಕೊಡ್ತಾಳೆ. ಆದರೆ ಲೈಂಗಿಕ ಸಂಬಂಧವಿಲ್ಲ. ಆದರೆ ತಾಯಿ ಮಗಳು ನಿಮ್ಮ ಬಗ್ಗೆ ಮಾತಾಡುವಾಗ "ಆ ವಿಲ್ ಬಗ್ಗೆ ಅವನಿಗೆ ತಿಳಿಸಬೇಡಾ...ತಿಳಿಸಿದರೆ ನಿನ್ನ ದಾಂಪತ್ಯ ಜೀವನ ಮತ್ತಷ್ಟು ಹದಗೆಡುತ್ತೆ" ಅಂತಾರೆ ತಾಯಿ.

'ಅಯ್ಯೋ! ಆ ವಿಲ್ ಬಗ್ಗೆ ಅವನಿಗೆ ತಿಳಿಸಿದರಾಯ್ತು. ನನ್ನ ಲೈಫ್ ಸಂಪೂರ್ಣ ಹಾಳಾಗತ್ತೆ'ಅಂತಾಳೆ ಜಯಶ್ರೀ.

'ಇಲ್ಲಿ ಅವನು ಅಂದರೆ ಮನೋಹರ್‌ನ ಬಗ್ಗೆ ಮಾತಾಡ್ತಾರೋ ಅಥವಾ ನಿಮ್ಮ ಬಗ್ಗೆ ಮಾತಾಡ್ತಾರೋ ತಿಳಿಯಲ್ಲ. ನೀವು ಮಗಳ ಬಗ್ಗೆ ಏನಾದರೂ ವಿಲ್ ಮಾಡಿದ್ದೀರಾ ? ನಿಮ್ಮ ಮಗಳನ್ನ ನೀವು ತುಂಬಾ ಪ್ರೀತಿಸ್ತಿದ್ದಿರಂತೆ. ತಾಯಿ ಮಗಳು ಅದರ ಬಗ್ಗೇನು ಮಾತಾಡಿಕೊಳ್ತಿದ್ದರು' ಎಂದಳು.

ಅವನು ಗೊಂದಲದಿಂದ 'ಇಲ್ಲ ನಾನು ಯಾವ ವಿಲ್ ಮಾಡಿಲ್ಲ. ಏನು ವಿಷಯ ನನಗೆ ತಿಳೀಬಾರದೂಂತ ತಾಯಿ ಮಗಳು ಮಾತಾಡಿಕೊಳ್ತಾರೆ?' ಎಂದ.

ಅವಳು ತೊದಲುತ್ತಾ 'ನನಗೂ ಜಾಸ್ತಿ ಅರ್ಥವಾಗಿಲ್ಲ. ತಾಯಿ ಮಗಳು ಜಾಸ್ತಿ ಮಾತಾಡಿಕೊಳ್ಳೋದು ಇಂಗ್ಲಿಷಲ್ಲಿ. "ಆ ವಿಲ್ ವಿಷಯ ನಿನ್ನ ಗಂಡನಿಗೆ ತಿಳೀಬಾರದೂಂತ" ಆಕೆ ಹೇಳ್ತಿರ್ತಾರೆ. "ನನಗೇನು ಅಷ್ಟು ಬುದ್ಧಿಯಿಲ್ವಾ ? ಎಂದೂ ಆ ವಿಷಯ ರಹಸ್ಯವಾಗಿಡ್ತೀನಿ. ಬೆಂಕಿಯ ಮೇಲೆ ನಡೆದ ಹಾಗಿದೆ ನನ್ನ ಜೀವನ. ತಾಯಿ ಮಾಡಿದ ತಪ್ಪಿಗೆ ಮಗಳಿಗೆ ಶಿಕ್ಷೆಯಾ ?" ಎಂದು ತಾಯಿ ಜೊತೆ ಜಗಳ ಕಾಯ್ತಾರೆ.

'ಆದರೆ ಅವರಮ್ಮ ಸೋಲದೇ "ನಿಮ್ಮಪ್ಪಾ, ನೀನು ಎಲ್ಲಾ ನನ್ನ ಶತ್ರುಗಳು" ಎಂದು ಏನೇನೋ ಹೇಳ್ತಾರೆ' ಎಂದಳು.

ರಾಜಸಿಂಹ ಬೇಸರದಿಂದ 'ಏನೋ ನಾನೊಬ್ಬ ಮಧ್ಯಮ ವರ್ಗದ ಬುದ್ಧಿಜೀವಿ. ವಿದ್ಯಾವಂತ. ನಾನೊಬ್ಬ ವಿದ್ಯಾರ್ಥಿಯಾಗಿ ಇದ್ದಾಗಲೇ ಜಯಶ್ರೀ ನನ್ನ ಪ್ರೀತಿಸಿದಳು. ಆಗ ನನಗೆ ಇಪ್ಪತ್ನಾಲ್ಕು ವರ್ಷ. ಒಲಿದು ಬಂದ ಅಪ್ಸರೆ, ಆಕಾಶದಿಂದ ಇಳಿದ ಗಂಧರ್ವಕನ್ಯೆ ಅಂತ ಹಂಬಲಿಸಿ ವಿವಾಹವಾದೆ. ಪ್ರೀತಿಸಿ ವಿವಾಹವಾದ ಅವಳು - ನನಗೆ ಪ್ರೀತಿ ಒಂದು ಬಿಟ್ಟು ಎಲ್ಲಾ ಕೊಟ್ಟಳು. ವೈಭವ ಇದೆ ಆ ಮನೇಲಿ. ಐಶ್ವರ್ಯ ಇದೆ, ಆದರೆ ನಾನೊಬ್ಬ ಏ ಕ್ಲಾಸ್ ಖೈದೀಂತ ಅನಿಸುತ್ತೆ. ಅವಳ ತಂದೆ ತಾಯಿ ವಿಷಯ ಏನೂ ನನಗೆ ತಿಳಿದಿಲ್ಲ. ಅವಳೇ ಒಂದಿಷ್ಟು ಪುಡಿಗತೆ ಹೇಳಿದ್ದಳು. ನನಗಂತೂ ಆ ಸಂಸಾರದ ರಹಸ್ಯ, ಹಿನ್ನಲೆಯ ಕೊಳಕು ಯಾವುದರ ಬಗ್ಗೆ ಆಸಕ್ತಿ ಇಲ್ಲ. ಜಯಶ್ರೀ ನನಗೆ ಹೊಂದಿಕೊಂಡು ಆತ್ಮೀಯವಾಗಿದ್ದಿದ್ದರೇ ನಾನು ಈ ಕುಟುಂಬದ ಹಿನ್ನೆಲೆ ಏನೇ ಇರಲಿ ಮೈಂಡ್ ಮಾಡ್ತಿರಲಿಲ್ಲ. ಆದರೆ ಅವಳಿಗೆ ನನಗೆ ಯಾವಾಗಲೂ ಕಹಿ ವಿರಸ, ಇದೇ ನಂಗೆ ಬೇಸರ. ಇಲ್ಲಿ ಈ ಮಗು ವಿಷಯಕ್ಕೆ ಎಷ್ಟು ಬಗೆ ಸುಳ್ಳು ಹೇಳಿದ್ದಾಳೆ. ನೋಡಿ, ವಾರಕ್ಕೆ ಒಂದು ದಿನ ಒಂದು ಗಂಟೆ ಮಾತ್ರ ಭೇಟಿ ಅಂತ. ಆ ಮಗುವಿನ ಕಾಯಿಲೆ ಬಿದ್ದದ್ದು, ಹಂಬಲಿಸಿದ್ದು ಒಂದೂ ನನಗೆ ಗೊತ್ತಿಲ್ಲ. ಈಗ ನನ್ನ ನೋಡಿದರೆ ಅಪರಿಚಿತನ್ನ ಕಂಡಹಾಗೆ ಅಂಕಲ್ ಅಂತ ಯಾಂತ್ರಿಕವಾಗಿ ಮಾತಾಡಿಸಿದಾಗ ಕರುಳಲ್ಲಿ ಕತ್ತರಿ ಆಡಿಸಿದ ಹಾಗಾಯಿತು' ಎಂದ.

'ಕಾಯಿಲೇಲಿ ಏನೇನು ಔಷಧ ತಿನ್ನಿಸಿದರೋ? ಮಗು ಹಿಂದಿನ ವಾತಾವರಣ ಎಲ್ಲಾ ಮರೆತಿದೆ. ನನಗೂ ಒಂದು ಎಚ್ಚರಿಕೆ ಕೊಟ್ಟಿದ್ದಾರೆ, ಅಕಸ್ಮಾತ್ ಬೆಂಗಳೂರಿಂದ ಫೋನ್ ಬಂದರೆ ಮಗುವಿನ ಸಂಪರ್ಕ ಕೊಡಕೂಡದೂಂತ.

ಸಾರಿ.... ಈಗ ಮಗು ನಿದ್ರಿಸ್ತಿದ್ದಾಳೆ.

ಸಾರಿ..... ಈಗ ಟ್ಯೂಷನ್ನಲ್ಲಿ ಇದ್ದಾಳೆ.

ಹೀಗೆ ಏನೋ ಒಂದು ಹೇಳಿ ಫೋನ್ ಡಿಸ್‌ಕನೆಕ್ಟ್ ಮಾಡು ಅಂತ ಹೇಳಿದ್ದಾರೆ ಎಂದಳು.

'ಅವಳ ಹಣೆಬರಹ ಗೊತ್ತಿದೆ ನಂಗೆ. ನಿನ್ನೆ ಫೋನ್ ನಂಬರ್ ಕೊಟ್ಟಳು. ಕೊಟ್ಟಾಗಲೇ ಹೇಳಿದಳು. ನೀವು ಮನಸ್ಸು ಬಂದಾಗ ಫೋನ್ ಮಾಡಿದರೆ ಮಗು ಸಂಪರ್ಕ ಸಿಗಲ್ಲ. ಅವರ ಗವರ್ನೆಸ್ ಬಹಳ ಸ್ಟ್ರಿಕ್ಟ್ ಅಂತ. ನಿಮ್ಮ ಬಗ್ಗೆ ವರ್ಣಿಸಿದ್ದು ನೋಡಿದರೆ ನೀವೊಬ್ಬ ರಾಕ್ಷಸಿ ಅಂತಲೇ ಭಾವಿಸಿದ್ದೆ. ನೀವು ಇಲ್ಲಿ ಕೆಲಸಕ್ಕೆ ಸೇರಿ ಎಷ್ಟು ವರ್ಷ ಆಯಿತು ?' ಎಂದ.

'ನಾನು ನನ್ನ ಹದಿನಾರನೆಯ ವಯಸ್ಸಿನವರೆಗೆ ಬೆಂಗಳೂರಿನ ಚಿಕ್ಕಮ್ಮನ ಮನೇಲಿದ್ದೆ. ಕನ್ನಡ ಮೀಡಿಯಂ ಎಸ್ಸೆಲ್ಸಿ ಮುಗಿಸಿದ್ದೀನಿ. ಕನ್ನಡ ಷಾರ್ಟ್‌ಹ್ಯಾಂಡ್, ಟೈಪ್‌ರೈಟಿಂಗ್ ಮಾಡಿದ್ದೀನಿ. ಸ್ವರ್ಣಾಂಬಾ ಲೇಖಕಿ ಇದ್ದಾರೆ. ಇಲ್ಲಿನ ಒಂದು ಕನ್ನಡ ಸಾಹಿತ್ಯ ಸಂಘಕ್ಕೆ ಆಕೆ ಅಧ್ಯಕ್ಷೆ. ತನ್ನ ಒಂದು ಪ್ರವಾಸ ಸಾಹಿತ್ಯ ಬರೀಲಿಕ್ಕೆ ಆಕೆ ನನ್ನ ಕರೆಸಿಕೊಂಡರು. ಆಕೆ ಹೇಳೋದು, ನಾನು ಬರೆದುಕೊಳ್ಳೋದು. ತಿಂಗಳಿಗೆ ಸಾವಿರ ರೂಪಾಯಿ ಕೊಡೋರು. ಬರೆದುಕೊಂಡಿದ್ದನ್ನ ಅಂದವಾಗಿ ಟೈಪ್ ಮಾಡ್ತಿದ್ದೆ. ಅದನ್ನ ಪುಸ್ತಕ ರೂಪದಲ್ಲಿ ಪ್ರಕಟಿಸಬೇಕೂಂತಿದ್ದಾರೆ. ಹೀಗೆ ಮೂರು ವರುಷದ ಹಿಂದೆ ಮುಂಬೈಗೆ ಬಂದೋಳು ನಾನು, ಈಗ ಮೂರು ತಿಂಗಳಿಂದ ಚಿನ್ನಿಗಾಗಿ ಗವರ್ನೆಸ್ ಅಂತ ಹೇಳಿ ಇಲ್ಲಿ ಸೇರ್‍ಸಿದ್ದಾರೆ. ಎರಡು ಸಾವಿರ ಸಂಬಳ. ಕನ್ನಡ ಬರೋಳೇ ಬೇಕು ಅಂತ ನನ್ನ ಸೇರ್‍ಸಿದ್ದಾರೆ. ಈ ಸಂಸ್ಥೆ ಸ್ವರ್ಣಾಂಬಾ ಹಾಗೂ ಅವರ ನಾಲ್ಕು ಶ್ರೀಮಂತ ಗೆಳತೀರಿಂದ ನಡೀತಿದೆ. ಮೂವ್ವತ್ತು ಮಕ್ಕಳು ಮಾತ್ರ ಇಲ್ಲಿದ್ದಾರೆ. ಎಲ್ಲರಿಗೂ ಶ್ರೀಮಂತಿಕೆಯ ರಾಜೋಪಚಾರ. ಸೇರಿರೋರೆಲ್ಲಾ ಅತ್ಯಂತ ಶ್ರೀಮಂತ ಮಕ್ಕಳು. ಕೆಲವು ಮಕ್ಕಳ ತಂದೆ ತಾಯಿ ಅಮೆರಿಕಾ, ದುಬಾಯಿ ಇಂಥಾ ಕಡೆ ಇದ್ದಾರೆ. ಕೆಲವು ತಂದೆ ತಾಯಿಗಳಿಗೆ ತಮ್ಮ ಬಿಸಿನೆಸ್, ಕ್ಲಬ್, ಪಾರ್ಟಿ ಮೀಂಟಿಂಗಲ್ಲಿ, ಮಕ್ಕಳ ಪಾಲನೆ, ಎಜುಕೇಷನ್ ಕಡೆ ಗಮನ ಕೊಡ್ಲಿಕ್ಕಾಗಲ್ಲ. ಅಂಥಾ ಮೂವತ್ತು ಮಕ್ಕಳು ಇಲ್ಲಿದ್ದಾರೆ. ಎಲ್ಲಾ ಕೋಟ್ಯಾಧೀಶ್ವರರ ಮಕ್ಕಳು' ಇಲ್ಲಿದ್ದಾರೆ. ಎಂದು ಹೇಳಿದಳು ಎಂಜಿಲಾ.

ಅವನು ಚಿಂತೆಯಿಂದ 'ನನ್ನ ಮಗೂನ್ನ ಚೆನ್ನಾಗಿ ನೋಡ್ಕಳ್ಳಿ. ನಾನು ನಾಳೆ ಬೆಳಿಗ್ಗೆ ಬರ್‍ತೀನಿ. ನನ್ನ ಮಗು ಈಗ ಪಪ್ಪಾ ಅನ್ನೋ ಶಬ್ದಾನೇ ಎತ್ತಲ್ಲಾಂತ ಅನಿಸತ್ತೆ' ಎಂದ.

'ಹೌದು ಸಾರ್ ! ಅಜ್ಜಿ ಅಜ್ಜೀಂತ ಹಂಬಲಿಸತ್ತೆ. ಆಕೆ ಮಾತ್ರ ತಮ್ಮ ಲೋನ್ಲಿನೆಸ್‌ನಿಂದ ಪಾರಾಗಲಿಕ್ಕೇ ಈ ಮಗೂನ್ನ ಹಿಡಿದಿದ್ದಾರೆ ಅನಿಸತ್ತೆ.

ಹುಚ್ಚರಂತೆ ಪ್ರೀತಿಸ್ತಾರೆ' ಎಂದಳು. ಅವನು ನಿಟ್ಟುಸಿರಿಟ್ಟು ಎದ್ದು 'ಬರ್‍ತೀನಿ. ನಾಳೆ ಒಮ್ಮೆ ಆ ಮಗೂನ್ನ ನೋಡಿ, ನನ್ನ ಮನಸ್ಸಿನ ಹಂಬಲ ಮರೀತೀನಿ' ಎಂದು ಎದ್ದು ಹೋದ.

ಕಾರಿನಲ್ಲಿ ಕೂತು ಅವನು ಹೋಟಲಿಗೆ ಬಂದಾಗ ಮೂರುಗಂಟೆ. ರೂಮಿಗೆ ಬಂದು ಮಲಗಿದರೂ ಅವನಿಗೆ ನಿದ್ರೆ ಬರಲಿಲ್ಲ. ಮನಸ್ಸಿನಲ್ಲಿ ದುಗುಡ ತುಂಬಿತ್ತು.

ಆರು ಗಂಟೆಗೆ ಹಾಜರಾದಳು ಜಯಶ್ರೀ.

'ಹಲೋ ಡಿಯರ್ ! ಇನ್ನು ಮಲಗಿದ್ದೀರಾ ? ಮುಂಬಯಿಗೆ ಬಂದ ನೆನಪಿಗಾಗಿ ಒಂದಿಷ್ಟು ಶಾಪಿಂಗ್ ಮಾಡಿ ಏನಾದರೂ ತಗೋಬೇಡ್ವೆ?' ಎಂದಳು.

'ಹಾ ! ನಾಳೆ ಬೆಳಿಗ್ಗೆ ಬಜಾರ್ ತಿರುಗಾಡಿ, ನಿಮಗೆ ನಾನೇ ಏನಾದರೂ ಶಾಪಿಂಗ್ ಮಾಡಿಸ್ತೀನಿ. ಚಿಂಟೂಗಂತು ಒಂದು ಲಕ್ಷ ರೂ. ಕೊಟ್ಟು ಕಾರು ತಗೊಂಡಿದ್ದೀನಿ. ಪಾರ್‍ಯಾಂಬುಲೇಟರ್ ಸೈಜ್ ಇದೆ. ಅವನೊಬ್ಬನೆ ಕೂತುಕೊಂಡು ಡ್ರೈವ್ ಮಾಡಿಕೊಂಡು ಹೋಗಬಹುದು. ಪಪ್ಪಾನ್ನ ಚೆನ್ನಾಗಿ ಪ್ರೀತಿ ಮಾಡಿ, ಪಪ್ಪಾ ಹೇಳಿದ ಹಾಗೆ ಕೇಳಿಕೊಂಡು ಇರಬೇಕು. ಪಪ್ಪನ ಹತ್ತಿರವೇ ಮಲಗಬೇಕೂಂತ ಹೇಳಿದ್ದೆ. ಈಗ ಆ ಕಾರಿನ ಆಸೆಗೆ ನಿಮ್ಮ ಹತ್ತಿರ ಓಡೋಡಿ ಬರ್‍ತಿದ್ದ. ನೀವು ಚೆನ್ನಾಗಿ ಸುಧಾರಿಸಿದ್ದೀರೀಂತ ಅನಿಸತ್ತೆ. ಕಾರ್ ನಿನ್ನೆ ಲಾರೀಲಿ ಬುಕ್ ಮಾಡಿ ಕಳಿಸಿದ್ದೀನಿ. ನಾಳೆ ಬೆಳಿಗ್ಗೆ ಎಂಟರ ಫ್ಲೈಟ್‌ಗೆ ಬುಕ್ ಮಾಡಿಸಿದ್ದೀನಿ. ನಾಳೆ ನಾವಿಬ್ಬರೂ ಹೊರಟು ಬಿಡಬೇಕು' ಎಂದಳು.

'ಶಾಪಿಂಗ್ ಅಂತ ಹೇಳಿದೆಯಲ್ಲ' ಎಂದ.

'ನಿಮಗೆ ಏನೇನು ಬೇಕೋ ಎಲ್ಲಾ ನಾನೇ ಶಾಪಿಂಗ್ ಮಾಡಿದ್ದೀನಿ, ಬೇಸಿಗೆ ಉಡುಪು, ಕೆಲವು ನೈಟ್ ಡ್ರೆಸ್, ಕೆಲವು ಸೂಟಿಂಗ್ಸ್, ಇಪ್ಪತ್ತು ಸಾವಿರ ರೂ. ಗಳದು, ಇನ್ನೇನು ಬೇಕಿತ್ತು ರಾಯರಿಗೆ ?' ಎಂದಳು.

'ಏನು ಬೇಡಾ ಬಿಡು. ನೀನಾಡಿಸಿದ ಬೊಂಬೆ ನಾನು' ಎಂದ. ಬೆಳಿಗ್ಗೆ ಎಂಟಕ್ಕೆ ವಿಮಾನ ಪ್ರಯಾಣ ಎಂದಮೇಲೆ ಮಗಳನ್ನು ಮತ್ತೊಮ್ಮೆ ನೋಡಲು ಹೋಗುವುದು ಸಾಧ್ಯವಿಲ್ಲ. ಪ್ರೋಗ್ರಾಂ ಕ್ಯಾನ್ಸಲ್ ಎನಿಸಿ ನಿರಾಶೆಯಾಗಿತ್ತು.

'ನನ್ನ ಪಾಲಿನ ಒಂದು ಗೊಂಬೇನೇ ನೀವು. ಈ ಗೊಂಬೆ ಈ ನಡುವೆ ಆಕಾರ ಕಳೆದುಕೊಳ್ತಾ ಇದೆ. ಆದಕ್ಕೆ ಅಮೆರಿಕಾದಿಂದ ಒಂದು ವ್ಯಾಯಾಮ ಸಾಧನ ತಂದಿದ್ದೀನಿ. ದಿನಾ ಒನ್ ಅವರ್ ವ್ಯಾಯಾಮ ಮಾಡಿ, ನಿಮ್ಮ ಫಿಗರ್ ನಿಮಗೆ ಮರಳಿ ಬರತ್ತೆ' ಎಂದಳು.

'ನನ್ನ ಫ್ಯಾಟ್‌ನೆಸ್ ಮೇಲೆ ಕಣ್ಣು ನಿನಗೆ ....?' ಎಂದ.

'ಹೌದು! ಮುವ್ವತ್ನಾಲ್ಕು ವರ್ಷಕ್ಕೆ ನಲವತ್ತರ ಗಂಡಸಿನ ಹಾಗೆ ಕಾಣ್ತೀರಿ.

ನಾನು ನೋಡಿದರೆ ಇನ್ನು ಹದಿನಾರರ ತರುಣಿ ಹಾಗೆ ಕಾಣ್ತೇನಿ. ಪಾರ್ಟೀಲಿ ನಮ್ಮನ್ನ ಮಿಸ್ ಸೋನಿಯಾ ನೋಡಿದ್ದರೇ.... "ಎರಡನೆ ಮದುವೇನಾ ಮೇಡಂ" ಅಂತ ಕೇಳ್ತಿದ್ದಳು' ಎಂದಳು.

'ಅತ್ಯಂತ ದುರದೃಷ್ಟದ ಮದುವೆ ನಮ್ಮದೂಂತ ನೀನು ಹೇಳಬೇಕಾಗಿತ್ತು ನಾವಿಬ್ಬರು ಪರಸ್ಪರರನ್ನ ಪ್ರೀತಿಸಲ್ಲ. ಆದರೂ ಈ ದಾಂಪತ್ಯದಿಂದ ಬಿಡುಗಡೆ ತಗೊಳ್ಳಿಕ್ಕೇ ಇಬ್ಬರಿಗೂ ಧೈರ್ಯವಿಲ್ಲ' ಎಂದುಬಿಟ್ಟ.

ಜಯಶ್ರೀ ನಗುತ್ತ, 'ನಿಜವಾಗಲು ಈ ದಾಂಪತ್ಯದಿಂದ ನಿಮಗೆ ಬಿಡುಗಡೆ ಬೇಕೂಂದ್ರೆ ಒಂದು ಕೋಟಿ ರೂಪಾಯಿ ನನಗೆ ನೀವು ಕೊಡಿ. ಬಿಡುಗಡೆ ಕೊಡ್ತೀನಿ' ಎಂದಳು.

'ನಾನು ನಿಜವಾಗಲು ಶ್ರೀಮಂತನಾಗಿದ್ದರೆ ನಿನಗೆ ಒಂದು ಕೋಟಿ ರೂಪಾಯಿ ಕೊಟ್ಟು ಹಾಯಾಗಿ ಬಿಡುಗಡೆ ಆಗ್ತ ಇದ್ದೆ' ಎಂದ.

'ಸಾಕು ಬಾಯ್ಮುಚ್ಚಿ. ನನ್ನ ಕಂಪನೀಲಿ ಸಂಬಳ ತಗೊಂಡು ದುಡಿಯೋ ಒಬ್ಬ ಕೆಲಸಗಾರ ನೀವು. ಕತ್ತೇನ್ನ ಮುದ್ದಿಸಿ, ರತ್ನಾಭರಣದ ಅಲಂಕಾರದಿಂದ ಅಲಂಕರಿಸಿ, ಕಸ್ತೂರಿ ಪುನಗು, ಶ್ರೀಗಂಧ ಹಚ್ಚಿ, ಜರತಾರಿವಸ್ತ್ರ ಹೊದಿಸಿ, ನಾನಾ ಮಂಗಳ ವಾದ್ಯಗಳ ಜೊತೆ ಮೆರವಣಿಗೆ ಕರೆದೊಯ್ದು, ಅದರ ಬಾಯಿಗೆ ಕೆನೆ ಮೊಸರು, ಅನ್ನದ ಬುತ್ತಿ ಕಟ್ಟಿದರೂ, ಅದು ಬಾಯಿ ಬಿಟ್ಟಾಗ ಗಾರ್ದಭ ರಾಗ ಮಾತ್ರ ಹಾಡತ್ತಂತೆ. ಕೋಟ್ಯಾಧೀಶ್ವರರ ಪುತ್ರಿ ಒಲಿದು ಬಂದು ವಿವಾಹವಾಗಿದ್ದಾಳೆ. ಅವಳ ಮನಸ್ಸು ನೋಯಿಸಬಾರದೂನ್ನೋ ಪರಿಜ್ಞಾನ ನಿಮಗಿದೆಯಾ ? ನಿಮಗಾಗಿ ನಲವತ್ತು ಸಾವಿರ ರೂ. ಗಳ ಬಟ್ಟೆಬರೆ, ಆಡಿಯೋ ಕ್ಯಾಸೆಟ್ಸ್ ಶಾಪಿಂಗ್ ಮಾಡಿ

ನನ್ನನ್ನ [illegible]

ಕಣ್ಣಿಂದ ಆದರೂ ಕಾಣ್ತಿದ್ದಿರಾ ? ದಿನಕ್ಕೆ ಈ ಹೋಟಲಿನ ಈ ಫುಲ್‌ಸೂಟ್ ಬಾಡಿಗೆ ಎಷ್ಟು ಗೊತ್ತ?' ಎಂದಳು.

'ಗೊತ್ತು ಹೋಗೆ ರ್‍ಯಾಸ್ಕಲ್ ಮನಸ್ಸು ಮುರಿದು ಚೂರುಚೂರು ಮಾಡಿ ದೇಹಕ್ಕೆ ಅಲಂಕಾರ ಮಾಡಿ, ರತ್ನಾಭರಣ ತೊಡಿಸೋಳು, ನಾನು ಚಿನ್ನೀನ್ನ ಎಷ್ಟು ಪ್ರೀತಿಸ್ತೀನಿ ! ಆ ಮಗೂನ್ನ ಕರೆತಂದು ಇಲ್ಲಿ ನಿನ್ನ ತಾಯಿ ಪಾಲು ಮಾಡಿದೆ. ಆ ಮಗು ಊಟ ತಿಂಡಿ ಬಿಟ್ಟು ನನಗಾಗಿ ಹಂಬಲಿಸಿದಾಗ ಕಾಯಿಲೆ ಬಿದ್ದು, ಮನೋ ವಿಭ್ರಮದಲ್ಲಿ ಪಪ್ಪಾ, ಪಪ್ಪಾ ಅಂತ ಹಂಬಲಿಸಿದಾಗ ನನಗೆ ಹೇಳಿದೆಯಾ ? ಅಲ್ಲಿ ನಾನು ಆ ಮಗುವಿಗಾಗಿ ಎಂಟ್ಹಾನೆಂಟು ದಿನ ಕೊರಗಿದೆ ! ಕಡೆಗೆ ನನ್ನ ಮಗು ನನ್ನ ಮರೆಯೋ ಹಾಗೆ ಮಾಡಿದೆ. ಇವತ್ತು ಆ ಮಗು ಜೊತೆ, ನಿಮ್ಮಮ್ಮನ ಜೊತೆ ಕಾಲ ಕಳೆದು ಬಂದಿದ್ದಿ. ನನ್ನನ್ನ ಇಲ್ಲಿ ಒಂಟಿಯಾಗಿ ಈ ಹೋಟಲ್ ರೂಮಿನಲ್ಲಿ

ಕೊಳೇ ಹಾಕಿದ್ದಿ' ಎಂದು ಗರ್ಜಿಸಿದ ರಾಜಸಿಂಹ.

ಸಿಕ್ಕಿಹಾಕಿಕೊಂಡ ಕಳ್ಳನಂತೆ ಒಂದು ಕ್ಷಣ ಅವಳ ಮುಖ ವಿವರ್ಣವಾಯಿತು. ನಂತರ ಅವಳು ಅಟ್ಟಹಾಸದಿಂದ ನಕ್ಕು-

'ಮಗುವಿನ ಹಿತ, ಭವಿಷ್ಯ ಎಲ್ಲಿದೆಯೋ ಅಲ್ಲಿ, ಅದನ್ನ ತಂದು ಸೇರ್ಸಿದ್ದೀನಿ. ಅಮ್ಮ ತನ್ನ ಒಂಟಿತನ ತಡೀಲಾರದೇ ಆ ಬೋರ್ಡಿಂಗ್‌ನ ಯಾವುದೋ ಒಂದು ಬಂಗಾಳಿ ಮಗೂನ್ನ ಹೊಂದಿಕೊಂಡು, ಅದಕ್ಕೆ ತನ್ನೆಲ್ಲಾ ಆಸ್ತಿ ವಿಲ್ ಮಾಡೋಳು. ನಾನು ಅಮ್ಮನ ಒಂಟಿತನ ನಿವಾರಿಸಲಿಕ್ಕೆ ಈ ಮಗೂನ್ನ ತಂದುಬಿಟ್ಟೆ. ನಿಮ್ಮ ಒಣ ಪ್ರೀತಿಯಿಂದ ಮಗೂಗೆ ಏನು ಸಿಕ್ಕಿತ್ತು, ಈಗ ಅಮ್ಮನ ಇಪ್ಪತ್ತು ಲಕ್ಷ ರೂ.ಗಳ ಆಸ್ತಿ ಚಿನ್ನಿ ಹೆಸರಿಗಾಗ್ತಿದೆ. ಅಪ್ಪಾ ತಮ್ಮ ಆಸ್ತಿ ಎಲ್ಲಾ ಆಸ್ಪತ್ರೆ, ಅನಾಥಾ ಶ್ರಮಗಳಿಗೆ ಬರೆದು ಬಿಡ್ತೀನಿ ಅಂತಿದ್ದಾರೆ. ನನಗೆ ನಿಮಗೆ ಏನೂ ಸಿಗಲ್ಲ ನೋಡಿ' ಎಂದಳು.

ಒಂದು ಸಲ ಮೊಮ್ಮಗನ ಹೆಸರಿಗೆ ಬರೀತಾರೆ ಅಂತ ಇದ್ದಳು. ಈಗ ಅನಾಥಶ್ರಮ ಅಂತಾಳೆ. ಅವನಿಗೆ ಅವರಪ್ಪನ ಆಸ್ತಿ ಬಗ್ಗೆ ಆಸಕ್ತಿ ಇರಲಿಲ್ಲ. ಬೇಸರದಿಂದ-

'ಜಯಶ್ರೀ, ಪ್ಲೀಸ್ ! ನಿನ್ನ ರೂಮಿಗೆ ಹೊರಟು ಹೋಗು. ನನ್ನ ಮನಸ್ಸು ತುಂಬಾ ಅಶಾಂತವಾಗಿದೆ' ಎಂದ. ಅಪ್ಸರೆಯ ಹಾಗಿರುವ ತನ್ನನ್ನು ಆತ ನಿರಾಕರಿಸಿ ಹೊರದೂಡಿದಾಗ ಅವಳಿಗೆ ರೋಷ ಉಕ್ಕಿ ಬರುತ್ತಿತ್ತು. ರೂಮಿಗೆ ಬಂದು ಒಂಟಿಯಾಗಿ ಮಲಗಿದಳು. ಫೋನ್ ರಿಂಗ್ ಆದಾಗ ಎತ್ತಿ ಕಿವಿಗೇರಿಸಿದಳು. 'ಹಲೋ ! ಮನು... ನನ್ನ ಏಕೆ ಕಾಡಿಸ್ತಿ ಮನು ? ಪ್ಲೀಸ್ ನೀನು ಬರಬೇಡಾ' ಎಂದಳು. ರಪ್ಪನೇ ರಿಸೀವರ್ ಕುಕ್ಕಿದಳು. ಎಲ್ಲಾ ಬಂಧನ ಹರಿದುಕೊಂಡು ಮನೋಹರನ ತೋಳ್ತೆಕ್ಕೆಗೆ ಹೊರಟುಹೋಗಲೇ...? ಎಂದುಕೊಂಡಳು. ಆದರೆ ಲಿಜಿಯಿಂದ ತಂದೆಗೆ ಸುದ್ದಿ ಮುಟ್ಟಿದರೆ ಸರ್ವನಾಶ. ತಂದೆ ಒಬ್ಬ ತನ್ನ ಶತ್ರು. ಲಿಜಿ ಒಬ್ಬಳು ತನ್ನ ಶತ್ರು. ಗಂಡ ಎನಿಸಿಕೊಂಡ ಆ ರಾಜಸಿಂಹ ಒಬ್ಬ ತನ್ನ ಶತ್ರು ಎನಿಸಿ ಎಲ್ಲರ ಮೇಲೆ ಕೋಪ ಉಕ್ಕಿಬಂತು. ಫ್ರಿಜ್ ತೆಗೆದು ಶಾಂಪೇನ್ ಕುಡಿಯುತ್ತ ಕುಳಿತಾಗ ಮನಸ್ಸಿಗೆ ಕೊಂಚ ಹಾಯೆನಿಸಿತು.

ಕೊಂಚ ಹೊತ್ತಿಗೆ ಕುಡಿದು ತೂರಾಡುತ್ತ 'ಪಪ್ಪಾ' ಐ ಹೇಟ್ ಯೂ.... ವಿಲ್ಲಿನ ಬಂಧನ ಹೂಡಿ, ನನ್ನನ್ನ ಅಗ್ನಿಸೆರೆಯಲ್ಲಿ ಹಾಕಿದ್ದೀರಿ. ಈ ಬೇಡದ ದಾಂಪತ್ಯ ಜೀವನದಿಂದ ನಾನು ದಹದಹಿಸಿ ಹೋಗ್ತಿದ್ದೀನಿ. ಆ ಬಡಪಾಯಿ ರಾಜ್‌ಗೂ ನನ್ನಿಂದ ಸುಖವಿಲ್ಲ. ನಿಮ್ಮ ಮೇಲಿನ ಕೋಪ ಎಲ್ಲಾನೂ ಅವನ ಮೇಲೆ ತೀರಿಸಿಕೊಳ್ಳಿದ್ದೀನಿ' ಎಂದು ಏನೇನೋ ಬಡಬಡಿಸುತ ಬಂದು ಹಾಸಿಗೆ

ಮೇಲೆ ಬಿದ್ದಳು.

ಬೆಳಿಗ್ಗೆ ಎಂಟಕ್ಕೆ ಸ್ನಾನ ಅಲಂಕಾರ ಮುಗಿಸಿ, ಗಂಡನ ಕೋಣೆಗೆ ಬಂದಳು. ಅವನು ಸ್ನಾನ ಮುಗಿಸಿ ಉಡುಪು ಧರಿಸುತ್ತಿದ್ದ.

'ಹಲೋ ! ಗುಡ್‌ಮಾರ್ನಿಂಗ್ ಕಾಫಿ ಆಯಿತಾ ?' ಎಂದಳು. 'ಆಯಿತು' ಎಂದ ಚುಟುಕಾಗಿ.

'ಒಂದೊಂದು ದಿನಾನು ಹೊಸತಾಗಿ, ಹೊಸಬರಂತೆ ನಾವು ಅನುಭವಿಸೋಣ... ನನಗಾಗಿ ನೀವು, ನಿಮಗಾಗಿ ನಾನು. ಹಳೆ ಹತ್ತು ವರುಷದ ದಾಂಪತ್ಯ ಜೀವನ ಮರೆತುಬಿಡೋಣ. ವಿರಸದ ಕಹಿ ಮಾಯವಾಗಲಿ, ಸರಸ ಸಂಭ್ರಮದ ಸಿಹಿ ಶುರುವಾಗಲಿ. ನಿಮ್ಮ ಕೋಣೆಗೆ ಪಾಠಕ್ಕೆ ಬರ್ತಿದ್ದ ಜಯಶ್ರೀಗೆ ನೀವೆಷ್ಟು ಕಾತುರರಾಗಿ ಕಾಯ್ತಿದ್ದಿರಿ. ಅದೇ ಜಯಶ್ರೀಗೆ ಈಗ ನಿಮ್ಮ ಬಳಿ ಬಂದಿದ್ದಾಳೆ' ಎಂದು ನುಡಿದು, ಅವನ ಕೊರಳಿಗೆ ಹಾರವಾಗಿ ತನ್ನ ತೋಳುಗಳ ಮಾಲೆ ಹಾಕಿ, 'ಐ ಲವ್ ಯೂ...' ಎನ್ನುತ್ತ ಅವನ ತುಟಿಗೆ ಮುತ್ತಿಟ್ಟಳು. ಸಿಗರೇಟಿನ ವಾಸನೆಗೆ ಹೊಟ್ಟೆ ತೊಳಸಿ ಬಂದಂತಾಯಿತು. 'ಸಿಗರೇಟ್ ಸೇದಿದ್ದೀಯಾ, ಜಯಾ...?' ಎಂದ. ಅವಳು ಅವನೆದೆ ಗೊರಗಿ... 'ಹೌದು ! ನಿನ್ನೆ ರಾತ್ರಿ ಏಳೆಂಟು ಸಿಗರೇಟ್ ಸೇದಿದೆ, ನಾಲ್ಕು ಗ್ಲಾಸ್ ಶಾಂಪೇನ್ ಕುಡಿದೆ. ನಿಮ್ಮಿಂದ ಹೊರದೂಡಲ್ಪಟ್ಟಾಗ ನನ್ನ ಹೃದಯಕ್ಕೆ ಬೆಂಕಿ ಬೀಳತ್ತೆ. ಆ ಕ್ಷಣದಲ್ಲಿ ನಾನು ಹುಚ್ಚಿ ಆಗ್ತೀನಿ, ಆಗ ಹುಚ್ಚೆದ್ದ ಮನ ತಣ್ಣಲು ಇವೆಲ್ಲಾ ಬೇಕಾಗತ್ತೆ ಎರಡೂವರೆ ತಿಂಗಳು ವಿರಹದಲ್ಲಿ ಬೆಂದು, ಇನಿಯನ ತೋಳ್ಸೆರೆ ಬಯಸಿ ಬಂದ ಹೆಣ್ಣಿಗೆ ಹೋಗು ಆ ರೂಮಲ್ಲಿ ಮಲಗು ಎಂದಾಗ ಹೇಗೆ ಆಗಬಹುದು ?' ಎಂದಳು.

'ಎರಡೂವರೆ ತಿಂಗಳು ಗಂಡನ್ನ ಅಗಲಿ ಹೋದಾಗ ಅವನ ಮನಸ್ಸಿಗೆ ಹೇಗೆ ಆಗಿರತ್ತೆ ? ಅದರ ಬಗ್ಗೆ ಎಂದಾದರೂ ನೀನು ಯೋಚಿಸಿದ್ದೀಯಾ? ಎಂದ.

'ಯೋಚಿಸೋದೇನಿದೆ ? ಕಾತುರದಿಂದ ಫೋನ್‌ಕಾಲ್ ಮಾಡಿದಾಗ, ನನಗೆ ಎದುರಾದದ್ದು ನಿರಾಶೆ..... ನಿಮ್ಮ ಜಡತ್ವ. ಅಮೆರಿಕಾದಿಂದ ಫೋನ್ ಮಾಡಿದರೂ ಒಂದೆ, ಇಂಗ್ಲೆಂಡಿಂದ ಮಾಡಿದರೂ ಒಂದೇ'

"ಜಯಾ, ನಿನ್ನ ವಿರಹದಲ್ಲಿ ಕೊರಗ್ತಿದ್ದೀನಿ, ಬಂದ್ಬಿಡೆ" ಎಂಬ ವಾಕ್ಯಕ್ಕೆ ಪರಿತಪಿಸ್ತಿದ್ದೆ. ಹಾಗೆ ನೀವು ಒಂದು ಸಲ ಅಂದಿದ್ರೇ ಕೋಟ್ಯಾಂತರ ರೂ.ಗಳ ಎಲ್ಲಾ ವ್ಯವಹಾರ ಎಸೆದು, ಓಡಿ ಬಂದ್ಬಿಡುತ್ತಿದ್ದೆ' ಎಂದು ಅವನ ಎದೆಗೊರಗಿ ಅಳ ತೊಡಗಿದಳು.

ಒಂದು ಕ್ಷಣ ಅವನಿಗೆ ತಾನೇ ಅಪರಾಧಿ ಎನಿಸಿತು. ಅವಳು ಬಯಸುವ ಪ್ರೀತಿ, ವಿಶ್ವಾಸ ಯಾವುದೂ ತಾನು ಕೊಡಲಾಗುತ್ತಿಲ್ಲ. ಇದು ತನ್ನ ದೌರ್ಬಲ್ಯವೇ?

ಗಂಡನನ್ನೇ ಹಿಂಡಿ ಹಿಪ್ಪೆ ಮಾಡುವಂಥಾ ಅವಳ ಉತ್ಕಟ ಕಾಮದಾಹಕ್ಕೆ ತಾನು ಸೋತಿದ್ದೇನೆಯೆ? ಸೊಪ್ಪಾಗಿ ಹೋಗಿದ್ದೇನೆಯೆ? ನೀನು ನಿರ್ವೀರ್ಯ, ಬಲಹೀನ ಎಂಬಂತೇ ಆಗಾಗ ಪರೋಕ್ಷವಾಗಿ ಚುಚ್ಚುತ್ತಿದ್ದಳು. ಯಾವುಯಾವುದೋ ಔಷಧಿ, ಟಾನಿಕ್, ವ್ಯಾಯಾಮ ಸೂಚಿಸುತ್ತದ್ದಳು.

'ನಿಜಾ ಹೇಳಲಾ, ಜಯಾ? ನಾನು ನಿನ್ನ ತುಂಬಾ ಪ್ರೀತಿಸ್ತೀನಿ. ಆ ನಿನ್ನ ಉತ್ಕಟ ಕಾಮದಾಹ ಹಾಗೂ ಶೂರ್ಪನಖಿ ಆವೇಶ ನನಗೆ ಬೇಕಾಗಿಲ್ಲ. ನನ್ನ ಮನಸ್ಸು ಕಾಮದಿಂದ ವಿಮುಖವಾಗಿದೆ. ನನ್ನನ್ನು ಬಲಹೀನ ಎನ್ನು. ನಿರ್ವೀರ್ಯ ಎನ್ನು. ಏನಾದರೂ ಅನ್ನು. ಅಕ್ಟೋಪಸ್ ಹಿಡಿತದ ಆ ಕಾಮ, ಪ್ರೇಮದಿಂದ ನನಗೆ ಮುಕ್ತಿ ಬೇಕು. ನನ್ನ ಮನಸ್ಸಿಗೂ ದೇಹಕ್ಕೂ, ಸ್ವಾತಂತ್ರ್ಯ ಬೇಕು' ಎಂದ. 'ಆಗಲಿ, ಋಷಿಪತ್ನಿಯಂತೇ ಜೀವಿಸುತ್ತೇನೆ. ಒಂದು ಕಾವಿಸೀರೆ ಉಟ್ಟು, ರುದ್ರಾಕ್ಷಿ ಮಣಿ ಮಾಲೆ..... ಹಾಕಿಕೊಳ್ಳಲೇ?' ಎಂದಳು. 'ಬೇಡ, ಸರಳವಾಗಿ ಒಂದು ಜಡೆ ಹೆಣೆದು, ಹೂ ಮುಡಿದುಕೊ. ಹ್ಞಾ! ಈ ಹೊಂಬಣ್ಣದ ಕೂದಲಿಗೆ ಜಡೆ ಒಪ್ಪಲ್ಲ. ಬಿಚ್ಚಿದ ಆ ಕೂದಲಿಗೆ ಒಂದು ಹಾಕಿಕೊ' ಎಂದ.

'ನನ್ನ ಅಲಂಕಾರ ಇರಲಿ, ಒಂಬತ್ತಕ್ಕೆ ನಾವು ಏರ್‌ಪೋರ್ಟ್‌ನಲ್ಲಿರಬೇಕು ನಡೆಯಿರಿ' ಎಂದಳು.

'ಬೆಲ್ಟ್ ಹಾಕಿಕೊಳ್ಳಿ. ಈ ಬೆಲ್ಟ್ ನಾನು ಎಷ್ಟು ಹಣ ಸುರಿದು ತಂದಿದ್ದು ಗೊತ್ತ?' ಎಂದಳು.

'ಫುಲ್‌ಸೂಟ್ ನನಗೆ ಹಿಂಸೆ, ಜಯಾ?. ಬೆಲ್ಟ್ ಬಿಗಿದು, ಟೈ ಕಟ್ಟಿದರೆ ಏದುಬ್ಬಸ ಬಂದ ಹಾಗಾಗುತ್ತೆ' ಎಂದ.

ಜಯಾ ಗದರಿಸುವಂತೆ 'ಮಹರಾಯ, ಹಳ್ಳಿಗಮಾರ ಬಂದಹಾಗೆ ಬರಬೇಡಿ, ದೊಡ್ಡ ಕಂಪನಿಯ ದೊಡ್ಡ ಹುದ್ದೇಲಿದ್ದೀರಿ, ಅದಾದರು ನೆನೆಪಿಟ್ಟುಕೊಳ್ಳಿ' ಎಂದಳು.

ಅವಳು ತಂದ ಇಪ್ಪತ್ತು ಸಾವಿರ ರೂ.ಗಳ ಮೌಲ್ಯದ ಫುಲ್‌ಸೂಟ್ ಧರಿಸಿದಾಗ ಅವನ ಮನಸ್ಸಿಗೆ ಬೇಸರವಿತ್ತು. ಜಯಶ್ರೀ ಅವನನ್ನು ವಿಮರ್ಶಿಸುತ್ತ-

'ಇದೊಂದಿಷ್ಟು ಕಳ್ಳಹೊಟ್ಟೆ, ಮುಂದೆ ಬರದಿದ್ರೇ; ನೀವು ಈ ವಯಸ್ಸಿನಲ್ಲಿಯೂ ಹ್ಯಾಂಡ್‌ಸಮ್ ಬಾಯ್' ಎಂದು ಅವನ ಹೊಟ್ಟೆ ಮೇಲೆ ಕೈಯಾಡಿಸಿದಳು.

'ಮುಪ್ಪನ್ನ ಆತ್ಮೀಯವಾಗಿ ಎದುರುಗೊಳ್ಳೋದ್ರಲ್ಲೇ ಮನುಷ್ಯನ ಹಿತ ಅಡಗಿದೆ' ಎಂದ.

'ನೀವು ಇಷ್ಟು ಬೇಗ ಮುದುಕರಾಗ್ಲಿಕ್ಕೆ ನಾನು ಬಿಡಬೇಕಲ್ಲ, ಅರವತ್ತಾದ

ಮೇಲೆ ನಿಮ್ಮನ್ನ ಡೈವೋರ್ಸ್ ಮಾಡ್ತೀನಿ. ಆಗ ಬಿಳಿಗಡ್ಡ ಬಿಟ್ಕೊಂಡು ನೀವು ಹಿಮಾಲಯದ ಕಡೆ ಹೊರಟ್ಹೋಗುವ್ರಂತೇ ' ಎಂದಳು.

'ಅಂತು ಅರವತ್ತನೆಯ ವಯಸ್ಸಿನಲ್ಲಾದರೂ ನನ್ನ ಬಿಡುಗಡೆ ಮಾಡ್ತೀಯಲ್ಲ. ಜನ್ಮ ಜನ್ಮಾಂತರಕ್ಕೂ ನೀವೇ ನನ್ನ ಪತಿಯಾಗಿ ಅಂತ ಕಾಡಿಸಲ್ಲವಲ್ಲ. ಅದೇ ನನ್ನ ಪುಣ್ಯ'ಎಂದ.

ಅವಳು ಸಿಡುಕಾಗಿ - 'ಥೂ.... ಈ ಜನ್ಮದಲ್ಲಿ ದಡ್ಡತನ ಮಾಡಿ ಒಬ್ಬ ಅರಸಿಕ್ಕ ಪತಿಯನ್ನ ಆರಿಸಿಕೊಂಡೇ ಅಂದರೇ .... ಅದು ಜನ್ಮ ಜನ್ಮಕ್ಕೂ ಮುಂದುವರಿಯ ಬೇಕಾ ?' ಎಂದಳು.

'ಬೇಕಾಗಿಲ್ಲ ಬಾ, ನಮ್ಮ ಮಕ್ಕಳಿಗಾಗಿ ನಾವು ಒಟ್ಟು ಇರಬೇಕಾಗಿದೆ. ಅಷ್ಟು ಯೋಚಿಸಿ, ನೀನು ಮನ ಶ್ಯಾಂತಿ ತಗೋ, ನಾನು ತಗೋತೀನಿ' ಎಂದು ಹೊರನಡೆದ. ಎಂಟುಗಂಟೆ ಆಗುತ್ತಿದ್ದರಿಂದ ಅವಳು ಅವನನ್ನು ಹಿಂಬಾಲಿಸಿದಳು.

ಬೆಂಗಳೂರಿನ ಏರ್‌ಪೋರ್ಟಿಗೆ ಅವಳ ನೆಚ್ಚಿನ ಡ್ರೈವರ್ ಕಾರು ತಂದಿದ್ದ. 'ಚಿಂಟೂನ್ನ ಏಕೆ ಕರ್ಕೊಂಡು ಬರಲಿಲ್ಲ.'

ತನ್ನ ಒಡತಿ ಎಂದು ಗುರುತು ಹಿಡಿಯಲು ವೆಂಕಟಪ್ಪನಿಗೂ ಕೊಂಚವೇಳೆ ಹಿಡಿಸಿತು. ಹಸಿರು ಕಂಗಳ, ಬಂಗಾರ ಕೂದಲು, ಗುಲಾಬಿ ಬಣ್ಣದ ಈ ಚೆಲುವೆ ಯಾರು ಅನಿಸತ್ತವನಿಗೆ !

'ಚಿಕ್ಕ ಸಾಹೇಬರು ಊರಲಿಲ್ಲ ಅಮ್ಮಾವರೆ, ಮೈಸೂರಿಗೆ ಹೋಗವರೆ' ಎಂದ.

ಅವಳು ಕ್ರೋಧದಿಂದ ಕಂಪಿಸುತ್ತ 'ಮೈಸೂರಿಗೆ...?' ಎಂದಳು.

'ಸಾಹೇಬರ ಗಾಡೀಲಿ ಸಲೀಮನೇ ಕರ್ಕೊಂಡು ಹೋಗಿದ್ದಾನೆ, ಇನ್ನು ಬಂದಿಲ್ಲ'ಎಂದ.

'ಸಲೀಮ... ಯಾರನ್ನ ಕೇಳಿ ಕರೆದುಕೊಂಡು ಹೋದ, ಆ ಗುಲಾಮ ?' ಎಂದು ಗರ್ಜಿಸಿದಳು.

'ಸ್ವಲ್ಪ ಪೇಷನ್ಸ್ ತಗೊ. ಇದು ಏರ್‌ಪೋರ್ಟ್‌ನ ಕಾರ್‌ಪಾರ್ಕಿಂಗ್‌ನ ಸ್ಥಳ. ಮನೆಗೆ ಹೋದ ಮೇಲೆ ಹಾರಾಡುವಿಯಂತೆ. ನನ್ನ ಮಗನ್ನ ಅವನ ಅಪೇಕ್ಷೆಯಂತೆ ನಾನೇ ಮೈಸೂರಿಗೆ ಕಳಿಸಿದ್ದೀನಿ'ಎಂದ ರಾಜಸಿಂಹ.

ಕೋಪ, ಅಸಹನೆ, ಉದ್ವೇಗದಿಂದ ತೊಳಲಾಡುತ್ತಿದ್ದಳು. ಅವಳು ಸೊಗಸಾದ ಬೆಂಜ್ ಕಾರಿನಲ್ಲಿ ಕುಳಿತಿದ್ದಾಳೋ?, ಬೆಂಕಿಯ ಮೇಲೊ ? ಎಂದವನಿಗೆ ಸಂಶಯ ವಾಗುವಂತೆ ಇತ್ತು ಅವಳ ಆ ತೊಳಲಾಟ. ಕಾರು ಮನೆ ತಲುಪಿತು.

ಕಾರಿಂದ ಇಳಿದು ಮನೆಗೆ ಬಂದವಳೇ ದೊಡ್ಡಧ್ವನಿಯಲ್ಲಿ ಕೂಗಾಡ ತೊಡಗಿದಳು.

'ಎಷ್ಟು ಧೈರ್ಯ ನಿಮಗೆ ? ಆ ಕಳ್ಳ ಮುದುಕಿ ಹತ್ತಿರ ರಾಜಾಧಿರಾಜನಾದ ನನ್ನ ಮಗನ್ನ ಕಳಿಸಿದ್ದೀರಿ. ಆ ಬೊಚ್ಚುಬಾಯಿ ತಿರುಪೆ ಮುದುಕಿಗೆ, ನನ್ನ [illegible] ಮುಟ್ಟಲಿಕ್ಕೆ ಹಕ್ಕಿದೆಯಾ ? ನೀವು ಆ ಮುದುಕಿಗೆ ದಾಸಾನುದಾಸನಾಗಿ, ನನ್ನ ತಿರಸ್ಕರಿಸ್ತಿರೋದೇ ಸಾಕು. ನನ್ನ ಮುದ್ದು ಮಗ ನನ್ನ ಮೇಲೆ ಪಂಚಪ್ರಾಣ ಇಟ್ಕೊಂಡಿದ್ದಾನೆ. ಆ ಹೊಲಸು ಮುದುಕಿ ಮನೆಗೆ ಅವನ್ನನ ಕಳಿಸೋ ಅಭ್ಯಾಸ ಏಕೆ ಮಾಡಿಸಿದಿರಿ ? ಮೊದಲು ಹೋಗಿ ಅವನನ್ನ ಕರೆದುಕೊಂಡು ಬನ್ನಿ, ಒಂದು ಕ್ಷಣ ತಡವಾದರೆ ಉಗ್ರಕಾಳಿ ಆಗ್ತೀನಿ.'

'ರ್‍ಯಾಸ್ಕಲ್ ! ನಿನ್ನ ಗುಲಾಮನಲ್ಲ ನಾನು. ನನ್ನ ಮಗ ಹೋಗಿರೋದು ನನ್ನ ತಾಯಿ ಮನೆಗೆ. ನನ್ನ ತಾಯಿ ಹೊಲಸು ಮುದುಕಿ ಅಲ್ಲ. ಗಂಡನಿಗೆ ವಂಚಿಸಿ, ನಿನ್ನ ಆ ದೊಡ್ಡಪ್ಪನ ಜೊತೆ ಮುಂಬೈನಲ್ಲಿ ವಾಸಿಸ್ತಿರೋ ನಿಮ್ಮಮ್ಮ ಹೊಲಸು ಮುದುಕಿ. ನನ್ನ ತಾಯಿ ಬಗ್ಗೆ ಕೆಟ್ಟ ಮಾತಾಡಿದರೇ ನಿನ್ನ ನಾಲಿಗೆ ಸೀಳಿಹಾಕ್ತೀನಿ' ಎಂದು ಗದರಿ ತನ್ನ ಕೋಣೆಗೆ ಬಂದು ಮಲಗಿದ. ಒಂದು ಕ್ಷಣ ಅವಳು ದಿಗ್ಭ್ರಾಂತಳಾದಳು! ಯಾರು....ಯಾರು ಅವನಿಗೆ ತನ್ನ ತಾಯಿಯ ಆ ಹಳೇ ಚರಿತ್ರೆ ಹೇಳಿದವರು? ಲಿಜೀ....? ಶೈನಿ ? ಈ ಇಬ್ಬರು ಈಗ ತನ್ನನ್ನ ಎಳ್ಳುಕಾಳಿನಷ್ಟು ಕೇರ್ ಮಾಡಲ್ಲ. ಅವರೇ ಇರಬಹುದೆ ? ಮುಂಬೈನಲ್ಲಿ ದೊಡ್ಡಪ್ಪನಿನಗಾಗದವರು ತನ್ನ ಬಂಧುಗಳಲ್ಲೇ ಎಷ್ಟು ಜನ ಇಲ್ಲ ? ಅವರ್‍ಯಾರಾದರೂ ತನ್ನ ಗಂಡನಿಗೆ ಫೋನ್ ಮಾಡಿರಬಹುದೆ ?

ಒಟ್ಟಿನಲ್ಲಿ ಅವನನ್ನು ಮುಂಬೈಗೆ ಕರಿಸಿಕೊಂಡದ್ದೇ ದೊಡ್ಡ ತಪ್ಪಾಯಿತೆ ? ಚಿನ್ನಿ ಅವನನ್ನು ಮರೆತ್ತಿದ್ದಾಳೆ, ಅದನ್ನು ಅವನಿಗೆ ಮನದಟ್ಟುಮಾಡಿ, ಅವನ ಮನಸ್ಸನ್ನು ತಳಮಳ ಎಬ್ಬಿಸಬೇಕೆಂದು ತಾನು ಅವನನ್ನು ಕರೆಸಿದೆ. ಎರಡೇ ದಿನ ಇದ್ದದ್ದು... ರೂಮ್ ಬಿಟ್ಟು ಕದಲಲಿಲ್ಲ. ಅಷ್ಟರಲ್ಲಿ ಈ ವಿಷಯ ಕಂಡು ಹಿಡಿದಿದ್ದಾನೆ. ಇರಲಿ. ಎಂದೋ ನಡೆದ ಆ ವಿಷಯಕ್ಕೆ ತಾನೇಕೆ ಭಯಪಡಬೇಕು?

ರಾಜಸಿಂಹನನ್ನು ತಾನೊಂದು ಚೂರು ಪ್ರೀತಿಸುವುದಿಲ್ಲ. ಅವನನ್ನು ನೆನೆದರೆ ಮೈ ಕಾದು ಕೆಂಡವಾಗುತ್ತದೆ, ಅವನು ತನ್ನನ್ನು ರಾಜಕುಮಾರಿ ಎಂದು ಓಲೈಸುವುದಿಲ್ಲ, ಹೆಜ್ಜೆಹೆಜ್ಜೆಗೆ ತನ್ನನ್ನು ಓಲೈಸಿ ಆರಾಧಿಸುವ ಮನೋಹರನನ್ನು ತಾನು ವಿವಾಹವಾಗುವಹಾಗಿಲ್ಲ. ತಂದೆ ಹಾಕಿರುವ ಆ ಕರಾರು, ಅವರ ವಿಲ್ ತನಗೆ ಅಡ್ಡಿಯಾಗಿದೆ. ಸಹಿಸಲೇಬೇಕು ಈ ಅಹಂಕಾರಿಯನ್ನು.

ಈ ತಂದೆ, ಇನ್ನು ಎಷ್ಟುದಿನ ಬದುಕಿರುತ್ತಾರೋ ತನ್ನನ್ನು ಕಾಡಿಸಲು. ತನ್ನ ವಿವಾಹ ಆಗಿಯೇ ಹತ್ತುವರ್ಷ ಆಯಿತು. ಹೂಂ.. ಔಷಧೋಪಚಾರ ಎಲ್ಲಾ ಚೆನ್ನಾಗಿ ನಡೀತಿದೆ. ಗಾಳಿಗೆ ಅಲುಗಾಡುತ್ತಿರುವ ಆ ಮರ ಎಂದಿಗೆ ಉರುಳುವುದೋ?

ತಾನು, ಮೂರು ತಿಂಗಳು ಮಗನನ್ನು ಇವನ ತೆಕ್ಕೆಗೆ ಹಾಕಿ ಹೋದಾಗ ಆ ಹುಡುಗನಿಂದ ಇವನು ಪಡಿಪಾಟಲು ಅನುಭವಿಸಿರಬಹುದೆಂದು ಊಹಿಸಿದ್ದೆ. ಆದರೆ ಆ ಪುಂಡನ್ನ ಪಳಗಿಸಿದ್ದಾರೆಂದು ತಿಳಿದು ಕೊಂಚ ಅಸೂಯೆಯೂ ಆಗಿತ್ತು. ಮಗನ ಮೇಲಾದರೂ ತನಗೆ ನಿಶ್ಚಲವಾದ ಪ್ರೀತಿ ಇದೆಯೆ ?

ತನ್ನ ಅಂತರಂಗ ತಾನೇ ಶೋಧಿಸಿಕೊಂಡಾಗ ಅನಿಸಿತು. ಅವರು ಚಿನ್ನಿಯನ್ನು ಪ್ರೀತಿಸುತ್ತಾರೆಂದು, ತಾನು ಮಗನನ್ನು ವಹಿಸಿಕೊಳ್ಳುತ್ತಿದ್ದಳು. ಅವನ ಪುಂಡಾಟಿಕೆ ಮಿತಿಮೀರಿದಾಗ ಬೇಸತ್ತಿದ್ದಳು.

ಆದಿನ ಸಂಜೆಯೆ ಬಂದ ಚಿಂಟು. ಹಜಾರದಲ್ಲಿ ಕುಳಿತು ಪೇಪರ್ ಓದುತ್ತಿದ್ದ ರಾಜಸಿಂಹ ಎದುರು ಸೋಫಾ ಮೇಲೆ ಕಿವಿಗೆ ವಾಕ್‌ಮನ್ ಹಾಕಿಕೊಂಡು ಏನೋ ಹಾಡು ಕೇಳುತ್ತ ಇದ್ದಳು ಜಯಶ್ರೀ. ಗೋವಿಂದ ಬಂದು 'ಮೈಸೂರಿಂದ ಸಲೀಮನ ಕಾರು ಬಂತು. ಚಿಕ್ಕ ಸಾಹೇಬರು ಬಂದರು' ಎಂದ.

ಅವನ ಹಿಂದೆ ಸಲೀಮ ಒಂದು ಸೂಟ್‌ಕೇಸ್, ಏರ್‌ಬ್ಯಾಗ್ ತಂದ.

ತಂದೆಯನ್ನು ನೋಡಿ ಓಡಿಬಂದ.

'ಪಪ್ಪಾ... ಅಜ್ಜಿಯ ಹತ್ತಿರ ಜಿಗ್‌ಜಾಗ್ ಅನಿಮಲ್ಸ್ ಇಸ್ಕೊಂಬಂದೆ. ಬೊಂಬೆ ಪುಸ್ತಕಗಳು ತಂದೆ. ಊರಿಗೆ ಹೋಗಿ ಕೊಂಡ್ಕೋತೀನಜ್ಜಿ ಅಂದೆ. ಇದೆಲ್ಲಾ ಇಪ್ಪತ್ತು ವರ್ಷದ ಹಿಂದಿನದು, ಈಗ ಸಿಗಲ್ಲಾಂದರು. ಅದಕ್ಕೆ ಎಲ್ಲಾ ತಂದ್ಬಿಟ್ಟೆ...' ಎಂದ.

'ಚಿಂಟೂ...'ಎಂದಳು.

ಸ್ವರ ಕೇಳಿ ತಿರುಗಿ ನೋಡಿದ. ಕೊಂಚ ಅಚ್ಚರಿಯಿಂದ 'ಮಮ್ಮಿ ಫ್ಯಾನ್ಸಿಡ್ರೆಸಿಗೆ ವೇಷ ಹಾಕಿಕೊಂಡಿದ್ದೆಯಾ ? ಬಾಬ್ರೀನೂ ಒಂದು ಸಲ ಫ್ಯಾನ್ಸಿಡ್ರೆಸ್ಸಲ್ಲಿ ಮುಸುಕಿನ ಜೋಳದ ಜುಂಗನ್ನು ತಲೆಗೆ ಕಟ್ಟಿಕೊಂಡು, ಮುಖಕ್ಕೆ ಬೊಂಬಾಯಿ ಮಿಠಾಯಿ ಅಂಟಿಸಿಕೊಂಡು ಒಂದು ಭಿಕ್ಷುಕ ವೇಷಹಾಕಿದ್ದ. ನಾನು ಕಂಡು ಹಿಡಿದುಬಿಟ್ಟೆ' ಎಂದ. ಜಯಶ್ರೀಗೆ ಅಪಮಾನವಾಯಿತು.

'ಇಲ್ಲಿ ಬಾ ಇಲ್ಲಿ, ನಿನ್ನ ಮೈಸೂರಿಗೆ ಹೋಗು ಅಂದೋರ್‍ಯಾರು ?' ಎಂದಳು.

'ಮತ್ತೆ ಪಪ್ಪಾ, ನೀನು ಇಬ್ಬರು ಊರಲ್ಲಿಲ್ಲದಿದ್ದರೇ ನಾನು ಒಬ್ಬನೇ ಏಕೆ ಇಲ್ಲಿರಬೇಕು ? ಅಜ್ಜಿಯ ಮನೆ ನಂಗೆ ಇಷ್ಟ. ಅಜ್ಜಿಗೆ ಚಿನ್ನಿಗಿಂತ ನಾನೇ ಇಷ್ಟಾಂತೆ. ನಮ್ಮ ವಂಶೋದ್ಧಾರಕ ಅಂತ ಒಬ್ಬ ಮಾಮಂಗೆ ಪರಿಚಯ ಮಾಡಿದರು. ಅಜ್ಜೀ ಮನೇಲಿ ಮಜಾ ಇರುತ್ತಮ್ಮ. ನಾನೇನು ಮಾಡಿದರೂ ಅಜ್ಜಿ ಬೈಯಲ್ಲಾ...' ಎಂದ.

ಜಯಶ್ರೀ ಕೋಪದಿಂದ 'ಶಾಲೆ, ಓದು, ಟ್ಯೂಷನ್ ಬಿಟ್ಟು ಅಜ್ಜಿಮನೇಂತ ಇಲ್ಲದ ಹಟ ತೆಗೆದರೆ ರ್‍ಯಾಂಕಲ್ಲಿ ಹಿಂದೆ ಬೀಳ್ತಿ. ನಾನು ನಿನ್ನನ್ನು ಚಿನ್ನಿ ಹಾಗೆ

ಬೋರ್ಡಿಂಗ್‌ಗೆ ಸೇರಿಸ್ತೀನಿ' ಎಂದಳು.

ಚಿಂಟು ಕೋಪದಿಂದ 'ನನ್ನ ಬೋರ್ಡಿಂಗ್ ಸೇರ್‍ಸಿದರೆ ನಿನ್ನನ್ನ ಕಚ್ಚಿ, ಪರಚಿ, ಕೊಂದುಹಾಕ್ತೀನಿ. ನಾನು ಬರೋ ಭಾನುವಾರವೂ ಮೈಸೂರಿಗೆ ಹೋಗ್ತೀನಿ. ರಾಮಾಯಣ ಮಧು ಆಂಟಿ ಅರ್ಧ ಹೇಳಿದ್ದಾಳೆ. ರಾಮ ಸೀತೆ ಕಾಡಿಗೆ ಹೋಗಿದ್ದಾರೆ. ಇನ್ನು ಅರ್ಧ ಪುಸ್ತಕ ಓದಬೇಕು. ವಾರವಾರ ಬಾ... ಹತ್ತು ಪುಟ ಓದಿ ಹೇಳ್ತೀನೀಂತ ಹೇಳಿದ್ದಾಳೆ' ಎಂದ.

'ನಿನ್ನನ್ನು ಕಾಡಿಗೆ ಕಳಿಸ್ತೀನಿ. ರಾಮಾಯಣ, ಭಾರತ ಕೇಳಿಸಿಕೊಳ್ಳಿಕ್ಕೆ ನೀನು ಅಜ್ಜಪ್ಪಾ ಅಲ್ಲ, ಕಾರು ಹಾಗಾದರೆ ಅಮೆರಿಕಾಗೆ ವಾಪಸ್ ಕಳಿಸ್ತೀನಿ' ಎಂದಳು.

'ಕಾರು ತಂದಿದ್ದಿಯಾ, ಮಮ್ಮಿ?' ಎಂದ.

'ನಿನ್ನೇನೆ ಕಳಿಸಿದ್ದೆ. ನಮ್ಮ ಪೋರ್ಟಿಕೋದಲ್ಲಿ ದೊಡ್ಡ ಕಾರುಗಳ ಜೊತೆ ನಿಂತಿದೆ. ವೆಂಕಟಪ್ಪಾ ನಿನಗೆ ಅದನ್ನ ಬಿಡೋದು ತೋರಿಸ್ತಾನೆ' ಎಂದಳು.

'ಗೊತ್ತು. ಬಾಬ್ರಿ ಬಿಡುವಾಗ ನೋಡಿದ್ದೇನೆ' ಎಂದು ಹೊರಗೆ ಓಡಿದ.

ಅವಳು ಏರ್‌ಬ್ಯಾಗ್ ಎಳೆದಾಡಿ ಅವನು ಮೈಸೂರಿಂದ ತಂದ ಕೆಲವು ಪುಸ್ತಕ, ಪ್ರಾಣಿಗಳ ಪೀಠ, ಫೋನ್ ಎಲ್ಲಾ ಅದರಲ್ಲಿ ತುಂಬಿ ಎದ್ದಳು.

ರಾಜಸಿಂಹ ಬೇಸರದಿಂದ 'ಅದರ ಮೇಲೆ ಏಕೆ ಕಣ್ಣು ನಿಂಗೆ ? ಮಗು ಆಸೆಗೆ ತಂದಿದ್ದಾನೆ' ಎಂದ.

'ನನ್ನ ಮಗ ಕೋಟ್ಯಾಧೀಶ. ಇಂಥಾ ಗತಿಗೆಟ್ಟ ಹಳೆಯ ಪುಸ್ತಕ, ಮಾಸಿದ ಸಾಮಾನುಗಳಿಟ್ಕೊಂಡು ಆಡೋಂಥಾ ದರಿದ್ರ ಅವನಿಗ್ಯಾಕೆ ? ಎಲ್ಲಾ ತಿಪ್ಪೇಲಿ ಎಸಿತೀನಿ' ಎಂದಳು.

'ತಿಪ್ಪೇಗೆ ಏಕೆ ಎಸೀತಿ ? ಅವನ ಕಣ್ಮರೆಸಿ ಇಡು. ಬರೋವಾರ ಮೈಸೂರಿಗೆ ತಗೊಂಡ್ಹೋಗಿ ಅಮ್ಮಿಗೆ ಕೊಡ್ತೀನಿ. ಇದು ನಿನ್ನ ಪಾಲಿನ ತಿಪ್ಪೆಗೆ ಎಸಿಯೋ ಸಾಮಾನು, ನಮ್ಮಮ್ಮನಿಗೆ ಮಗ ಆಟ ಆಡಿದ ವಸ್ತು ಅಂದರೆ ಗೋಪಾಲಕೃಷ್ಣನ ಪವಿತ್ರ ಮಂದಿರದ ವಸ್ತುಗಳೆಂದೇ ಭಾವನೆ, ಹಿಂದೆ ನಾನು ಚಿಕ್ಕೋನಿದ್ದಾಗ ಆಡಿದ ಆಟಿಕೆಗಳು. ನೋಡಿದ ಪುಸ್ತಕಗಳು' ಎಂದ.

'ನಿಮ್ಮ ತಾಯಿ ಮಗನ ಪ್ರೀತಿ ಜಗತ್ಪ್ರಸಿದ್ಧವಾಗಿದೆ ಬಿಡ್ರಿ. ಆದರೆ ಈ ಸಾಮಾನುಗಳು ನನ್ನ ಮಗನವರೆಗೆ ಬರಕೂಡದು. ಅವನು ಚಿನ್ನದ ಚಮಚ ಬಾಯಲ್ಲಿ ಇಟ್ಕೊಂಡು ಹುಟ್ಟಿದೋನು. ಇದನ್ನ ಎಲ್ಲಿ ಅಡಗಿಸಿ ಇಡ್ತೀರೋ ಇಡಿ. ಪುನಃ ಅವನ ಕಣ್ಣಿಗೆ ಇದು ಬೀಳಕೂಡದು. ಬಿದ್ದರೆ ಇದನ್ನೆಲ್ಲಾ ತಿಪ್ಪೆಗೆ ಎಸೆದು ಬೆಂಕಿ ಹಚ್ತೀನಿ. ನನ್ನ ಪಾಲಿಗೆ ಇದು ಐತಿಹಾಸಿಕ ವಸ್ತುಗಳೇನಲ್ಲ' ಎಂದಳು.

'ಗಂಡನ ಮೇಲೇ ಪ್ರೀತಿ ಇಲ್ಲ. ಇನ್ನು ಗಂಡನ ಬಾಲ್ಯದ ಆಟಿಕೆ ಮೇಲೆ

ಪ್ರೀತಿ ಹೇಗೆ ಬರತ್ತೆ ?' ಎಂದ.

'ನಿಮಗೆ ಹೆಂಡತಿಯ ಮೇಲೆ ಬಹಳ ಪ್ರೀತಿ ಇದೆ' ಎಂದು ಹಂಗಿಸಿ ಆ ಏರ್‌ಬ್ಯಾಗ್ ಅವನ ಮುಂದೆ ಕುಕ್ಕಿ 'ಮತ್ತೆ ಇದು ಚಿಂಟೂ ಕಣ್ಣಿಗೆ ಕಾಣಿಸಕೂಡದು' ದಿಸ್ ಈಸ್ ಮೈ ಆರ್ಡರ್' ಎಂದಳು.

'ಆಯ್ತು ತಮ್ಮ ಆಜ್ಞೆ ಪಾಲಿಸ್ತೀನಿ. ಬರೋವಾರ ಹೋಗಿ ಅಮ್ಮನಿಗೆ ಕೊಟ್ಟು ಬರ್‍ತೀನಿ. ಮಗನ ಚಿಕ್ಕಂದಿನ ಆಟಿಕೆಗಳೂಂದ್ರೆ ಅಮ್ಮನ ಪಾಲಿನ ಅಮೂಲ್ಯ ವಸ್ತು. ಬೇರಾರಿಗೂ ಕೊಡೋಳಲ್ಲ. ಮೊಮ್ಮಗ ಅನ್ನೋ ಪ್ರೀತಿಗೆ ಕೊಟ್ಟಿದ್ದಾಳೆ' ಎಂದು ಆ ಏರ್‌ಬ್ಯಾಗ್ ಹಿಡಿದು ಕೋಣೆಗೆ ಹೋದ.

ತನ್ನ ಗಾಡ್ರೇಜ್ ಬೀರು ತೆಗೆದು ಅದರಲ್ಲಿ ತೂರಿಸಿದ. ಸಂಜೆಯವರೆಗೆ ಕಾರು ಆಟವಾಡಿ, ಹೊಟ್ಟೆ ಹಸಿದಾಗ ಒಳಗೆ ಬಂದ. ಹಜಾರದಲ್ಲಿ ಕೂತಿದ್ದ ತಾಯಿಯನ್ನು ಗಮನಿಸದೇ 'ಪಪ್ಪಾ... ಬಾ ತಿಂಡಿ ತಿನ್ನೋಣಾ' ಎಂದು ರೂಮಿನಲ್ಲಿ ಮಲಗಿದ್ದ ತಂದೆಯ ಬಳಿ ಬಂದ.

ರಾಜಸಿಂಹ ಎದ್ದು ಮಗನೊಡನೆ ಬಂದ. ಇಬ್ಬರು ಡೈನಿಂಗ್ ಟೇಬಲ್ಲಿನ ಬಳಿ ಕುಳಿತು ತಿಂಡಿ ತಿನ್ನುವಾಗ 'ಅಜ್ಜಿ ಏನೇನು ತಿಂಡಿ ಮಾಡಿದ್ದರು ಮೊಮ್ಮಗನಿಗೆ?' ಎಂದ. 'ತಿಂಡೀ ಎಲ್ಲಾ ಮಧು ಆಂಟೀನೇ.... ಬೋಂಡ, ಕೇಸರಿಭಾತು ಎಲ್ಲಾ ಮಾಡಿದ್ದರು. ನಿನ್ನೆ ನಾನು ಅಜ್ಜಿ, ಮಧು ಆಂಟಿ, ಗೋಪಾಲ್ ಎಲ್ಲಾ ಜೂ ನೋಡ್ಲಿಕ್ಕೆ ಹೋಗಿದ್ದಿವಿ' ಎಂದ.

'ಗೋಪಾಲ್ ಯಾರು ? ಎಂದು ಅವನು ಕೇಳುವ ಗೊತ್ತಿಗೆ ಜಯಶ್ರೀ ಬಂದಳು.

'ಏನು ತಂದೆ ಮಗ ಇಬ್ಬರೇ ಆರಾಮವಾಗಿ ಕೂತುಬಿಟ್ಟಿರಿ, ನನ್ನನ್ನ ಕರೀಬೇಕೂಂತ ಸಹ ಅನಿಸಲಿಲ್ಲವಾ ?' ಎಂದಳು.

'ನಿಮ್ಮದೇ ಮನೆ, ನೀವು ಈ ಮನೆ ಮಹಾರಾಣಿ. ನಿಮ್ಮನ್ನ ಕರಿಯೋ ಧೈರ್ಯ ಸೇವಕನಿಗೆ ಹೇಗೆ ಬರುತ್ತೆ ?' ಎಂದ ರಾಜ್. ಅವಳು ಬಿಂಕದಿಂದ 'ಸೇವಕನ ಪ್ರೀತಿಗೂ ಹಂಬಲಿಸುತ್ತಾ ಇರೋ ದುರಾದೃಷ್ಟಶಾಲಿ ನಾನು. ಆದರೆ, ಆ ಸೇವಕನಿಗೆ ಒಡತಿಯನ್ನು ಕಾಡಿಸೋದ್ರಲ್ಲೇ ತೃಪ್ತಿ. ತಿಂಡಿ ಏನು ಮಾಡಿದ್ದಾಳೆ ರತ್ನಮ್ಮ' ಎಂದಳು.

'ಪೂರಿ ಪಲ್ಯ....' ಎಂದ. ಅವಳು ಬೇಸರದಿಂದ 'ನೀವು ಸ್ವಲ್ಪ ಎಣ್ಣೆ ಬೆಣ್ಣೆ ಕಡಿಮೆ ಮಾಡಬೇಕಪ್ಪಾ.... ಆನೇ ಆಗ್ತಾ ಇದ್ದೀರಿ. ಮೈದಾಹಿಟ್ಟಿನ ಆನೆ, ಆಫೀಸಿನಲ್ಲಿ ಈಗಾಗಲೇ ವೈಟ್ ಎಲಿಫೆಂಟ್ ಅಂತ ಹೆಸರು ಬಿದ್ದಿದೆ ' ಎಂದಳು. ಅವಳ ಮಾತಿಗೆ ಉತ್ತರಿಸದೇ ರಾಜಸಿಂಹ ಪೂರಿ, ಆಲುಗೆಡ್ಡೆ ಪಲ್ಯ, ಚಟ್ನಿ ತಿನ್ನತೊಡಗಿದ.

'ಅಜ್ಜೀ ಮನೇಲಿ ತಿಂಡಿ ಚೆನ್ನಾಗಿರತ್ತೆ ಪಪ್ಪಾ. ಹಾಲು ಕೀರು, ಆಂಬಡೆ, ಕೇಸರಿ ಭಾತ್, ಬೊಂಬಾಯಿ ಬೋಂಡ ಮಜಾ ಇತ್ತು. ಜಾಂಗೀರು ಬೇಕು ಅಂದೆ ಊರಿಗೆ ಬರುವಾಗ "ಬರೋವಾರ ಬಾ... ಔತಣ ಮಾಡಿಸ್ತೀನಿ" ಅಂತ ಅಜ್ಜೀ ಹೇಳಿದ್ದಾರೆ' ಎಂದ.

ಜಯಶ್ರೀ ಅಸಹನೆಯಿಂದ 'ಚಿಂಟು ಕಾರು ಹೇಗಿದೆ ? ನಿನ್ನ ಬಾಬ್ರಿ ಕಾರಿಗಿಂತ ಚೆನ್ನಾಗಿದೆಯೋ ಇಲ್ಲವೋ ? ನಿನಗೋಸ್ಕರ ಒಂದು ಲಕ್ಷ ರೂಪಾಯಿ ಕೊಟ್ಟು ತಂದಿದ್ದು' ಎಂದಳು.

'ಕಾರು ತುಂಬಾ ಚೆನ್ನಾಗಿದೆ ಮಮ್ಮಿ. ಆದರೆ ಜುಯ್ ಅಂತ ಬಿಡಲಿಕ್ಕೆ ಮೈದಾನವೇ ಇಲ್ಲ. ಎರಡು ಸಲ ತೆಂಗಿನ ಮರಕ್ಕೆ ಡಿಕ್ಕಿ ಹೊಡೆದೆ. ಮುಂದುಗಡೆ ಹೆಡ್‌ಲೈಟ್ ಒಡೆದುಹೋಯಿತು. ವೆಂಕಟಪ್ಪ ಬೇರೆ ಹಾಕಿಸಿ ಕೊಡ್ತೀನಿ ಅಂದಿದ್ದಾನೆ' ಎಂದ.

'ಸದ್ಯ! ನಿನ್ನ ಹಲ್ಲು ಮುರಿದಿಲ್ಲವಲ್ಲ' ಎಂದು ರಾಜಸಿಂಹ ನುಡಿದಾಗ- 'ಉಹುಂ... ಹಣೆಗೆ ಕೊಂಚ ತಗುಲಿತು' ಎಂದ. 'ತೋಟದಲ್ಲಿ ಇರೋಷ್ಟೇ ಜಾಗದಲ್ಲಿ ಬಿಡಬೇಕು' ತಾಯಿ ಬದ್ಧಿ ಹೇಳಿದಳು.

'ನಾನು ಕೂತುಕೊಂಡ್ರೆ ಒಳಗೆ ಅಂಟಿಕೊಂಡ ಹಾಗೆ ಇರತ್ತೆ, ಇನ್ನು ಸ್ವಲ್ಪ ದೊಡ್ಡ ಕಾರು ತರಬೇಕಾಗಿತ್ತು' ಎಂದ.

ಜಯಶ್ರೀ ಕೋಪದಿಂದ 'ಕಾರು ಇರೋದು ಅದೊಂದೇ ಸೈಜ್. ನೀನು ಈ ನಡುವೆ ಧಾಂಡಿಗ ಆಗ್ತಿದ್ದಿ. ನಿಮ್ಮಪ್ಪನ ಹಾಗೆ ಆನೆ ಆಗ್ತಿ' ಎಂದಳು.

ಅವನು ಉತ್ಸಾಹದಿಂದ 'ನಾನು ಪಪ್ಪನ ಹಾಗೆ ಇದ್ದೀನಂತೆ ಅಜ್ಜಿ ಹೇಳ್ತಾರೆ. ನಿಮ್ಮ ಪಪ್ಪನ ಪ್ರತಿರೂಪ, ಪಪ್ಪನ ಬಾಯಿಂದ ಬಿದ್ದ ಹಾಗಿದ್ದಿ ಅಂತಾರೆ. ನಿನ್ನ ಬಾಯಿಂದ ಉದುರಿ ಬಿದ್ದಿದ್ದೇನೇನು ಪಪ್ಪಾ....?' ಎಂದ.

'ಸದ್ಯ ! ಪಪ್ಪನ ರೂಪಾ ಹೋತರೆ ಪರವಾಗಿಲ್ಲ. ಆದರೆ ಪಪ್ಪನ ಗುಣ ಮಾತ್ರ ಹೋಲಬೇಡ' ಎಂದಳು.

'ಏಕೆ ? ಪಪ್ಪನ ಗುಣ ಒಳ್ಳೆದೇ ಇದೇ ಮಮ್ಮಿ. ನಂಗೆ ನಿನಗಿಂತ ಪಪ್ಪಾನ ಇಷ್ಟ' ಎಂದ.

'ಪಪ್ಪನಿಗಿಂತ ಮಮ್ಮಿ ಒಳ್ಳೇಳು. ಮಮ್ಮೀನ ಪ್ರೀತಿಸಿದರೆ ನಿಂಗೆ ಮುಂದೆ ಕೋಟಿ ಕೋಟಿ ರೂ. ಆಸ್ತಿ ಸಿಗತ್ತೆ' ಎಂದ, ರಾಜಸಿಂಹ ವ್ಯಂಗ್ಯವಾಗಿ.

'ಆಸ್ತಿ ಬೇಡ ನಂಗೆ. ದೊಡ್ಡೋನಾದ ಮೇಲೆ ನಾನು ಮೈಸೂರಿಗೆ ಹೋಗಿ, ಅಜ್ಜಿ ಅಂಗಡಿ ನೋಡ್ಕೋತೀನಿ. ರಾಶಿ ರಾಶಿ ದುಡ್ಡು ಬರತ್ತೆ, ಮಧು ಆಂಟಿ ನಿನ್ನೆ ಎಲ್ಲಾ ಎಣಿಸ್ತಾ ಲೆಕ್ಕಾ ಬರೆದಿಟ್ಟರು. ಹದಿನೆಂಟು ಸಾವಿರ ರೂಪಾಯಿ ಇತ್ತು.

ನಾನೇ ಹತ್ತು ಹತ್ತು ರೂಪಾಯಿ ನೋಟೆಲ್ಲಾ ಒಂದು ಕಡೆ ಬಂಡಲ್ ಮಾಡಿ ಇಟ್ಟೆ. ಅಂಗಡಿ ಇಟ್ಟರೆ ಎಷ್ಟೊಂದು ದುಡ್ಡು ಬರತ್ತೆ ಪಪ್ಪಾ ?' ಎಂದ.

'ನಿನಗೆ ದುಡ್ಡು ಬೇಕು ಹೌದೋ ಅಲ್ಲವೋ ? ಬಾ ನಿನ್ನ ನೋಟಿನ ರಾಶಿಯ ಮೇಲೆ ಕೂಡಿಸ್ತೀನಿ, ಈ ಮನೇಲಿ ದುಡ್ಡಿಗೇನು ಕಡಿಮೆ ಇಲ್ಲ' ಎಂದಳು ಜಯ.

ಮಗ ಉತ್ಸಾಹದಿಂದ ಮೈಸೂರಿನ ವಿಷಯ ಹೇಳಿದ ಹಾಗೆಲ್ಲಾ ಹೆಂಡತಿಗೆ ಕೋಪ ಉಕ್ಕೇರುತ್ತದೆ. ತಾನಾಗಿ ಏಕೆ ಅವಳ ಅಶಾಂತಿ ಹೆಚ್ಚಿಸಬೇಕೆಂದು ಅವನು ತಿಂಡಿ ಎದ್ದುಹೊರಟ.

ಕೊಂಚ ಹೊತ್ತಿಗೆ, ಮಲಗಿದ್ದ ತಂದೆಯ ಬಳಿ ಬಂದ ಚಿಂಟು 'ಪಪ್ಪಾ... ನನ್ನ ಏರ್‌ಬ್ಯಾಗ್ ಎಲ್ಲಿ ? ಅಜ್ಜಿ ನನಗೆ ಏನೇನೋ ಆಟದ ಸಾಮಾನು ಕೊಟ್ಟಿದ್ದರು' ಎಂದ. ರಾಜಸಿಂಹ ನೀರಸವಾಗಿ 'ನನಗೆ ಗೊತ್ತಿಲ್ಲಪ್ಪ, ನಿನ್ನ ಮಮ್ಮೀನ್ನ ಕೇಳು' ಎಂದ.

'ಕೇಳಿದೆ, ಗೋವಿಂದನ್ನ ಕೇಳಿದೆ, ಹನುಮು, ಸಂಗಪ್ಪಾ... ಯಾರಿಗೂ ಗೊತ್ತಿಲ್ವಂತೆ. ಅದರಲ್ಲಿ ಅಜ್ಜಿ ಕೊಟ್ಟ ಜಿಗ್‌ಜಾಗ್ ಅನಿಮಲ್ಸ್, ಫೋನ್ ಎಲ್ಲಾ ಇಟ್ಟಿದ್ದೆ'ಎಂದ.

'ಹೋಗಲಿ ಬಿಡು. ನಿನ್ನ ಹತ್ತಿರ ಧಂಡಿಯಾಗಿ ಕಾಮಿಕ್ಸ್ ಬುಕ್ ಇದೆ, ಮಿಕ್ಕಿ ಮೌಸ್, ಡೋನಾಲ್ಡ್ ಡಕ್ ವಿಡಿಯೋ ಕ್ಯಾಸೆಟ್ ಇದೆ, ಅದೆಲ್ಲಾ ನೋಡು. ಮಮ್ಮಿ ಅಮೆರಿಕಾದಿಂದ ಕಾರು ತಂದಿದ್ದಾಳೆ, ಆಡು' ಎಂದ.

'ಈಗ ಜಿಗ್‌ಜಾಗ್ ಅನಿಮಲ್ಸ್ ಬೇಕು ಪಪ್ಪಾ, ಇಲ್ಲದಿದ್ದರೆ ಗಟ್ಟಿಯಾಗಿ ಕಿರುಚ್ತೀನಿ'ಎಂದ.

ರಾಜಸಿಂಹ ಸುಮ್ಮನಿದ್ದ. 'ಜಿಗ್‌ಜಾಗ್.... ಜಿಗ್‌ಜಾಗ್'' ಎಂದು ಅರಚಿ, ಅರಚಿ ಕೂಗತೊಡಗಿದ. ಆ ರಾಕ್ಷಸ ಕಿರುಚಾಟ ತಾಳಲಾರದೆ ಜಯಶ್ರೀ ಬಂದಳು.

'ಚಿಂಟು, ನೀನು ಜಾಣನಾಗಿಲ್ಲ. ನಾನು ಕಾರು ಅಮೆರಿಕಾಗೆ ಕಳಿಸಿ ಬಿಡ್ತೀನಿ' ಎಂದಳು. 'ಕಳಿಸಿಬಿಡು, ಇಲ್ಲದಿದ್ದರೆ ನಾನೇ ಆ ಕಾರನ್ನ ಜಜ್ಜಿಪುಡಿ ಮಾಡಿಬಿಡ್ತೀನಿ, ಅದರಲ್ಲಿ ಕೂತು ಎರಡು ಸಲ ಆ ತೆಂಗಿನ ಮರಕ್ಕೆ ಡ್ಯಾಷ್ ಹೊಡೆದಾಗ ಮೈ ಜುಮ್ ಅಂತ ಹಿಂಸೆ ಆಯ್ತು. ಹಣೆಗೆ, ಮೊಳಕೈಗೆ ತಗುಲಿತು. ಆ ಕಾರು ಬೇಡ ನಂಗೆ. ಜಿಗ್‌ಜಾಗ್ ಬೇಕು' ಎಂದು ಹಠ ಮಾಡತೊಡಗಿದ.

'ತಡಿ, ಬೆಲ್ಟ್ ತರ್‍ತೀನಿ. ಮಾತಿಗೆ ಬಗ್ಗಲ್ಲ ನೀನು' ಜಯಶ್ರೀ ತನ್ನ ಕೋಣೆಗೆ ಹೋದಳು.

ಅವಳು ಬೆಲ್ಟ್ ತಂದಾಗ ರಾಜಸಿಂಹ ಎದ್ದು 'ಜಯಾ.... ಮಗೂಗೆ ಹೊಡೀಬೇಡ. ಮಕ್ಕಳ ಮನಸ್ಸು ಚಂಚಲ. ಮಗೂಗೆ ಶ್ರೀಮಂತಿಕೆ ಸಾಧನ, ಬಡವರ ಆಟಿಕೆ ಅನ್ನೋ ಭೇದ ಇರಲ್ಲ. ಹೊಸ ಹೊಸ ವಸ್ತು ಬೇಕಷ್ಟೆ. ಕೊಂಚ ಹೊತ್ತು

ಆಡಿದರೆ ತಪ್ಪೇನು, ಆಮೇಲೆ ಅವನೇ ಬಿಸಾಕ್ತಾನೆ' ಎಂದ.

'ಕಥೆ ಹೇಳಬೇಡಿ ನೀವು. ಅದೆಲ್ಲಾ ತಿಪ್ಪೆಗೆ ಎಸೆದು ಬೆಂಕಿ ಹಚ್ಚಿದ್ದಾಯ್ತು. ತಿರುಗ ಜಿಗ್‌ಜಾಗ್ ಅಂದರೆ ಬಾಯಿ ಮೇಲೆ ಬರೆ ಹಾಕ್ತೀನಿ' ಎಂದಳು.

'ನನ್ನ ಸಾಮಾನೆಲ್ಲಾ ತಿಪ್ಪೆಗೆ ಹಾಕಿದ್ದೀಯಾ ? ನಿನ್ನ ಕೂದಲು ಕಿತ್ತಾಕ್ತೀನಿ' ಎಂದು ತಾಯಿಯ ಆ ಹೊಂಬಣ್ಣದ ಕೂದಲ ರಾಶಿ ಹಿಡಿದೆಳೆದ. ಜಯಶ್ರೀಗೆ ಪ್ರಾಣ ಹೋಗುವಷ್ಟು ನೋವಾಯಿತು.

ಸಿಟ್ಟಿನಿಂದ ಬೆಲ್ಟ್ ತಗೊಂಡು ರಪರಪನೆ ಬಾರಿಸಿದಳು. ನೋವಿನಿಂದ ಚೀರುತ್ತಾ ಅವನು ಕೆಳಗೆ ಬಿದ್ದು ಹೊರಳಾಡಿದಾಗ, ಹೊರನಡೆದಳು.

ರಾಜಸಿಂಹ ಬಂದು ಮಗನನ್ನೆತ್ತಿ ಕೊಂಡ. 'ಏಕಪ್ಪಾ ಹಠ ಮಾಡ್ತಿ? ಮನೇಲಿ ಧಂಡಿಯಾಗಿ ಬೇರೆ ಸಾಮಾನಿದೆಯಲ್ಲ?' ಎಂದ.

'ಊಂಹೂಂ, ಜಿಗ್‌ಜಾಗ್ ಕೊಡೋವರೆಗೆ ನಾನು ಊಟ ಮಾಡಲ್ಲ' ಎಂದ. ಜಯಶ್ರೀ ಸೋಲಲಿಲ್ಲ. ಆ ರಾತ್ರಿ ಊಟ ಮಾಡಲಿಲ್ಲ. ಮಧ್ಯರಾತ್ರಿ ಕೆಂಡಾಮಂಡಲ ಜ್ವರ. 'ನಾನು ಅಜ್ಜಿ ಊರಿಗೆ ಹೋಗ್ತೀನಿ, ನಾನು ಅಜ್ಜಿ ಊರಿಗೆ ಹೋಗ್ತೀನಿ' ಚಿಂಟುವಿನದು ಒಂದೇ ಹಠ. ಜಯಶ್ರೀ ಅವಡುಗಚ್ಚಿದಳು. ಬೆಳಿಗ್ಗೆ ಮಗನನ್ನು ರಮಿಸಿ, 'ನೀನು ತಿಂಡಿ ತಿನ್ನು. ಸಲೀಮ ನಿನ್ನ ಸಾಮಾನೆಲ್ಲಾ ಅಜ್ಜಿ ಮನೆಗೆ ಕೊಟ್ಟು ಬಂದಿದ್ದಾನೆ, ಸ್ವಲ್ಪ ಗಂಜಿ ಕುಡಿದು ಸುಧಾರಿಸಿಕೋ, ಅಜ್ಜಿ ಊರಿಗೆ ಸಲೀಮನನ್ನು ಕಳಿಸಿ, ಎಲ್ಲಾ ಸಾಮಾನು ತರಿಸ್ತೀನಿ' ಎಂದಳು.

'ಊಂಹು... ಮೊದಲು ಸಾಮಾನು ತರಿಸು. ಆಮೇಲೆ ಊಟ ಮಾಡ್ತೀನಿ' ಎಂದ. ಅವಳು ಏನು ಬುದ್ಧಿ ಹೇಳಿದರೂ ಕೇಳಲಿಲ್ಲ. 'ಏ ಕೆಂಪುಮುಖದ ಕೋತಿ, ನರತ ಕೂದಲ ಅಜ್ಜಿ, ನೀನು ಎಷ್ಟು ವಿಕಾರವಾಗಿದ್ದಿ. ನಿನ್ನ ಹತ್ತಿರ ನಾನು ಇರಲ್ಲ. ಹೆಂಗೆ ಹೊಡೆದಿದ್ದಾಳೆ, ನೋಡು ! ಬರೇ ಬಿದ್ದಿದೆ. ನಾನು ಏನು ತಪ್ಪು ಮಾಡಿದೆ. ಅಜ್ಜಿ ಮನೆಯ ಆಟದ ಸಾಮಾನು ಕೇಳಿದರೆ ಹೊಡೀತಾಳೆ, ಕೋತಿ. ನಿನ್ನ ಕಚ್ತೀನಿ, ಪರಚ್ತೀನಿ, ನಿನ್ನ ರೂಮಲ್ಲಿರೋ ನಿನ್ನ ಎಲ್ಲಾ ಡ್ರೆಸ್ ಹರಿದ್ಹಾಕ್ತೀನಿ' ಎಂದು ಕೂದಲೆಳೆದು ಕಚ್ಚತೊಡಗಿದ. ರಾಜಸಿಂಹ ಪುಟ್ಟ ಮಗನ ಬಲಿಷ್ಠ ಹಿಡಿತದಿಂದ ಅವಳನ್ನು ಬಿಡಿಸಿದ. ಸ್ಲೀವ್‌ಲೆಸ್ ಬ್ಲೌಸ್ ಹಾಕಿದ ಅವಳ ತೋಳಿನಲ್ಲಿ ಚಿಂಟುವಿನ ಹಲ್ಲುಗಳೂರಿದ್ದವು. ಕೂದಲೆಳೆದಾಗಂತೂ ಪ್ರಾಣಹೋಗುವಷ್ಟು ನೋವಾಗಿತ್ತು.

ಜಯಶ್ರೀ ಹೆಡೆ ತುಳಿದ ಹಾವಿನಂತೆ ಫೂತ್ಕರಿಸುತ್ತ 'ಎರಡೂವರೆ ತಿಂಗಳು ಬಿಟ್ಟು ಹೋಗಿದ್ದಕ್ಕೆ ಮಗುವಿನ ಮನಸ್ಸೇ ಹಾಳು ಮಾಡಿದ್ದೀರಲ್ಲ. ಆ ಪಾಪಿಷ್ಠ ಹೆಂಗಸಿನ ಹತ್ತಿರ ಕರೆದುಕೊಂಡು ಹೋಗಬೇಡಿ. ಆಕೆ ಮಂತ್ರವಾದಿನಿ, ನಿಮಗೂ, ನನಗೂ ಮಂತ್ರ ಮಾಟ ಮಾಡಿ ದ್ವೇಷ ಹೆಚ್ಚಿಸಿದ್ದಾಳೆ. ನಿಮ್ಮನ್ನ ದೂರ

ಮಾಡ್ಕೊಂಡ ಹಾಗೆ, ಈ ಮಕ್ಕಳನ್ನು ದೂರ ಮಾಡ್ಕೋಬೇಕಾ ? ಆ ಮೈಸೂರಿಗೆ ಹೋಗಿ ಬಂದು, ಬಂದು ಎಳೇ ಹುಡುಗಿ ಚಿನ್ನೀಗು ನನ್ನ ಕಂಡರೆ ಆಗ್ತಿರಲಿಲ್ಲ. ಆ ನಿಮ್ಮಮ್ಮ ಮಾಟಗಾತಿ ! ಏನು ಮಾಟ ಮಾಡ್ತಾಳೋ... ? ಎರಡೇ ತಿಂಗಳಲ್ಲಿ ಚಿಂಟೂನ್ನ ಹಾಳು ಮಾಡಿದ್ದಾಳೆ. ಮಮ್ಮಿ ಮಮ್ಮಿ ಅಂತ ಈ ಮಗು, ನನ್ನ ಮೇಲೆ ಪ್ರಾಣ ಇಟ್ಕೊಂಡಿದ್ದ' ಎಂದು ಹಾರಾಡಿ 'ಹಲ್ಲಿನ ವಿಷಕ್ಕೆ ಏನು ಸೆಪ್ಟಿಕ್ ಆಗತ್ತೋ...?' ಎಂದು ಡಾಕ್ಟರನ್ನು ಕರೆಯಲು ಫೋನ್ ಬಳಿ ಹೋದಳು.

'ನನ್ನ ತಾಯೀನಂದು, ನಿನ್ನ ನಾಲಿಗೆ ಏಕೆ ಹೊಲಸು ಮಾಡ್ಕೋತ್ತಿ ? ಆಕೆ ನಿರಪರಾಧಿ. ಒಂಟಿಯಾಗಿರ್ತಾಳೆ, ತನ್ನ ಕರುಳಿನ ತುಣುಕುಗಳೂಂತ ಈ ಮೊಮ್ಮಕ್ಕಳನ್ನ ಅಪಾರವಾಗಿ ಪ್ರೀತಿಸ್ತಾಳೆ. ಅಜ್ಜಿ ಮೊಮ್ಮಕ್ಕಳನ್ನ ಪ್ರೀತಿಸೋದು ತಪ್ಪಾ? ಆ ಮಗೂನ್ನ ಬೆಲ್ಟಿಂದ ರಾಕ್ಷಸಿ ಹಾಗೆ ಹೊಡೆದೆ. ಆ ಮಗು ಮಾಡಿದ ತಪ್ಪೇನು ? ಊರಿಂದ ತಂದ ಆಟದ ಸಾಮಾನು ಕೇಳಿದ. ಮಕ್ಕಳಿಗೆ ಶ್ರೀಮಂತಿಕೆ ಸಾಮಾನು, ಬಡವರ ಸಾಮಾನು ಅಂತ ಭೇದ ಗೊತ್ತಿರಲ್ಲ. ಮಕ್ಕಳ ಮನಸ್ಸು ಚಂಚಲ. ಕೊಂಚ ಹೊತ್ತು ಆ ಸಾಮಾನಿಟ್ಕೊಂಡು ಆಡ್ತಾನೆ, ಕೊಂಚ ಹೊತ್ತು ಇದನ್ನ ಆಡ್ತಾನೆ, ಬೇಡದಿದ್ದಾಗ ಎರಡೂ ಬಿಸಾಕ್ತಾನೆ. ಕಾರಣವಿಲ್ಲದೇ ಸಣ್ಣ ವಿಷಯಕ್ಕೆ ಎಷ್ಟು ಹಗರಣ ಮಾಡ್ತಿ ? ನಮ್ಮಮ್ಮ ದೂರ ಇದ್ದರೂ ಅವಳ ಮೇಲೆ ಏಕೆ ದ್ವೇಷ ಸಾಧಿಸ್ತಿ ? ಅವಳೇನು ನಿನ್ನ ಗಂಟು ತಿಂದಿದ್ದಾಳಾ ?' ಎಂದ.

'ನನ್ನ ಮಕ್ಕಳ ಪ್ರೀತಿ ನನ್ನ ಪಾಲಿಗೆ ನಿಧಿ ಕಣ್ರಿ, ಅದೇ ನನಗೆ ದೊಡ್ಡ ಗಂಟು. ಆ ಗಂಟು ಅಪಹರಿಸೋ ನಿಮ್ಮ ತಾಯಿ ನನ್ನ ಏಳೇಳು ಜನ್ಮದ ವೈರಿ. ನಿಮ್ಮನ್ನ ಡೈವೋರ್ಸ್ ಮಡಿದರೇ ಬೇರೆ ಗಂಡ ಸಿಗಬಹುದು ನನಗೆ. ಈ ಕ್ಷಣ ನನ್ನ ಕಾಲಮೇಲೆ ಬಿದ್ದು ವಿವಾಹ ಆಗ್ಲಿಕ್ಕೇ ನೂರು ಜನ ಸಿದ್ಧರಿದ್ದಾರೆ. ಆದರೆ ಮಕ್ಕಳು ನನ್ನ ಪಾಲಿಗೆ ಬೇರೆ ಇಲ್ರಿ. ಆಪರೇಷನ್ ಮಾಡಿಸ್ಕೊಂಡಿದ್ದೀನಿ' ಎಂದಳು.

'ಅಷ್ಟು ಅರಿವಿದ್ದೋಳು ಮಗೂನ್ನ ಸಾಯಾಬೀಳಾ ಹೊಡೆದಿದ್ದೇಕೆ ? ಬೆಲ್ಟಿಂದ ಒಂದೇ ಒಂದೇಟು ನಿನಗೆ ನೀನೇ ಹೊಡೆದುಕೊ. ಆ ಏಟಿನ ರುಚಿ ಹೇಗಿರುತ್ತೇ ನೋಡೋಣಂತೆ' ಎಂದ.

'ನನ್ನ ಶತ್ರು ನೀವು, ಬರಿ ನನ್ನ ತಪ್ಪುಗಳನ್ನ ಹಂಗಿಸೋದೊಂದೇ ಗುರಿ ನಿಮಗೆ' ಎಂದಳು.

ಡಾಕ್ಟರ್ ಬರುವ ಹೊತ್ತಿಗೆ ಕೆಂಡಮಂಡಲ ಜ್ವರ. ಎರಡು ದಿನವಾದರೂ ಜ್ವರ ಬಿಡದಿದ್ದಾಗ ಜಯಶ್ರೀ ಹೆದರಿ ಕಂಗೆಟ್ಟಳು. 'ಆ ಹಾಳು ಸಾಮಾನು ಎಲ್ಲಿ ಬಚ್ಚಿಟ್ಟುಕೊಂಡಿದ್ದೀರಿ, ಕೊಡಿ ಅವನಿಗೆ' ಎಂದು ಹಾರಾಡಿದಳು.

ರಾಜಸಿಂಹ ತೀರ ನಿರ್ವಿಣ್ಣನಾಗಿದ್ದ. ಏನೂ ವಾದಿಸದೇ ಸಾಮಾನಿನ

ಏರ್‌ಬ್ಯಾಗ್ ತಂದು ನೀಡಿದ.

'ಚಿಂಟು ತಗೊಳ್ಳೋ...? ಸಲೀಮ ಅಜ್ಜಿಯ ಊರಿಗೆ ಹೋದಾಗ ತಂದಿದ್ದಾನೆ' ಎಂದು ಕೊಡಲು ಹೋದಳು. ಆದರೆ ಚಿಂಟು ಆಡುವ ಸ್ಥಿತಿಯಲ್ಲಿರಲಿಲ್ಲ. ತಾಯಿಯ ಮುಖ ಕಂಡರೆ ಚೀರುತ್ತಿದ್ದ.

'ಏ ಕೆಂಪುಕೋತಿ. ನೀನು ಹತ್ತಿರ ಬಂದ್ರೆ ನಿನ್ನ ಕಚ್ಚಿ ಸಾಯಿಸ್ತೀನಿ, ಪಪ್ಪಾ ನನ್ನ ಮೈಸೂರಿಗೆ ಕರೆದುಕೊಂಡು ಹೋಗು, ಅಜ್ಜಿ ಹತ್ತಿರವೇ ಇರ್ತೀನಿ. ಅಜ್ಜಿ ನನ್ನ ಪ್ರೀತಿ ಮಾಡ್ತಾಳೆ. ಮಧು ಆಂಟಿ ನನಗೆ ಇಷ್ಟ. ಎಷ್ಟು ಚೆಂದಾ ಇದ್ದಾಳೆ. ಕಪ್ಪನೆ ಕೂದಲು, ಫಳಫಳ ಕಣ್ಣುಗಳು... ಉದ್ದ ಜಡೆ. ನಮ್ಮ ವಾಸಂತಿ ಮಿಸ್‌ಗಿಂತ ಚೆಂದ ಇದ್ದಾಳೆ. ನನಗೆ ರಾಮಾಯಣ ಕಥೆ ಹೇಳ್ತಾಳೆ' ಎಂದು ಗಲಾಟೆ ಮಾಡಿದ. ಔಷಧ, ಗಂಜಿ, ನುಂಗಿಸಬೇಕಾದರೆ ಹರಸಾಹಸವಾಗುತ್ತಿತ್ತು. ಜ್ವರ ದಿನದಿನಕ್ಕೆ ಜಾಸ್ತಿ ಆದಾಗ, ಕಡೆಗೆ ವಿಧಿ ಇಲ್ಲದೇ ನರ್ಸಿಂಗ್ ಹೋಮಿಗೆ ಸೇರಿಸಲೇಬೇಕಾಯಿತು. ನರ್ಸಿಂಗ್ ಹೋಮಿನಲ್ಲಿ ಎರಡು ವಾರ ಇದ್ದ ಚಿಂಟು, ಮೊದಲ ವಾರ ತುಂಬಾ ಜ್ವರವೇ ಇತ್ತು, ಆ ಸಮಯದಲ್ಲೇ ಮಗನಿಂದ ವಿಷಯ ತಿಳಿದು ಹೌಹಾರಿ ಬಂದರು ವನಜಮ್ಮ. ಆದರೆ ಜಯಶ್ರೀ ಅವರನ್ನು ಮೊಮ್ಮಗನ್ನ ನೋಡಲು ಬಿಡಲಿಲ್ಲ.

'ನಾನು ಸತ್ತರೂ ನಿಮ್ಮನ್ನ ಒಳಗೆ ಬಿಡಲ್ಲ. ಈಗೀಗ ಸೆಡೆಟೀವ್ಸ್ ಕೊಟ್ಟು, ಹಳೇ ನೆನಪು ಮರೆಸಿದ್ದಾರೆ. ಅಜ್ಜೀರಾಗ ಮರೆತಿದ್ದಾನೆ. ಪುನಃ ನಿಮ್ಮ ದರ್ಶನ ಆದರೆ ಅವನು ಹಾಳಾಗ್ತಾನೆ. ನೀವು ಅವನ್ನನ ನೋಡಲೇಕೂಡದು'ಎಂದು ರಣಚಂಡಿಯಂತೆ ನಿಂತು ಬಾಯಿಗೆ ಬಂದ ಹಾಗೆ ಬೈದಳು.

'ನಾಳೆಯಿಂದ ನೀವೂ ಬರಬೇಡಿ. ನನ್ನ ಮಗ.... ನನಗೆ ಸೇರಿದವನು' ಎಂದು ಗಂಡನಿಗೆ ಆಜ್ಞೆ ಮಾಡಿದಳು ! 'ನನ್ನ ಮೊಮ್ಮಗು ಅಲ್ಲವೆ ? ನನಗೂ ಕರುಳು ಇರಲ್ಲವೆ ? ಏಕೆ ಹೀಗೆ ಮಾಡ್ತಾಳೋ ?' ಎಂದರು. ಅತ್ತರು. ನಿರಾಶರಾಗಿ ಬಂದಿದ್ದ ಟ್ಯಾಕ್ಸಿಯಲ್ಲೇ ಮೈಸೂರಿಗೆ ಹಿಂತಿರುಗಿದರು.

ನಿಜಕ್ಕೂ ಚಿಂಟು 'ಅಜ್ಜೀ ಮನೆಗೆ ಹೋಗ್ತೀನಿ' ಎಂಬ ಪಲ್ಲವಿ ಬಿಟ್ಟಿರಲಿಲ್ಲ. 'ಜ್ವರ ವಾಸಿ ಆಗಲಿ, ನಿನ್ನ ನಾನೇ ಅಜ್ಜಿ ಮನೆಗೆ ಕರ್ಕೊಂಡು ಹೋಗ್ತಿನಿ. ಡಾಕ್ಟರ್, ನರ್ಸ್ ಹೇಳಿದ ಹಾಗೆ ಕೇಳು ಜಾಣ....' ಎಂದು ಬಹುವಿಧವಾಗಿ ರಮಿಸಿ, ಹದಾ ಮಾಡಿದಳು. ಜ್ವರ ವಾಸಿ ಆದಮೇಲು ತುಂಬ ದುರ್ಬಲನಿದ್ದುದರಿಂದ ಎರಡು ವಾರ ನರ್ಸಿಂಗ್ ಹೋಮಲ್ಲೇ ಇದ್ದು, ಹಣ್ಣು, ಹಾಲು, ಟಾನಿಕ್ ನೀಡಿ ಆರೈಕೆ ಮಾಡಿದರು. ಚೆನ್ನಾಗಿ ನಡೆದಾಡುವ ಹಾಗಾದಮೇಲೆ ಒಂದು ದಿನ ನರ್ಸಿಂಗ್ ಹೋಮ್ ಮುಂದೆ ಕಾರು ನಿಂತಿತು.

ಕಾರಿನಲ್ಲಿ ಕೂತ ಚಿಂಟು ತಾಯಿಯ ಜೊತೆ ಮೈಸೂರಿಗೆ ಎಂದು ಭಾವಿಸಿದ್ದ.

ಆದರೆ ವಿಮಾನ ನಿಲ್ದಾಣಕ್ಕೆ ಬಂದು ವಿಮಾನ ಏರಿದಾಗಲು ತಿಳೀಲಿಲ್ಲ, 'ಕಾರಿನಲ್ಲೇ ಅಜ್ಜಿ ಮನೆಗೆ ಹೋಗ್ಬೋದಲ್ಲಮ್ಮ' ಎಂದ.

'ಬೇಡ, ಏರೋಪ್ಲೇನಲ್ಲೇ ಬುರ್ ಅಂತ ಹೋಗಿ, ಅಜ್ಜಿಯ ಮನೆ ಮುಂದೆ ಇಳಿಯೋಣ... ಅಜ್ಜಿಗೆ ಸರ್‌ಪ್ರೈಸ್ ಆಗತ್ತೆ' ಎಂದಾಗ ಚಿಂಟು ನಿಜ ಎಂದೇ ತಿಳಿದಿದ್ದ.

ಆದರೆ ನಿಜವಾದ ವಿಷಯ ತಿಳಿದು ಹಿಂದಿನ ದಿನ ರಾಜಸಿಂಹ ಹೆಂಡತಿಯೊಡನೇ ಘನಘೋರ ಜಗಳ ಆಡಿದ್ದ.

'ಚಿಂಟೂನ್ನ ನಾಳೆ ಡಿಸ್‌ಚಾರ್ಜ್ ಮಾಡ್ತಿದ್ದಾರೆ. ಅವನ ಮನಸ್ಸು ಉಲ್ಲಾಸವಾಗಬೇಕಾದರೆ ಒಂದು ವಾರ ಮೈಸೂರಿಗೆ ಕರೆದುಕೊಂಡು ಹೋಗಬೇಕು, ತುಂಬಾ ಹಂಬಲಿಸ್ತಿದ್ದಾನೆ. ಅವನಿಗೆ ನಿರಾಶೆ ಮಾಡಬಾರದೂಂತ ಡಾಕ್ಟರ್ ಹೇಳಿದ್ದಾರೆ' ಎಂದ.

'ನಾನು ಅವನನ್ನ ಬಾಂಬೇಗೆ ಕರೆದುಕೊಂಡು ಹೋಗಿ ಬೋರ್ಡಿಂಗ್ ಸೇರಿಸ್ತೀನಿ' ಎಂದಳು. 'ಟಿಕೇಟ್ ಸಹ ರಿಸರ್ವ್ ಮಾಡಿಸಿ ಬಿಟ್ಟಿದ್ದೀನಿ' ಎಂದಳು. ಅಪರಿಮಿತ ಕೋಪ ಬಂತು.

'ಜಯಶ್ರೀ....' ಎಂದು ಗಟ್ಟಿಯಾಗಿ ಚೀರಿದ.

'ಏನು ಚಾವಣಿ ಹಾರಿ ಹೋಗೋ ಹಾಗೆ ಕಿರುಚ್ತೀರಾ? ಅವನು ನನ್ನ ಮಗ. ಹಾಸ್ಪಿಟಲ್ಲಿಗೆ ಬರಬೇಡಿ ಅಂದ್ರೆ ಕೇಳಿದ್ರೇನು? ನಿಮ್ಮ ಮುಖ ನೋಡ್ತಾಲೇ ಅಜ್ಜಿ ಮನೆ ಅಂತರಾಗ ಹಾಡೋನು. ಹಾಗೂ ಹೀಗೂ ಮರೆಸಿರ್ತಿದ್ದೆ. ಕುಂಬಾರಂಗೆ ಒಂದು ವರುಷ, ದೊಣ್ಣೆಗೆ ಒಂದು ನಿಮಿಷ ಅಂದಹಾಗೆ ನಾನು ನೂರು ಪ್ರಯತ್ನ ಮಾಡಿ, ಅಜ್ಜಿ ಹಂಬಲ ಬಿಡಿಸಿದ್ರೇ... ನೀವು ಬರ್ತಾಲೇ ಅದೇ ರಾಗ ಶುರುಮಾಡ್ತಿದ್ದ. ಅವನಿಗೆ ಈ ಪರಿಸರವೇ ಬೇಡ. ಚಿನ್ನಿ ಹಾಗೆ ಅವನೂ ಬೋರ್ಡಿಂಗ್‌ನಲ್ಲಿರಲಿ. ನನಗೆ ಬೇಕಾದಾಗ ಬಾಂಬೆಗೆ ಹೋಗಿ ನೋಡಿಬರ್ತೀನಿ. ನನ್ನ ಮಗ, ಮಗಳು ನನ್ನವರಾಗಿರಬೇಕು. ಬೇರೆ ಯಾರಿಗೂ ಅದರಲ್ಲಿ ಪಾಲು ದೊರೆಯಲ್ಲ' ಎಂದಳು.

ಬೈದ, ಜಗಳವಾಡಿದ. ಆದರೆ ಅವಳು ಸೋಲುವುದಿಲ್ಲವೆಂದು ತಿಳಿದಾಗ ಹತಾಶನಾದ.

ಏಂಜಿಲಾ ತನ್ನ ಕಡೆ ಇದ್ದಾಳೆ, ಆಗಾಗ ಫೋನ್ ಮಾಡಿ, ತಾಯಿಗೂ ಮೊಮ್ಮಗ ನೊಡನೆ ಮಾತಾಡಲು ಸಂಪರ್ಕ ಕಲ್ಪಿಸಿಕೊಡಬಹುದೆಂದು ಊಹಿಸಿದ.

ಆದರೆ, ಒಂದು ವಾರದ ನಂತರ ಹುಚ್ಚಿಯ ಹಾಗೆ ಹಿಂತಿರುಗಿದಳು ಜಯಶ್ರೀ. ಕೆದರಿದ ಕೂದಲು, ಮಲಿನವಾದ ಸೀರೆ, ಅಪಾರ ಶೋಕ ತುಂಬಿದ ಮುಖ.

'ರಾಜೂ, ನನ್ನ ಹೊಡೆದು ಹೊಡೆದು ಕೊಂದುಬಿಡಿ. ನಾನು ದೊಡ್ಡ ತಪ್ಪು

ಮಾಡಿಬಿಟ್ಟೆ... ರಾಜು ನನ್ನ ಕೊಂದುಬಿಡಿ. ಎಲ್ಲಿ ಮಗೂನ್ನ ಹೊಡೆದ ಆ ಬೆಲ್ಟ್ ಎಲ್ಲಿ...?' ಎಂದು ಹುಚ್ಚಿಯಂತೆ ಹುಡುಕಾಡಿ ಆ ಬೆಲ್ಟ್ ಸಿಕ್ಕಿದ ಮೇಲೆ ಅದರಿಂದ್ಲೇ ತನಗೆ ಹೊಡೆದುಕೊಳ್ಳಲೆತ್ನಿಸಿದಳು. ಅವಳು ನಾಲ್ಕಾರು ಏಟು ಹೊಡೆದು ಕೊಳ್ಳುವಷ್ಟರಲ್ಲೇ ಅವಳ ಕೈಯಿಂದ ಬೆಲ್ಟ್ ಕಿತ್ತುಕೊಂಡು 'ಏನಾಯ್ತು ಹೇಳು...?' ಎಂದ. ಯಾವುದೋ ಅಪ್ರಿಯ ವಾರ್ತೆ ಕೇಳಲು ಅವನ ಹೃದಯ ಚಡಪಡಿಸಿತ್ತು. ಅವಳು ಅಳುತ್ತ, ತೊದಲುತ್ತ ಅರೆಬರೆ ಹೇಳಿದ ವಿಷಯ ಹೀಗಿತ್ತು ಮುಂಬಯಿ ಸೇರಿ ಚಿಂಟೂನ್ನ ಬೋರ್ಡಿಂಗ್ ಸೇರಿಸಿದಾಗ ಅವರಮ್ಮನ ಆನಂದಕ್ಕೆ ಪಾರವೇ ಇಲ್ಲ. ಆದರೆ ತಾಯಿಯ ಮೋಸ ತಿಳಿದ ಚಿಂಟು ಉಗ್ರನಾದ.

ಆ ರಾತ್ರಿ ತಂಗಿಯೊಡನೇ ಮಲಗಿದ್ದಾಗ 'ನಾನು ಏಂಜಿಲಾ ನಿದ್ದೆ ಮಾಡೋವಾಗ ತಪ್ಪಿಸ್ಕೊಂಡು ಹೋಗ್ತೀನಿ. ನನ್ನ ಹತ್ತಿರ ಪಪ್ಪಾ ಕೊಟ್ಟ ಎರಡು ನೂರು ರೂಪಾಯಿ ನೋಟಿದೆ. ಯಾರಿಗಾದರೂ ಕೊಟ್ಟು ಮೈಸೂರಿಗೆ ಕರೆದುಕೊಂಡು ಹೋಗಿ ಅಂಕಲ್ ಅಂತೀನಿ ಎಂದಿದ್ದನಂತೆ.'

'ಇಲ್ಲೆಲ್ಲಾ ಬೀಗ ಹಾಕಿರುತ್ತೆ. ಹೇಗೆ ತಪ್ಪಿಸ್ಕೋತಿ ?' ಎಂದಳಂತೆ. ರಾತ್ರಿ ರೂಮಿನ ಬಾಗಿಲು ತೆಗೆಯಲೆತ್ನಿಸಿ ವಿಫಲನಾದನಂತೆ. ಆದರೆ ಮಾರನೆಯ ಬೆಳಿಗ್ಗೆ ಆಟದ ಮೈದಾನಕ್ಕೆ ಹೋದ ಚಿಂಟು ಕಾಣೆಯಾಗಿದ್ದ. ಅಲ್ಲಿದ್ದ ಇಬ್ಬರು ವಾಚ್‌ಮನ್‌ಗಳಿಗೂ ಗೊತ್ತಿಲ್ಲ. ಕಾಂಪೌಂಡ್ ಹಾರಿ ಹೋಗಿರಬಹುದು ಎಂದು ಊಹಿಸಿದರು.

ಬೋರ್ಡಿಂಗಿನಲ್ಲಿದ್ದ ನಾಲ್ಕಾರು ಆಳುಗಳು ಹುಡುಕಿ ಸೂಪರಿಂಟೆಂಡೆಂಟರಿಗೆ ದೂರು ನೀಡಿದರು. ಸೂಪರಿಂಟೆಂಡೆಂಟರು ಇವಳ ತಾಯಿಗೆ ಫೋನ್ ಮಾಡಿದರು. ತಾಯಿ ಮಗಳು ಹೌಹಾರಿದರು. ಮುಂಬೈಯಲ್ಲಿ ಇವರ ಜನಬಲವೇನು ಕಡಿಮೆ ಅಲ್ಲ. ಅವಳ ದೊಡ್ಡಪ್ಪನ ಮಗ ದೊಡ್ಡ ಉದ್ಯಮಿ. ಲೋಕಲ್ ಪತ್ರಿಕೆಗಳಲ್ಲಿ, ಟಿ.ವಿ.ಯಲ್ಲಿ ವಾರ್ತೆಕೊಟ್ಟು ತಮ್ಮ ಫ್ಯಾಕ್ಟರಿಯ ಎಲ್ಲಾ ವರ್ಗದ ಜನರಲ್ಲಿಯೂ ವಿಷಯ ಪ್ರಸಾರ ಮಾಡಿ ಹುಡುಗನನ್ನು ಹುಡುಕಿ ತಂದವರಿಗೆ ಹತ್ತು ಸಾವಿರ ರೂ. ಬಹುಮಾನ ಎಂದರು. ಒಂದು ವಾರ ಕಳೆದರೂ ಏನು ಪತ್ತೆ ಆಗಲಿಲ್ಲ. ನಿರಾಶಳಾಗಿ ಹಿಂತಿರುಗಿ ಬಂದಿದ್ದಳು.

ವಿಷಯ ಕೇಳಿ ಸ್ತಬ್ಧನಾದ . ನಂತರ ಅನುಮಾನದಿಂದ 'ನಿಜ ಹೇಳು, ತಪ್ಪಿಸಿ ಕೊಂಡು ಓಡುವಾಗ ಏನಾದರೂ ಅಪಘಾತವಾಗಿ... ಅನಾಹುತ ಆಗಿದೆಯಾ ? ಅರ್ಧ ಮುಚ್ಚಿಟ್ಟು ಅರ್ಧ ಹೇಳೋ ಸುಳ್ಳುಗಾತಿ ನೀನು. ನಿನ್ನ ತಾಯಿ ಕಥೆ ಸಹ ಎಷ್ಟು ನವಿರಾಗಿ ಸುಳ್ಳು ಹೇಳಿದ್ದಿ'ಎಂದ.

'ನನ್ನ ಏನೂ ಕೇಳಬೇಡಿ ನೀವು. ನನ್ನ ಮನಸ್ಸೇ ನೂರು ಸಂಶಯದಲ್ಲಿ ಮುಳುಗಿ

ಹೋಗಿದೆ. ಲೋಕಲ್ ಟ್ರೈನ್ ಹತ್ತಿರ ಎರಡು ದೇಹಗಳು ಸಹ ಸಿಕ್ಕಿದವು. ಮುಂಬೈನ ಹೊಲಸು ನೀರಿನ ಒಂದು ಹೊಂಡದ ಹತ್ತಿರ ಒಂದು ದೇಹ ಕೊಳೆತು ನಾರಿದ್ದು ಸಿಕ್ಕಿತು. ಮಕ್ಕಳು ಸಿಕ್ಕರೆ ಅಪಹರಿಸೋ ಧೂರ್ತರು, ವಿರೂಪ ಮಾಡಿ ಭಿಕ್ಷಕ್ಕೆ ಕಳಿಸೋ ಗೂಂಡಾಗಳು ಇದ್ದಾರೆ. ಎಲ್ಲಿ ಹೋದನೋ...? ಯಾರ ಕೈಗೆ ಸಿಕ್ಕಿದನೋ ? ಇಡೀ ಮುಂಬೈ ಜಾಲಾಡಿದರೂ ಸಿಗಲಿಲ್ಲ' ಎಂದು ಹೇಳಿ ಅಳತೊಡಗಿದಳು. 'ಕೇವಲ ನಿನ್ನ ಅಸೂಯೆ, ಅಕಾರಣವಾದ ದ್ವೇಷ ಆ ಮಗೂನ್ನ ಬಲಿ ತಗೊಂಡಿತು. ಮಹಾ ಪುಂಡನಾಗಿ ಮಾಡಿಟ್ಟಿದ್ದೆ. ಪಪ್ಪಾ ಬಡವ, ಅವರಮ್ಮ ಬಡವಳು, ಏನೇನೋ ಎಳೇಮನಸ್ಸಿಗೆ ಬಿತ್ತಿ ಅವನು ಬಾಲಭಾಷೇಲಿ ನನ್ನ ತೇಜೋವಧೆ ಮಾಡಿದಾಗ ಆನಂದಿಸ್ತಿದ್ದೆ. ಚಿನ್ನಿ ಪಾಲಿಗೆ ನನ್ನ ಅಪರಿಚಿತನ್ನ ಮಾಡಿ ಆನಂದಿಸಿದೆ. ಆ ದುಃಖಕ್ಕೇ ಪುಂಡು ಆನೇನ್ನ ಪಳಗಿಸಿದ ಹಾಗೆ ಮಗೂನ್ನ ಪಳಗಿಸಿ ಒಲಿಸಿಕೊಂಡೆ. ಅವನು "ಪಪ್ಪಾ... ಪಪ್ಪಾ" ಅಂತ ಹಂಬಲಿಸ್ತಿದ್ದದ್ದು ನಿನ್ನ ಅಸೂಯೆಗೆ ಕಾರಣವಾಯ್ತು. ನನ್ನಿಂದ ದೂರ ಮಾಡಿದೆ. ಈಗ ಚಿಂಟು ಬದುಕಿದ್ದಾನೋ ಇಲ್ಲವೋ ?' ಎಂದು ಹಂಬಲಿಸಿದ ರಾಜಲಿಸಿಂಹ.

'ಚಿಂಟೂ... ಬದುಕಿದ್ದಾನೆ. ನಮಗೆ ಖಂಡಿತ ಸಿಗ್ತಾನೆ ಅಂತ ನನಗೆ ಸಮಾಧಾನ ಹೇಳ್ರಿ. ಈಗ ನನ್ನ ಹಂಗಿಸಿ ಕೊಲ್ಲಬೇಡಿ. ನೊಂದ ಹೃದಯಕ್ಕೆ ಬರೆ ಹಾಕಬೇಡಿ' ಅವನೆದುರು ಕಾಲೂರಿ ಬೇಡಿದಳು. ಅವಳ ಕಂಗಳಿಂದ ಧಾರಾಕಾರವಾಗಿ ಹರಿಯುತ್ತಿದ್ದ ಕಂಬನಿಗೆ ಮರುಗಿದ !

ಎತ್ತಿ ಹೃದಯಕ್ಕಪ್ಪಿಕೊಂಡ. ಅವನ ಹೃದಯ ಮೌನವಾಗಿ ರೋದಿಸುತ್ತಿತ್ತು. ಅವಳು ಅಳುತ್ತ ಏನೇನೋ ಬಡಬಡಿಸುತ್ತಿದ್ದಳು.

ಹದಿನೈದು ದಿನ ಮನೆಯಲ್ಲಿ ಸ್ಮಶಾನ ಮೌನವೇ ಕವಿದಿತ್ತು. 'ರಾಜು ನಾನು ಅಪರಾಧಿ, ರಾಜು ನಾನು ಅಪರಾಧಿ'ಎಂದು ಹಲುಬುತ್ತಿದ್ದಳು.' ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ಮಗುವನ್ನು ಮನೆಗೆ ಕರೆತರಲಿಲ್ಲ ಪಾಪೀ' ಎಂದು ಪದೇ ಪದೇ ಹಂಬಲಿಸುತ್ತಿದ್ದಳು.

'ಒಂದು ಮಾತು ಹೇಳಲಾ, ಜಯಶ್ರೀ, ಕೈ ಮೀರಿ ಹೋಗಿದ್ದಕ್ಕೆ ನಾವು ಪಶ್ಚಾತ್ತಾಪ ಪಟ್ಟು ಪ್ರಯೋಜನವಿಲ್ಲ. ಚಿನ್ನೀನ ಇಲ್ಲಿ ಕರ್ಕೊಂಬಾ.... ನಾನು ಶೂನ್ಯವಾದ ಹೃದಯ ಹೊತ್ತು ಇಲ್ಲಿರಲಾರೆ. ನೂರು ನೂರು ಹೃದಯ ಬೆಸೀತಾ ಇದ್ದದ್ದೇ ಆ ಮಕ್ಕಳು' ಎಂದ.

'ಆಗಲೀಂದ್ರೆ ಮುಂಬೈಗೆ ಹೋಗಿ ಬರ್ತೀನಿ. ಅಮ್ಮನ್ನ ಕೇಳಿ ಕರ್ಕೊಂಬರ್ತೀನಿ. ಅಮ್ಮ ಅವಳನ್ನ ತುಂಬಾ ಹೊಂದಿಕೊಂಡುಬಿಟ್ಟಿದ್ದಾಳೆ' ಎಂದು ಹೇಳಿ ಮುಂಬೈಗೆ ಹೋದಳು. ಹದಿನೈದು ದಿನವಾದರೂ ಪತ್ತೆ ಇಲ್ಲ. ಅವಳ ತಾಯಿ, ಅಣ್ಣಾ ಎಲ್ಲರ

ಫೋನ್ ನಂಬರ್ ಗೊತ್ತಿದ್ದರೂ ಅವರಾರಿಗೂ ಫೋನ್ ಮಾಡಲಿಷ್ಟವಿರಲಿಲ್ಲ. ಏಂಜಿಲಾಗೆ ಫೋನ್ ಮಾಡಿದ.

'ಚಿನ್ನೀನ್ನ ವಾಪಸು ಕರೆದೊಯ್ಯಲು ಅವರ ತಾಯಿ ಬಳಿ ಕೇಳಿದರು. ಆಕೆ ಒಪ್ಪಲಿಲ್ಲ. "ಚಿಂಟೂ ಇಲ್ಲವಾಗ್ಲಿಕ್ಕೆ ನಾನೇ ಕಾರಣಾಂತ ಹಂಗಿಸಿ ಕೊಲ್ತಾರೆ. ಅವರ ಕಣ್ಣಲ್ಲಿ ಅಪರಾಧಿಯಾಗಿ... ಕೀಳಾಗಿರಲಾರೆ. ನಾನೇನು ಮಾಡಲಮ್ಮ.... ಕೆಲವು ದಿನ ಬೆಂಗಳೂರಿಗೆ ಹೋಗಲ್ಲ" ಎಂದುಬಿಟ್ಟರು ಜಯಶ್ರೀ. ಈಗ ಡ್ರಿಂಕ್ಸ್ ಮಾಡಿಕೊಂಡು ಹಗಲು ರಾತ್ರಿ ಮೈಮೇಲಿನ ಪರಿವೇ ಇಲ್ಲದೇ ತಾಯಿ ಬಂಗ್ಲೇಲಿ ಇರ್‍ತಾರೆ, ಆ ಮನೋಹರ್ ತುಂಬಾ ಬಂದುಹೋಗಿ ಮಾಡ್ತಾರೆ. ಚಿಂಟು.... ಚಿಂಟೋಂತ ಹಂಬಲಿಸ್ತಾರೆ. ಅವರ ಸ್ಥಿತಿ ನೋಡಲಿಕ್ಕೆ ಆಗಲ್ಲ' ಎಂದಳು.

ಅವನಿಗೆ ಬೇಸರವಾಯ್ತು. ಅವಳ ತಾಯಿ ಮನೆಗೆ ಫೋನ್ ಮಾಡಿದ. ಅವರಮ್ಮ ಗಡುಸಾಗಿ 'ರ್‍ಯಾಸ್ಕಲ್ ! ನಿನ್ನಿಂದಲೇ ನನ್ನ ಮಗಳು ಹುಚ್ಚಿ ಆಗಿ ಹಂಬಲಿಸ್ತಿದ್ದಾಳೆ. ಚಿಂಟು ಕಳೆದು ಹೋಗಲಿಕ್ಕೂ ನೀನೆ ಕಾರಣ. ಅವಳ ಮನಸ್ಸಿಗೆ ಬೇಡವಾದದ್ದೇ ಮಾಡಿದಿ. ನೀನು, ನಿಮ್ಮಮ್ಮ ಸೇರಿ ಅವಳ ಬದುಕು ನರಕ ಮಾಡಿದ್ದೀರಿ. ಅವಳ ಮನಸ್ಸು ಒಂದು ಹದಕ್ಕೆ ಬರೋವರೆಗೆ ಬೆಂಗಳೂರಿಗೆ ಬರಲ್ಲ. ಮಂಗನ ಕೈಗೆ ಮಾಣಿಕ್ಯ ಕೊಟ್ಟ ಹಾಗಾಯಿತು. ರತ್ನದಂತಹ ಹೆಂಡತಿ, ದೇವಲೋಕದ ಅಪ್ಸರೆ ಇದ್ದಾಗಿದ್ದಾಳೆ. ಅಂಥವಳನ್ನ ಬಾಳಿಸಲಿಕ್ಕೆ ಏನು ರೋಗ ನಿನಗೆ?' ಎಂದು ಬಾಯಿಗೆ ಬಂದ ಹಾಗೇ ಬೈದಳು. ಅವನು ಫೋನ್ ಡಿಸ್‌ಕನೆಕ್ಟ್ ಮಾಡಿ, ಎರಡು ತಿಂಗಳು ರಜಾ ಹಾಕಿ ಮೈಸೂರಿಗೆ ಹೊರಟ.

ಮಗನಿಂದ ಎಲ್ಲಾ ವಿಷಯ ತಿಳಿದ ವನಜಮ್ಮ ಅತ್ಯಂತ ದುಃಖಿತರಾದರು. 'ನನ್ನ ಮೇಲಿನ ಹಠಕ್ಕೆ, ಆ ಮಗು ಮೈಸೂರಿಗೆ ಬರಬಾರದೂಂತನ್ನೋ ಹಠಕ್ಕೆ ಮಗೂನ್ನೇ ಹಾಳು ಮಾಡಿಕೊಂಡಳಲ್ಲ' ಎಂದು ಅತ್ತರು.

ನಿಸ್ತೇಜನಾಗಿ ಯಾವಾಗಲೂ ಕೋಣೆಯಲ್ಲಿ ಮಲಗಿರುತ್ತಿ ಇದ್ದ ಮಗನನ್ನು ನೋಡಿ ಆಕೆಗೆ ಚಿಂತೆಯಾಯಿತು.

ಊಟ, ತಿಂಡಿ, ಉಲ್ಲಾಸದ ಮಾತುಕತೆ ಯಾವುದೂ ಇಲ್ಲ. ಏನೋ ತಟ್ಟೆಯಲ್ಲಿ ಕೈಯಾಡಿಸಿ, ಒಂದಿಷ್ಟು ತಿಂದು ಹೋಗುತ್ತಿದ್ದ. ವನಜಮ್ಮ ಮನದಲ್ಲೇ ಆಲೋಚನೆ ಮಾಡಿ, ಮಥಿಸಿದರು, ನಂತರ ಒಂದು ದಿನ ಮಧುಮತಿಯನ್ನು ಮಾಳಿಗೆಯ ಮೇಲೆ ಏಕಾಂತವಾಗಿ ಕರೆದೊಯ್ದರು.

'ಮಧು, ನನ್ನದೊಂದು ಅಪೇಕ್ಷೆ ಇದೆ, ನಡೆಸಿಕೊಡ್ತೀಯಾ ?' ಎಂದರು.

'ಹೇಳಿ ಅಮ್ಮ, ಏನು ವಿಷಯ ?' ಎಂದಳು.

'ಆ ರಾಕ್ಷಸಿ ನನ್ನ ಮಗನ ಜೀವನಾನ್ನೇ ಹಿಪ್ಪೆ ಮಾಡ್ತಿದ್ದಾಳೆ. ಅವನ ಬದುಕಿನಲ್ಲಿ

ಸುಖ ಶಾಂತಿಯೇ ಇಲ್ಲ. ನನಗೆ ಮುದ್ದಾದ ಒಂದು ಮೊಮ್ಮಗೂನ್ನ ಆಡಿಸೋ ಆಸೆ ಇದೆ. ಅವರಷ್ಟು ಶ್ರೀಮಂತರಲ್ಲ, ನಾವು ನಿಜ. ಆದರೆ ನಮ್ಮದು ಹತ್ತು ಹದಿನೈದು ಲಕ್ಷ ರೂ.ಗಳ ಆಸ್ತಿ ಇದೆ. ಆರು ತಿಂಗಳಿಂದ ನಿನ್ನ ಗುಣ, ಸ್ವಭಾವ ಪರೀಕ್ಷಿಸಿದ್ದೀನಿ. ನನ್ನ ಯಾವ ಜನ್ಮದ ಮಗಳೋ ಅಷ್ಟು ಆತ್ಮೀಯವಾಗಿದ್ದಿ. ನನ್ನ ನಂತರ ಅಂಗಡಿ ಕೆಲಸ, ಆಸ್ತಿಪಾಸ್ತಿ, ತಂದೆ, ತಮ್ಮನ ಜೊತೆ ನಿಭಾಯಿಸ್ತೀಂತ ನನಗೆ ನಂಬಿಕೆ ಇದೆ. ನನ್ನ ಆಸ್ತಿ ಪರರ ಪಾಲಾಗಬಾರದು. ನನ್ನ ಆಸ್ತಿಗೊಬ್ಬ ಉತ್ತರಾಧಿಕಾರಿ ಬೇಕು, ಒಂದು ಮೊಮ್ಮಗು ನನ್ನ ಒಂಟಿತನ ನಿವಾರಿಸಬೇಕು. ನನ್ನ ಆಸೆ ನೀನು ನೆರವೇರಿಸ್ತೀಯಾ ?' ಎಂದರು.

ಮಧುವಿನ ಮನದಲ್ಲಿ ಆಂದೋಳನೆಗಳೆದ್ದವು. ಅವಳು ತಲೆತಗ್ಗಿಸಿ ಕೂತಳು.

'ಕಾನೂನು ಪ್ರಕಾರ ಒಬ್ಬ ಹೆಂಡತಿ ಇರೋ ಗಂಡಸಿಗೆ ಎರಡನೆಯ ಮದುವೆ ಆಗೋ ಹಾಗಿಲ್ಲ. ಇನ್ನು ನನ್ನ ಸೊಸೆಯಂತೂ ರಾಕ್ಷಸಿ. ವಿಷಯ ತಿಳಿದ್ರೆ ನಮ್ಮನ್ನ ಕೊಲ್ಲಲಿಕ್ಕೂ ಹೇಸಲ್ಲ. ಈ ಮದುವೆ ತುಂಬಾ ಗುಟ್ಟಾಗಿ ನಡೆಯಬೇಕು. ಮುಂದೂ ಅವನು ಹದಿನೈದು ದಿನಕ್ಕೊಮ್ಮೆಯೋ: ತಿಂಗಳಿಗೊಮ್ಮೆಯೋ ಬರ್ತಾನೆ. ಒಂದಿನ ಇದ್ದು ಹೋಗ್ತಾನೆ, ಕೈಯಾರೇ ಮಾಡಿದ ಅಪರಾಧಕ್ಕೆ ಈಗವಳು ಸ್ಮಶಾನ ವೈರಾಗ್ಯದಲ್ಲಿದ್ದಾಳೆ. ಇಲ್ಲದಿದ್ದರೆ ಅವನು ತಿಂಗಳಾನುಗಟ್ಟಲೇ ರಜಾ ಹಾಕಿ, ಇಲ್ಲಿರಲಿಕ್ಕೆ ಬಿಡ್ತಿದ್ದಳಾ ? ನಿನಗೆ ಕಾನೂನು ಪ್ರಕಾರ ಪತ್ನಿ ಸ್ಥಾನ ಇಲ್ಲಾನ್ನೋದು ನನಗೆ ಗೊತ್ತು. ನಿನ್ನನ್ನು ಕಾನೂನು ಉಪಪತ್ನಿ ಅನ್ನತ್ತೆ. ಕಾನೂನು ಪ್ರಕಾರ ಪತ್ನಿಯಾದ ಅವಳು ಅವನ ಬದುಕಲ್ಲಿ ಬೆಂಕಿ ಹಚ್ಚಿಸಿದ್ದಾಳೆ. ನೀನು ಅವನ ಬದುಕಿಗೆ ಸುಖಶಾಂತಿ ಕೊಡಬೇಕು. ನನಗೆ ಒಂದು ಮೊಮ್ಮಗು ಕೊಡಬೇಕು. ಈ ರಹಸ್ಯ ನಮ್ಮಲ್ಲೇ ಇರಬೇಕು' ಎಂದರು. ಮಧು ಮೌನವಾಗಿದ್ದಳು.

'ನನ್ನ ಸ್ವಾರ್ಥ ನೋಡಿ ನಿನಗೆ ಅಸಹ್ಯವಾಗಿರಬಹುದು. ಆದರೆ ನನ್ನ ಮಗನ ಬದುಕು ನಿರಾಶೆಯ ಹೊಂಡವಾಗಿರೋದು ನಾನು ಸಹಿಸಲಾರೆ. ಆ ಬದುಕಿನಲ್ಲಿ ಪ್ರೀತಿ ಪ್ರೇಮದ ಹಾಲು ಹೊಳೆ ಹರಿಸಿ ನೀನು ಅವನನ್ನ ನಲಿಸಬೇಕು. ಇದು ನನ್ನ ಕೋರಿಕೆ. ಇದಕ್ಕೆ ಬದಲಾಗಿ ನನ್ನ ಸಮಸ್ತ ಆಸ್ತಿ ನಿನಗೆ ಕೊಡ್ತೀನಿ' ಎಂದರು.

ಮಧು ಮೌನ ಮುರಿದು 'ಅಮ್ಮ, ನಿಮ್ಮ ಆ ಸಲಹೆಗೆ ನಾನು ಒಪ್ಪಿದ್ದೀನಿ. ಆದರೆ ನನ್ನದಾದ ಕೆಲವು ಆಸೆಗಳಿವೆ. ಈ ವಯಸ್ಸಿನಲ್ಲಿ ನಮ್ಮ ತಂದೆ ದುಡಿಯೋದು ನನಗಿಷ್ಟವಿಲ್ಲ. ಅವರು ಸುಖಕರವಾದ ವಿಶ್ರಾಂತಿ ಜೀವನ ನಡೆಸಬೇಕು. ತಾಯಿನ್ನ ಇಲ್ಲಿನ ನರ್ಸಿಂಗ್ ಹೋಮಿಗೆ ಸೇರಿಸಿ, ಒಳ್ಳೆ ಚಿಕಿತ್ಸೆ ಕೊಡಿಸಬೇಕು. ನಮ್ಮ ದೊಡ್ಡಕ್ಕನ ವರದಕ್ಷಿಣೆ ಸಮಸ್ಯೆ ತೀರಿ ಅವಳು ಗಂಡನ ಮನೆ ಸೇರಬೇಕು. ಎರಡನೆಯ ಅಕ್ಕನ ವಿವಾಗ ಆಗಬೇಕು. ನನ್ನ ತಮ್ಮನಿಗೆ ಅಂಗಡಿ ಕೆಲಸದಲ್ಲಿ

ತುಂಬಾ ಆಸಕ್ತಿ ಇದೆ. ಬಿ.ಕಾಂ. ಓದಿದ ಅವನನ್ನ ನರಸಪ್ಪಾ ತಾನೇ ಸೀನಿಯರ್ ಅಂತ ಒಂದುತರಹ ಹೀನಾಯವಾಗಿ ಕಾಣ್ತಾನೆ. ಹೊಟ್ಟೆಪಾಡಿಗೆ ನಾವಿದೆಲ್ಲಾ ಸಹಿಸ್ತಿದ್ದೀವಿ. ನಿಮ್ಮ ಅಪೇಕ್ಷೆ ನೆರವೇರಿಸಲಿಕ್ಕೆ ನಾನು ಸಿದ್ಧಳಿದ್ದೀನಿ. ನನ್ನ ಕುಟುಂಬದ ಎಲ್ಲಾ ಸಮಸ್ಯೆ ನೀವು ತೀರಿಸಬೇಕು' ಎಂದಳು.

'ಖಂಡಿತ ತೀರಿಸ್ತೀನಿ. ಇಡೀ ಅಂಗಡಿಯ ಒಡತಿಯೇ ನೀನು. ನಾಳೇನೆ ನಿನ್ನ ಹೆಸರಿಗೆ ಎಲ್ಲಾ ಬರೆದು ಕೊಡ್ತೀನಿ'ಎಂದರು.

ಮಧುಮತಿ ನಕ್ಕು- 'ಯಾರನ್ನೂ ಅಷ್ಟೊಂದು ನಂಬಬೇಡಿ. ನಾಳೆ ನಾನೇ ನಿಮ್ಮ ಪಾಲಿಗೆ ಕೆಟ್ಟವಳಾದರೆ ? ಸಧ್ಯಕ್ಕೆ ನನಗೆ ಎರಡು ಲಕ್ಷ ರೂ.ಗಳ ಚೆಕ್ ಕೊಡಿ. ನನ್ನ ಮದುವೆ ವಿಷಯ ನಮ್ಮ ತಾಯಿಗೆ ಮಾತ್ರ ಗೊತ್ತಿರಲಿ. ಅಕ್ಕಂದಿರು ತಮ್ಮ ಎಲ್ಲರಿಗೂ ನಾನು ಬೇರೆ ತರಹ ಪ್ರಚಾರ ಮಾಡ್ತೀನಿ. ಮೊದಲು ನಿಮ್ಮ ಮಗನ್ನ ಒಪ್ಪಿಸಿ' ಎಂದಳು.

'ನಾನೊಬ್ಬಳೇ ಹೇಳಿದರೇ ಅವನು ಒಪ್ಪಲ್ಲ. ನಮ್ಮ ಸ್ವಾರ್ಥಕ್ಕೆ ನಿನ್ನ ಬಾಳು ಹಾಳು ಮಾಡ್ತಿದ್ದೇವೇಂತ ಅನ್ಕೋತಾನೆ. ಅವನು ಮಹಾ ಧರ್ಮಭೀರು. ಅವನನ್ನ ಹೇಗೆ ಒಪ್ಪಿಸಬೇಕೋ... ನಿನಗೆ ಸೇರಿದ್ದು' ಎಂದಳು.

'ಆಗಲಿ. ರಾತ್ರಿ ನಾವು ಮೂರು ಜನವೇ ಇರೋವಾಗ ನೀವು ವಿಷಯ ತೆಗೀರಿ. ನಾನು ಅವರನ್ನ ಒಪ್ಪಿಸ್ತೀನಿ' ಎಂದಳು. ಆ ರಾತ್ರಿ ತಾಯಿ ಮಗ ಊಟಕ್ಕೆ ಕೂತಿದ್ದರು.

ಅವನು ನೀರಸವಾಗಿ ಊಟ ಮಾಡುತ್ತಿದ್ದ.

'ರಾಜು ಇಷ್ಟು ಚಿಂತೆ ಹಚ್ಚಿಕೊಂಡ್ರೆ ಹೇಗಪ್ಪಾ ? ನಡೆದದ್ದು ನಡೆದು ಹೋಯಿತು. ಸಮಾಧಾನ ತಂದ್ಕೊ' ಎಂದು ಏನೋ ಸಮಾಧಾನ ಹೇಳಲೆತ್ನಿಸಿದರು.

'ಏನು ಸಮಾಧಾನ ಅಮ್ಮ, ಆ ಎರಡು ಮಕ್ಕಳನ್ನ ನೆನೆಸಿಕೊಂಡ್ರೆ ಹೊಟ್ಟೇಲಿ ಸಂಕಟವಾಗತ್ತೆ. ಆ ರಣಚಂಡಿ ಚಿತ್ರ ವಿಚಿತ್ರ ವರ್ತನೆ ಸಹಿಸ್ತಾ ಬಾಳಬೇಕು ನಾನು. ಈ ಬದುಕಿಗೆ ಕೊನೆಯೆ ಇಲ್ಲವಾ ?'ಎಂದ.

'ಆ ಪಾಪಿಷ್ಠೆಗೆ ಅಷ್ಟು ಹೆದರಿದರೆ ಹೇಗಪ್ಪಾ? ನಿನ್ನ ಬದುಕಿನ ಸುಖ ಶಾಂತಿಗೆ ನಾನೊಂದು ಯೋಚನೆ ಮಾಡಿದ್ದೀನಿ. ನೀನು ಏಕೆ ಒಂದು ಒಳ್ಳೆ ಹುಡುಗೀನ್ನ ಮದುವೆ ಆಗಬಾರದು ?' ಎಂದರು. ಅವನು ನಿರಾಶೆಯಿಂದ ನಕ್ಕು 'ಅವಳ ಸ್ವಭಾವ ನಿನಗೆ ಗೊತ್ತಿದ್ದೂ ಕೇಳ್ತಿಯಲ್ಲಮ್ಮ ನಾನು ನನ್ನ ಮಗೂನ್ನ ಪ್ರೀತಿಯಿಂದ ಲಾಲಿಸಿದ್ದಕ್ಕೆ ಸಹಿಸಲಾರದೇ ಆ ಮಗೂನ್ನ ಮುಂಬಯಿನ ಬೋರ್ಡಿಂಗ್‌ಗೆ ಸೇರಿಸಿದಳು. ಈಗಲು ಇಷ್ಟು ಕೃತಕ ಪಶ್ಚಾತ್ತಾಪ ವ್ಯಕ್ತಪಡಿಸಿ, ಕಾಲಿಗೆ ಬಿದ್ದು, ಕ್ಷಮಾಪಣೆ ಕೇಳಿಕೋತಾಳೆ. ಹೋಗ್ಲಿ, ಚಿಂಟು ಕಳೆದು ಹೋದ, ಚಿನ್ನೂನ್ಯಾಕೆ ದೂರ ಇಟ್ಟಿದ್ದಿ, ಕರೆದುಕೊಂಡು ಬಾ.... ಅಂದರೆ ಒಪ್ಪಲ್ಲ. ಅವರಮ್ಮನ ಒಂಟಿತನ

ನೀಗಲಿಕ್ಕೆ ಆ ಮಗು ಬೇಕಂತೆ' ಎಂದ.

'ಎಷ್ಟು ಹಣಾ ಇದ್ದರೇನಪ್ಪಾ? ಮುಪ್ಪಿನಲ್ಲಿ ಒಂಟಿತನ ಕಾಡತ್ತೆ, ನನಗೂ ಒಂದು ಮುದ್ದಾದ ಮೊಮ್ಮಗು ಬೇಕು, ಲೋಕಕ್ಕೆ ಹೆಚ್ಚು ಪ್ರಸಾರವಾಗದ ಒಂದು ಮದುವೆ ಯೋಜನೆ ನಾವು ಮಾಡಿದ್ದೀವಿ 'ಎಂದು ತಮ್ಮ ಯೋಚನೆ ಹೇಳಿದರು.

ಆತ ಚಿಂತೆಯಿಂದ-'ನಮ್ಮ ಸ್ವಾರ್ಥಕ್ಕೆ ಆ ಹುಡುಗಿ ಬಾಳು ಹಾಳು ಮಾಡೋದು ನ್ಯಾಯವೇನಮ್ಮ?' ಎಂದ.

'ಇದರಿಂದ ನನ್ನ ಬಾಳು ಹಾಳಾಗಾತ್ತೇಂತ ನಾನು ಖಂಡಿತ ತಿಳಿದುಕೊಂಡಿಲ್ಲ. ನನ್ನ ರೂಪ, ವಿದ್ಯೆಗೇನೂ ಬೆಲೆ ಇಲ್ಲದ ಹಾಗೆ ನಮ್ಮ ನೆಂಟರು ಎಂಥೋಂತೆಹ ಸಂಬಂಧ ಹೇಳ್ತಾ ಇದ್ದರು ಬಲ್ಲಿರಾ ? ನಮ್ಮ ಬಡತನ ಒಂದೇ ಅವರು ಗುರುತಿಸ್ತಿದ್ದದ್ದು. ಒಬ್ಬ ಅಂಗವಿಕಲ, ಇನ್ನೊಬ್ಬ ಎರಡನೆಯ ಮದುವೆ ವ್ಯಕ್ತಿ, ಅವನ ಮಗ ಹದಿನಾರು ವರ್ಷದ ಹೈಸ್ಕೂಲ್ ಸ್ಟೂಡೆಂಟ್. ಮದುವೆ ಮುಖ್ಯ ಅಂತ ನಾನು ತಿಳಿದಿಲ್ಲ. ಏನಾರೂ ಕೆಲಸಕ್ಕೆ ಸೇರಿ, ಈ ಕುಟುಂಬದ ಕಷ್ಟ ಪರಿಹಾರ ಮಾಡಬೇಕೂಂತ ಭಾವಿಸಿದ್ದೆ. ನಿಮ್ಮ ತಾಯಿ ನನಗೆ ಉದ್ಯೋಗ ಕೊಡೋದರ ಮೂಲಕ ನನ್ನ ಕುಟುಂಬ ಅನ್ನ ಬಟ್ಟೆಯ ದೃಷ್ಟಿಯಿಂದ ನೆಮ್ಮದಿಯಾಗಿದೆ, ಆದರೆ ಕೆಲವು ವಿಷಯಗಳಲ್ಲಿ ಸಮಸ್ಯೆ ಇದೆ. ವಯಸ್ಸಾದ ತಂದೆಗೆ ದುಡುಮೆಯಿಂದ ನಿವೃತ್ತಿಬೇಕು. ಅನಾರೋಗ್ಯದಲ್ಲಿರೋ ತಾಯಿಗೆ ಒಳ್ಳೆ ಚಿಕಿತ್ಸೆ ಕೊಡಿಸಬೇಕು, ಅಕ್ಕಂದಿರ ಬಾಳು ಹಸನಾಗಬೇಕು, ತಮ್ಮನ ಬದುಕು ಸುಲಲಿತವಾಗಬೇಕು, ಇದೆಲ್ಲಾ ನನ್ನ ಸ್ವಾರ್ಥವೂ ಹೇಳಿಕೊಂಡಿದ್ದೀನಿ. ಜೊತೆಗೆ ನಾನು ತೀರ ಶೋಷಿತಳಾಗ್ತಿಲ್ಲ. ನೀವೇನು ಈಗ ಅರವತ್ತು ವರ್ಷದ ಮುದುಕರಲ್ಲ, ನನಗಿಂತ ಹನ್ನೆರಡು ವರ್ಷ ದೊಡ್ಡವರು. ನಿಮ್ಮ ರೂಪ, ಗುಣ ಎಲ್ಲಾ ನನಗೆ ಇಷ್ಟವಿದೆ' ಎಂದು ನಿರ್ಭೀತಿಯಿಂದ ನುಡಿದಳು ಮಧುಮತಿ.

'ಆದರೆ ಈ ಕಳ್ಳ ಮದುವೆಯಿಂದ ನಿಮಗೆ ನಾನು ಲೋಕದೆದುರು ಪತ್ನಿಯ ಸ್ಥಾನ ಕೊಡಲಾರೆ, ಇದು ನನಗೆ ಅಪರಾಧವಾಗಿ ಕಾಡ್ತಿರತ್ತೆ' ಎಂದ.

'ಪರವಾಗಿಲ್ಲ, ದುಷ್ಯಂತ ಮರೆತು ದೂರಾಗೊ.... ಶಕುಂತಲೆ ನಾನೂಂತ ಗೊತ್ತಿದ್ದೇ ನಾನು ನಿಮ್ಮನ್ನ ವಿವಾಹವಾಗ್ತಿದ್ದೀನಿ. ಕಾನೂನಿನ ಪ್ರಕಾರ ನಾನು ಉಪಪತ್ನಿ, ಸೂಳೆ ಇರಬಹುದು. ಆದರೆ ಒಬ್ಬ ಕುಲಸತಿ ಹೇಗೆ ತನ್ನ ಪಾತಿವ್ರತ್ಯ ಕಾಪಾಡಿಕೊಳ್ಳಬಲ್ಲಳೋ ಹಾಗೆ ನಾನು ನನ್ನ ಪಾತಿವ್ರತ್ಯ ಕಾಪಾಡಿಕೊಳ್ಳಬಲ್ಲೆ. ನಿಮ್ಮ ತಾಯಿ ಆಶ್ರಯ, ಈ ಆಸ್ತಿಪಾಸ್ತಿ ಇರೋದ್ರಿಂದ. ಯಾರ ಹಂಗಿಲ್ಲದೇ ಬಾಳಬಲ್ಲೆ' ಎಂದಳು.

ಆ ರಾತ್ರಿ ತುಂಬಾ ಚರ್ಚೆಯಾಯಿತು. ಕಡೆಗೆ ರಾಜಸಿಂಹ 'ಆಗಲಿ, ನಾನು

ದುರ್ಬಲ ಮನಸ್ಕ. ನನ್ನ ಮನಸ್ಸಿನ ಅಶಾಂತಿ ನೀಗಲಿಕ್ಕೆ ವಿವಾಹವಾಗ್ತಿದ್ದೀನಿ. ಆದರೆ ನಿನ್ನ ಬದುಕಿಗೆ ಏನೂ ಕೊಡಲಾರೆ' ಎಂದ.

ಮಾರನೇ ದಿನದಿಂದಲೇ ಮಧುಮತಿಯ ಮದುವೆ ವಿಷಯ ಅಂಗಡಿ ಕೆಲಸಗಾರರಲ್ಲಿ, ಆ ಓಣಿಯ ಪರಿಚಿತರಲ್ಲಿ ಪ್ರಸಾರವಾಯಿತು. 'ಶಂಕರ ಅಂತ ಅವಳ ಸೋದರ ಮಾವನ ಮಗ. ಮದ್ರಾಸಿನಲ್ಲಿ ಕೆಲಸದಲ್ಲಿದ್ದಾನೆ. ತಾಯಿ ಮಗ ಇಬ್ಬರೆ ಹೆಣ್ಣಿನವರು ಬಡವರೂಂತ ಗೊತ್ತು, ತಿರುಪತೀಲಿ ಒಂದಿನದ ಮಟ್ಟಿಗೆ ಮದುವೆ ಮಾಡಿಕೊಡಿ ಸಾಕೂಂತ ಹೇಳಿದ್ದಾನೆ, ದೇವರ ಸಮಾರಾಧನೆ ಒಂದು ನಾವು ಮಾಡ್ತೀವಿ. ನಮ್ಮ ಅಂಗಡೀಲಿ ಅವಳ ತಂದೆ, ತಮ್ಮ ದುಡೀತಿದ್ದಾರಲ್ಲ' ಎಂದು ಪ್ರಚಾರಮಾಡಿ, ಶಂಕರ ಮಧುಮತಿ ಎಂಬ ಹೆಸರಲ್ಲಿ ಲಗ್ನಪತ್ರಿಕೆಯೂ ಹಂಚಿ, ಎಂಟು ದಿನದ ನಂತರ ಒಂದು ದೇವರ ಸಮಾರಾಧನೆ ಮಾಡಿ ಸಿಹಿ ಊಟ ಹಾಕಿದರು.

ತಿರುಪತಿಗೆ ಟ್ಯಾಕ್ಸಿಯಲ್ಲಿ ಮಧುಮತಿಯ ತಾಯಿ-ತಂದೆ, ಮಧುಮತಿ, ರಾಜಸಿಂಹ, ವನಜಮ್ಮ ಹೊರಟಾಗಲು ಯಾರಿಗೂ ಅನುಮಾನ ಬರಲಿಲ್ಲ, ಒಂದು ಗೆಸ್ಟ್‌ಹೌಸ್‌ನಲ್ಲಿ ಇಳಿದುಕೊಂಡಿದ್ದರು. ಆದಿನ ದೇವರಿಗೆ ಕಲ್ಯಾಣೋತ್ಸವ ಮಾಡಿಸಿದಾಗ ದಂಪತಿಗಳೆಂದು ರಾಜಸಿಂಹ, ಮಧುಮತಿಯರನ್ನೇ ಕೂಡಿಸಿದ್ದರು. ಮೈತುಂಬಾ ಸೆರಗು ಹೊದ್ದ ಅವಳನ್ನು ಅರ್ಚಕರು ಅವಿವಾಹಿತೆ ಎಂದು ಗಮನಿಸಲಿಲ್ಲ. ಎಲ್ಲರ ಗಮನ ವೇದಿಕೆ ಮೇಲಿನ ಹವನ ಹೋಮ ಕಲ್ಯಾಣ ಕಾರ್ಯಕ್ರಮಗಳತ್ತ ಇತ್ತು. ಶ್ರೀಮನ್ನಾರಾಯಣನ, ಶ್ರೀದೇವಿ, ಭೂದೇವಿಯರ ಗೋತ್ರ ಪ್ರವರ ಹೇಳಿ, ವಾಲಗ ವಾದ್ಯಗಳ, ವಿಪ್ರರ ಮಂತ್ರಗಳ ನಡುವೆ ಮಾಂಗಲ್ಯಂತಂತುನಾನೇನ... ಎಂಬ ಮಂತ್ರ ಘೋಷಿಸುತ್ತ ಇದ್ದಂತೇ ಪುರೋಹಿತರು ಶ್ರೀನಿವಾಸನ ಉತ್ಸವ ಮೂರ್ತಿಗೆ ಹಸ್ತಸ್ಪರ್ಶ ಮಾಡಿ ಮಾಂಗಲ್ಯ ಅಮ್ಮನವರಿಬ್ಬರಿಗೂ ಹಾಕುವ ಸಂದರ್ಭ, ಎಲ್ಲರ ಗಮನ ವೇದಿಕೆಯ ಮೇಲೆ ಉತ್ಸವ ಮೂರ್ತಿ ಮೇಲಿತ್ತು. ಮೊದಲೇ ತಾಯಿ ಹೇಳಿಕೊಟ್ಟ ಸೂಚನೆಯಂತೇ ರಾಜಸಿಂಹ ಅದೇ ಸಮಯದಲ್ಲಿ, ಚಿನ್ನದ ಮಾಂಗಲ್ಯ ಸರ ಅವಳ ಕೊರಳಿಗೆ ಹಾಕಿದ, ಅಂಥಾ ಗದ್ದಲದಲ್ಲಿಯೂ ಪಕ್ಕದ ಮುತ್ತೈದೆ ಇದನ್ನ ನೋಡಿದಳು.

'ಹೊಸದಾಗಿ ಮಾಂಗಲ್ಯ ಸರ ಮಾಡಿಸಿದ್ದಾ...? ನಾನೂ ಅಷ್ಟೇ ಅರಿಶಿನ ದಾರದ ಕರಿಮಣಿ ಮಾಂಗಲ್ಯ ಮದುವೇಲಿ ಕಟ್ಟಿದ್ದು. ಮುಂದೆ ಕೊಂಚ ಹಣ ಸೇರಿದಾಗ ಮೂರು ತೊಲದ ಮಾಂಗಲ್ಯ ಸರ ಮಾಡಿಸಿಕೊಂಡೆ. ಅದನ್ನ ಹೀಗೆ ಕಲ್ಯಾಣೋತ್ಸವ ಸಮಯದಲ್ಲೇ ಹಾಕಿಸಿಕೊಂಡೆ' ಎಂದರು. ಅವಳು ಸುಮ್ಮನೆ ನಕ್ಕಳು. ಇನ್ನೊಬ್ಬಾಕೆ ವರ್ಷ, ವರ್ಷ ಹೊಸದಾಗಿ ಅರಿಶಿನದಾರದಲ್ಲಿ ಮಾಂಗಲ್ಯ ಕರಿಮಣಿ ಪೋಣಿಸಿಕೊಳ್ತೇವೆ. ಶ್ರೀನಿವಾಸ ಶ್ರೀಲಕ್ಷ್ಮಿ ಪದ್ಮಾವತಿ ಮುಂದಿಟ್ಟು,

ಅರಿಶಿನ ಕುಂಕುಮ ಪೂಜೆ ಮಾಡಿ, ದೇವರ ಹಸ್ತಸ್ಪರ್ಶ ಮಾಡಿಸಿ, ನಮ್ಮ ಯಜಮಾನರಿಂದ ಕಟ್ಟಿಸ್ಕೋತೀನಿ. ಒಮ್ಮೊಮ್ಮೆ ಅವರು ಆಫೀಸಿಗೆ ಹೋಗಿದ್ದರೇ ದೇವರ ಬಲಗೈಗೆ ಮುಟ್ಟಿಸಿ ನಾನೇ ಕಟ್ಕೋತೀನಿ' ಎಂದರು.

ಬೆಳಿಗ್ಗೆಯ ವಾಸಂತಿಬಾಯಿ ಮಗಳ ಕಾಲಿಗೆ ಕಾಲುಂಗುರ ಹಾಕಿದ್ದರು. ದಂಪತಿಗಳನ್ನು ಕೂಗಿ ಖಣ, ಶಲ್ಯ ನೀಡಿದರು. ರಾಜಸಿಂಹ, ಮಧುಮತಿಯರಿಗೂ ಆಶೀರ್ವಾದ ಪೂರ್ವಕ ಖಣ, ಶಾಲು ಸಿಕ್ಕಿತು. 'ಅಖಂಡವಾಗಿ ಸೂರ್ಯ ಚಂದ್ರರಿರೋವರಿಗೆ ನಿಮ್ಮಿಬ್ಬರ ವಂಶ ಬೆಳೆಯಲಿ' ಎಂದು ದಂಪತಿಗಳಿಗೆ ಹರಸುವ ದೀರ್ಘ ಸುಮಂಗಲಿತನ, ದೀರ್ಘಾಯುಷ್ಯ, ವಂಶಾಭಿವೃದ್ಧಿ ಎಲ್ಲದರ ಬಗ್ಗೆ ಹರಸಿ ಪ್ರಸಾದ ನೀಡಿದರು.

ಶಲ್ಯ, ಖಣಾ, ಅಕ್ಷತೆ ಹಿಡಿದು ಶ್ರೀಗರುಡಧ್ವಜದ ಹೆಬ್ಬಾಗಿಲಿಂದ ಶ್ರೀಲಕ್ಷ್ಮಿ ವೆಂಕಟೇಶ್ವರನ ದರ್ಶನ ಮಾಡಿ ಬಂದರು. ಗೆಸ್ಟ್‌ಹೌಸ್‌ಗೆ ಬಂದ ಸ್ವಲ್ಪ ಹೊತ್ತಿಗೆ ಪ್ರಸಾದದ ವ್ಯಾನ್ ಬಂದಿತು. ಇಬ್ಬರು ಮೂವರು, ದೇವಸ್ಥಾನದ ಬ್ರಾಹ್ಮಣರು ಬುಟ್ಟಿಗಳನ್ನು ಹೊತ್ತು ತಂದರು.

ರಾಜಸಿಂಹ ಭಾರ ಹೊತ್ತು ತಂದವರೆಂದು ಅವರಿಗೆ ಐವತ್ತು ರೂ. ಕೊಟ್ಟ. 'ಪ್ರಸಾದ ಏನಾದರೂ ಸಿಕ್ಕತ್ತಾ ಸ್ವಾಮಿ ?' ಎಂದ ಒಬ್ಬ. 'ನಾವಿರೋದು ಐದು ಜನ. ಸಂಜೆ ಬನ್ನಿ. ಇನ್ನು ಕೆಲವು ಸಂಗಡಿಗರನ್ನ ಕರೆತನ್ನಿ. ಬೇಕಾದ್ದು ಕೊಡ್ತೀವಿ'ಎಂದ. ಅಲ್ಲೇ ಅಂಗಡಿಯಿಂದ ಊಟದೆಲೆ ತರಿಸಿದರು. ಪೊಂಗಲ್, ಹುಗ್ಗಿ, ಪುಳಿಯೊಗರೆ, ಮೊಸರನ್ನ, ಲಾಡು, ಅಪ್ಪ, ಅಡೆದೋಸೆ ಎಲ್ಲಾ ಬಡಿಸಿದಾಗ ಎಲೆ ತುಂಬಿತು. ಎಲ್ಲರೂ ಊಟ ಮಾಡಿದರು. ಸಂಜೆ ಬಂದವರಿಗೆಲ್ಲಾ ಲಾಡುಬಿಟ್ಟು, ಮಿಕ್ಕ ಎಲ್ಲಾ ಪ್ರಸಾದ ಬುಟ್ಟಿ ಬುಟ್ಟಿ ಕೊಟ್ಟು ಕಳಿಸಿದರು.

ಲಾಡು, ಅಪ್ಪ, ಅಡೆ, ಪಡಿ ಪ್ರಸಾದವಾದ್ದರಿಂದ ಊರಿಗೆ ತೆಗೆದುಕೊಂಡು ಹೋಗಲು ಪ್ಯಾಕ್ ಮಾಡಿದರು. ಆ ರಾತ್ರಿ ಎಲ್ಲರೂ ಒಟ್ಟಿಗೆ ಇದ್ದರು. ಮಾರನೆಯ ದಿನ ವನಜಮ್ಮ ಹಾಗೂ ಮಧುಮತಿಯ ತಂದೆ ತಾಯಿಗಳು ಮೈಸೂರಿಗೆ ಹೊರಟುಬಿಟ್ಟರು. ಅವರೆಲ್ಲಾ ಹೊರಟ ಮೇಲೆ, ಆ ದೊಡ್ಡ ಗೆಸ್ಟ್‌ಹೌಸ್‌ನಲ್ಲಿ ರಾಜಸಿಂಹ, ಮಧುಮತಿ ಇಬ್ಬರೇ ಉಳಿದರು. ರಾಜಸಿಂಹ ಅಲ್ಲೇ ಒಳಕೋಣೆಯಲ್ಲಿದ್ದ ಮಂಚದ ಮೇಲೆ ಮಲಗಿಬಿಟ್ಟ. ಅವನ ತಲೆಯಲ್ಲಿ ನೂರು ಆಲೋಚನೆಗಳು ತುಂಬಿ ತುಳುಕುತ್ತಿದ್ದವು. ಮಧುಮತಿ ಬಂದು ಅವನ ಮಂಚದ ಮೇಲೆ ಕುಳಿತಳು.

ಮೃದುವಾಗಿ ಅವನ ಹಣೆಯ ಮೇಳೆ ಕೈಯಾಡಿಸಿ 'ನನ್ನ ಮೇಲೆ ನಿಮಗೆ ಕೋಪಾನಾ ?' ಎಂದು ಮೃದುವಾಗಿ ಕೇಳಿದಳು.

ಅವನು ಆರ್ತನಾಗಿ - 'ನಿನ್ನ ಮೇಲೆ ಕೋಪಾನಾ, ಮಧು ? ಏಕೆ, ನೀನು ಏನು ಅಪರಾಧ ಮಾಡಿದ್ದಿ? ಅಪರಾಧಿ ನಾನು' ಎಂದ.

'ನೀವು ಏನೂ ಅಪರಾಧ ಮಾಡಿಲ್ಲ' ಎಂದಳು ದೃಢವಾಗಿ.

'ಏಕೋ ನಮ್ಮಮ್ಮನ ಸ್ವಾರ್ಥ, ವಯಸ್ಸಾದ ನಾನು ನಿನ್ನಂಥ ಎಳೆಹರೆಯದ ಹೆಣ್ಣಿಗೆ ಅಪಚಾರ ಮಾಡ್ಲಿಕ್ಕೆ ಆಶಿಸಿ ಈ ಮದುವೆ ಎಂಬ ನಾಟಕ ಆಡಿದ್ದೀವಿ ಅನ್ನಿಸತ್ತೆ. ಲೋಕದ ಜನರಿಂದ ಮುಚ್ಚಿಟ್ಟ ಈ ಮದುವೆಗೆ ಅರ್ಥವಿದೆಯಾ ಮಧು ? ದಯವಿಟ್ಟು ಆ ತಾಳಿ ತೆಗೆದಿಟ್ಟು, ಮೊದಲಿನ ಹಾಗೆ ನಮ್ಮಮ್ಮನ ಬಳಿ ಕೆಲಸಗಾತಿ ಯಾಗಿರು. ನಿನ್ನದೃಷ್ಟ ಒಲಿದು ಬಂದಾಗ, ನಿನಗೆ ಒಳ್ಳೆ ವರ ಸಿಕ್ಕಬಹುದು. ನಿನ್ನೆ ನಡೆದ ಮದುವೆ ನಿಜ ಎಂದು ನಂಬಿ, ನಿನ್ನ ಮುಟ್ಟಲು ಅಳುಕ್ತೀನಿ' ಎಂದ.

'ನಿಮ್ಮ ಧರ್ಮಭೀರು ವ್ಯಕ್ತಿತ್ವದ ಪರಿಚಯ ನಿಮ್ಮ ತಾಯಿಯಿಂದ ತಿಳಿದಿದ್ದೀನಿ. ನಾನು ನಿಮ್ಮ ತಾಯಿಯ ಬಲವಂತಕ್ಕೆ ಈ ಮದುವೆಗೆ ಒಪ್ಪಿದ್ದೀನಿ ಎಂಬುವುದು ನಿಮ್ಮ ಭ್ರಮೆ. ನಾನು ನಿಮ್ಮ ಆರಾಧಕಳು, ಮೊದಲ ಬಾರಿ ನಿಮ್ಮನ್ನ ಕಂಡಾಗ, ನಿಮ್ಮ ಹಣೆಗೆ ಕರ್ಚೀಫ್ ಒತ್ತಿ ಹಿಡಿದಾಗ ಆಗ ಸನಿಹದಿಂದ ಕಂಡ ನಿಮ್ಮ ಆ ಸುಂದರ ಕಂಗಳ ನೋಟಕ್ಕೆ ಮರುಳಾದೆ. ಈತ ಅವಿವಾಹಿತನಾಗಿದ್ದು, ನನ್ನಲ್ಲಿ ಅನುರಕ್ತರಾದರೆ? ಎಂದು ಒಂದು ಸಣ್ಣ ಕನಸು ಕಂಡಿದ್ದೆ. ಆದರೆ ಪಪ್ಪಾ... ಪಪ್ಪಾಂತ ಕೂಗ್ತ ಬಂದ ಆ ಮುದ್ದಾದ ಹುಡುಗನ್ನ ನೋಡ್ದಾಗ ನೀವು ವಿವಾಹಿತ ರೂಂತ ಖಚಿತವಾಗಿತ್ತು. ಮುಂದೆ ನಿಮ್ಮ ತಾಯಿಯಿಂದ ನಿಮ್ಮ ಕುಟುಂಬದ ಕಥೆ, ವಿರಸ ದಾಂಪತ್ಯದ ಬಗ್ಗೆ ತಿಳಿದಾಗ, ನಿಮಗೆ ಸುಂದರ ಸುಖ ದಾಂಪತ್ಯ ಕೊಡುವ ಪ್ರೀತಿಯ ಮಡದಿಯಾಗಬೇಕೂನ್ನಿಸಿತು' ಎಂದು ಅವನ ಮನ ಒಲಿಸಲು ಪ್ರಯತ್ನಿಸಿದಳು. ಮಧು.

'ನಿನಗೆ ಏನೇನೋ ಅನಿಸಿರಬಹುದು, ಆದರೆ ನಾನು ನಿನ್ನ ಹಾಗೆ ಕನಸು ಕಾಣೋ ಹರೆಯದವನಲ್ಲ, ಹೆಂಡತಿ ಅಂತ ನಾಲ್ಕು ದಿನ ಆಟ ಆಡಿಸಿ ಹೋಗೋ ಅನಾಮಧೇಯ ಆಗಲಾರೆ. ಈ ಸುಳ್ಳು ಮದುವೆ ಆದ ಅಪರಾಧ ಬೇಗ ತಿದ್ಕೊಳ್ಳೋಣಾ... ನಾಳೇನೆ ನಿನ್ನ ಊರಿಗೆ ಕರೆದುಕೊಂಡು ಹೋಗಿ ಬಿಟ್ಟಿಡ್ತೀನಿ. ಇದೆಲ್ಲಾ ಕನಸು ಅಂತ ಮರೆತು ಬಿಡೋಣ. ಈ ಸುಳ್ಳು ಮದುವೆ ಊರ್ಜಿತ ಮಾಡಿ, ಕಳ್ಳ ದಾಂಪತ್ಯದ ಆಟ ಬೇಡ...' ಎಂದ.

ಮಧು ನಸುನಕ್ಕಳು.

'ನಿಮ್ಮ ಪಾಲಿಗದು ಸುಳ್ಳು ಮದುವೆ ಇರಬಹುದು, ಕಾನೂನಿನ ಪ್ರಕಾರ ನಿಮ್ಮ ಮೊದಲ ಹೆಂಡತಿಯೇ ನಿಮ್ಮ ನಿಜವಾದ ಪತ್ನಿ, ನಾನು ಬಲ್ಲೆ. ಆದರೆ ದೇವರ ಮದುವೆಯ ಮಂಗಳವಾದ್ಯ ಮಂತ್ರಘೋಷಗಳ ಮಧ್ಯೆ ನೀವು ನನ್ನ ಕೊರಳಿಗೆ

ತಾಳಿ ಕಟ್ಟಿದ್ದೀರಿ. ಅದು ನನ್ನ ಪಾಲಿನ ಎಂದೆಂದಿನ ಪವಿತ್ರ ತಾಳಿ' ಎಂದಳು.

'ನನ್ನ ಮನಸ್ಸು ಕದಲಿಸಬೇಡ, ಮಧು, ನನ್ನ ಮನಸ್ಸಿನ ವಿಹ್ವಲತೇಲಿ ನೀನಿನ್ನು ಪರಿಶುದ್ಧಳಾಗಿರೋಕೆ ಸಂತೋಷಪಡು. ನಿನ್ನ ರೂಪಕ್ಕೆ ಮನಸೋತು, ಎಲ್ಲಿ ಅಚಾತುರ್ಯ ಮಾಡಿಬಿಡ್ತೇನೋಂತ ನನಗೆ ಭಯ ಇದೆ. ಅಮ್ಮ ಅಂತೂ ಅರುಳು ಮರುಳು ಮುದುಕಿ. ಆಕೆ ಹೇಳಿದಳೂಂತ ನಾವು ಹೇಗೆ ಈ ಮದುವೆಗೆ ಒಪ್ಪಿದೆವೊ? ಈಗ ನನಗೆ ಈ ಹುಡುಗಾಟಕ್ಕೆ ತೆರಬೇಕಾದ ಬೆಲೆ ಅರ್ಥವಾಗಿದೆ. ನನ್ನ ಹೆಂಡತಿಗೆ ತಿಳಿದರೆ ನಿನ್ನ ಕೊಲೆ ಮಾಡ್ಲಿಕ್ಕೂ ಹೇಸಲ್ಲ. ಲೋಕದಿಂದ ಮುಚ್ಚಿಟ್ಟ ಈ ಮದುವೆಗೆ ಅರ್ಥವಿಲ್ಲ'ಎಂದ.

'ನಿಮ್ಮ ಮನಸ್ಸಿನ ಶಾಂತಿ ನಾನು ಹಾಳುಮಾಡಲ್ಲ. ನಾನಂತು ಈ ತಾಳಿಗೆ ಬೆಲೆ ಕೊಟ್ಟಿದ್ದೀನಿ. ನೀವು ಯಾವಾಗ ಸ್ವೀಕರಿಸಿದರೂ ನಿಮ್ಮ ಸೇವೆಗೆ ಅರ್ಪಿತ ಹೂವು ನಾನು. ಆದರೆ ನಾನಾಗಿ ಮೇಲೆ ಬಿದ್ದು ಬರಲಾರೆ, ಮೊದಲು ನೀವು ಈ ಮದುವೆ ಸತ್ಯ ಅನ್ನೋದು ಜೀರ್ಣಿಸಿಕೊಳ್ಳಿ. ಅದುವರೆಗೆ ಗೆಳತಿಯಾಗಿ ನಿಮ್ಮೊಂದಿಗಿರ್ತೀನಿ' ಎಂದಳು.

'ನನ್ನನ್ನು ಕ್ಷಮಿಸು ಮಧು, ಮದುವೆ ಆಗೋದು ಆಗಿ, ಈಗ ನಾಟಕ ಆಡ್ತಿದ್ದಾನಲ್ಲಾ ಅನಿಸುತ್ತ ನಿಂಗೆ ? ಆದರೆ ಏಕೋ ಏನೊ ಈ ಮದುವೆ ನನ್ನ ಮನಸ್ಸು ಒಪ್ತಿಲ್ಲ. ನನ್ನ ಮನದಲ್ಲಡಗಿದ್ದ ಸೈತಾನ ನಿನ್ನ ಸುಂದರ ರೂಪಕ್ಕೆ ಸೋತಿದ್ದ. ಅಮ್ಮ ಹೇಳ್ತಾಲೇ ಈ ಯೋಚನೆಗೆ ಒಪ್ಪಿ ಬಂದು ನಿನ್ನ ಅಸಹಾಯಕತೆ, ನಿನ್ನ ಬಡತನವನ್ನು ದುರುಪಯೋಗಪಡಿಸ್ತಿದ್ದೀನಿ ಅನಿಸುತ್ತೆ. ದಾಂಪತ್ಯ ನನ್ನ ಪಾಲಿನ ಸಿಹಿ ಅನುಭವದ್ದು ಅಲ್ಲ. ಹೆಣ್ಣಿಗಾಗಿ ಕಾತರಿಸೋ ಚಡಪಡಿಕೆ, ಹುಮ್ಮಸ್ಸು ಯಾವುದೂ ನನಗಿಲ್ಲ. ಅಮ್ಮನ ಯೋಜನೆ ಒಪ್ಪಿ ಏನೋ ಮೂರ್ಖತನ ಮಾಡಿದೆ ಅನಿಸತ್ತೆ' ಎಂದು ಬಡಬಡಿಸಹತ್ತಿದ.

'ಕೆಲವು ದಿನ ಆತ್ಮೀಯವಾಗಿದ್ದು ಒಳ್ಳೇ ಗೆಳೆಯರಂತಿರೋಣ. ನಿಮ್ಮ ಮನಸ್ಸಿಗೆ ನಾನು ಒಗ್ಗಿದರೆ ನನ್ನ ಸ್ವೀಕರಿಸಿ. ನಿಮ್ಮ ತಾಯಿಯವರ ಒಂಟಿತನ ನಿವಾರಿಸಿ, ಅವರ ಆಸ್ತಿಗೆ ಒಬ್ಬ ವಾರಸುದಾರನ್ನ ನೀಡ್ತೀನಿ ಅಂತ ನಾನು ಮಾತು ಕೊಟ್ಟಿದ್ದೀನಿ. ನನ್ನ ಮಾಂಗಲ್ಯ ನನ್ನ ಪಾಲಿಗೆ ಪವಿತ್ರ . ಈ ಮದುವೆ ನನ್ನ ಪಾಲಿನ ನಿಜವಾದ ಮದುವೆ' ಅಂದಳು.

'ನನ್ನ ಮನಸ್ಸು ಇದನ್ನ ನಿಜವಾದ ಮದುವೆ ಅಂತ ಒಪ್ಪಿದಾಗ ನಾನು ನಿನ್ನ ಬಳಿ ಬರ್ತೀನಿ. ಆದರೆ ಅದುವರೆಗೆ ನಿನ್ನ ಬೆರಳು ಸಹ ಸೋಕಲಾರೆ'ಎಂದುಬಿಟ್ಟ. ಆದರೆ ಇಂದಲ್ಲ ನಾಳೆ ಅವನನ್ನು ಗೆಲ್ಲುವೆ ಎಂದು ಮಧುಮತಿ ಊಹಿಸಿದ್ದಳು.

ಇಬ್ಬರು ಕೆಳಗಿನ ತಿರುಪತಿಗೆ ಬಂದು, ಒಂದು ರೂಮ್ ಹಿಡಿದಿದ್ದರು.

ಬೆಳಗಾಗೆದ್ದು ಟ್ಯಾಕ್ಸಿ ಮಾಡಿಕೊಂಡು ಕಡಲತೀರ್ಥ, ತಿರಚಾನೂರು, ಶ್ರೀ ಕೋದಂಡೇಶ್ವರ ದೇವಾಲಯ, ಪಾಪನಾಶಿನಿ, ಕುಮಾರಧಾರ, ಕಾಳಹಸ್ತಿ ಹೀಗೆ ಹತ್ತಿರದ ಎಲ್ಲಾ ಕ್ಷೇತ್ರಗಳ ದೇವಸ್ಥಾನ ನೋಡಿಬಂದರು.

ಶ್ರೀನಿವಾಸ ಮಂಗಾಪುರ, ಕಂಚಿ, ಕಾಳಹಸ್ತಿ ಎಲ್ಲಾ ಮತ್ತೆ ಮತ್ತೆ ಸುತ್ತಿಬಂದರು.

ಒಂದೂವರೆ ತಿಂಗಳು ಕಳೆಯಿತು.

'ಬಾಂಬೇಲಿ ನನ್ನ ಹೆಂಡತಿ ಇದ್ದಾಳೆ. ಅವಳ ನಿಜವನ್ನ ಪರೀಕ್ಷಿಸಬೇಕು. ಒಂದು ಚೂರು ನನ್ನ ಪ್ರೀತಿಸದಿದ್ದರೂ ನನ್ನ ಏಕೆ ಹಿಡಿದಿಟ್ಟುಕೊಂಡಿದ್ದಾಳೆ ? ಅವರ ಅಪ್ಪನದು ಏನೋ ವಿಲ್ಲಿನ ರಹಸ್ಯವಂತೆ. ಈ ಮೂಗುಬ್ಬಸದ ಬದುಕು ಸಾಕಾಗಿದೆ. ನಾನು ನಿನ್ನ ಪ್ರೀತಿಸ್ತೀನಿ ಮಧು. ಆದರೆ ದಿಟ್ಟತನದಿಂದ ಗಂಡಸಾಗಿ ನಿಂತು ಹೋರಾಡಿ ಅವಳಿಂದ ವಿಚ್ಛೇದನ ತಗೊಂಡು ನಿನ್ನ ವಿವಾಹವಾಗ್ತೀನಿ. ಆ ಬದುಕು ತೊರೆದು ಬಂದು ಅಮ್ಮನ ಅಂಗಡಿ ನೋಡ್ಕೋತೀನಿ. ನಿನ್ನ ಜೊತೆ ರಾಜಾ ರೋಷವಾಗಿ ಸಂಸಾರ ಹೂಡ್ತೀನಿ. ಈಗ ಕಳ್ಳತನದ ಗರ್ಭದಾನ ಮಾಡಲಾರೆ, ನನ್ನ ಮಗುವನ್ನು ನೀನು ಯಾರೋ ದುಬೈಗೆ ಹೋದ ಶಂಕರನ ಹೆಂಡತಿಯಾಗಿ ಬೆಳೆಸೋದು... ಅಮ್ಮ ಆ ಮಗುವನ್ನು ದತ್ತು ತಗೊಳ್ಳೋದು ಈ ನಾಟಕ ಎಲ್ಲಾ ಬೇಡ' ಎಂದ.

ಮಧು ತಲೆತಗ್ಗಿಸಿ 'ನೀವೊಂದು ದೊಡ್ಡ ಮುಳ್ಳಿನ ಪಂಜರದಲ್ಲಿ ಸಿಕ್ಕಿದ್ದೀರಿ ಅನಿಸುತ್ತೆ. ಅದರಿಂದ ನೀವು ಬಿಡಿಸಿಕೊಂಡು ಬರೋ ಹಾಗಿಲ್ಲಾಂತ ಈ ಎಲ್ಲಾ ಕಳ್ಳನಾಟಕ ಆಡ್ತಿದ್ದೀವಿ, ನಿಮ್ಮ ತಾಯಿಗೆ ಒಬ್ಬ ಮೊಮ್ಮಗ ಬೇಕೇ ಬೇಕೂಂತ ಅಪೇಕ್ಷೆ ಇದೆ' ಎಂದಳು.

ಅವನು ದೃಢವಾಗಿ 'ಇದ್ದ ಎರಡು ಮಕ್ಕಳು ಕೈತಪ್ಪಿದ ಮೇಲೆ ನಾನು ಬದುಕಿನಲ್ಲಿ ಹತಾಶನಾದೆ. ಸರಿಯಾಗಿ ಸಂಸಾರ ಮಾಡದೇ ವರ್ಷದಲ್ಲಿ ಆರು ತಿಂಗಳು ನನ್ನಿಂದ ದೂರ ಇರೋ ಅವಳನ್ನ ಸಹಿಸ್ಕಾ ಏಕೆ ಬಾಳ್ತಿದ್ದೆ ? ಅವಳಿಗೊಬ್ಬ ಪ್ರೇಮಿ ಸಹ ಇದ್ದಾನೇಂತ ಅರೆಬರೆ ಮಾಹಿತಿ ದೊರಕಿದೆ. ಇದೆಲ್ಲಾ ರಹಸ್ಯ ಭೇದಿಸಲಾರದೆ ಮಂಕಾಗಿ ಜಡವಾಗಿದ್ದೆ. ಈಗ ನಿನ್ನ ಸನ್ನಿಧಾನದಲ್ಲಿ ಒಂದು ಬಗೆ ಛಲ ಹುಟ್ಟಿದೆ. ಹೋಗಿ ಎಲ್ಲಾ ರಹಸ್ಯ ಭೇದಿಸಿ ಬರ್ತೀನಿ. ಅವಳನ್ನ ಡೈವೋರ್ಸ್ ಮಾಡಿಬಂದು ನಿನ್ನ ಎಲ್ಲರೆದುರು ವಿವಾಹವಾಗ್ತೀನಿ' ಎಂದ.

ಮಧುಮತಿ ಕೊಂಚ ಭೀತಿಯಿಂದ– 'ಏನೇ ಆಗಲಿ, ಆ ಜನಗಳನ್ನ ಭೇಟಿ ಮಾಡೋಕೆ ಮುಂಚೆ ನಿಮ್ಮ ತಾಯಿ ಸಲಹೆ ಕೇಳಿ. ಅವರು ಕೊಂಚ ಅಪಾಯಕಾರಿ ಜನಗಳೂಂತ ಅಮ್ಮ ಹೆದರ್ತಾರೆ' ಎಂದಳು. 'ಅಮ್ಮನ್ನ ನಾನು ಭೆಟ್ಟಿ ಮಾಡಲ್ಲ, ಅವಳ ಪ್ರೀತಿ, ಆತಂಕದಲ್ಲಿ ನಾನು ಹೇಡಿ ಆಗ್ತೀನಿ. ಆಜನಗಳನ್ನ ನಾನು ಎದುರಿಸಿ,

ಹೋರಾಡಿ ಜಯಗಳಿಸಿ ಬರ್‍ತೀನಿ' ಎಂದು ಹಠದಿಂದ ಹೊರಟುಬಿಟ್ಟ. ತಿರುಪತಿಯಿಂದ ಮೈಸೂರಿಗೆ ಬಂದರು. ಅವಳನ್ನು ಮನೆಗೆ ಹೋಗಲು ರಿಕ್ಷಾ ಹತ್ತಿಸಿ ತಾನು ಸೀದಾ ಮುಂಬೈ ರೈಲು ಏರಿದ. ಎರಡು ಸೂಟ್‌ಕೇಸಿನೊಂದಿಗೆ ರಿಕ್ಷಾದಲ್ಲಿ ಮನೆಗೆ ಮರಳಿದ ಅವಳನ್ನು ಕಂಡು ಅಂಗಡಿ ಕೆಲಸಗಾರರು, ಅಕ್ಕಪಕ್ಕದ ಮನೆಯವರು ಎಲ್ಲರೂ ಅಚ್ಚರಿಯಿಂದ ಮಿಕಮಿಕ ಎಂದು ನೋಡಿದರು.

ವನಜಮ್ಮ ಗಟ್ಟಿಯಾಗಿ 'ಶಂಕರ್ ದುಬೈಗೆ ಹೋದ. ಅತ್ತೇಮನೆ ಬೇಸರ ಎಂದು ಇಲ್ಲಿಗ ಬಂದಿದ್ದಿ ಹೌದಲ್ಲ. ಇರಲಿ ಬಿಡು. ನೀನಿಲ್ಲದೇ ನನಗೂ ಬೆಳಗು ಹರಿಯಲ್ಲ. ನಿಮ್ಮಮ್ಮನಿಗಿಂತ ನಾನೇ ನಿನ್ನ ಜಾಸ್ತಿ ನೆನಸ್ತಿದ್ದೆ' ಎಂದು ಸ್ವಾಗತಿಸಿದರು.

ಆ ರಾತ್ರಿ ಏಕಾಂತದಲ್ಲಿ ವನಜಮ್ಮ ಆಸೆಯಿಂದ 'ಈ ತಿಂಗಳು ಈಚೆ ಆಗಿದ್ದೆಯಾ ?' ಎಂದರು.

'ಇಲ್ಲಮ್ಮ, ಈಗ ದಿನಗಳು, ಇವತ್ತೋ ನಾಳೆಯೇ ಕೂಡ್ತೀನಿ ಅನಿಸತ್ತೆ' ನೀರಸವಾಗಿ ನುಡಿದಳು.

'ಇಲ್ಲ, ನೀನು ಕೂಡಲ್ಲ. ನನಗೆ ಒಬ್ಬ ಒಳ್ಳೇ ಮುದ್ದಾದ ಮೊಮ್ಮಗನ್ನ ಕೊಡ್ತಿ. ನಾನು ದೇವರನ್ನ ತುಂಬಾ ಕೇಳಿಕೊಂಡಿದ್ದೀನಿ ಕಣೆ' ಎಂದರು, 'ರಾಜು, ನಿನ್ನ ಜೊತೆ ತುಂಬಾ ಸಂತೋಷವಾಗಿದ್ದ ತಾನೆ ? ಆ ರಾಕ್ಷಸಿಯಿಂದ ಬೇಸತ್ತವನು ನಿನ್ನಂಥಾ ತಾಳ್ಮೆಯ ನಿಧಿ ದೊರೆತಾಗ, ಸಾಕಷ್ಟು ಶಾಂತಿ, ಸಮಾಧಾನ ಕಂಡಿರ್‍ತಾನೆ, ನನ್ನ ನಿಜವಾದ ಸೊಸೆ ನೀನು' ಎಂದು ಏನೇನೋ ಹಂಬಲಿಸಿದರು.

ಅವಳು ಸುಮ್ಮನಿದ್ದಳು. ಏಕೋ ನಿಜ ಹೇಳಿ ಆ ಮುದಿಜೀವಕ್ಕೆ ನಿರಾಶೆ ಪಡಿಸಲಾಗಲಿಲ್ಲ.

ಮುಂದೆ ಹದಿನೈದು ದಿನಾಗಳಾದರೂ ಅವಳು ಈಚೆ ಆಗಲಿಲ್ಲ, ಬೇರೆ ಅವಳು ಊರಿನ ಪ್ರಯಾಣ ಹಾಗೂ ನೀರಿನ ಬದಲಾವಣೆಯಿಂದ ತನಗೆ ಮಾಸಿಕ ಸ್ರಾವ ಮುಂದೂಡಿದೆ ಎಂದವಳಿಗೆ ಅರಿವಿತ್ತು.

ಆದರೆ ವನಜಮ್ಮ ಸಂಭ್ರಮವೇ ಸಂಭ್ರಮ. 'ದೇವರು ದೊಡ್ಡೋನು. ಫಲ ಸಿಕ್ಕಿದೇಂತ ಅನಿಸುತ್ತೆ. ಒಬ್ಬ ಮುದ್ದಾದ ಮೊಮ್ಮಗ ಹುಟ್ಟಿದರೆ ನನ್ನೆಲ್ಲಾ ಆಸ್ತಿಗೆ ಹಕ್ಕುದಾರ ಮಾಡ್ತೀನಿ' ಎಂದು ಬಡಬಡಿಸುವರು. ಆದರೆ ಎಲ್ಲಾ ಗುಟ್ಟಿನಲ್ಲೆ, ಐದು ತುಂಬೋವರೆಗೆ ಜನರೆದುರು ಪ್ರಕಟಮಾಡೋದು ಬೇಡಾ' ಎಂದಿದ್ದರು.

'ಅಮ್ಮ, ನೀವು ಜಾಸ್ತಿ ಕನಸು ಕಟ್ಟಬೇಡಿ. ಅಕಸ್ಮಾತ್ ನನಗೆ ಆಗಾಗ ಚಳಿಗಾಲದಲ್ಲಿ ಹದಿನೈದು ಇಪ್ಪತ್ತು ದಿನ ಮುಂದೂಡಿ ಹೋಗತ್ತೆ'ಎಂದು ಸೂಚ್ಯವಾಗಿ ತಿಳಿಸಿದಳೆ ಹೊರಚು ತನಗೂ, ರಾಜಸಿಂಹನಿಗೂ ಯಾವ ಸಂಬಂಧ

ವಿರಲಿಲ್ಲ, ಒಂದೂವರೆ ತಿಂಗಳು ಇಬ್ಬರೂ ಜೊತೆಯಲ್ಲೇ ಇದ್ದರೂ ಅವನು ತನ್ನ ಒಂದು ಕೈಬೆರಳು ಸಹ ಸೋಕಿಸಿಲ್ಲ' ಎಂಬ ನಿಜಾಂಶ ಹೇಳಲಿಲ್ಲ, ನಿಜ ಹೇಳಿ ಈ ಮುದಿ ಜೀವಕ್ಕೆ ನಿರಾಶೆ ಏಕೆ ಮಾಡಬೇಕು ? ಅಲ್ಲದೇ ರಾಜಸಿಂಹ ಅಲ್ಲಿ ಹೋಗಿ ದಿಟ್ಟತನದಿಂದ ಹೋರಾಡಿ ಅವಳಿಂದ ಡೈವ್ರೋರ್ಸ್ ಪಡೆದು ಬರುವೆ ಎಂದು ಹೇಳಿದ್ದಾನೆ. ಅವನು ಜಯಗಳಿಸಿ ಬರುವವರೆಗೆ ಈ ಎಲ್ಲಾ ವಿಷಯ ಗುಟ್ಟಾಗಿಡಬೇಕು. ಇಲ್ಲದಿದ್ದರೆ ಆ ಜನಗಳ ಜೊತೆ ಹೋರಾಟದಲ್ಲಿ ತನ್ನ ಮಗನಿಗೇನು ಅಪಾಯ ಆಗುವುದೋ ಎಂದು ಈ ಮುದಿ ತಾಯಿಜೀವ ಹೆದರುವುದು ಎಂದು ಯೋಚಿಸಿ. ಅಲ್ಲಿ ತನಗೆ ಅವನಿಗೆ ನಡೆದಿದ್ದ ಯಾವ ಮಾತು ಕಥೆಯೂ ಹೇಳಲಿಲ್ಲ.

ಒಮ್ಮೊಮ್ಮ ಅವನೇನಾದರೂ ಅಪಾಯದಲ್ಲಿ ಸಿಲುಕಿಬಹುದೇ...? ಎಂದು ಭಯವೂ ಆಗುತ್ತಿತ್ತು. ಈ ಯೋಚನೆಯಲ್ಲಿಯೇ ದಿನ ಸರಿಯುತ್ತಿತ್ತು.

'ನಾಳದ್ದಿಗೆ ಎರಡು ತಿಂಗಳು ತುಂಬತ್ತೆ. ಡಾಕ್ಟರ್ ಹತ್ತಿರ ಹೋಗಿ ಟೆಸ್ಟ್ ಮಾಡಿಸಿಕೊಂಡು ಬಂದುಬಿಡು' ಎಂದರು ಆ ದಿನ.

ಎಲ್ಲಾ ನಿಜ ಹೇಳಿಬಿಡಲೆ ? ಬಡಿಸುತ್ತಿದ್ದ ಅವಳು ಯೋಚಿಸಿದಳು. ಬೇಡ ತಿನ್ನುವ ಅನ್ನ ಈಕೆಗೆ ಕಹಿಯಾಗಬಹುದು. ಅಕಸ್ಮಾತ್ ರಾಜಸಿಂಹ ಮುಂಬೈಯಲ್ಲಿ ಹೆಂಡತಿಯ ಅನೈತಿಕ ವರ್ತನೆ ಕಣ್ಣಾರೆ ಕಂಡರೆ, ಡೈವೋರ್ಸ್ ಮಾಡಿ ಬರುತ್ತಾರೆ. ಆಗ ತಾಯಿಗೆ ನಿಜ ಹೇಳಿ ಮೈಸೂರಲ್ಲೇ ತನ್ನ ವಿವಾಹವಾಗಿ ರಾಜಾರೋಷದಿಂದ ತನ್ನೊಂದಿಗೆ ಇರುತ್ತಾರೆ. ರಾಜಸಿಂಹ ಬರುವವರಿಗೆ ಗುಟ್ಟು ಕಾಪಾಡಬೇಕು.' ಎಂದು ಕೊಂಡಳು.

ಆದರೆ ರಾಜಸಿಂಹ ಹೆಂಡತಿ ಹಾಗು ಎರಡು ಮಕ್ಕಳ ಜೊತೆ ಮಾರನೆಯದಿನ ಮೈಸೂರಿಗೆ ಬಂದ. ವನಜಮ್ಮ ಆ ದಿನ ಊಟ ಮಾಡುತ್ತಿದ್ದರು 'ಅಮ್ಮ ಕಾರು ಬಂತು. ಅಣ್ಣಾ ಬಂದಿದ್ದಾರೆ,' ಎಂದು ಹೇಳಿದ ತಕ್ಷಣಾ ವನಜಮ್ಮ ಊಟಾ ಬಿಟ್ಟೆದ್ದು 'ರಾಜು ಬಂದಿದ್ದಾನೆ. ಅವನಿಗೆ ಸಂತೋಷದ ಸುದ್ದಿ ಹೇಳಬೇಕು' ಎಂದು ಓಡಿದರು.

ಮಧುಮತಿಯು ನಿಧಾನವಾಗಿ ಅವರನ್ನು ಹಿಂಬಾಲಿಸಿದಳು. ಕಾರು ಕಾಂಪೌಂಡ್ ಪ್ರವೇಶಿಸಿ ಪೋರ್ಟಿಕೊದಲ್ಲಿ ನಿಂತಿತು. ಮುಂದಿನ ಬಾಗಿಲು ತೆಗೆದು ಮಗಾ ಇಳಿಯುತ್ತಿದ್ದಂತೆಯೆ– 'ರಾಜು... ದೇವರು ಕಣ್ಣು ತೆರೆದನಪ್ಪಾ... ಮಧು ಎರಡು ತಿಂಗಳು ಗರ್ಭಿಣಿ' ಎನ್ನುತ್ತಿದ್ದಂತೆಯೇ 'ಅಮ್ಮ, ನಿನ್ನ ಸೊಸೆ ಮೊಮ್ಮಕ್ಕಳು ಬಂದಿದ್ದಾರೆ ನೋಡು. ಚಿಂಟು ಸಿಕ್ಕಿದ, ಎಂದ.

ಈ ವೇಳೆಗೆ ಡ್ರೈವರ್ ಇಳಿದು ಹಿಂದಿನಬಾಗಿಲು ತೆಗೆದ. ಜಯಶ್ರೀ ಇಳಿದು

ಬಂದು ಅತ್ತೆಗೆ ನಮಸ್ಕರಿಸಿ 'ಅತ್ತೇ ನಿಮ್ಮ ಪುಣ್ಯದಿಂದ ಎರಡು ಮೊಮ್ಮಕ್ಕಳು ಸಿಕ್ಕಿದವು. ಅಜ್ಜಿ ಅಜ್ಜಿ... ಅಂತ ಹಂಬಲಿಸೋ ಇವೆರಡು ಮೊಮ್ಮಕ್ಕಳನ್ನು ನೀವು ಒಪ್ಪಿಸಿಕೊಳ್ಳಿ. ನನ್ನ ಎಲ್ಲಾ ಅಪರಾಧ ಕ್ಷಮಿಸಿ' ಎಂದಳು.

'ಅಮ್ಮ, ಹಿಂದಿನ ಜಯಶ್ರೀ ಅಲ್ಲ ಅವಳು ಚಿಂಟು ಕಳೆದು ಹೋದ ಮೇಲೆ ಹುಚ್ಚಿಯೇ ಆಗಿದ್ದಳು. ಈಗ ಪಶ್ಚಾತ್ತಾಪದಿಂದ ದಗ್ಧವಾಗಿದ್ದಾಳೆ' ಎಂದ. 'ಅಜ್ಜಿ ಈ ಸಲ ಅಪ್ಪ ಅಮ್ಮ ನಾನು, ಚಿನ್ನೀ ಒಂದು ವಾರ ಇಲ್ಲೇ ಇರ್ತೀವಿ' ಎಂದು ಚಿಂಟು ಉತ್ಸಾಹದಿಂದ ಹೇಳುತ್ತಿದ್ದ.

ಪಾತ್ರೆಗೆ ಹಾಕಿದ ಆಕಾರಕ್ಕೆ ನೀರು ಹೊಂದಿಕೊಳ್ಳುವಂತೇ ವನಜಮ್ಮ ಮಧುವಿನ ವಿಷಯ ಮರೆತು, ಮಗಾಸೊಸೆ, ಮೊಮ್ಮಕ್ಕಳಿಗೆ ಸ್ಪಂದಿಸಿ ಹರಟೆಪ್ರಾರಂಭಿಸಿದಳು. ಬಿಸಿ ಅಡುಗೆ ಮತ್ತೆ ಮಾಡಿಸಿ ಮಗಾ ಸೊಸೆ, ಮೊಮ್ಮಕ್ಕಳಿಗೆ ಮಧುವಿನ ಕೈಯಲ್ಲೇ ಬಡಿಸಿದರು. 'ಜ್ವರದಿಂದ ಎದ್ದಿದ್ದಾನೆ, ಹಳೇಕಥೇ ಮರೆತಿದ್ದಾನೆ. ಅವನು ಆಡ್ಲಿಕ್ಕೆ ಹೋದಾಗ ನಿನ್ನ ಸೊಸೇ ಕಡೆಯಿಂದ ಎಲ್ಲಾ ಕಥೆ ಕೇಳಿಸಿಕೊ' ಎಂದು ಹೇಳಿ ರಾಜಸಿಂಹ ರೂಮಿಗೆ ಹೋಗಿ ಮಲಗಿದ.

'ಮಧುವಿಗೆ ಎರಡು ತಿಂಗಳಾಗಿದೆ.' ಎಂದು ತಾಯಿ ತಾನು ಕಾರು ಇಳಿಯುತ್ತಿದ್ದಂತೆಯೆ ಹೇಳಿದರು. ಆದರೆ ಹೇಗೆ ಸಾಧ್ಯ ? ತಾನವಳ ಕೈ ಸಹಾ ಸೋಕಿಲ್ಲ. ಇರಲಿ ಈಗ ಜಯಶ್ರೀಯ ಎದುರು ತಾವು ಏನು ಮಾತಾಡಿದರೂ ಚೆನ್ನಾಗಿರಲ್ಲ. ಬರೋವಾರ ತಾನೊಬ್ಬನೇ ಬಂದು ತಾಯಿಗೆ ನಿಜದ ವಿಷಯ ತಿಳಿಸಿ, ಮಧು ಬೇರೆ ಯಾರನ್ನಾದರೂ ಪ್ರೀತಿಸಿ ಅಭ್ಯಾಸ ಮಾಡಿ ಕೊಂಡಿದ್ದರೇ - ಅವನನ್ನೇ ಹಣದ ಆಸೆ ತೋರಿಸಿ, ಒಪ್ಪಿಸಿ ವಿವಾಹ ಮಾಡಬೇಕು

ಚಿಂಟು ಮತ್ತೆ ಸಿಗುತ್ತಾನೆ. ಜಯಶ್ರೀ ಅತ್ಯಂತ ಒಳ್ಳೆಯವಳಾಗುತ್ತಾಳೆ ಎಂದು ತನಗೆ ಕನಸಿನಲ್ಲಿ ಆದರೂ ತಿಳಿದಿತ್ತೆ?

ತಿರುಪತಿಯಿಂದ ಮಧುವನ್ನು ಮೈಸೂರಿನ ಸ್ಟೇಷನ್ನಲಿಳಿಸಿ, ತಾನು ಬೆಂಗಳೂರಿಗೆ ಹೋದ. ಬೆಂಗಳೂರು ಆಫೀಸಿನಲ್ಲಿ ಎಲಿಜಬೆತಳ ಸಂದೇಶ ಕಾಯುತ್ತಿತ್ತು. 'ಚಿಂಟು ಸಿಕ್ಕಿದ್ದಾನೆ, ತಕ್ಷಣಾ ಮುಂಬೈಗೆ ಬನ್ನಿ. ಜಯಶ್ರೀ ನಿಮಗಾಗಿ ಹಂಬಲಿಸುತ್ತ ಇದ್ದಾಳೆ. ಚಿಂಟು ಆಸ್ಪತ್ರೆಲಿದ್ದಾನೆ', ಈ ಸಂದೇಶ ಕೇಳಿ ಅವಳಿಗೆ ಟ್ರಂಕಾಲ್ ಮಾಡಿ -'ನಾನು ತಕ್ಷಣ ಬರ್ತಿದ್ದೇನೆ' ಎಂದ ಸಂಜೆಯೇ ಮುಂಬೈನ ತಾಜ್ ಹೋಟಲಲ್ಲಿ ಎಲಿಜಬೆತಳನ್ನು ಭೇಟಿ ಮಾಡಿದ. 'ಬಹಳ ದೊಡ್ಡದಾದ ಒಂದು ವಿಚಿತ್ರ ಅಸಹಳಾ ಕಥೆ. ಜಯಶ್ರೀ ತಾಯಿನೇ ಮೊಮ್ಮಗನ್ನು ಮುಚ್ಚಿಟ್ಟು ಮಗಳ ಜೀವನದಲ್ಲಿ ಆಟ ಆಡ್ತಿದ್ದಳು.

ತನ್ನ ಹಳೆಯ ಪ್ರಿಯಕರ ಮನೋಹರ ಎಂಬ ಶ್ರೀಮಂತನಿಗೆ ಜಯಶ್ರೀನ್ನ

ಜೋಡಿಸಿ, ಅವನ ಅಪಾರ ಆಸ್ತಿ ಕಬಳಿಸಿದಲು ಆಸೆ ಮೊದಲಿಂದ ಪ್ರಯತ್ನಿಸಿ ಸೋತಿದ್ದಳು. ರಾಜಸಿಂಹನ ಜೊತೆ ನೂರು ಜಗಳ ಆಡಿದರೂ ತಂದೆ ಬರೆದ ವಿಲ್‌ಗೆ ಹೆದರಿ, ಅವನನ್ನು ಡೈವೋರ್ಸ್ ಮಾಡಲು ಹೆದರುತ್ತಿದ್ದಳು. ಅವನನ್ನು ಡೈವೋರ್ಸ್ ಮಾಡಿದರೆ ತಂದೆ ಆಸ್ತಿ ಸಿಗಲ್ಲ. ಮನೋಹರನೊಂದಿಗೆ ಅನೈತಿಕ ಸಂಬಂಧ ಬೆಳೆಸಿದರೂ, ಲಿಜಿಯ ಮೂಲಕ ಸುದ್ದಿ ಮುಟ್ಟುತ್ತದೆಂದು ಹೆದರಿ, ಪರಿಶುದ್ಧ ಸ್ನೇಹಾ ಮಾತ್ರ ಇಟ್ಟು ಕೊಂಡಿದ್ದಳು. ಈಗ ಮಗನನ್ನು ಕಳೆದುಕೊಂಡು ಸಿಕ್ಕಾಪಟ್ಟೆ ಕುಡಿದು ಬಿದ್ದಿದ್ದಾಗ ತಾಯಿ ಮನೋಹರನ ಬಗ್ಗೆ ವರ್ಣಿಸುತ್ತಿದ್ದಳು. ದಿನಾ ಸಿಕ್ಕಾಪಟ್ಟೆ ಕುಡಿಯುತ್ತಿದ್ದ ಜಯಶ್ರೀ ಆದಿನ ರಾತ್ರಿ ಒಂದು ಬಾಟಲ್ ಸಹ ಕುಡಿದಿರಲಿಲ್ಲ. ಅರಕ್ಕೆ ಕಾರಣ ತಾಯಿ ಹೇಳಿದ ಕೆಲವು ಮಾತುಗಳು.

'ಮನು ನಿನ್ನ ಕೆಲಸ ಮಾಡಿಕೊಡಬೇಕಾದ್ರೆ ನೀನು ಅವನಾಸೆ ನೆರವೇರಿಸಿಕೊಡ ಬೇಕು. ಹೀಗೆ ಕೈಗೆ ಸಿಕ್ಕಿಯೂ ಸಿಕ್ಕದ್ಹಂಗೆ ಅವನಿಗೆ ನೆರವೇರಿಸಿದರೇ ನಿನ್ನ ಮಗ ಸಿಕ್ತಾನೆ' ಎಂದಳು.

'ಅಮ್ಮ, ನಾನು ಅನೈತಿಕಳೂಂತ ಗೊತ್ತಾದರೆ ಅವರು ನನ್ನ ಡೈವೋರ್ಸ್ ಮಾಡ್ತಾರೆ. ಅಪ್ಪಾ ಕಾವಲಿಟ್ಟ ಗೂಢಚಾರರು ಆ ಶೈನಿ, ಲಿಜಿ, ಅವರ ಪರಿವಾರ ನನಗಾಗಿ ಕಾದಿದೆ' ಎಂದಳು.

'ಆ ಬದ್ಮಾಶ್‌ಗಳಿಗೆ ಹೆದರಿ ಎಂದೋ ಸಿಗೋ ಆಸ್ತಿಗೆ ಆ ಬೇಡದ ಗಂಡ ನೊಂದಿಗೆ ಏಕೆ ಬಾಳ್ತಿ? ನೀನು ಆ ಮನುವನ್ನು ನಂಬು. ನಿನಗಾಗಿ ಆಕಾಶಾನೆ ಧರೆಗಿಳಿಸ್ತಾನೆ. ಅವನಾಸ್ತಿ ಏನು ಕಡಿಮೆ ಇದೆಯಾ ? ನಿನ್ನ ಮಗನ್ನ ಹುಡುಕಿಸ್ತಾನೆ' ಎಂದಳು. ಜಯಶ್ರೀ ವಿಹ್ವಲಳಾಗಿ 'ಅಮ್ಮ, ಅವನು ಚಿಂಟೂನ್ನ ಹುಡುಕಿ ತಂದ್ರೆ ನಾನು ಅವನ ಪ್ರೇಮ ನಂಬ್ತೀನಿ. ಯಾವ ಆಸ್ತಿ ಆಸೆ ಬೇಡ, ಯಾವ ಗಂಡನ ಭಯವಿಲ್ಲದೇ ಅವನವಳಾಗ್ತೀನಿ' ಎಂದಳು. ಜಯಶ್ರೀ ತಾಯಿ ಸ್ವರ್ಣಾಂಬಾ 'ನಾನು ನಾಳೆ ಅವನಿಗೆ ಈ ವಿಷಯ ಹೇಳ್ತೀನಿ. ಅವನು ಇಡಿಯ ಮುಂಬಯಿ ಜಾಲಾಡಿ ಖಂಡಿತಾ ಚಿಂಟೂನ್ನ ಹುಡುಕಿ ತರ್ತಾನೆ' ಎಂದಳು.

ಈ ಸಂಭಾಷಣೆ ಮತ್ತೆ ಮತ್ತೆ ಯೋಚಿಸಿದ ಜಯಶ್ರೀಗೆ ಒಂದು ಅವನೇ ಮಗುವನ್ನು ಅಪಹರಿಸಿ, ಹುಡುಕಿಕೊಟ್ಟಂತೆ ನಾಟಕವಾಡುವನೇ ? ತನ್ನ ಮೇಲಿನ ಆಸೆಗೆ ಈ ನೀಚಕೃತ್ಯ ಮಾಡಿರಬಹುದೆ ? ಎನಿಸಿತು.

'ಅಮ್ಮ, ಮಗು ಹುಡುಕಿ ಕೊಟ್ಟರೆ ಅವನವಳಾಗುವೆ ಎಂದು ಹೇಳಬೇಡಾ... ನಿಜಕ್ಕೂ ಅವನು ಒಬ್ಬ ಖಳನಾಯಕನೇ ಆಗಿದ್ದರೆ ಏನು ಮಾಡಲಿ ? ಎಂದು ಹೇಳಬೇಕೆಂದು ಯೋಚಿಸಿ ಮಹಡಿ ಹತ್ತಿ ಬಂದಳು.

'ಮಹಡಿಯ ಮೇಲೆ ಶಾಯಿಯ ಕೋಣೆಯಿಂದ ಆ ಹನ್ನೊಂದರ ನೀರವ

ರಾತ್ರಿಯಲ್ಲಿ ಪರಪುರುಷನ ಸ್ವರ ಕೇಳಿ ಬಂದಾಗ ದಿಗ್ಭ್ರಾಂತಳಾದಳು. ಅದು ಮನೋಹರನ ಸ್ವರ ಎಂಬುದು ಅರಿವಾದಾಗ ಆಶ್ಚರ್ಯಚಕಿತಳಾದಳು. ಅವರಿಬ್ಬರ ಸಂಭಾಷಣೆ ಕೇಳಿಸಿಕೊಂಡಳು.

'ನಿಜವಾಗಿ ಅವಳ ಮನಸ್ಸು ಹದ ಮಾಡಿದ್ದೀಯಾ ಸ್ವರ್ಣಾ ? ಚಿಂಟೂನ್ನ ನಾಳೇನೆ ಕರ್ಕೊಂಬರ್ಲಾ ? ಇನ್ನು ಎಂಟು ದಿನ ತೊಳಲಾಡಿಸೋಣವೇ?' ಎಂದ ಮನುಯ.

'ಬೇಡ ಮಹಾರಾಯ ! ಆ ಹುಡುಗ ಮಹಾ ಹಠಮಾರಿ. ಹೊಡೆದು, ಬಡಿದು ಮಾಡಿದರೂ ಸುಧಾರಿಸ್ಲಿಕ್ಕಾಗಲ್ಲ ಮಾಯಿ ಅಂತ ಪರೆಪ್ಪಾ ಅವನ ಹೆಂಡತಿ ಒದ್ದಾಡ್ತಾರೆ. ಎರಡು ಸಲ ಜ್ವರದಲ್ಲಿ ಮಲಗಿದ್ದನಂತೆ. ಒಳ್ಳೆ ಡಾಕ್ಟರ್ ಹತ್ತಿರ ತೋರಿಸಿ ಚಿಕಿತ್ಸೆ ಕೊಡಿಸೋ ಹಾಗಿಲ್ಲ. ಕದ್ದುಮುಚ್ಚಿ ಇಟ್ಟುಕೊಂಡ ಹುಡುಗ. ಜ್ವರದಲ್ಲಿ ಕಾಲಮೇಲೆ ಹೊಡೆದಿದ್ದಾಳೆ ಅವನ ಹೆಂಡತಿ. ಎರಡು ದಿನದಿಂದ ಏಳೋಕೆ ಆಗಲ್ಲವಂತೆ. ಅಕಸ್ಮಾತ್ ಆ ಹುಡುಗ ಸತ್ತುಗಿತ್ತರೆ ಏನು ಮಾಡಬೇಕು? ಹೀಗಾಗಿ ನಾಳೆ ಕರ್ಕೊಂಬಂದ್ಬಿಡು, ಅವಳು ಖಂಡಿತ ನಿಂಗೆ ಒಲಿತಾಳೆ' ಎಂದಳು.
'ನಿನ್ನ ಮಾತು ನಿಜವಾದರೆ ನಿನಗೆ ಇನ್ನೊಂದೈದು ಲಕ್ಷ ಆಸ್ತಿ ಮಾಡ್ತೀನಿ ಸ್ವರ್ಣಾ...' ಎಂದ.

'ನೀನು ನಂಗೇನು ಕಡಿಮೆ ಮಾಡಿದ್ದಿ, ಮನು? ಇವರಣ್ಣಾ... ನನ್ನ ಕೆಡಿಸಿ ಕೈ ಬಿಟ್ಟಿದ್ದೊಂದೆ. ಹೆಂಡತಿಗೆ ಹೆದರಿ ದೂರ ಮಾಡಿದರು. ಗಂಡ ಅನಿಸ್ಕೊಂಡ ಆ ಪ್ರಾಣಿ ಚಪ್ಪಲೀಲಿ ಹೊಡೆದು ದೂರ ತಳ್ಳಿದರು. ಆಗಿನ ದಿನಗಳಲ್ಲಿ ನೀನು ನೆರವಿಗೆ ಬರದೆ ಇದ್ದರೆ ನಾನು ತಿಪ್ಪೆಗೆಸೆದ ಹೂವಾಗ್ತಿದ್ದೆ. ನೀನು ಕೈ ಹಿಡಿದೆ. ಹತ್ತಾರು ಲಕ್ಷ ರೂ.ಗಳ ಆಸ್ತಿ ಮಾಡಿಕೊಟ್ಟೆ. ಆ ಚಿಲ್ರನ್ಸ್ ಬೋರ್ಡಿಂಗ್‌ನ ಒಬ್ಬ ಒಬ್ಬ ಡೈರೆಕ್ಟರ್ ಆಗಿ ಮಾಡಿ ಅದಕ್ಕು ನನ್ನ ಹೆಸರಲ್ಲಿ ಐದುಲಕ್ಷ ರೂ. ಕೊಟ್ಟೆ.'

'ನಾನು ಒಲಿದ ಹೆಣ್ಣಿಗೆ ಅಷ್ಟು ಮಾಡೋದೇನು ಹೆಚ್ಚು. ನಿನ್ನ ಯೌವ್ವನದ ದಿನಗಳಲ್ಲಿ ನೀನು ನನ್ನ ಕೈಗೆ ಸಿಕ್ಕಿದ್ರೆ ನಿನ್ನೇ ಮದುವೆ ಆಗಿಬಿಡ್ತಿದ್ದೆ. ನೀನಂತು ನನ್ನ ಕೈಗೆ ಸಿಕ್ಕಿಲ್ಲ. ನಿನ್ನ ಪ್ರತಿರೂಪ ನಿನ್ನ ಮಗಳು ನನ್ನ ಹೃದಯಕ್ಕೆ ಲಗ್ಗೆ ಹಾಕಿದ್ದಾಳೆ.'

'ನಿನ್ನ ಹೆಣ್ಣಿನ ಹುಚ್ಚು ಒಂದು ಬಿಟ್ರೇ ನೀನು ಬೇರೆಲ್ಲಾ ವಿಷಯದಲ್ಲಿ ಚೊಕ್ಕ ಚಿನ್ನ. ಕಣ್ಣಿಗೆ ಕಂಡ ಪ್ರತಿಯೊಂದು ಹೊಸ ಹೆಣ್ಣು ಬೇಕೂನ್ನೋನು ನೀನು. ಆದರೆ ನಾನು ಈ ವಿಷಯ ಸಹಿಸಿದ ಹಾಗೆ ನನ್ನ ಮಗಳು ಸಹಿಸಲ್ಲ. ಅವಳನ್ನ ಪ್ರೀತಿಸೋ ಹುಡುಗ ಅವಳನ್ನ ಬಿಟ್ಟು ಬೇರೆ ಹೆಣ್ಣಿನ ಹಿಂದೆ ಸುತ್ತಬಾರದೂಂತ ಅವಳ ಆಸೆ. ಕೆಲವು ದಿನ ಆದರೂ ನೀನು ನಿನ್ನ ಹಳೇಚಾಳಿಗಳನ್ನ ಬಿಡ್ತಿತಾನೆ?'

'ನಾನೇನೋ ನಿನ್ನ ಮಗಳಿಗಾಗಿ ಬೇಕಾದ ನಟನೆ ಮಾಡಬಲ್ಲೆ. ನಾಳೆ ನಿನ್ನ ಮೊಮ್ಮಗನ್ನ ಕರೆತಂದ್ರೆ ನೀನೇ ಅವನನ್ನ ಮುಚ್ಚಿಟ್ಟಿದ್ದು ಅಂತ ನಿಜಾ ಗೊತ್ತಾದರೆ?' ಎಂದ ಮನೋಹರ.

'ಕಾಂಪೌಂಡ್ ಹಾರಿ ಹೋಗ್ತಿದ್ದ ಹುಡುಗನ್ನ ಪರೆಪ್ಪ ಹಿಡಿದ. ಈ ಹುಡುಗ ಇನ್ನೂರು ರೂ.ಗಳು ತೋರಿಸಿ, ಬೆಂಗಳೂರು ಅಂದಾಗ ದುಡ್ಡಿನ ಆಸೆಗೆ ತಮ್ಮನೆಗೆ ಕರೆಯೊಯ್ದು. ಆದರೆ ಹೆಂಡತಿ ಬೈದಮೇಲೆ ಹೆದರಿ ಬಂದು ನನಗೆ ಶರಣಾಗಿ ನಿಜ ಹೇಳಿದ. ನಿನ್ನ ಮನೇಲೇ ಇರಲಿ. ಚೆನ್ನಾಗಿ ನೋಡಿಕೊ ಅಂದೆ. ಆಗಲೇ ನನಗೆ ಈ ಐಡಿಯಾ ಹೊಳೆದದ್ದು. ಅವಳಿಗೆ ಕಳೆದುಹೋದ ಮಗಾ ಸಿಕ್ಕಿದರೇ ಪಂಚಪ್ರಾಣ ಸಿಕ್ಕಿದ ಹಾಗೆ. ಆ ಮಗನ್ನ ಕಂಡ್ರೆ ಮೊದಲಿನಿಂದಲೂ ಪ್ರಾಣ. ಈಗ ನೀನು ಮುಂಬೈಯೆಲ್ಲಾ ಜಾಲಾಡಿ ಆ ಹುಡುಗನ್ನ ಹುಡುಕಿ ತಂದೆ ಅಂದರೆ ಅವಳೆದುರಿಗೆ ಹೀರೋ ಆಗ್ತಿ. ನಾನು ಅವಳ ಮನಸ್ಸು ಹದಾ ಮಾಡ್ತಿದ್ದೀನಿ' ಎಂದಳು.

ಮನೋಹರ ನಿರಾಶೆಯಿಂದ 'ನೀನೇನೋ ದೊಡ್ಡ ಯೋಜನೆ ಹಾಕಿದ್ದಿ ಸ್ವರ್ಣ, ಆದರೆ ನಿನ್ನ ಮಗಳು ಕಡೇಲಿ ಕೈ ಕೊಟ್ಟರೆ ? ನಿನ್ನ ಮೊಮ್ಮಗಳು ದೊಡ್ಡೋಳಾಗೋವರಿಗೆ ನಾನು ಕಾಯಬೇಕು. ಈಗ ಅವಳಿಗೆ ಆರು ವರುಷ. ಇನ್ನು ಹತ್ತು ವರುಷಕ್ಕೆ ಹದಿನಾರರ ಬೆಡಗಿ' ಎಂದ.

'ಮಹರಾಯ ! ಆ ಹುಡುಗಿ ಮೇಲೂ ನೀನು ಕಣ್ಣು ಹಾಕಿದೆಯಾ? ಆರು ವರುಷದ ಮಗು. ಅವಳಿಗೆ ಹದಿನಾರು ಆಗೋ ಹೊತ್ತಿಗೆ ನನಗೆ ಐವತ್ತೈದು ಆಗಿರತ್ತೆ' ಎಂದಳು ನಗುತ್ತ. ಮನೋಹರ ನಗುತ್ತ 'ನೀನಂತು ಹದಿನಾರರಲ್ಲಿ ನನ್ನ ಕೈಗೆ ಸಿಗಲಿಲ್ಲ. ಈಗ ಹತ್ತು ವರ್ಷದ ಹಿಂದೆ ನಲವತ್ತರ ನಿನಗೆ ಮೂವ್ವತ್ತೈದರ ನಾನು ಮರುಳಾಗಿದ್ದೆ.' ಅವರ ಸರಸ ಸಂಭಾಷಣೆ ಮುಂದುವರಿದಿತ್ತು. ಏನೇನು ಹೇಳುತ್ತಿದ್ದನೋ ಆ ಎಲ್ಲಾ ಅಸಹ್ಯ ಕೇಳಿಸಿಕೊಳ್ಳಲು ಜಯಶ್ರೀ ಅಲ್ಲಿ ನಿಲ್ಲಲಿಲ್ಲ. ಕೆಳಗೆ ಇಳಿದು ಬಂದಳು. ಅವಳ ಆಲೋಚನಾ ಲಹರಿ ಹಿಂದಕ್ಕೆ ಹರಿದಿತ್ತು.

'ತಾಯಿಯ ಜೀವನ ಹೆಚ್ಚು ಪ್ರಚಾರ ಮಾಡದೆ ತಂದೆ ಅವಳನ್ನು ತ್ಯಜಿಸಿದ್ದರು. ತನ್ನ ಬದುಕು ಹಾಳಾಗಬಾರದೆಂದು ತಂದೇ ಎಲ್ಲಾ ವಿಷಯಕ್ಕೂ ತೆರೆ ಎಳೆದಿದ್ದರೇನೋ ? ತನ್ನ ಮದುವೆ ಆಗುವವರೆಗೆ ಆಕೆ ಆಗಾಗ ಬಂದು ಹೋಗುತ್ತಿದ್ದಳು.

'ಮುಂಬೈನಲ್ಲಿ ಉದ್ಯೋಗದಲ್ಲಿದ್ದಾಳೆಂದೇ ತಿಳಿದಿದ್ದೆ. ದೊಡ್ಡಪ್ಪನ ಸಂಬಂಧ ಮಾತ್ರ ಅಲ್ಪಸ್ವಲ್ಪ ತಿಳಿದಿತ್ತು. ತನ್ನೆದುರಿಗೆ ತಾಯಿಯನ್ನು "ಮಾಮಿಜೀ... ಮಾಮಿಜೀ" ಎಂದು ಕೂಗುತ್ತ ನಾಟಕವಾಡುವ ಮನೋಹರ ಅವಳ ಪ್ರೇಮಿಯೆ? ಐವತ್ತು ವರ್ಷ ತನ್ನ ತಾಯಿಗೀಗ. ಆದರೂ ತುಂಬಾ ಆಧುನಿಕವಾಗಿ ಸಿಂಗರಿಸಿ ಕೊಳ್ಳುತ್ತಾಳೆ. ಅದೆಲ್ಲಾ ತನಗೇನು ಅನಿಸಿರಲಿಲ್ಲ. ಆದರೆ ಅವರಿಬ್ಬರು ಪ್ರಣಯಿ

ಗಳು. ತಾಯಿ ತನ್ನ ನರಕದ ಕೊಚ್ಚೆ ಬದುಕಿಗೆ ಮಗಳನ್ನು ದೂಡುವುದುಂಟ ? ರಾತ್ರಿಯೆಲ್ಲಾ ಯೋಚಿಸಿ, ಬೆಳಿಗ್ಗೆ ಎದ್ದು ಎಂಟು ಗಂಟೆಗೆ ಸ್ನಾನ, ಉಪಾಹಾರ ಮುಗಿಸಿ, ತಾಜ್ ಹೋಟಲಿಗೆ ಬಂದಳು. ಲಿಜಿಯನ್ನು ಕಂಡು 'ಲಿಜಿ ಆಂಟೀ... ನಿಮಗೆ ಕೆಲವು ವಿಷಯ ಹೇಳಬೇಕು' ಎಂದೆಲ್ಲಾ ವಿಷಯ ಹೇಳಿದಳು.

ಲಿಜಿ ಅವಳನ್ನು ಸಂತೈಸಿ 'ಇರಲಿ. ಈಗ ಉಪಾಯವಾಗಿ ಕಾರ್ಯಸಾಧಿಸಬೇಕು. ಅವನಿಗೆ ಗೂಂಡಾಗಳ ಬಲ ಇದೆ. ಮಗೂನ್ನೇ ಏನಾದರೂ ಮಾಡಿದರೆ ಏನು ಮಾಡ್ತೀರಿ? ನಿಮ್ಮ ತಾಯಿ ಈ ಕಥೆ ನಂಗೂ ಗೊತ್ತಿಲ್ಲ' ಎಂದಳು ಲಿಜಿ. ಮೊದಲು ಬೋರ್ಡಿಂಗ್ ಪ್ಯೂನ್ ಪರೆಪ್ಪನ ಮನೆಗೆ ಇಬ್ಬರು ಪೊಲೀಸರೊಡನೆ ಹೋದರು. ಅವನ ಮನೆ ಹುಡುಕುವುದು ಜಯಶ್ರೀಗೇನು ಕಷ್ಟವಾಗಲಿಲ್ಲ. ಬೋರ್ಡಿಂಗ್‌ನ ಸೂಪರಿಂಟೆಂಡೆಂಟರೇ ವಿಳಾಸ ಹೇಳಿ, ಮನೆ ತೋರಿಸಲು ಮತ್ತೊಬ್ಬ ಜವಾನನ್ನ ಕಳಿಸಿದರು. ಏತಕ್ಕೆಂದು ಅವರಿಗೂ ತಿಳಿದಿಲ್ಲ.

ಪರೆಪ್ಪನ ಮನೆಯನ್ನು ಪೊಲೀಸರು ಶೋಧಿಸುವ ಅಗತ್ಯವೇ ಬೀಳಲಿಲ್ಲ. ಒಂದು ಟೀ ಸ್ಟಾಲ್ ನಡೆಸುತ್ತಿದ್ದ ಪರೆಪ್ಪನ ಮನೆ ಮುಂದಿನ ಹಜಾರದಲ್ಲಿ ನಾಲ್ಕಾರು ಬೆಂಚುಗಳ ಮೇಲೆ ಗಿರಾಕಿಗಳು ಕಾಫಿ ಕುಡಿಯುತ್ತಿದ್ದರು. ಒಳ ಹಜಾರದ ಒಂದು ಮಂಚದ ಮೇಲೆ ನಿಶ್ಯಕ್ತ, ಜ್ವರದಿಂದ ಕೃಶವಾಗಿ ಮಗನನ್ನು ನೋಡಿ ಜಯಶ್ರೀಗೆ ದುಃಖ ಉಕ್ಕಿ ಬಂದಿತು.

ಪೊಲೀಸರು ಪರೆಪ್ಪನನ್ನು ಬಂಧಿಸಿ ಏನೇನು ಕೇಳುತ್ತಿದ್ದರೊ? ಎಲಿಜಬೆತ್, ಮಗುವನ್ನು ಆಸ್ಪತ್ರೆಗೆ ಸೇರಿಸಿದಳು.

ಮಾರನೆದಿನ ಚಿನ್ನಿಯನ್ನು ಬೋರ್ಡಿಂಗ್‌ನಿಂದ ಬಿಡಿಸಿ ತಂದಳು ಜಯಶ್ರೀ. ತಾಯಿ ಮಗಳಿಗೆ ಫೋನ್ ಮಾಡಿ 'ಚಿಂಟು ಸಿಕ್ಕಿದನಂತೆ ಹೌದೇನೆ ? ನಿಮ್ಮ ಲಿಜಿ ಮೇಡಂ, ನನ್ನ ಸವತಿ... ಕಡೆಗೂ ನನ್ನ ಮೊಮ್ಮಗನ್ನ ಹುಡುಕಿ ಕೊಟ್ಟು ಕೀರ್ತಿಗೆ ಪಾತ್ರಳಾದಳು. ಎಲ್ಲಾ ಸರಿ, ಚಿನ್ನೀನ್ನ ಏಕೆ ಬೋಡಿಂಗ್‌ನಿಂದ ಬಿಡಿಸಿದಿ ? ನನ್ನ ಒಂಟೀತನ ಮರೀಲಿಕ್ಕೆ ಆ ಮಗು ಆಧಾರವಾಗಿತ್ತು' ಎಂದು ಏನೋ ಹೇಳಲೆತ್ನಿಸಿದಳು.

ಜಯಶ್ರೀ ಕಟುವಾಗಿ 'ಅಮ್ಮ, ನಮ್ಮ ತಾಯಿ ಮಗಳ ಸಂಬಂಧ ಮುಗಿದು ಹೋಯಿತು. ಇನ್ನೆಂದೂ ನೀನು ನನಗೆ ಫೋನ್ ಮಾಡಬೇಡ... ನನ್ನ ಮಗಳನ್ನ ಇನ್ನುಮುಂದೆ ನಿನ್ನ ನೆರಳಿಗೂ ಬಿಡಲ್ಲ' ಎಂದಳು.

'ಏಕೆ? ಆ ಪಾಪಿಷ್ಠೆ ಎಲಿಜಬೆತ್ ನಿನ್ನ ಮನಸ್ಸು ಕೆಡಿಸಿದಳೇನು ? ಪರೆಪ್ಪಂಗೆ ಲಂಚ ಕೊಟ್ಟು, ಅವನಿಂದ ಪೊಲೀಸರೆದುರು ಸುಳ್ಳು ಹೇಳಿಕೆ ಕೊಡಿಸಿದ್ದಾಳೆ. ನನ್ನ ಮೊಮ್ಮಗನ್ನ ನಾನ್ಯಾಕೆ ಮುಚ್ಚಿಡಲಿ? ಹಿಂದೆ ನಿಮ್ಮಪ್ಪಂಗೂ ನನಗೂ ತಂದಿಟ್ಟೋಳೆ

ಅವಳು' ಎಂದು ಏನೇನೋ ಒದರಾಡಿದರು. ಆದರೆ ಜಯಶ್ರೀ ಆಕೆಗೆ ಉತ್ತರಿಸುವ ಗೋಜಿಗೆ ಹೋಗಲಿಲ್ಲ. 'ಎಲಿಜಬೆತ್‌ಗೂ ಗೊತ್ತಿರಲಾರದ ನಿನ್ನ ಬದುಕಿನ ಕೆಲವು ಹೊಲಸು ರಹಸ್ಯಗಳು ನನಗೆ ತಿಳಿದಿವೆ. ನಾನೇ ಅವಳಿಗದನ್ನು ತಿಳಿಸಿ, ಆ ದಿನ ಪರೆಪ್ಪನ ಮನೆಗೆ ಅವಳನ್ನು ಕರೆತಂದವಳು ಎಂಬುದನ್ನು ಹೇಳಲಿಲ್ಲ. ಪೊಲೀಸರು ಅವಳ ತಾಯಿಯನ್ನು ಬಂಧಿಸಿ; ಜಾಮೀನಿನ ಮೇಲೆ ಬಿಟ್ಟರು.

ಜಯಶ್ರೀ ಈಗ ನಿಮಗಾಗಿ ತುಂಬಾ ಹಂಬಲಿಸ್ತಿದ್ದಾಳೆ. ಮಗೂನು ಈಗ ಪಪ್ಪಾ... ಪಪ್ಪಾಂತ ನಿಮಗಾಗಿ ಹಂಬಲಿಸ್ತಿದ್ದಾನೆ ಎಂದು ದೀರ್ಘವಿವರಣೆ ನೀಡಿದ ಲಿಜಿ, ಆ ದಿನಗಳಲ್ಲಿ ಬೆಂಗಳೂರಿಗೆ ಫೋನ್ ಮಾಡಿದ್ದೆ. ನೀವು ಎರಡು ತಿಂಗಳು ರಜೆ ಹಾಕಿದ್ದೀರೀಂತ ತಿಳೀತು. ಮೈಸೂರಿಗೆ ಫೋನ್ ಮಾಡಿದ್ದೆ. ಎಲ್ಲೋ ತಿರುಪತಿಗೆ ನೀವು ನಿಮ್ಮ ತಾಯಿ ಎಲ್ಲರೂ ಹೋಗಿದ್ದೀರಾಂತ ತಿಳಿಸಿದರು' ಎಂದಳು.

ಎಲ್ಲಾ ಕಥೆ ಕೇಳಿ, ನರ್ಸಿಂಗ್ ಹೋಮಿಗೆ ಚಿಂಟುವನ್ನು ನೋಡಲು ಹೋದ. ಚಿಂಟು ಸುಮಾರಾಗಿ ಸುಧಾರಿಸಿದ್ದ. ಸ್ವಲ್ಪ ಸ್ವಲ್ಪ ನಡೆಯುತ್ತಿದ್ದ. ಇನ್ನೂ ಒಂದು ತಿಂಗಳ ಇರಬೇಕೆಂದಿದ್ದರು. ಕಾಲಿಗೆ ಏನೋ ವ್ಯಾಯಾಮ ಮಾಡಿಸುತ್ತಿದ್ದರು. ಸ್ಪೆಷಲ್ ವಾರ್ಡ್ ಆದ್ದರಿಂದ ಜಯಶ್ರೀ ಮಗನ ಬಳಿಯೇ ಇದ್ದಳು.

ಒಂದು ತಿಂಗಳು ರಾಜಸಿಂಹನೂ ಅಲ್ಲೇ ಉಳಿದ. 'ನನ್ನ ಬದುಕಿನಲ್ಲಿ ಈಗ ಯಾವ ಗುಟ್ಟೂ ಇಲ್ಲ ರಾಜೂ... ನಿಮಗಾಗಿ, ಮಕ್ಕಳಿಗಾಗಿ ಬದುಕ್ತೀನಿ. ಬೆಂಗಳೂರಿನ ಆಫೀಸ್ ವರ್ಕ್ ಸಾಕು ನನಗೆ, ಯಾವುದೇ ನೆಪ ಮಾಡಿ ಮುಂಬೈಗೆ ಬರಲ್ಲ. ಇಲ್ಲಿನ ಕೆಲಸ ನೋಡಿಕೊಳ್ಳೋಕ್ಕೆ ಲಿಜೀ ಮೇಡಂ ಇದ್ದಾರೆ. ಬೆಂಗಳೂರಲ್ಲಿ ನಿಮ್ಮ ಜೊತೆ ಕಾರಲ್ಲಿ ಕಂಪನಿ ಆಫೀಸಿಗೆ ಬರ್ತೀನಿ. ನಿಮ್ಮ ಜೊತೆಗೆ ಸಂಜೆ ಮನೆಗೆ ಬರ್ತೀನಿ. ಮಕ್ಕಳ ಭವಿಷ್ಯಕ್ಕೆ ಜಾಸ್ತಿ ಗಮನ ಕೊಡ್ತೀನಿ, ನನ್ನ ಹಿಂದಿನ ಎಲ್ಲಾ ತಪ್ಪುಗಳು ಕ್ಷಮಿಸಿಬಿಡಿ. ಆಸ್ತಿ ಆಸೆಗೆ, ತಂದೆ ಹಾಕಿದ ಆ ಬಂಧನಕ್ಕೆ ನಿಮ್ಮನ್ನ ಬಿಡಲಾರದೆ ಒಲ್ಲೈಸ್ತಿದ್ದೆ. ಮನೋಹರ ನನ್ನ ದೇವತೆ ಹಾಗೆ ಆರಾಧಿಸ್ತಾನೆ, ಅವನನ್ನು ವಿವಾಹವಾಗೋ ಹಾಗಿಲ್ಲಾಂತ ಏನೋ ತಳಮಳದಲ್ಲಿ ಕುದೀತಿದ್ದೆ. ಅವನ ನಿಜವಾದ ಬಣ್ಣ ತಿಳೀತು. ನಿಮ್ಮ ಉದಾಸೀನ, ನಿಮ್ಮ ನಿರಾಕರಣೆ ಎಲ್ಲಾ ಇನ್ನು ಮೇಲೆ ನಗೆಮುಖದಿಂದ ಸಹಿಸ್ತೀನಿ' ಎಂದಳು. ರಾಜಸಿಂಹ ಗಂಭೀರವಾಗಿ 'ನಿನ್ನ ಎಲ್ಲಾ ಹಳೇ ದುರ್ಗುಣಗಳಿಂದ ನೀನು ದೂರವಾದ ಮೇಲೆ... ನಾನು ನಿರಾಕರಣೆ ಮಾಡೋದು, ದೂರವಿಡೋದು ಹೇಗೆ ಮಾಡಲಿ ? ನಿನ್ನ ಕೆಲವು ಗುಣ ತಿದ್ದಿ ಕೊಂಡಿದ್ದಿ ಸಂತೋಷ. ಕಾರಣ ಇಲ್ಲದೇ ನನ್ನ ತಾಯೀನ್ನ ದ್ವೇಷ ಮಾಡ್ತಿದ್ದಿ. ನನ್ನ ಮೇಲೆ ಅಸಹನೆ ಕಾರ್ತಿದ್ದಿ. ಇದೆಲ್ಲಕ್ಕು ಒಳಕಾರಣ ನಿನ್ನ ತಾಯಿಯ ಬೋಧನೆ. ನಿನ್ನಂಥಾ ಹೆಂಡ್ತೀನ್ನ ನಿನ್ನ ಗಂಡ ತಲೆಮೇಲಿಟ್ಕೊಂಡು ಮೆರೆಸಬೇಕಾಗಿತ್ತು. ನಮ್ಮ

ಮನೋಹರ್ ಆಗಿದ್ರೆ ರಾಣಿ ಹಾಗೆ ಆರಾಧಿಸ್ತಿದ್ದ ಎಂದು ಬೋಧಿಸಿ ನಿನ್ನ ಮನಸು ಕೆಡಿಸಿದ್ದಾಳೆ. ನಿನಗೆ ನಾನು ಅಂದರೆ ಅಲರ್ಜಿ. ನಾನು ನನ್ನ ಮಗೂನ್ನ ಪ್ರೀತಿಸಿದರೂ ನೀನು ಸಹಿಸ್ತಿರಲಿಲ್ಲ... ಹೌದೋ ಅಲ್ಲವೋ?' ಎಂದ.

'ಹೌದೂಂದ್ರೆ, ನನ್ನ ನೆಗ್ಲೆಕ್ಟ್ ಮಾಡಿ, ನೀವು ಚಿನ್ನಿ ಜೊತೆ ಗಂಟೆಗಟ್ಟಲೆ ಆಡ್ತಿದ್ರಿ. ಎರಡು ವಾರಕ್ಕೆ ಒಮ್ಮೆ ಶನಿವಾರ, ಭಾನುವಾರ ಮೈಸೂರಿಗೆ ಕರೆದು ಕೊಂಡು ಹೋಗ್ತ ಇದ್ದಿರಿ, ಅವಳು ಅಜ್ಜಿಮನೆ, ಅಜ್ಜಿಮನೆ ಅಂತ ಹಂಬಲಿಸೋಳು. ಆ ಕಿಚ್ಚಿಗೆ ಮಗೂನ್ನ ಇಲ್ಲಿ ತಂದು ಹಾಕಿದೆ. ಚಿಂಟೂನು ಅಜ್ಜಿ ಮನೆ... ಮೈಸೂರು ಅಂತ ಹಂಬಲಿಸಲಾರಂಭಿಸಿದ ಮೇಲೆ ನಾನು ಜೀವನದಲ್ಲಿ ಸೋತೆ ಅನಿಸಿತು. ಏಕೆಂದರೆ ಚಿಂಟು ನನ್ನ ಪ್ರೀತಿಯ ಮಗ. ಅವನು ಆ ಅಜ್ಜಿ ಅನ್ನೋ ಮಾಂತ್ರಿಕಳಿಗೆ ವಶನಾದನೆ ಎನಿಸಿತು. ನೀವು ತಾಯಿಯ ಕೈಗೊಂಬೆ ಆಗಿರೋದ್ರಿಂದ್ಲೇ ಹೆಂಡತಿಯಾದ ನನ್ನನ್ನ ಜಾಸ್ತಿ ಪ್ರೀತಿ ಮಾಡಲ್ಲ ಎನಿಸಿತ್ತು. ಹೀಗಾಗಿ ನಿಮ್ಮ ತಾಯಿ ಮೇಲೆ ಅಪಾರ ಕೋಪ ಇತ್ತು. ಆ ಕೋಪಕ್ಕೆ ಚಿಂಟೂನ್ನ ಮುಂಬೈಗೆ ಕರೆತಂದೆ. ಇಲ್ಲಿ ಈ ಘಟನೆಗಳು ನಡೆದು ನನ್ನ ಕಣ್ಣು ತೆರೀತು. ನನ್ನ ತಾಯಿ ಆ ಮನೋಹರನ ಪ್ರೇಯಸಿ, ಅವನು ನಲವತ್ತೈದರ ವಯಸ್ಸಿನ ಗಂಡಸು...ಹೆಣ್ಣಿನ ಹುಚ್ಚು ಅಂತ ನನಗೆ ಗೊತ್ತೇ ಇರಲಿಲ್ಲ. "ಅವನಿಗೆ ಮುವ್ವತ್ತೆರಡು ವರುಷ. ಅಪಾರ ಆಸ್ತಿ ಇದೆ. ಅವನು ಜೀವನದಲ್ಲಿ ಮರುಳಾಗಿರೋದು...ನಿನಗೊಬ್ಬಳಿಗೆ" ಅಂತ ತಾಯಿ ಹೇಳ್ತಿದ್ದರು. ಅವನ ಜೊತೆ ಶಾಪಿಂಗ್ ಅಂತ ಸುತ್ತಾಡ್ತಿದ್ದೆ. ಸಾವಿರಾರು ರೂಪಾಯಿಗಳ ಪ್ರೆಸಂಟೇಷನ್ಸ್ ಕೊಡಿಸೋನು, ನಾನು ಅವನಿಗೆ ಅದಕ್ಕೆ ಪ್ರತಿಯಾಗಿ ಏನಾದರೂ ಕೊಡಸ್ತಿದ್ದೆ. ನನ್ನ ಬಗ್ಗೆ ಇಲ್ಲಿ ವಾಚ್ ಮಾಡ್ತ ಇದ್ದ ಒಂದು ತಂಡ ನಮ್ಮ ತಂದೆಯವರ ಆಪ್ತರು ಇದ್ದರು. ಸ್ವಲ್ಪ ನನ್ನ ಬಗ್ಗೆ ಕೆಟ್ಟ ವರದಿ ಹೋದರೂ ಅಪಾರ ಆಸ್ತಿಗೆ ಎರವಾಗ್ತಿದ್ದೆ. ಜೊತೆಗೆ ತಾಯಿ, ಬಂಧು, ಬಾಂಧವರಿಂದ ದೂರಾಗಿ ಏಕಾಂಗಿಯಾಗಿ ಪರಿತಪಿಸೋದು ನೋಡಿ ಭಯವಾಗ್ತಿತ್ತು. ಅಂಥಾ ಕೆಟ್ಟ ಕೆಲಸ ಮಾಡಿದ್ದರಿಂದಲೇ ಈ ಶಿಕ್ಷೆ ಅನುಭವಿಸ್ತಿದ್ದಾಳೆ. ನಮ್ಮ ದೊಡ್ಡಪ್ಪಾ ಬದುಕಿದ್ದಾಗ ಎಂದೋ ನಡೆದ ಕಥೆ ಅನ್ಕೊಂಡಿದ್ದೆ. ಆದರೆ ದೊಡ್ಡಪ್ಪ ನಾಲ್ಕುದಿನ ಆಡಿಸಿ ಕೈಬಿಟ್ಟ. ಅವಳು ಪರ್ಮನೆಂಟಾಗಿ...ಕಚ್ಚಿಕೊಂಡಿರೋದು ಈ ವ್ಯಕ್ತೀನ್ನ. ಅವನನ್ನ ಪ್ಲೀಸ್ ಮಾಡಲಿಕ್ಕೆ, ಮಗಳನ್ನ, ಮೊಮ್ಮಗಳನ್ನ ಗಂಟು ಹಾಕಲಿಕ್ಕು ಹೇಸೋಳಲ್ಲಾಂತಾ ತಿಳಿದಾಗ ಆ ಹೆಂಗಸಿನಿಂದ ದೂರಾದೆ. ಈಗ ನಮ್ಮ ತಂದೆ ಅವಳನ್ನ ದ್ವೇಷಿಸೋಷ್ಟೇ ನಾನು ದ್ವೇಷಿಸ್ತೀನಿ. ಚಿನ್ನಿಗೆ ಇಟ್ಟ ಸ್ವರ್ಣಲತ ಹೆಸರು ಬದಲಾಯಿಸಿ ನಿಮ್ಮ ತಾಯಿ ಸೂಚಿಸಿದ ಹಾಗೆ ರಾಜೇಶ್ವರಿ ಅಂತಲೇ ಇಡ್ತೀನಿ. ರಾಜಸಿಂಹನ ಮಗಳು ರಾಜೇಶ್ವರಿ. ರಾಜಸಿಂಹರ ಮಗಳು ರಾಜೇಶ್ವರಿ ಚಿಂಟು ಹೆಸರು ನಮ್ಮಿಬ್ಬರ ನೆನಪಾಗಿ

ಜಯಸಿಂಹ ಅಂತಿರಲಿ' ಎಂದಳು.

'ನನ್ನ ಸಂಸಾರಕ್ಕೆ ಕವಿದ ಗ್ರಹಣ...ಬಿಟ್ಟೋಯಿತು ಬಿಡು ಎಂದು ರಾಜಸಿಂಹ ಸಂತೈಸಿದ.

ಬೆಂಗಳೂರಿಗೆ ಬಂದ ಮಾರನೇ ದಿನ ಹೇಳಿದಳು. 'ಮಕ್ಕಳು ಅಜ್ಜಿ ಮನೆ ಆಶೆಪಡ್ತಿವೆ. ಮೈಸೂರಿಗೆ ಹೋಗಿಬರೋಣಾ...' ಎಂದಳು

'ನೀನು ಬರ್ತೀಯಾ' ಜಯಾ? ಆದರೆ ನಮ್ಮಮ್ಮನ ಮನೆ ಪುಟ್ಟಮನೆ, ನಿನ್ನ ಈ ಅರಮನೆಗೆ ಹೋಲಿಸ್ಲಿಕ್ಕಾಗಲ್ಲ' ಎಂದ.

'ನಾನು ಮೊದಲಿನ ಜಯಾ ಅಲ್ಲ. ಪಶ್ಚಾತ್ತಾಪದಲ್ಲಿ ಕುದ್ದಿದ್ದೀನಿ. ನನ್ನ ಮಕ್ಕಳು ಇಷ್ಟಪಟ್ಟ ಜಾಗ ನಾನೂ ಇಷ್ಟಪಡ್ತೀನಿ. ಅದು ಅರಮನೆ ಆಗಿರಲೇಬೇಕಿಲ್ಲ' ಎಂದಳು. ಒಂದು ತಿಂಗಳಿಂದ ಅವಳ ವರ್ತನೆ ಹಿತಕರವಾಗಿತ್ತು. ಮೈಸೂರಿಗೆ ಹೋಗುವ ಮುನ್ನ ಅವನಿಗೆ ಹೇಳಿದಳು.

'ಚಿಂಟು ಹೇಗೆ ಸಿಕ್ಕಿದ ಅನ್ನೋದಕ್ಕೆ ನಾನೇ ಒಂದು ಕಥೆ ಕಲ್ಪಿಸಿ ಹೇಳ್ತೀನಿ. ದಯವಿಟ್ಟು ನೈಜಕಥೆ, ನಮ್ಮ ತಾಯಿಯ ಹೊಲಸು ವಿಷಯ ಪ್ರಚಾರ ಮಾಡೋದು ಬೇಡ' ಎಂದಿದ್ದಳು.

'ನಿನ್ನ ಕುಟುಂಬದ ಮಾನಮರ್ಯಾದೆ ನನಗು ಸೇರಿದ್ದು. ಅಮ್ಮನಿಗೆ ಮೊಮ್ಮಕ್ಕಳು ಬೇಕೆ ಹೊರತು ನಿನ್ನ ಕುಟುಂಬದ ಕಥೆ ಬೇಕಿಲ್ಲ ಎಂದ. ಮೈಸೂರಿಗೆ ಪ್ರಯಾಣ ಬೆಳೆಸಿದರು.

ಮಗ ಕೋಣೆಗೆ ಮಲಗಲು ಹೋದರೂ, ಸೊಸೆ ಅಲ್ಲಿಯೇ ನಡುಮನೆ ಮಂಚದ ಮೇಲೆ ಕೂತಿರುವುದು ವನಜಮ್ಮನಿಗೆ ಅಚ್ಚರಿಯಾಯಿತು.

'ನೀನು ಬೇಕಾದರೆ ಒಳರೂಮಿನಲ್ಲಿ ಮಲಗಿಕೋ ಹೋಗಮ್ಮ. ಮನೆ ಚಿಕ್ಕದು. ಪ್ರಯಾಣ ಮಾಡಿ ಆಯಾಸ ಆಗಿರಬಹುದು' ಎಂದರು.

'ನಿಮ್ಮ ಮೊಮ್ಮಗ ಮುಂಬಯಿಯಲ್ಲಿ ಕಳೆದು ಹೋದವನು ಹೇಗೆ ಸಿಕ್ಕಿದ ಅಂತ ಗೊತ್ತೇ ಅತ್ತೆ' ಎಂದಳು.

'ರಾಜು ಏನೂ ಹೇಳ್ಲಿಲ್ಲ. ಮಕ್ಕಳೆದುರಿಗೆ ಆ ವಿಷಯ ಏಕೆ ಅಂತ ಸುಮ್ಮನಾದೆ. ಒಂದು ಹಳೆಯ ದುಃಸ್ವಪ್ನ ಮರೆತ ಹಾಗೆ ಮಗು ಅದೆಲ್ಲಾ ಮರೆತಿರಬಹುದು. ಪುನಃ ಆ ವಿಷಯ ತೆಗೀಬಾರದೂಂತ ನಾನು ಸುಮ್ಮನಾದೆ' ಎಂದರು ವನಜಮ್ಮ.

ಮಧು ರಾಮಾಯಣದ ಪುಸ್ತಕದೊಡನೆ ಕಾಂಪೌಂಡಿಗೆ ನಡೆದಿದ್ದಳು. ಚಿಂಟು, ಚಿನ್ನಿ ಅವಳನ್ನು ಹಿಂಬಾಲಿಸಿದರು. ಪುಟ್ಟ ಹಜಾರದಲ್ಲಿ ಅತ್ತೆ ಸೊಸೆ ಇಬ್ಬರೇ ಇದ್ದರು.

'ಬೋರ್ಡಿಂಗ್‌ನ ಕಾಂಪೌಂಡ್ ಹಾರಿ ಹೋಗ್ಲಿಕ್ಕೆ ನೋಡಿದ್ದಾನೆ. ವಾಚ್‌ಮನ್

ಪರೆಪ್ಪಾ ಅನ್ನೋನು... ಇವನನ್ನ ಹಿಡಿದುಕೊಂಡಿದ್ದಾನೆ, ಇವನು ನೂರರ ಎರಡು ನೋಟು ತೋರಿಸಿ-

"ನನ್ನ ಮೈಸೂರಿಗೆ ಅಜ್ಜಿ ಮನೆಗೆ ಕರೆದುಕೊಂಡು ಹೋಗು, ಅಜ್ಜಿ ಕೈಲಿ ತುಂಬಾ ದುಡ್ಡು ಕೊಡಿಸ್ತೀನಿ ಅಂದನಂತೆ. ಆತ ಆ ಇನ್ನೂರು ರೂ. ಗಳ ಆಸೆಗೆ ಮನೆಗೆ ಕರೆದುಕೊಂಡು ಹೋಗಿದ್ದಾನೆ. ಕೆಲವು ದಿನ ಹುಡುಗನ್ನ ಮುಚ್ಚಿಟ್ಟು, ನಾವು ಹುಡುಕಾಡಿ ಬಹುಮಾನ ಘೋಷಿಸಿದಾಗ, ತಾನು ಅಕಸ್ಮಾತ್ ಕೊಳೆಗೇರೀಲಿ ಎಲ್ಲೋ ಕಂಡೆ ಅಂತ ತಂದೊಪ್ಪಿಸುವವನಿದ್ದ. ಆದರೆ ನಮ್ಮ ಕಂಪನಿ ಕಾರ್ಮಿಕ ನೊಬ್ಬ ಅವನ ಮಗ ಇಡೋ ಟೀ ಸ್ಟಾಲಿಗೆ ಹೋದಾಗ ನಮ್ಮ ಹುಡುಗನ್ನ ನೋಡಿದ್ದಾನೆ. ಮುಂಬೈಯಲ್ಲೇ ನಮ್ಮ ದೊಡ್ಡಪ್ಪನ ಮಗ ದೊಡ್ಡ ಕಾರ್ಖಾನೆ ಮಾಲಿಕ. ಅವನು ಚಿಂಟು ಫೋಟೋ ತೋರಿಸಿ ಕಾರ್ಖಾನೆಯ ಎಲ್ಲಾ ವಲಯದವರಿಗೆ ತೋರಿಸಿದ್ದ. ಕಡೆಗೂ ಚಿಂಟು ಸಿಕ್ಕಿದ' ಎಂದಳು.

'ಹೇಗೋ ಮಗು ಸಿಕ್ಕಿದನಲ್ಲ...ದೇವರ ದಯೆ ಅಮ್ಮ. ನಾನು ಶ್ರೀ ತಿರುಪತಿ ವೆಂಕಟೇಶ್ವರ ಸ್ವಾಮಿಗೆ ಮೀಸಲು ಕಟ್ಟಿಟ್ಟಿದ್ದೆ. ದೇವರು ದಯೆ ತೋರಿದ. ಹೋಗಿ ಒಂದು ಸಲ ಹರಕೆ ಸಲ್ಲಿಸಿ ಬರ್ತೀನಿ' ಎಂದರು.

ಅತ್ತೆ ಸೊಸೆ ಆತ್ಮೀಯವಾಗಿ ಮೆಲುದನಿಯಲ್ಲಿ ಮಾತಾಡುತ್ತಿದ್ದರು.

'ಆ ಮಧು ಅನ್ನೋ ಹುಡುಗಿ ಯಾರತ್ತೆ? ನಮ್ಮ ಚಿಂಟು ಬಹಳ ನೆನಸ್ತಿದ್ದ. ನೀನು ಕೆಂಪು ಮುಖದ ಕೋತಿ, ನಿನ್ನ ಹಳದಿ ಕೂದಲು ಚೆನ್ನಾಗಿಲ್ಲ, ನಮ್ಮ ಮಧು ಆಂಟಿ ಕಪ್ಪು ಕೂದಲು ಉದ್ದ ಜಡೆ ಕಪ್ಪು ಫಳಫಳ ಹೊಳೆಯೋ ಕಂಗಳು ಎಷ್ಟು ಚೆನ್ನಾಗಿದೆ ಅಂತ ಪದೇ ಪದೇ ಹೇಳ್ತಿದ್ದ. ಈ ಹುಡುಗಿ ಯಾರು? ಮದುವೇಲಿ ನಿಮ್ಮ ತಮ್ಮನ ಮೂರು ಜನ ಹೆಣ್ಣು ಮಕ್ಕಳನ್ನ ನೋಡಿದ್ದೆ. ಯಾರೂ ಅಂಥಾ ರೂಪವತಿಯರಲ್ಲ. ಈ ಹುಡುಗಿ ನಿಜವಾಗಿ ತುಂಬಾ ಚೆನ್ನಾಗಿ ಇದ್ದಾಳೆ. ಯಾರೂಂತ ತಿಳೀಲಿಲ್ಲ' ಎಂದಳು.

'ಇವರಲ್ಲಾ ನಮ್ಮ ದೊಡ್ಡಪ್ಪನ ಮಗ. ಅಣ್ಣಾನೆ ಆಗಬೇಕು. ಈ ಹುಡುಗಿ ಗಂಡ ದುಬೈನಲ್ಲಿದ್ದಾನೆ. ವರ್ಷಕ್ಕೊಮ್ಮೆ ಒಂದು ತಿಂಗಳು ಬಂದು ಹೋಗ್ತಾನೆ. ನನಗೆ ಒಬ್ಬರು ಸಹಾಯಕರಿಲ್ಲದೆ ಆಗೋಲ್ಲವಲ್ಲಮ್ಮ. ಹೀಗಾಗಿ ಈ ಹುಡುಗಿ ಇಲ್ಲೇ ಇದ್ದಾಳೆ. ಅವಳ ಗಂಡ ನಾಲ್ಕೈದು ವರ್ಷ ಇಲ್ಲಿ ಬರೋ ಹಾಗಿಲ್ಲ. ಏನೋ ಕಂಪನಿಗೆ ಬಾಂಡ್ ಬರೆದು ಕೊಟ್ಟಿದ್ದಾನಂತೆ' ಎಂದರು. ಕೇಳುತ್ತ ಕೋಣೆಯಲ್ಲಿ ಮಲಗಿದ್ದ ರಾಜಸಿಂಹ ನಿಟ್ಟುಸಿರಿಟ್ಟ. ಆ ಹುಡುಗಿ ಬದುಕಿನಲ್ಲಿ ಈ ಸುಳ್ಳಿನ ಸರಪಣಿ ಜೋಡಿಸಬಾರದಾಗಿತ್ತು. ಈಗ ಆ ಸುಳ್ಳಿನ ಸರಪಣಿ ಹಿಡಿದು ಹಾಕುವುದು ಹೇಗೆ? ತನಗೊಬ್ಬ ಮೊಮ್ಮಗ ಬೇಕು ಎಂದು ಅಮ್ಮ ಹೀಗೆ ಕಥೆ ಹಬ್ಬಿಸಿ, ಅದೇ ನಾಟಕ

ಮುಂದುವರಿಸುತ್ತಿದ್ದಾಳೆ. ಮಧೂಗೆ ಎರಡು ತಿಂಗಳಾಗಿದೆ ಎಂದು ಬೇರೆ ಹೇಳಿದಳು. ತಾನಂತು ಆ ಹುಡುಗಿ ಕೈ ಬೆರಳು ಸಹ ಸೋಕಿಲ್ಲ. ಆದರೆ ಇದೆಲ್ಲಾ ಅಮ್ಮನ ಎದುರು ಮನ ಬಿಚ್ಚಿ ಚರ್ಚಿಸುವುದು ಯಾವಾಗ?

ಎರುಡು ದಿನ ಮಕ್ಕಳೊಂದಿಗೆ ದಂಪತಿಗಳಿದ್ದರು.

'ಬರೋವಾರ ಬರ್ತೀವಿ ಅಜ್ಜಿ' ಎಂದವು.

'ಅಜ್ಜೀನ್ನೆ ಅಲ್ಲಿ ಬಾ ಅನ್ನಪ್ಪಾ' ಎಂದು ಜಯಶ್ರೀ ಹೇಳಿಕೊಟ್ಟಳು.

'ಬೇಡಾ, ಅಜ್ಜಿ ಅಲ್ಲಿ ಬಂದರೆ ನಾವು ಇಲ್ಲಿ ಬಂದು ಯಾರ ಮನೇಲಿರಬೇಕು? ನಾವೇ ವಾರವಾರ ಇಲ್ಲಿ ಬರ್ತೀವಿ' ಎಂದ ಚಿಂಟು.

'ಅಜ್ಜಿ ಇಲ್ಲಿದ್ದರೇ ಅಜ್ಜಿ ಮನೆ ಅಸ್ತಿತ್ವದಲ್ಲಿ ಇರತ್ತೆ. ಬಂದು ಮಜಾ ಮಾಡ ಬಹುದು' ಎಂದು ನಕ್ಕ ರಾಜಸಿಂಹನನ್ನು ನೋಡಿ-ಜಯಶ್ರೀ ಗಂಭೀರವಾಗಿ 'ನೀವು ಮಕ್ಕಳ ಹಾಗೆ ಹುಡುಗಾಟ ಆಡಿದ್ರೆ ಹೇಗೆ? ಅವರಿಗು ವಯಸ್ಸಾಯಿತು. ಎಷ್ಟುದಿನ ಒಂಟಿಯಾಗಿರ್‍ತಾರೆ ? ಬರಲಿಕ್ಕೆ ಹೇಳಿ' ಎಂದಳು.

'ನೀವು ಅತ್ತೆ ಉಂಟು, ಸೊಸೆ ಉಂಟು, ಬೆಂಗಳೂರಲ್ಲಿ ಸೊಸೆ ಮನೆ. ಮೈಸೂರಲ್ಲಿ ಅತ್ತೆ ಮನೆ. ನೀವು ಪರಸ್ಪರ ಆಹ್ವಾನಿಸಿಕೊಳ್ಳಿ, ನಮಗೆ ಎಲ್ಲಿಯೂ ಮನೆ ಇಲ್ಲ, ಆಕಾಶವೆ ಚಾವಣಿ, ಭೂತಾಯಿ ನಿವಾಸವೆ ನೆಲ. ನಾನು ಯಾರನ್ನು ಎಲ್ಲಿ ಆಹ್ವಾನಿಸಲಿ?' ಎಂದುಬಿಟ್ಟ.

ವನಜಮ್ಮನೇ ಶಾಂತವಾಗಿ-'ಮಕ್ಕಳು ಬಯಸಿದಾಗ ಬಂದುಹೋಗಿ. ನನ್ನದು ಇನ್ನು ಕೆಲವು ವ್ಯವಹಾರಗಳಿವೆ. ಅದೆಲ್ಲಾ ಮುಗಿಸಿ ಬೇಕೆನಿಸಿದಾಗ ಬರ್ತೀನಿ. ಮಕ್ಕಳಿಗೂ ಬದಲಾವಣೆಗೆ ಇದೊಂದು ಮನೆ ಇರಲಿ. ಅರಮನೇಲಿದ್ದರೂ ಅಜ್ಜಿ ಮನೆ ಬಯಸತ್ತೆ ಅಂತ ಗಾದೆ ಇದೆ. ನನ್ನ ಮೊಮ್ಮಕ್ಕಳು ಆ ಮಾತು ನಿಜ ಮಾಡಿದ್ದಾರೆ. ಅದೇ ನನಗೆ ಹೆಮ್ಮೆ' ಎಂದಳು. ಎಲ್ಲರೂ ಬೆಂಗಳೂರಿಗೆ ಬಂದರು.

'ನಿಮ್ಮ ಮಧೂನ್ನ ನೋಡಿದ ಮೇಲೆ ಕಪ್ಪು ಕೂದಲು... ಕಪ್ಪು ಕಣ್ಣು... ಹೊಂಬಣ್ಣಾನೆ ಸೊಗಸು ಅನಿಸಿತು. ನಾನು ಅಮೆರಿಕಾಗೆ ಹೋಗಿ ಕೂದಲು...ಹೇರ್ ಡೈ ಮಾಡಿಸಿ ಬರ್ತೀನಿ. ಒಂದು ಹದಿನೈದು ದಿನ ಹೋಗಿ ಬರಲಾ?' ಎಂದಳು.

'ಅಮ್ಮ, ಹೋಗಮ್ಮ. ಹೋಗಿ ಕಪ್ಪು ಕೂದಲು ಮಾಡಿಸಿಕೊ. ಮಧು ಆಂಟಿ ಹಾಗೆ ಉದ್ದ ಜಡೆ ಹಾಕ್ಕೊ' ಎಂದು ತಂದೆಗೆ ಮೊದಲೇ ಚಿಂಟು ಅಪ್ಪಣೆ ಕೊಟ್ಟ.

'ನಿಮ್ಮಪ್ಪಾ ಅಪ್ಪಣೆ ಕೊಟ್ಟರೆ ಹೋಗ್ತೀನಿ' ಎಂದಳು.

ರಾಜಸಿಂಹ ಗಂಭೀರವಾಗಿ 'ನಿನ್ನ ರೂಪಕ್ಕಿನ್ನ ನಿನ್ನ ಗುಣ ಸ್ವಭಾವದ ಬದಲಾವಣೆ ನನಗಿಷ್ಟವಾಗಿದೆ. ಸಂಸಾರ ಹೂಡಿದ ಇಷ್ಟು ವರ್ಷಗಳ ಮೇಲೆ ಈಗ ನಮ್ಮ ಬದುಕು ಹಿತವಾಗಿದೆ' ಎಂದ.

'ಏನೇ ಆಗಲಿ, ಅಮೆರಿಕಾಗೆ ಹೋಗಿಬರ್ತೀನಿ. ಕೆಲವು ಬಿಸಿನೆಸ್ ಕೆಲಸಗಳು ಇವೆ. ಲಿಜಿ ಆಂಟೀ ನನ್ನ ಜೊತೆಗಿರ್ತಾಳೆ. ಕನ್ನಡೀಲಿ ನನ್ನ ಮುಖ ನೋಡಿಕೊಂಡ್ರೆ ನನಗೇ ಬೇಜಾರಾಗತ್ತೆ. ಆ ಹುಡುಗಿ ನಿಜವಾಗಿ ಏನು ಮುದ್ದಾಗಿದ್ದಾಳೆ' ಎಂದಳು.

ಅವನು ಸುಮ್ಮನಿದ್ದ.

'ಒಂದು ಮಾತು ಪ್ರಾಮಿಸ್ ಮಾಡಿ! ನಾನು ಊರಲ್ಲಿಲ್ಲದಾಗ ನೀವು ಒಂಟಿಯಾಗಿ ಮೈಸೂರಿಗೆ ಹೋಗಬಾರದು' ಎಂದಳು.

'ಒಂಟಿಯಾಗಿ ಏಕೆ ಹೋಗಲಿ? ಚಿಂಟು, ಚಿನ್ನೀ ಇರ್ತಾರಲ್ಲ' ಎಂದ.

ಅವಳು ಉದ್ವೇಗದಿಂದ 'ನೋ.... ಹರೆಯದ ಅಪ್ಸರೆ ಹಾಗಿರೋ ಆ ಹುಡುಗಿ ಅಲ್ಲಿದ್ದಾಳೆ. ನನ್ನ ಮನಸ್ಸಲ್ಲಿ ನೂರು ಬಗೆಯ ಭಾವನೆಗಳು ಕುದಿಯತ್ತೆ. ಕುರೂಪಿಗಳಾದ ಒಂದಿಬ್ಬರು ಹುಡುಗೀರು ನಿಮ್ಮ ಮಾವನ ಮಕ್ಕಳನ್ನ ನಾನಲ್ಲಿ ಊಹಿಸಿದ್ದೆ' ಎಂದಳು.

ರಾಜಸಿಂಹ ಬೇಸರದಿಂದ 'ಗಂಡನಿಗೆ ಸರಿಯಾಗಿ ನಡ್ಕೋತೀನಿ, ಹಿತವಾಗಿರ್ತೀನಿ, ನಾನು ಬದಲಾಗಿದ್ದೀನಿ ಅಂತ ಮುಂಬೈಯಲ್ಲಿ ನೀನು ಘೋಷಿಸಿದ್ದು ಇಷ್ಟು ಬೇಗ ಮರೆತ್ಹೋಯಿತಾ?' ಎಂದ.

ಅವಳು ಹಠದಿಂದ 'ಗಂಡನಿಗೆ ಹಿತವಾಗಿ ನಡೆದುಕೊಳ್ಳೋದೂಂದ್ರೆ ಏನು? ಅವನ ಅತ್ಯಾಚಾರ ಸಹಿಸೋದಾ ? ನಾನು ತಪ್ಪುದಾರಿಗೆ ಹೋದಾಗ ನೀವು ತಿದ್ದಿ, ನೀವು ತಪ್ಪು ದಾರಿಗೆ ಹೋದಾಗ ನಾನು ತಿದ್ತೀನಿ. ಹರೆಯದ ಒಂಟಿ ಹುಡುಗಿ ಇರೋ ಮನೆಗೆ ನೀವು ತಾಯಿ ನೆಪ ಮಾಡಿ ಹೋಗಬಾರದು. ಇದೊಂದಕ್ಕೆ ನಾನು ಜಗಳ ಕಾಯ್ತೀನಿ' ಎಂದಳು.

'ಸರಿ, ನೀನು ಅಮೆರಿಕಾದಿಂದ ಬರೋವರಿಗೆ ನಾನು ಮೈಸೂರಿಗೆ ಹೋಗಲ್ಲ' ಎಂದ. 'ಗುಡ್ ಬಾಯ್... ನಾನು ನಿಮ್ಮನ್ನ ನಂಬ್ತೀನಿ' ಎಂದಳು.

ರಾಜಸಿಂಹ ನಕ್ಕು'ಹೂಂ. ಎರಡು ಕೋಟಿ ರೂ.ಗಳ ಚರಸ್ಥಿರ ಆಸ್ತಿಗಾಗಿ ಯಾದರೂ ನನ್ನ ನಂಬಿಯೇ ಇರಬೇಕಲ್ಲ. ಅಂತು ನಿಮ್ಮಪ್ಪಾ ಒಳ್ಳೆ ನಿಬಂಧನೆ ಹಾಕಿದ್ದಾರೆ. ಬೇಕಾಗಲಿ, ಬೇಡವಾಗಲಿ, ಇನ್ನು ಹದಿನೈದು ವರುಷ ನನ್ನ ಜೊತೆ ಸಂಸಾರ ಮಾಡಲೇಬೇಕು' ಎಂದ.

ಜಯಶ್ರೀ ನೋವಿನಿಂದ 'ರಾಜ್, ಹಾಗೆಲ್ಲಾ ಮಾತಾಡಬೇಡಿ. ನಾನು ಮೊದಲಿನ ಜಯಶ್ರೀ ಅಲ್ಲ. ಆಸ್ತಿ ಸಿಗದೇ ಇದ್ದರೂ ನೀವು ನನಗೆ ಬೇಕು' ಎಂದಳು.

'ಹೋಗಿ ಬಾ ಜಯಾ... ನಮ್ಮ ಬದುಕಿನ ಕಹೀ ಎಲ್ಲಾ ಹರಿದಿದೆ. ಇನ್ನು ಮುಂದಾದರೂ ಸಿಹಿಯಾದ ಬದುಕು ಸವಿಯೋಣಾ' ಎಂದ.

ಅವಳು ಅಮೆರಿಕಾಗೆ ಹೋದಾಗ ತಾಯಿಗೆ ಟ್ರಂಕಾಲ್ ಮಾಡಿ. 'ಅಮ್ಮ,

ಮಧೂದು ಏನು ಸುದ್ದಿ?' ಎಂದು ಕೇಳಿದ. ವನಜಮ್ಮ ಹೆದರಿಕೆಯಿಂದ 'ರಾಜೂ, ನಾವಾಡೋ ಮಾತು ಅಲ್ಲಿ ಯಾರಾದರೂ ಕೇಳಿಸಿಕೊಳ್ತಿದ್ದಾರಾ?' ಎಂದರು.

'ಇಲ್ಲಮ್ಮ, ಅವಳು ಅಮೆರಿಕಾಗೆ ಹೋಗಿದ್ದಾಳೆ. ಇದೊಂದು ಸಮಸ್ಯೆ ಈಗಲೇ ನಿವಾರಿಸಿಕೊಳ್ಳಬೇಕು. ನೀನು..' ಎನ್ನುತ್ತಿದ್ದಂತೆಯೇ, 'ಹಾಗೆಲ್ಲಾ ಮಾತಾಡಬೇಡ ರಾಜೂ... ಆ ಹುಡುಗಿ ಎಂದಿಗೂ ನಮಗೆ ಸಮಸ್ಯೆ ಆಗಲ್ಲ. ನಾವು ತಾಯಿ ಮಗ ನಮ್ಮ ಸ್ವಾರ್ಥಕ್ಕೆ ದುಡುಕಿದಿವಿ. ಆ ಹುಡುಗಿ ತ್ಯಾಗಜೀವಿ. ಈಗ ಪರಿಸ್ಥಿತಿ ಅರ್ಥ ಮಾಡ್ಕೊಂಡಿದ್ದಾಳೆ' ಎಂದರು.

'ಎಲ್ಲಾ ಸರಿ ಅಮ್ಮ. ಆ ಹುಡುಗಿಗೆ ಎರಡು ತಿಂಗಳಾಗಿದೆ ಅಂದೆ. ಒಂದೂವರೆ ತಿಂಗಳು ತಿರುಪತೀಲಿ ಅವಳ ಜೊತೆ ಇದ್ದದ್ದು ನಿಜ, ಆದರೆ...?' ಎಂದ.

'ನನಗೆ ಎಲ್ಲಾ ಅರ್ಥವಾಗಿದೆಯಪ್ಪಾ. ನೀವು ಆ ದಿನ ಊರಿಗೆ ಹೋದ ರಾತ್ರೀನೆ ಹೊರಗೆ ಕೂತಳು. ಆ ರಾತ್ರಿಯೇ ನಿನ್ನ ವಿಷಯ ಹೇಳಿದಳು' ಎಂದರು.

'ಅಮ್ಮ, ಆ ಸುಳ್ಳು ಮದುವೆ ಬಂಧನ ತೆಗೆದು ಆ ಹುಡುಗಿಗೆ ಒಳ್ಳೇ ವರ ಹುಡುಕಿ ವಿವಾಹ ಮಾಡು. ಎಷ್ಟು ದುಡ್ಡು ಖರ್ಚಾದರೂ ಪರವಾಗಿಲ್ಲ' ಎಂದ. ವನಜಮ್ಮ ನಿಟ್ಟುಸಿರಿಟ್ಟು 'ನನ್ನ ಆಸ್ತೀನ ಅವಳಿಗೆ ಕೊಡೋಳಿದ್ದೀನಪ್ಪಾ. ಆದರೆ ಮೂರು ತಿಂಗಳ ಹಿಂದೆ ಇಡೀ ಬೀದಿಗೆ ಲಗ್ನಪತ್ರಿಕೆ ಹಂಚಿ, ತಿರುಪತಿಗೆ ಹೋಗಿದ್ವಿ. ಒಂದೂವರೆ ತಿಂಗಳ ಮೇಲೆ ಅವಳು ಬಂದಳು. ಮದ್ರಾಸಲ್ಲಿ ಒಂದೂವರೆ ತಿಂಗಳು ಗಂಡನ ಜೊತೆ ಸಂಸಾರ ಮಾಡಿ ಬಂದವಳು, ಅವಳ ಗಂಡಾ ದುಬೈನಲ್ಲಿದ್ದಾನೆ ಅಂತಲೇ ಎಲ್ಲಾ ನಂಬಿದ್ದಾರೆ. ಸ್ವತಃ ಅವರ ಮನೇಲಿ ತಾಯಿ ತಂದೆ ಬಿಟ್ಟು, ತಮ್ಮ, ಅಕ್ಕಾ, ತಂಗಿ ಎಲ್ಲಾ ಹಾಗೆ ನಂಬಿದ್ದಾರೆ. ಮೊನ್ನೆ ಅಂಗಡಿ ಅವಳ ಹೆಸರಿಗೆ ರಿಜಿಸ್ಟರ್ಡ್ ಮಾಡಿಸಿದೆ. ನನಗಂತು ಏನು ತೋಚ್ತಿಲ್ಲ' ಎಂದರು.

'ನಾವು ತಾಯಿ ಮಗ ದುಡಿಕಿದೆವಮ್ಮ' ಎಂದ.

'ಒಂದೆರಡು ವರುಷ ಆಗಲಿ. ಅವಳ ಗಂಡ ಬೇರೆ ಮದುವೆ ಆದ ಡೈವೋರ್ಸ್ ತಗೊಂಡು ಅಂತ ಸುದ್ದಿ ಹಬ್ಬಿಸಿ ಅವಳಿಗೆ ನಾನೇ ನಿಂತು ವರನ್ನ ಹುಡುಕಿಸಿ ಮದುವೆ ಮಾಡ್ತೀನಿ' ಎಂದು ತಾಯಿ ಹೇಳಿದಾಗ 'ಅಷ್ಟು ಮಾಡಮ್ಮ ನನ್ನ ಅಪರಾಧ ಪ್ರಜ್ಞೆ ದೂರವಾಗತ್ತೆ' ಎಂದ.

ಜಯಶ್ರೀ ಒಂದೂವರೆ ತಿಂಗಳ ನಂತರ ಅಮೆರಿಕಾದಿಂದ ಬಂದಳು. 'ಅಮ್ಮ ಈಗ ಚೆನ್ನಾಗಾಗಿದ್ದಾಳೆ, ಅಮ್ಮ ಈಗ ಚೆನ್ನಾಗಾಗಿದ್ದಾಳೆ' ಎಂದು ಮಕ್ಕಳು ಕೇಕೆ ಹಾಕಿದವು.

ಜಯಶ್ರೀ ಬಾಬ್ ಕೂದಲಿಗೆ ಉದ್ದ ಚೌರಿ ಹಾಕಿ ಜಡೆ ಹೆಣೆದು ಮುಡಿ ತುಂಬಾ ಮಲ್ಲಿಗೆ ಮುಡಿದು, ಗಿಳಿಹಸಿರು ಮೈಸೂರು ಸಿಲ್ಕ್ ಸೀರೆ ಉಟ್ಟು, ಬಂದಾಗ-

'ಅಮ್ಮ ಮಗು ಆಂಟಿಗಿಂತ ಚೆನ್ನಾಗಿದ್ದಾಳೆ' ಎಂದು ಚಿಂಟು ಚಪ್ಪಾಳೆ ತಟ್ಟಿ ಮೆಚ್ಚುಗೆ ಸೂಚಿಸಿದ. ಆ ರಾತ್ರಿ ಗಂಡನ ತೋಳು ಬಳಸಿ ಜಯಶ್ರೀ ಕೇಳಿದಳು.

'ನಿಮ್ಮ ಮೆಚ್ಚಿನ ಈ ಅಲಂಕಾರದಲ್ಲಿ ನಾನು ಹಾಗೆ ಕಾಣ್ತೀನಿ? ಆ ಹುಡುಗಿಗಿಂತ ಚೆನ್ನಾಗಿ ಕಾಣ್ತೀನೋ ಇಲ್ಲವೊ?' ಎಂದಳು.

ರಾಜಸಿಂಹ ಗಂಭೀರವಾಗಿ 'ನೀನು ಚೆನ್ನಾಗಿದ್ದಿ. ನನ್ನ ಮನ ಮೋಹಿಸುವ ಹಾಗಿದ್ದಿ. ಆದರ ಆ ಹುಡುಗಿ ಹೋಲಿಕೆ ಬೇಡ. ಅವಳನ್ನೆಂದೂ ನಾನು ಬಯಕೆ ಕಣ್ಣಿಂದ ನೋಡಿಲ್ಲ' ಎಂದ.

'ಮನಸ್ಸು ಬಿಗಿ ಹಿಡಿದು ಒಂದೂವರೆ ತಿಂಗಳಿಂದ ಮೈಸೂರಿಗೆ ಹೋಗಿಲ್ಲ. ಅದಕ್ಕೆ ಥ್ಯಾಂಕ್ಸ್ ಹೇಳ್ತೀನಿ. ಬರೋವಾರ ಹೋಗಿ ಬರೋಣಾ...' ಎಂದಳು.

'ನಿನ್ನ ಅಪ್ಪಣೆ ಮೀರೋ ಶಕ್ತಿ ನನಗಿಲ್ಲ ಜಯಾ...' ಎಂದ. ಹಾಸ್ಯಕ್ಕೆ ಆಡಿದಂತಿದ್ದರೂ ಮಾತಿನ ಆಳದಲ್ಲಿ ಎಲ್ಲೋ ನೋವು ಹುದುಗಿದಂತಿತ್ತು. ಗಂಡನ ಹೃದಯದಲ್ಲಿ ಮುಖ ಮರೆಸಿದ್ದ ಜಯಶ್ರೀಗೆ ಅವನ ಎದೆಯಾಂತರಾಳದ ಆ ನೋವು, ಪಶ್ಚಾತ್ತಾಪಗಳು ಅರ್ಥವಾಗಿರಲಿಲ್ಲ.

ಮುಂದಿನ ವಾರ ಗಂಡ ಹೆಂಡತಿ ಇಬ್ಬರು ಮಕ್ಕಳೊಂದಿಗೆ ಮೈಸೂರಿಗೆ ಬಂದರು. ಮನೆ ಸ್ವರೂಪ ಬದಲಾಯಿಸಿದ್ದರು. ಈ ಇಪ್ಪತ್ತು ದಿನದಲ್ಲಿ ಹಜಾರದ ಮುಂದಿನ ಒಳ ಅಂಗಳ ಸಿಟ್‌ಔಟ್ ಆಗಿ ಪರಿವರ್ತಿಸಿ, ಅಲ್ಲಿ ವಿಶಾಲವಾಗಿ ನೋಡಿ ಮಂಚ ಹಾಕಿಸಿದ್ದರು. ಒಳಗೆ ಹಜಾರದಲ್ಲಿ ಎಂದಿನಂತೆ ಮಂಚ, ರೂಮಲ್ಲಿ ಅಲಮಾರುಗಳು ತೆಗೆದು, ಸಿಂಗಲ್ ಮಂಚ ತೆಗೆದು ಅಲ್ಲಿಯೂ ಜೋಡಿ ಮಂಚ, ಅಡಿಗೆ ಮನೆಯ ಮುಂದಿದ್ದ ಉಗ್ರಾಣದಲ್ಲಿ ಅಲಮಾರು ಪೇರಿಸಿಡಲಾಗಿತು.

'ಏನಮ್ಮ, ಮನೆ ಬಹಳ ಬದಲಾವಣೆ ಮಾಡಿಬಿಟ್ಟಿದ್ದಿ?' ಎಂದ ರಾಜಸಿಂಹ.

'ಶ್ರೀಲಕ್ಷ್ಮೀದೇವಿ ಹಾಗೆ ಸೊಸೆ ಬರ್ತಾಳಲ್ಲಪ್ಪ. ಮೊಮ್ಮಕ್ಕಳಿಗೆ, ಸೊಸೆಗೆ ಸ್ವಲ್ಪ ಆರಾಮಿರಲೀಂತ. ಲಾಯರಿಗೆ ಹೇಳಿದ್ದೀನಿ ಮಹಡೀ ಮೇಲಿನ ಮನೆ ಬಿಡಿ ಅಂತ. ಅದು ಎರಡು ಬೆಡ್ ರೂಮಿನ ದೊಡ್ಡ ಮನೆ. ಅವರ ಮಗ ಮುಂದಿನ ವರ್ಷ ಒಂಟಿಕೊಪ್ಪಲಿನಲ್ಲಿ ನಾಲ್ಕು ಬೆಡ್‌ರೂಮಿನ ದೊಡ್ಡಮನೆ ಕಟ್ಟಿಸ್ತಿದ್ದಾನೆ. ಆಮೇಲೆ ಹೋಗ್ತೀವಿ' ಎಂದರು.

ಮಕ್ಕಳು ಬಯಸಿದ ಬಗೆಬಗೆ ರುಚಿಕರ ತಿಂಡಿ ತೀರ್ಥ ಮಧುವಿನಿಂದ ಮಾಡಿಸಿದರು. ಡಯಟ್ ಭಯವಿಲ್ಲದೆ ಜಯಶ್ರೀ ಸಹ ಹೊಟ್ಟೆತುಂಬಾ ಉಂಡಳು. 'ಅಮ್ಮಾವರ ಡಯಟ್ ಎಲ್ಲಿ ಹೋಯಿತು?' ಎಂದ.

'ಒಂದು ಏಜ್ ಆದಮೇಲೆ ರೂಪಕ್ಕಾಗಿ ಹೋರಾಡೋದು ವ್ಯರ್ಥ. ನಾನೆಷ್ಟೇ ಕುಣಿದರೂ ಆ ಮಧುಮತಿಯ ಮುಖದ ಸೊಬಗು, ಚರ್ಮದ ಕಾಂತಿ, ಕಣ್ಣಿನ ಹೊಳಪು, ಮೈಮಾಟ ಬರಲು ಸಾಧ್ಯವೆ?' ಎಂದಳು.

ರಾಜಸಿಂಹ ನಕ್ಕು– 'ನಂಗೇನೋ ನೀನು ಅವಳಿಗಿಂತ ಚೆನ್ನಾಗಿಯೇ ಕಾಣ್ತೆ' ಎಂದ.

ಜಯಶ್ರೀ ನಿರಾಶೆಯಿಂದ ನಕ್ಕು 'ಅವಳಿಗಿಂತ ಹತ್ತು ವರ್ಷ ದೊಡ್ಡೋಳು ನಾನು. ಹತ್ತು ವರ್ಷದ ಹಿಂದೆ ಅವಳಿಗಿಂತ ಚೆನ್ನಾಗಿದ್ದೆ. ಆದರೆ ಕೃತಕ ಅಲಂಕಾರಕ್ಕೆ ಚರ್ಮದ ಸತ್ವ ಹೋಗಿದೆ. ಬ್ಲೀಚಿಂಗ್ ಮಾಡಿಸಿ, ಮಾಡಿಸಿ ಚರ್ಮ ಪೇಲವಾಗಿ ಬಿಳಿಚಿಕೊಂಡಿದೆ. ಲಿಪ್‌ಸ್ಟಿಕ್‌ರಹಿತವಾಗಿ ಆ ನೀರಸ ಒರಟು ತುಟಿ ಭಯಂಕರ ಕಾಣತ್ತೆ' ಎಂದಳು. ಅನಂತರ 'ಮುಂಬೈನಲ್ಲಿ ದುಃಖದ ಭರದಲ್ಲಿ ಕುಡಿತಕ್ಕೆ ಬಿದ್ದು, ದೇಹ ಪೀಪಾಯಿ ಆಗಿದೆ' ಎಂದಳು. ರಾಜಸಿಂಹ ಅವಳನ್ನು ಸಂತೈಸಿ 'ನೀನು ಯೋಚಿಸಿದಷ್ಟು ನಿನ್ನ ರೂಪಾ ಭಯಂಕರವಾಗಿಲ್ಲ, ಜಯಾ... ನನ್ನ ಕಣ್ಣಿಗಂತು ಸಹ್ಯವಾಗಿಯೇ ಇದ್ದಿ' ಎಂದ.

'ಅದೊಂದೇ ನನಗೆ ಸಮಾಧಾನ. ಅನವಶ್ಯಕವಾಗಿ ಅವಳ ಮೇಲೆ ಕಣ್ಣಾಡಿಸಲ್ಲ. ಆ ಹುಡುಗಿಯೂ ಎಷ್ಟು ಗಂಭೀರ. ಎಂಥಾ ಡೀಸೆಂಟ್ ನೇಚರ್, ಮಕ್ಕಳ ಜೊತೆ ಎಷ್ಟು ಆತ್ಮೀಯವಾಗಿರ್ತಾಳೆ.. ಇಂಗ್ಲೀಷಿನಲ್ಲಿ ಸ್ಫುಟವಾದ ಆ ರಾಮಾಯಣದ ಭಾಗ ಓದಿ, ಮಧುರವಾಗಿ ಎಕ್ಸ್‌ಪ್ಲೈನ್ ಮಾಡ್ತಿದ್ರೆ ನನಗೇ ಕೇಳ್ತಾ ಇರಬೇಕನಿಸತ್ತೆ. ಮಕ್ಕಳಂತೂ ಅವಳಿಗೆ ಮರುಳಾಗಿವೆ. ರಾತ್ರಿ ಒಂಬತ್ತರವರೆಗೆ ಆ ಅಂಗಳದ ಮಂಚದ ಮೇಲೆ ಅವಳೊಂದಿಗಿರುತ್ವೆ. ಅಡಿಗೇನು ತುಂಬಾ ರುಚಿಯಾಗಿ ಮಾಡ್ತಾಳೆ. ಈಗ ನಮ್ಮ ಮನೇಲಿ ರತ್ನಮ್ಮ ಮುದುಕಿಯಾದರು. ಮುಂದಿನ ತಿಂಗಳು ಮಗಳ ಮನೆಗೆ ಹೋಗ್ತಾರಂತೆ. ನಿಮ್ಮ ತಾಯಿ ಒಪ್ಪಿದರೆ ಈ ಹುಡುಗೀನ್ನ ಕರ್ಕೊಂಡು ಹೋಗೋಣಾಂತಿದ್ದೀನಿ' ಎಂದಳು.

ರಾಜಸಿಂಹ ನೀರಸವಾಗಿ 'ಆ ಹುಡುಗಿ ಅಂಗಡಿ ಲೆಕ್ಕಾಚಾರ ನೋಡೋದ್ರಿಂದ ಹಿಡಿದು, ಅಮ್ಮನಿಗೆ ಬಲಗೈನಂತೆ ಇದ್ದಾಳೆ. ಅಮ್ಮ ಅವಳನ್ನ ಕೆಲಸಗಾತಿ ಇಟ್ಟ ಹಾಗೆ ಇಟ್ಟಿಲ್ಲ. ಮುಂದೆ ಅಂಗಡಿ, ಮನೆ ಅವಳಿಗೆ ಕೊಡ್ತಾಳೆ. ಬೇರೆ ಮನೆ ಕೆಲಸಕ್ಕೆ ಆ ಹುಡುಗಿ ಬರಲಾರಳು' ಎಂದ.

'ಒಳ್ಳೆ ವಿದ್ಯಾವತಿ, ಪಾಕಕುಶಲೆ, ನಮ್ಮ ಮಕ್ಕಳ ಟ್ಯೂಷನ್‌ನಿಂದ ಹಿಡಿದು ಎಲ್ಲಾ ನೋಡ್ಕೋತಾಳೆ. ಅದಕ್ಕೆ ಅವಳ ಮೇಲೆ ಆಶೆಯಿತ್ತು' ಎಂದಳು.

ಹುಡುಗರು ಹತ್ತಿ ಹಾರಿ, ಯಾವುಯಾವುದೋ ಗೂಡಿನಿಂದ ಹಳೆ ಪುಸ್ತಕ, ಸಾಮಾನುಗಳು ಎಲ್ಲಾ ತೆಗೆಯುವರು. ಹಾಗೆ ತೆಗೆದಾಗ ಲಗ್ನಪತ್ರಿಕೆ ಒಂದು ಸಿಕ್ಕಿತು.

ಇಂಗ್ಲೀಷ್ ಮೀಡಿಯಮ್ ಆದ್ದರಿಂದ ಹುಡುಗರಿಗೆ ಕನ್ನಡ ಅಷ್ಟು ಚೆನ್ನಾಗಿ ಬರ್‍ತಿರಲಿಲ್ಲ.

'ಮಮ್ಮಿ... ಇದರಲ್ಲಿ ಏನಿದೆ... ಕಥೆ ಇದೆಯಾ ?' ಎಂದವು.

ಜಯಶ್ರೀ ಓದಿ, 'ಇದು ನಿಮ್ಮ ಮಧು ಆಂಟಿ ಲಗ್ನಪತ್ರಿಕೆ. ಶಂಕರ್ ಎಂಬ ವರನಿಗೆ ಮಧುಮತಿ ಎಂಬ ಕನ್ಯಾರತ್ನವನ್ನು ಕೊಟ್ಟು ವಿವಾಹ ಮಹೋತ್ಸವ' ಎಂದು ಸಾಂಗವಾಗಿ ಓದಿದಳು.

'ಮಧು ಆಂಟೀ, ನಿಂಗೆ ಮದುವೆ ಆಗಿದೆಯಾ?' ಲಗ್ನಪತ್ರಿಕೆ ಹಿಡಿದು ಅಡಿಗೆ ಮನೆಗೆ ಓಡಿಬಂದ.

ಉಪ್ಪೇರಿ ಕರಿಯುತ್ತಿದ್ದ ಮಧುಮತಿ ನಗುತ್ತ-

'ಕಾಲಲ್ಲಿ ಕಾಲುಂಗುರ, ಕೊರಳಲ್ಲಿ ತಾಳಿ ಇದೆಯಲ್ಲ. ಹಾಗಿದ್ರೇ ಮದುವೆ ಆಗಿದೇಂತ್ಲೇ ಲೆಕ್ಕ' ಎಂದಳು. ಚಿಂಟು ಗೊಂದಲದಿಂದ 'ಹಾಗಿದ್ರೆ ಅಂಕಲ್ ಎಲ್ಲಿದ್ದಾರೆ ?' ಎಂದ.

'ಯಾವ ಅಂಕಲ್ ಬೇಕು ನಿಂಗೆ?' ಎಂದಳು ನಗುತ್ತ.

'ಅದೇ ನಿಮ್ಮನ್ನ ಮದುವೆ ಆಗಿದ್ದಾರಲ್ಲ, ಶಂಕರ್ ಅಂಕಲ್?' ಎಂದ.

ಮಧುಮತಿ ನಗುತ್ತಲೇ 'ಅವರು ದೂರ ದುಬೈನಲ್ಲಿದ್ದಾರೆ. ವರ್ಷಕ್ಕೆ ಒಂದು ಸಲ ಬರ್‍ತಾರೆ' ಎಂದಳು.

'ನಮ್ಮ ಬಾಬ್ರಿ ತಂದೇನು ಆಗಾಗ ದುಬೈಗೆ ಹೋಗ್ತ ಇರ್‍ತಾರೆ. ಬಾಬ್ರಿಗೆ ಒಂದು ಥರ ಹುಲಿ ಚಿತ್ರ ಇರೋ ಕೋಟು ತಂದಿರ್‍ತಾರೆ. ಅಂಕಲ್ ದುಬಾಯಿಯಿಂದ ಬರೋವಾಗ ನನಗೂ ಹುಲಿ ಬಣ್ಣದ ಕೋಟು ತರಿಸಿಕೊಡಿ' ಎಂದ.

'ತರಿಸಿ ಕೊಡ್ತಿನೇಳು, ಎಣ್ಣೆ ಹೊಗೆ ಆಗತ್ತೆ. ಹೊರಗೆ ಹೋಗು, ಆಮೇಲೆ ಕೆಮ್ತಿ' ಎಂದಳು.

'ಅಂಕಲ್ ನೋಡ್ಲಿಕ್ಕೆ ಹೇಗಿದ್ದಾರೆ ?' ಎಂದ.

'ಎಲ್ಲಾ ನಿನ್ನ ಹಾಗೆ ಇದ್ದಾರೆ, ಫಳಫಳ ಕಣ್ಣುಗಳು, ಬಂಗಾರದ ಬಣ್ಣ... .....'ಎಂದಳು.

ಚಿಂಟು ಹೊರಗೋಡಿ ಬಂದ. ತಂದೆ ತಾಯಿ ಅಜ್ಜಿ ಹಜಾರದ ಮಂಚದ ಮೇಲೆ ಕೂತಿದ್ದರು.

'ಪಪ್ಪಾ....ಶಂಕರ್ ಅಂಕಲ್ ದುಬೈಯಿಂದ ಬರೋವಾಗ ನನಗೆ ಹುಲಿಪಟ್ಟೆ ಕೋಟು ತಂದು ಕೊಡ್ತಾರಂತೆ' ಎಂದ.

ಜಯಶ್ರೀ ನಗುತ್ತ 'ಸರಿ, ಮುಖವೇ ನೋಡಿಲ್ಲ, ಆಗಲೇ ಕೋಟು, ಹ್ಯಾಟ್ ತರಿಸಿಕೊಳ್ಳಿಕ್ಕೆ ಅಗ್ರಿಮೆಂಟ್ ಮಾಡಿಕೊಂಡೆಯಾ?' ಎಂದಳು.

'ಶಂಕರ್ ಅಂಕಲ್ ನೋಡ್ಲಿಕ್ಕೆ ನನ್ನ ಹಾಗೆಯೇ ಇದ್ದಾರಂತೇ ಮಮ್ಮಿ' ಎಂದ.

ತಾಯಿ ಮಗ ಮುಖಮುಖ ನೋಡಿಕೊಂಡು ಒಳಗೊಳಗೆ ನಿಟ್ಟುಸಿರಿಟ್ಟರು. ಮುಂದೆ ಅವಳಿಗೆ ಮಗು ಹುಟ್ಟಿದರ ಅನಾಮಧೇಯವಾಗಬಾರದು. ಬೀದೀಲಿ ಜನರ ಎದುರು ಕೆಟ್ಟ ಹೆಸರು ಬರಬಾರದು ಎಂದು ಒಂದು ಕೃತಕ ಲಗ್ನಪತ್ರಿಕೆ ಸಿದ್ಧಪಡಿಸಿದ್ದರು. ಆದರೆ ಈಗ ಈ ಸ್ನೇಹದ ಸರಪಳಿ ಬಂಧನದಿಂದ ಅವಳನ್ನು ಬಿಡಿಸುವುದು ಹೇಗೆ ಎಂದೇ ತಿಳಿಯಲಿಲ್ಲ.

ಕಾಲವೇ ಇದಕ್ಕೆ ಮದ್ದು. ಎಂದು ಮಗನ ಮುಂದೆ ಅಲವತ್ತುಕೊಂಡಿದ್ದರು. ಎರಡು ತಿಂಗಳಿಗೊಮ್ಮೆ ಮಕ್ಕಳ ಜೊತೆ ಗಂಡ ಹೆಂಡತಿ ಬಂದು ನಾಲ್ಕು ದಿನ ಇದ್ದು ಹೋಗುತ್ತಿದ್ದರು. ಕಾಲಚಕ್ರ ಉರುಳುತ್ತಿತ್ತು.

ಚಿಂಟು ಈಗ ಹದಿನಾಲ್ಕರ ಹುಡುಗ. ಜಯಶ್ರೀಗೆ ಈ ನಡುವೆ ಆರೋಗ್ಯ ಸರಿಯಿಲ್ಲ. ಆಗಾಗ ತಲೆನೋವು, ಜ್ವರ ಎಂದು ಮಲಗಿ ಬಿಡುತ್ತಿದ್ದಳು. ಈ ಮಧ್ಯೆ ಅರವತ್ತೈದು ವರ್ಷದ ವನಜಮ್ಮನಿಗೆ ತೀವ್ರ ಎಂಬ ಸುದ್ದಿ ಬಂತು.

ಜಯಶ್ರೀನೂ ಅನಾರೋಗ್ಯದಲ್ಲಿದ್ದಳು. ಮಕ್ಕಳಿಗೆ ಪರೀಕ್ಷೆ. ಹೀಗಾಗಿ ಒಬ್ಬನೇ ಹೋಗಬೇಕಾಯಿತು.

'ಹೋಗಿ ಬರಲಾ ಜಯಾ?'

'ಹೋಗಿ ಬನ್ನಿ. ಆಕೆಯೂ ವಯಸ್ಸಾದ ಜೀವಾ' ಎಂದವಳು–

'ನಿಮ್ಮ ಮೇಲ ನನಗಾವ ಸಂಶಯವಿಲ್ಲ. ಐದು ವರ್ಷದಿಂದ ಪರೀಕ್ಷೆ ಮಾಡಿದ್ದೀನಲ್ಲ. ಮಧುಮತಿಯೂ ಚೊಕ್ಕ ಚಿನ್ನ. ಅವಳ ಮೇಲೆ ನನಗೆ ಎಷ್ಟು ನಂಬಿಕೆ ಇದೇಂದ್ರೆ, ನಾನು ಕಾಯಿಲೆ ಮಲಗಿ ದೀರ್ಘವಾಗಿ ಆಸ್ಪತ್ರೆ ಸೇರಿದರೆ, ಈ ಸಂಸಾರ ಹಾಗೂ ಮಕ್ಕಳನ್ನ ನೋಡಿಕೊಳ್ಳಿಕ್ಕೆ ಅವಳನ್ನೇ ಕರೆಸಿಕೊಳ್ಳ ಬೇಕೂಂತಿದ್ದೀನಿ' ಎಂದಳು.

ರಾಜಸಿಂಹ ಚಿಂತೆಯಿಂದ 'ಅಂಥಾ ಸನ್ನಿವೇಶಗಳೇ ಬೇಡಾ ಜಯಾ...? ನೀನು ಬೇಗ ಗುಣವಾಗಿ ಬಿಡು' ಎಂದ.

'ನೋಡೋಣಾ.... ನರ್ಸಿಂಗ್ ಹೋಮ್‌ನಲ್ಲಿ ನಾಳಿದ್ದು ಬ್ಲಡ್‌ಟೆಸ್ಟ್, ಡೀಪಾಗಿ ಸ್ಕ್ಯಾನಿಂಗ್ ಎಲ್ಲಾ ಮಾಡ್ತಿದ್ದಾರೆ. ಅದರ ರಿಸಲ್ಟ್ ಏನು ಬರತ್ತೋ? ಆರು ತಿಂಗಳಿಂದ ಮಲಗೋದು, ಏಳೋದೆ ಆಗಿದೆ' ಎಂದಳು. 'ನಿನಗೇನು ಆಗಿಲ್ಲ ಜಯಾ' ಎಂದು ಅವನೆಂದರೂ ಅವನ ಮನಸ್ಸು ಅಧೀರವಾಗಿತ್ತು.

ರಾಜಸಿಂಹ ಮೈಸೂರಿಗೆ ಬಂದ. ತಾಯಿ ತೀರ ರುಗ್ಣಶಯ್ಯೆಯಲ್ಲಿದ್ದರು.

ಮಧುಮತಿ ಒಬ್ಬ ನರ್ಸ್ ಸಹಾಯದಿಂದ ಅವರನ್ನು ನೋಡಿಕೊಳ್ಳುತ್ತಿದ್ದಳು.

ಒಂದು ತಿಂಗಳು ನರ್ಸಿಂಗ್ ಹೋಂನಲ್ಲಿದ್ದು ಡಿಸ್ಚಾರ್ಜ್ ಆಗಿದ್ದ ಆಕೆ ಬಳಲಿದ್ದರು.

'ಈ ಸಲ, ನಾನು ಬದುಕಲ್ಲಾ ಅನಿಸತ್ತಪ್ಪಾ. ಆದರೆ ಈ ಹುಡುಗಿದೇ ಚಿಂತೆ ಆಗಿದೆ.ಶಂಕರ್ ದುಬೈಲಿ ಬೇರೆ ಮಗುನ ಆದ. ಇವಳಿಗೆ ಡೈವೋರ್ಸ್ ಕೊಟ್ಟ ಅಂತ ಹಬ್ಬಿಸಿ ಎರಡು ವರುಷ ಆಯಿತು. ಇವಳ ರೂಪಾ, ಹಣಾ ನೋಡಿ, ಒಳ್ಳೊಳ್ಳೆ ವರಗಳು ಬಂತು. ಲಾಯರ್ ಮಗ ಅಡ್ವೋಕೇಟ್ ಕೇಶವ ಇವಳನ್ನ ವಿವಾಹ ವಾಗಲಿಕ್ಕೆ ಬಯಸಿ ಬಂದ. ನಮ್ಮಣ್ಣನ ಮೂರನೇ ಮಗ ಡಾಕ್ಟರಿದ್ದಾನೆ. ಅವನ ನರ್ಸಿಂಗ್ ಹೋಮಿಗೆ ನಾನು ಸೇರಿದ್ದು, ಅವನು ನಾಲ್ಕಾರು ಬಾರಿ ಪ್ರಸ್ತಾಪಿಸಿದ.

'ಆದರೆ ಈ ಹುಡುಗಿ ಯಾರನ್ನೂ ವಿವಾಹವಾಗಲ್ಲ. ಅವಳ ಹಠವೇ ಹಠ. ಮದುವೆ ನನ್ನ ಜೀವನದಲ್ಲಿ ಮುಗಿದು ಹೋದ ಪ್ರಶ್ನೆ ಅಂತಾಳೆ'ಎಂದಳು. ಆ ಸಂಜೆ ತಾಯಿ ಔಷಧದ ಮಂಪರಿನಲ್ಲಿ ಕೊಂಚ ನಿದ್ರೆ ಹೋದಾಗ 'ಮಧು, ಸ್ವಲ್ಪ ಬಾ ಮಾತಾಡಬೇಕು'ಎಂದ. ಮಧು ಅಂಗಳಕ್ಕೆ ಬಂದು ಅಲ್ಲಿದ್ದ ಮಂಚದ ಮೇಲೆ ಕೂತಳು.

ರಾಜಸಿಂಹ ಉದ್ವೇಗದಿಂದ 'ನಿನಗೆ ನೀನೇ ಏಕೆ ಶಿಕ್ಷೆ ವಿಧಿಸಿಕೊಳ್ತೀ ಮಧು? ನಮ್ಮ ತಪ್ಪಿಗೆ ಪರಿಹಾರವೇ ಇಲ್ಲವೆ? ನಾವು ತಾಯಿ– ಮಗ ಏನೋ ದುಡುಕಿ, ಒಂದು ಹುಚ್ಚು ಯೋಜನೆ ಹಾಕಿದೆವು. ಆದರೆ ದೇವರ ದಯೆ, ಆ ಸಮಯ ದಲ್ಲಿಯೂ ನಾನು ಸಂಯಮವಾಗಿದ್ದೆ. ನೀನು ಪವಿತ್ರವಾಗಿದ್ದೀ. ಇಪ್ಪತ್ತೆಂಟು ವರ್ಷ ಅಂದರೆ ಈಗಿನ ಕಾಲಕ್ಕೆ ಅಂಥಾ ದೊಡ್ಡ ವಿಷಯವಲ್ಲ. ಒಬ್ಬ ಯೋಗ್ಯ ಹುಡುಗನನ್ನು ವಿವಾಹ ಆಗಿ ಸುಖವಾಗಿರು. ನೀನು ಅಶಾಂತಿ ಅನುಭವಿಸ್ತಾ ನಮ್ಮ ತಾಯಿ ಮಗನ್ನ ಏಕೆ ತಪ್ಪಿತಸ್ತರನ್ನಾಗಿ ಮಾಡ್ತೀ?' ಎಂದ.

ಮಧು ಕಿರುನಗೆ ಬೀರಿ- 'ನಾನು ಅಶಾಂತಿಯ ಅಗ್ನಿಕುಂಡದಲ್ಲಿ ತೊಳಲಾಡ್ತಿಲ್ಲ. ನನ್ನ ಬದುಕು ಶಾಂತ ಪ್ರವಾಹವಾಗಿದೆ. ದೊಡ್ಡಕ್ಕ ತನ್ನ ಗಂಡನ ಕೂಡ ಸುಖವಾಗಿ ಸಂಸಾರ ಮಾಡಿಕೊಂಡಿದ್ದಾಳೆ, ಎರಡನೆಯ ಅಕ್ಕನಿಗಿ ವಿವಾಹವಾಗಿದೆ. ಅಕ್ಕಭಾವ ಈ ಊರಲ್ಲೇ ಇದ್ದಾರೆ, ತಮ್ಮ ವಿವಾಹಿತನಾಗಿದ್ದಾನೆ. ಈ ಅಂಗಡಿಯ ಅಭ್ಯುದಯ ದಲ್ಲಿದ್ದಾನೆ. ತಾಯಿ ಆರೋಗ್ಯವಾಗಿದ್ದಾರೆ. ತಂದೆ ನಿಶ್ಚಿಂತ ನಿವೃತ್ತಿ ಜೀವನ ಸಾಗಿಸ್ತ ದೇವರ ಸ್ತೋತ್ರ ಮಾಡಿಕಂಡಿದ್ದಾರೆ, ನನ್ನ ವಿವಾಹದಿಂದ ನಾನೇನೇನು ಸುಖಶಾಂತಿ ಸಾಧಿಸಬೇಕೂಂತಿದ್ದೇನೋ ಎಲ್ಲಾ ಸಿಕ್ಕಿದೆ' ಎಂದಳು...

'ಆದರೆ ನಿನ್ನದಾದ ಒಂದು ಬದುಕಿದೆ' ಎಂದ.

'ಅದಕ್ಕೆ ಒಂದು ಧ್ಯೇಯವು ಇದೆ. ನಾನು ಮನಸಾರೇ ಪ್ರೀತಿಸಿದ ಒಬ್ಬ ವ್ಯಕ್ತೀನ್ನ

ನಾನು ವಿವಾಹವಾಗಿದ್ದೀನಿ. ಅವರ ಸುಖ ಸಂಸಾರ ದೂರದಿಂದಲೇ ನೋಡಿ ಸಂತಸಪಡ್ತೀನಿ' ಎಂದಳು.

'ನನ್ನಿಂದ ನಿನಗೇನು ಸಿಗಲ್ಲ ಮಧು, ಎಣ್ಣೆ ಇಲ್ಲದ ದೀಪದಿಂದ ಬೆಳಕನ್ನು ಅಪೇಕ್ಷಿಸ್ತಿದ್ದಿ, ನನ್ನ ಸಂಸಾರಕ್ಕೆ ನಾನು ಬದ್ಧ' ಎಂದ.

'ನಿಮ್ಮಿಂದ ನಾನು ಏನೂ ಅಪೇಕ್ಷಿಸಲ್ಲ. ನಿಮ್ಮ ಸುಖ ಸಂಸಾರದ ನಡುವೆ ಮುಳ್ಳಾಗಿ ಖಂಡಿತ ಬರಲ್ಲ. ಹೆದರಬೇಡಿ' ಎಂದಳು.

ರಾಜಸಿಂಹ ಬೇಸರದಿಂದ 'ಆದರೆ ನನ್ನ ಮನಸ್ಸಿಗೆ ನೆಟ್ಟ ಮುಳ್ಳಾಗಿದ್ದಿ ನೀನು, ನೀನು ವಿವಾಹಿತಳಾಗಿ ಸುಖಸಂತೋಷವಾಗಿದ್ರೆ ನಾನು ಸುಖವಾಗಿರಬಲ್ಲೆ. ಇಲ್ಲದಿದ್ದರೆ ನನ್ನ ಮನಸ್ಸಿಗೆ ಚುಚ್ತಾ ಇರತ್ತೆ' ಎಂದ.

'ನಾನು ನಿಮ್ಮ ಮನಸ್ಸಿನ ಮಲ್ಲಿಗೆಯೂ ಅಲ್ಲ. ನಿಮ್ಮ ಮನದ ಮುಳ್ಳು ಅಲ್ಲ. ನಿಮ್ಮ ಮನದಲ್ಲಿ ನನಗೆ ಸ್ಥಾನವೇ ಇಲ್ಲಾಂತ ನಾನು ಬಲ್ಲೆ. ನಿಮ್ಮ ಚಪ್ಪಲಿ ಧೂಳು ನಾನು. ನೀವು ಶ್ರೀಮಂತರು. ಚಪ್ಪಲಿ ಮೇಲಿನ ಧೂಳು ಸಹ ಕೊಡವಿ ಚಪ್ಪಲಿ ಥಳಥಳಾಂತಿರಲೀಂತ ಪಾಲಿಷ್ ಮಾಡಬಲ್ಲಿರಿ. ನನ್ನ ಮನಸ್ಸಿನ ಧ್ಯೇಯಕ್ಕೆ ಅಡ್ಡಿ ಬರೋ ಹಕ್ಕು ನಿಮಗಿಲ್ಲಾಂತ ಮಾತ್ರ ಹೇಳಬಲ್ಲೆ' ಎಂದಳು.

ರಾಜಸಿಂಹ ನಿರಾಶನಾಗಿ ನಿಟ್ಟುಸಿರುಬಿಟ್ಟು ಎದ್ದುನಿಂತ. ತಾಯಿ ನಾಲ್ಕುದಿನ ಬದುಕಿದ್ದರು. ಅನಂತರ ಕಣ್ಮುಚ್ಚಿದರು. ಜಯಶ್ರೀ ಈಗ ತೀರ ಮಲಗಿಬಿಟ್ಟಿದ್ದಳು. ಅವಳ ಮೂತ್ರ ಪಿಂಡವೊಂದು ಪೂರ್ತಿಕೆಟ್ಟುಹೋಗಿದೆ. ಬದಲಿ ಮೂತ್ರಪಿಂಡ ಸಿಗುವವರೆಗೆ ಡಯಾಲಿಸಿಸ್ ಮಾಡ್ತ ಇರಬೇಕೆಂದಿದ್ದರು.

ಅತ್ತೆಯ ಅಂತ್ಯಕ್ರಿಯೆಯಲ್ಲಿ ಸಹ ಜಯಶ್ರೀ ಭಾಗವಹಿಸುವ ಹಾಗಿರಲಿಲ್ಲ. ತಾಯಿಯ ಹದಿಮೂರನೆಯ ದಿನದ ಮಾಸಿಕ, ವೈಕುಂಠ ಸಮಾರಾಧನೆ ಎಲ್ಲಾ ಮುಗಿಸಿ ರಾಜಸಿಂಹ ಬೆಂಗಳೂರಿಗೆ ಬಂದ.

ಆಶ್ಚರ್ಯ ಎಂದರೆ ಕಳೆದ ಹತ್ತು ದಿನದಿಂದ ಮಧುಮತಿ ಅವನ ಕಂಗಳಿಗೆ ಬಿದ್ದಿರಲಿಲ್ಲ.

ರಾಜಸಿಂಹ ಆಸ್ಪತ್ರೆಗೆ ಬಂದಾಗ ಅವನಿಗೊಂದು ಆಶ್ಚರ್ಯಕರ ವಾರ್ತೆ ಸಿಕ್ಕಿತು. ಜಯಶ್ರೀಗೆ ಬದಲಿ ಮೂತ್ರಪಿಂಡ ಸಿಕ್ಕಿ ಆಪರೇಷನ್ ಆಗಿ ಮೂರುದಿನ ಆಗಿತ್ತು. ಜಯಶ್ರೀ ಚೇತರಿಸಿಕೊಳ್ಳುತ್ತಿದ್ದಳು.

'ಜಯಾ, ಆಪರೇಷನ್ ಆದ ಸುದ್ದಿ ನನಗ್ಯಾಕೆ ತಿಳಿಸಲಿಲ್ಲ. ಬದಲಿ ಮೂತ್ರ ಪಿಂಡ ನಿನ್ನ ಬ್ಲಡ್‌ಗ್ರೂಪ್‌ದು ಇಷ್ಟು ಬೇಗ ಹೇಗೆ ಸಿಕ್ಕಿತು? ಜಯಶ್ರೀ ವ್ಯಥೆಯಿಂದ ನನಗೆ ಕಿಡ್ನಿ ದಾನ ಮಾಡಿದ ತ್ಯಾಗಿ ಬೇರೆ ಯಾರು ಅಲ್ಲ, ನಿಮ್ಮ ತಾಯಿ ಸಾಕುಪುತ್ರಿಯಾದ ಮಧು. ನನ್ನ ಅನಾರೋಗ್ಯದ ವಿಷಯ ತಿಳಿದು ನೋಡ್ಲಿಕ್ಕೆ

ಬಂದಿದ್ದಳು. ಹಿಂದು ಮುಂದು ಯೋಚಿಸದೇ–ತನ್ನ ಕಿಡ್ನಿ ಹೊಂದಿಕೆಯಾದರೆ ಕೊಡ್ತೀನಿ ಅಂತ ಟೆಸ್ಟ್ ಮಾಡಿಸಿಕೊಂಡಳು. ಅವಳ ಒಳ್ಳೆ ಮನಸ್ಸಿಗೆ ತಕ್ಕ ಹಾಗೆ ಬ್ಲಡ್‌ಗ್ರೂಪ್ ಟಿಷ್ಯು ಎಲ್ಲಾ ಮ್ಯಾಚ್ ಆಯಿತು. ಮೂರು ದಿನದ ಹಿಂದೆ ಆಪರೇಷನ್ ಆಯ್ತು' ಎಂದಳು. 'ಅವಳೆಲ್ಲಿ?' ಎಂದ ಉದ್ವೇಗದಿಂದ.

'ಅವಳು ಇದೇ ಹಾಸ್ಪೆಟಲಲ್ಲಿದ್ದಾಳೆ. ತನ್ನನ್ನು ಕಾಣಲಿಕ್ಕೇ ಯಾರೂ ಬರಬಾರದೂಂತ ಹೇಳಿದ್ದಾಳೆ.'

'ಈ ಸಲ ಅವಳು ಡಿಸ್‌ಚಾರ್ಜ್ ಆದ ಮೇಲೆ ಒಪ್ಪಿಸಿ ನಮ್ಮನೆಗೆ ಕರ್‍ಕೊಂಬರೋಣಾಂತಿದ್ದೀನಿ. ನಮ್ಮ ಹುಡುಗರಿಗೂ ಅವಳನ್ನು ಕಂಡ್ರೆ ಇಷ್ಟ. ಈಗ ನಿಮ್ಮ ತಾಯೀನು ಇಲ್ಲ. ಆ ಮೈಸೂರು ವಾಸ...ಆ ಹಳೆಯ ಮದುವೆಯ ಕಥೆ ಎಲ್ಲಾ ಮರೆಸಿ, ನಮ್ಮ ಫ್ಯಾಕ್ಟರಿ ಆಫೀಸ್ ಸೆಕ್ಷನ್ನಿಗೆ ಬಂದಿರೋ ಭರತ್ ಉದಾರ ಮನೋಭಾವದ ಆಧುನಿಕ ಯುವಕ. ಇವಳ ಹಳೇ ಮದುವೆ ಕಥೆ ಲೆಕ್ಕಿಸಲ್ಲ. ಇಂಥಾ ರೂಪಸಿಯನ್ನು ತಾಳಿಕಟ್ಟಿ ಕೈಬಿಟ್ಟ ಅವನೆಂಥಾ ನತದೃಷ್ಟ. ಅವನಿಗಾಗಿ ಹಂಬಲಿಸ್ತಾ ಇವಳು ಒಂಟಿ ಬುದ್ಧಿಹೇಳಿ ವಿವಾಹ ಮಾಡಿಸ್ತೀನಿ' ಎಂದಳು.

'ಅಮ್ಮ ಅವಳಿಗೆ ಬುದ್ಧಿಹೇಳಿ ಸಾಕಾದಳು. ಈಗ ನೀನು ಪ್ರಯತ್ನಿಸು' ಎಂದ.

'ಖಂಡಿತ ಪ್ರಯತ್ನಿಸ್ತೀನಿ. ಅವನಿಗೆ ಒಂದು ಪ್ರಮೋಷನ್ ಕೊಟ್ಟು, ನಮ್ಮ ಕಂಪನಿಯಿಂದ ಕಾರು, ಬಂಗ್ಲೆ ಎಲ್ಲಾ ಕೊಡ್ತೀನಿ. ತಿಂಗಳಿಗೆ ಹದಿನೈದು ಸಾವಿರ ಸಂಬಳ ಕೊಡ್ತೀನಿ. ನೋಡ್ಲಿಕ್ಕು ಚೆನ್ನಾಗಿದ್ದಾನೆ. ಇಂಥಾ ವರನ್ನ ಏಕೆ ಒಪ್ಪಲ್ಲ?' ಎಂದಳು.

ಹದಿನೈದು ದಿನ ಕಳೆಯಿತು. ಮೊದಲು ಮಧುಮತಿಯನ್ನು ಡಿಸ್‌ಚಾರ್ಜ್ ಮಾಡಿದ್ದರು. ಜಯಶ್ರೀ ಅವಳಿಗೆ ಹೇಳಿಕಳಿಸಿ, 'ಕೆಲವು ದಿನ ನಮ್ಮನೇಲಿರು, ಹುಡುಗರು ತುಂಬಾ ಕೇಳತ್ವೆ, ಈಗ ಅವರ ಅಜ್ಜೀನು ಇಲ್ಲ, ನಾನು ಹೀಗೆ ಮಲಗಿಬಿಟ್ಟಿದ್ದೀನಿ. ನಾನು ಡಿಸ್‌ಚಾರ್ಜ್ ಆಗಿ ಬರೋವರೆಗೆ ನೀನೆ ಮನೇ ನೋಡ್ಕೋಬೇಕು' ಎಂದಳು.

ನಂತರ ಭರತ್ ಎಂಬ ತನ್ನ ಕಂಪನಿಯ ಅಧಿಕಾರಿ ಬಗ್ಗೆ ವರ್ಣಿಸಿ 'ಅವನಿಗೆ ನಿನ್ನೊಡನೇ ವಿವಾಹ ಆಗಲೇಬೇಕು. ಯಾರೋ ಅಯೋಗ್ಯನಿಗಾಗಿ ನಿನ್ನ ಬದುಕು ಹಾಳು ಮಾಡಿಕೋಬೇಡಾ 'ಎಂದಳು.

ಮಧುಮತಿ ಹೆಚ್ಚು ವಾದಿಸದೇ 'ಅಕ್ಕಾ, ಈಗ ನೀವು ತುಂಬಾ ವೀಕ್ ಇದ್ದೀರಿ. ನಾನೂ ತುಂಬಾ ನಿತ್ರಾಣ ಇದ್ದೇನೆ. ಈ ಸ್ಥಿತೀಲಿ ಮೈಸೂರಿಗೆ ಹೋಗಿ ಕೆಲವು ದಿನ ಬೆಡ್‌ರೆಸ್ಟಲ್ಲಿ ಇರ್ತೀನಿ. ಮೂರು ತಿಂಗಳ ಮೇಲೆ ಬರ್ತೀನಿ' ಎಂದು ಹೇಳಿ

ಮೈಸೂರಿಗೆ ಹೊರಟುಬಿಟ್ಟಳು.

ಜಯಶ್ರೀಯನ್ನು ಹದಿನೈದು ದಿನದ ನಂತರ ಬಿಡುಗಡೆ ಮಾಡಿದರು. ಮನೆಗೆ ಬಂದಮೇಲೆ ಜಯಶ್ರೀ ಚೆನ್ನಾಗಿ ಚೇತರಿಸಿಕೊಳ್ಳಲು ಆರು ತಿಂಗಳು ಹಿಡಿಸಿತು. ಜಯಶ್ರೀ ಒಂದು ದಿನ 'ನಾನು ಇಷ್ಟರಮಟ್ಟಿಗೆ ಬದುಕಿ ಬಂದು ಸಂಸಾರ, ಮಕ್ಕಳು, ಗಂಡ ಅಂತ ಕಾಣಬೇಕಾದ್ರೆ ಆ ಪುಣ್ಯಾತ್ಗಿತ್ತಿ ಮಧೂನೇ ಕಾರಣ. ಎಷ್ಟು ಕೋಟಿ ಆಸ್ತಿ ಇದ್ದರೇನು ? ಅನುಭವಿಸ್ಲಿಕ್ಕೆ ಬದುಕು ಕೊಟ್ಟೋಳು ಅವಳು. ಅವಳಿಗೆ ನಾನು ಒಳ್ಳೇದು ಮಾಡಲೇಬೇಕು. ಮೈಸೂರಿಗೆ ಹೋಗಿ ಬರೋಣಾ, ಬನ್ನಿ' ಎಂದು ಗಲಾಟೆ ಮಾಡಿ, ಗಂಡನನ್ನು ಹೊರಡಿಸಿಕೊಂಡು ಬಂದಳು. ಮುಂಭಾಗದ ಮನೆಗೆ ಜಯಶ್ರೀ ಎಂದೂ ಹೋಗಿರಲಿಲ್ಲ, ಬಂದಾಗ ಸ್ವಾಗತಿಸಿದ್ದು ಅವಳ ತಮ್ಮ ತಮ್ಮನ ಹೆಂಡತಿ. 'ಬನ್ನಿ. ಮಧು ಅಕ್ಕ ಇಲ್ಲಿ ಇಲ್ಲ, ಎರಡು ತಿಂಗಳ ಹಿಂದೆ ಉತ್ತರಭಾರತದ ಒಂದು ಸೇವಾಸಂಸ್ಥೆಗೆ ಹೊರಟುಹೋದಳು. ನೀವು ಬಂದರೇ ಈ ಪತ್ರ ಕೊಡೂಂತ ಒಂದು ಪತ್ರ ಕೊಟ್ಟಿದ್ದಾಳೆ' ಎಂದು ಒಂದು ಪತ್ರ ಕೊಟ್ಟ.

'ಪ್ರೀತಿಯ ಜಯಶ್ರೀ ಅಕ್ಕ, ಎಂದಾದರೂ ನನ್ನನ್ನು ಹುಡುಕಿ ಬರುವಿರಿ ಎಂದು ಬಲ್ಲೆ. ಅಮ್ಮ ಇದ್ದಾಗಲು ನನ್ನ ಮದುವೆಗೆ ತುಂಬಾ ಪ್ರಯತ್ನಪಟ್ಟಿದ್ದರು. ನಾನು ಮನಸಾರ ಇಷ್ಟಪಟ್ಟ ಒಬ್ಬ ವ್ಯಕ್ತಿ, ನನ್ನ ಕೊರಳಿಗೆ ತಾಳಿ ಸರ ಹಾಕಿದರು, ವಿಚಿತ್ರ ಪರಿಸ್ಥಿತಿಯಲ್ಲಿ ನಮ್ಮ ಮದುವೆ ಆಯಿತು. ಯಾವುದೋ ದ್ವಂದ್ವದಲ್ಲಿದ್ದ, ಏನೋ ತೊಳಲಾಟದಲ್ಲಿದ್ದ ಅವರು ಒಂದೂವರೆ ತಿಂಗಳು ನನ್ನೊಡನೆ ಒಂದೇ ಚಾವಣಿ ಕೆಳಗೆ ವಾಸಿಸಿದರೂ ನನ್ನ ಕೈಬೆರಳು ಸಹ ಸೋಕಲಿಲ್ಲ. ಅವರ ಸಂಯಮ, ಧರ್ಮ ಬಂಧನಕ್ಕೆ ನಾನು ಬೆರಗಾದೆ. ಅದೇ ತರಹ ಸಂಯಮ ಹಾಗೂ ಧರ್ಮಬಂಧನ ನನಗೂ ಆದರ್ಶವೆಂದುಕೊಂಡೆ. ಅವರು ಕಟ್ಟಿದ ತಾಳಿ ಕಿತ್ತೆಸೆದು ಬೇರೊಬ್ಬನ ಪತ್ನಿ ಆಗಲು ನನ್ನ ಮನಸ್ಸು ಒಪ್ಪಲಿಲ್ಲ. ಅಮ್ಮ ಇರುವವರೆಗೆ ಮೈಸೂರು ಬಿಡಲು ಮನಸ್ಸೊಪ್ಪಲಿಲ್ಲ. ಉತ್ತರ ಭಾರತದಲ್ಲಿರುವ ನನ್ನ ಗೆಳತಿ ಒಬ್ಬಳು ಅಲ್ಲಿರುವ ಒಂದು ಸೇವಾಕೇಂದ್ರದ ಉದ್ಯೋಗ ನನಗೆ ಬೇಕೆನಿಸಿತು. ಅಮ್ಮ ಅಪಾರ ಆಸ್ತಿಪಾಸ್ತಿ ಕೊಟ್ಟಿದ್ದರು. ಅವರ ಬದುಕಿನುದ್ದ ಅವರ ಸೇವೆ ಮಾಡಿದೆ, ಕೊಂಚ ಹಣದೊಂದಿಗೆ ಆ ಸೇವಾಕೇಂದ್ರಕ್ಕೆ ಹೊರಟ್ಟಿದ್ದೇನೆ. ಅಲ್ಲಿನ ವಿಳಾಸ ಯಾರಿಗೂ ಕೊಡಲಿಷ್ಟವಿಲ್ಲ. ಏಕೆಂದರೆ ಯಾರ ಮನಸ್ಸಿಗೂ ಮುಳ್ಳಾಗಿ ಒತ್ತುತ್ತ ಅವರೆದುರು ಇರಬಾರದು, ಯಾರಿಗೂ ಅಹಿತ ಬಯಸುವ ಉದ್ದೇಶ ನನಗಿಲ್ಲ. ಮದುವೆಯಾಗು ಎಂದು ಒತ್ತಾಯಿಸುವ ನಿಮ್ಮಂಥಾ ಆಪ್ತರಿಂದ ದೂರಾಗಿ ಹೊರಟ್ಟಿದ್ದೇನೆ.

"ನಿಮ್ಮ ಸಂಸಾರ ಚೆನ್ನಾಗಿರಲಿ. ದಾಂಪತ್ಯದಲ್ಲಿ ಹಾಲುಜೇನಿನ ಸವಿ ಉದಿಸಿ ಬರಲಿ ಎಂದು ಹಾರೈಸುವೆ. ಚಿಂಟು, ಚಿನ್ನಿ ಇಬ್ಬರಿಗೂ ನನ್ನ ಪ್ರೀತಿಯ ಆಶೀರ್ವಾದಗಳು.

ಇಂತಿ ನಿಮ್ಮ ಪ್ರೀತಿಯ ತಂಗಿ ಮಧುಮತಿ"

ಪತ್ರ ಓದಿ, ನಿರಾಶೆಯಿಂದ ಎದ್ದಳು. ರಾಜಸಿಂಹ ನೀರವವಾಗಿದ್ದ. 'ರಾಜ್ ನನ್ನ ಸ್ವಾರ್ಥದಿಂದ ಅವಳು ಹೀಗೆ ಏಕಾಕಿಯಾಗಿ ಎಲ್ಲೋ ಹೋಗಬೇಕಾಯಿತು?' ಎಂದು ಆ ರಾತ್ರಿ ಜಯಶ್ರೀ ಕಣ್ಣಂಚಿನಲ್ಲಿ ನೀರು ತುಂಬಿ ಪತಿಗೆ ತೋಳು ಬಳಸಿ ಕೇಳಿದಳು.

ರಾಜಸಿಂಹ ಚಕಿತನಾಗಿ 'ನಿನ್ನ ಸ್ವಾರ್ಥ?' ಎಂದ.

'ಇನ್ನು ಕಣ್ಣುಮುಚ್ಚಾಲೆ ಏಕೆ, ರಾಜ್? ನಿಜ ಹೇಳಿ, ಅವಳ ಕೊರಳಿಗೆ ತಾಳಿ ಹಾಕಿದೋರು ನೀವೇ ತಾನೆ ?'

ರಾಜಸಿಂಹ ವೇದನೆಯಿಂದ ಅವಳ ಮುಖ ನೋಡಿದ. 'ನಿಮ್ಮ ತಾಯಿ ಬಾಯಿ ಬಿಡಿಸಿ, ಒಂದು ವರ್ಷದ ಹಿಂದೆ ನಾನು ಈ ವಿಚಿತ್ರ ಮದುವೆ ಸುದ್ದಿ ಹೊರಡಿಸಿದೆ. ಆದರೆ ನಾನು ಸ್ವಾರ್ಥಿ, ಅವಳನ್ನ ನನ್ನ ತಂಗಿಯಾಗಿ ಈ ಮನೆಗೆ ಸ್ವಾಗತಿಸೋ ಉದ್ದೇಶ ಇರಲಿಲ್ಲ. ಬೇರೆ ಹುಡುಗನ ಜೊತೆ ವಿವಾಹ ಮಾಡೋ ಹಂಚಿಕೆ ಮಾಡಿದೆ. ನೀವು ಏನು ಗೊತ್ತಿಲ್ಲದವರ ಹಾಗೆ ಇದ್ದಿರಿ. ನಾನೂ ಏನೂ ತಿಳಿಯದವಳ ಹಾಗಿದ್ದೆ. ಆದರೆ ಅವಳ ಪ್ರೀತಿ ಅಮರವಾದುದು. ನಮ್ಮ ಕುಟುಂಬದ ಒಳಿತಿಗಾಗಿ ದುಡಿದು, ನನ್ನ ಬದುಕಿಸಿ ನಿಮಗೆ ಕಾಣಿಕೆಯಾಗಿ ಕೊಟ್ಟಳು. ಆದರೆ ನಾವು ಅವಳಿಗೆ ಏನನ್ನೂ ಕೊಡಲಾಗಲಿಲ್ಲ' ಎಂದಳು.

'ನಾನೇನು ಮಾಡಲಿ ಹೇಳು ? ಯಾವುದೋ ಉದ್ವೇಗದಲ್ಲಿ, ಭಾವಾವೇಶದಲ್ಲಿ, ಅವಳ ಕುತ್ತಿಗೆಗೆ ತಾಳಿಸರ ಹಾಕಿದ್ದು ನಿಜ. ಆದರೆ ಆ ಮದುವೆಗೆ ಇವಳಿಷ್ಟು ಬೆಲೆ ಕೊಡ್ತಾಳೆ ಅಂತ ನನಗೆ ಗೊತ್ತಿರಲಿಲ್ಲ' ಎಂದ.

'ಅವಳ ಪ್ರೇಮದ ಮಧು ಅಮರವಾದುದು. ಕ್ಷೀರದಷ್ಟು ಪವಿತ್ರವಾದುದು. ಇವತ್ತು ನಾವಿಬ್ಬರು ಮಕ್ಕಳೊಂದಿಗೆ ಸುಖವಾಗಿರ್ಲಿಕ್ಕೆ ಅವಳ ಅಮರ ಪ್ರೇಮದ ಮಧುವೇ ಕಾರಣ. ಗಲಾಟೆ ಎಬ್ಬಿಸಲಿಲ್ಲ. ಅಸಮಾಧಾನ ತೋರಲಿಲ್ಲ. ತನಗೆ ಅನ್ಯಾಯ ಆಯಿತು ಅಂತ ಬೊಬ್ಬೆ ಹೊಡೀಲಿಲ್ಲ. ಶಾಂತವಾಗಿ ನಮ್ಮಿಂದ ದೂರವಾದಳು' ಎಂದಳು.

# ಅಮರ ಪ್ರೇಮದ ಮಡು

## ಹೆಚ್. ಜಿ. ರಾಧಾದೇವಿ

"ನೀವು ನನ್ನ ಬಾಳಿನ ದೇವರು."

"ನಿನಗೆ ಅದರಿಂದ ಸಂತೋಷವಾಗೋದಾದರೆ, ಸರಿ ಹಾಗೇ ತಿಳಿದುಕೋ."

"ರೀ, ನೀವು ಇಷ್ಟು ತಾಳ್ಮೆ, ಸಮಾಧಾನ ಎಲ್ಲಿಂದ ಕಲಿತಿರಿ?"

"ಜೀವನದಿಂದ"

"ನಿಮಗೆ ಹಳೆಯ ನೆನಪುಗಳು ಬರುತ್ತಿಲ್ಲವೆ?"

"ಇಲ್ಲ. ನನಗೆ ಈಗ, ಇಲ್ಲಿ, ನೀನು ಇದ್ದೀಯ, ನಾನು ಇದ್ದೀನಿ, ನಮ್ಮಿಬ್ಬರ ಪ್ರೇಮ ಇದೆ. ಇದರ ಹೊರತು ಬೇರೇನೂ ಇಲ್ಲ. ಆಮಾತಿರಲಿ, ಶ್ಯಾಮಲ, ನಾನು ನಿಂಗೆ ಒಪ್ಪಿಗೆಯಾಗಿದ್ದೀನ? ನೀನು, ಯಾರ ಬಲವಂತವೂ ಇಲ್ಲದೆ, ಇಷ್ಟಪಟ್ಟೆಯಾ?"

"ನೋಡಿ, ಈ ಮಾತನ್ನು ಸಾಕ್ಷಿಸಮೇತ ಸ್ಥಿರಪಡಿಸ್ತೀನಿ. ನನಗೆ ಕಾಯಾವಾಚಾಮನಸಾನೀವೇ ಹೊರತು, ಬೇರೆ ಯಾರನ್ನೂ ಕಾಣೆ. ನನ್ನ ಉಸಿರಿರುವ ತನಕ ನಿಮ್ಮ ಸೇವೆಯಲ್ಲಿರುತ್ತೀನಿ."

"ಅದ್ಸರಿ ಶ್ಯಾಮಲ, ನಿನ್ನ ಮಾತಿಗೆ ಸಾಕ್ಷಿಯೇನು?"

ಗಂಡನ ಆ ಮಾತಿಗೆ ಅವಳಿಗೆ, ಏಕೋ, ಅಧೀರತೆಯಾಯಿತು. ತನ್ನಿಂದ ಮಲಯಮಾರುತ ಬೀಸುತ್ತಿತ್ತ; ಪೂರ್ಣಪ್ರಮಾಣದ ಬೆಳದಿಂಗಳು ಹರಿಡಿತ್ತು; ಗಂಧರ್ವರ ಗಾನಾಮೃತ ಧಾರೆಧಾರೆಯಾಗಿ ಕೇಳಿಬರುತ್ತಿತ್ತು. ಕೊನೆಮೊದಲಿಲ್ಲದ, ಮುಪ್ಪಿನಲ್ಲಿದ್ದ, ಚಿರ, ನಿರಂತರ, ಹೃದಯಾನಂದ ತುಂಬಿಕೊಂಡಿತ್ತು. ಕಾಲದ ಪರಿವೆಯೇ ಇರಲಿಲ್ಲ.

ಗುಣಾವಗುಣಗಳು ಕಾಣಲೇ ಇಲ್ಲ. ಅವುಗಳು ತಮ್ಮೊಳಗೇ ಪರಿಶೀಲನೆ ಮಾಡುತ್ತಿದ್ದವು. ಮೊದಲ ಹೆಂಡತಿಯ ಜೊತೆ ವೈಪರೀತ್ಯ ದಾಂಪತ್ಯ ನಡೆಸಿದ ವಸಂತ್, ತಮ್ಮ ಸುಗಮ ಬಾಳು-ಪ್ರಶಾಂತ ಜೀವನವನ್ನು-ಕಂಡುಗೊಂಡದ್ದು ಶ್ಯಾಮಲಳಲ್ಲಿ. ಬಾಳಲ್ಲಿ ನೊಂದು, ಬೆಂದು, ವಿಧವೆಯಾದ ಶ್ಯಾಮಲಳಿಗೆ ಸಾಂತ್ವನ, ನೆಮ್ಮದಿ ಸಿಕ್ಕಿದುದು, ವಿದುರ ವಸಂತರಲ್ಲಿ.

ಜಗತ್ತು ವಿಸ್ಮಯತೆಯಲ್ಲಿ ನವದಂಪತಿಗಳತ್ತ ದೃಷ್ಟಿ ಹರಿಸಿತ್ತು. ಅವರ ಕುತೂಹಲತೆಯಲ್ಲಿ ನಿಗೂಢತೆ ತುಂಬಿ ನಿಂತಿತ್ತು. ಮಾನವನ ಗುಣಾವಗುಣಗಳನ್ನು ಅಳೆಯುವ ಸಾಧನವೇ ಇದು? ಭವಿಷ್ಯವೇ ಉತ್ತರ ಕೊಡಬಲ್ಲದು, ಅಲ್ಲವೇ!